
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 15 ಮಾರ್ಚ್ 2026
ಸಂಪುಟ 15, ಸಂಚಿಕೆ 356, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಬಿಜೆಪಿಯಿಂದ ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಅಮಿತ್ ಶಾ

|೦೭

ಮೊಜ್ತಬಾ ಮಾಹಿತಿ ನೀಡಿ, 92 ಕೋಟಿ ರೂ. ಪಡೆದುಕೊಳ್ಳಿ!

|೦೭



ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ

ದಿನದ ಮಾತು

ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸಿರಲೆಂಬುದೇ ನಮ್ಮ ಪ್ರತಿದಿನದ ಪ್ರಾರ್ಥನೆಯಾಗಬೇಕು.

▲ಸುಭಾಷಿತ

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಯುಗಾದಿ, ರಂಜಾನ್ ಹಿನ್ನೆಲೆ: 2 ಸಾವಿರ ಹೆಚ್ಚುವರಿ ಬಸ್

• **ಬೆಂಗಳೂರು:** ಯುಗಾದಿ ಹಾಗೂ ರಂಜಾನ್ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2 ಸಾವಿರ ಹೆಚ್ಚುವರಿ ಕೆಎಸ್ಆರ್‌ಟಿಸಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಮಾ.18, 19 ಹಾಗೂ 20ರಂದು ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್ ಹಾಗೂ ರಾಜ್ಯವಲ್ಲದೆ ಹೊರ ರಾಜ್ಯಗಳ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಮಾ.22ರಂದು ವಿಶೇಷ ಬಸ್‌ಗಳು ಸಂಚರಿಸಲಿವೆ. ➡ಪುಟ ೪

ಎನ್ಎಸ್ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

• **ಜೋಧ್‌ಪುರ:** ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್ಎಸ್ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿತರಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

• ಪುಟ ೭

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ: ಮೋದಿ

• ಪುಟ ೭

ಐಎಸ್ಐ ಬೆಂಬಲಿತ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

• ಪುಟ ೭

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕ ನಾಶ ಶತಸಿದ್ಧ

• ಪುಟ ೭

ಖಾರ್ಗ್ ದ್ವೀಪದಲ್ಲಿನ ಇರಾನ್ ಸೇನಾ ನೆಲೆ ಧ್ವಂಸ

• ಪುಟ ೭

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

• ಪುಟ ೭

ಸಂತ ರವಿದಾಸಗೆ ವಿಶಿಷ್ಟ ಸ್ಥಾನ: ಹೊಸಬಾಳೆ

• ಪುಟ ೪

ಯುಕೆಪಿ ಹಂತ 3ರ ಭೂಪರಿಹಾರ ಒಂದೇ ಬಾರಿಗೆ ಪಾವತಿ
ಪೂರಕ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ: ಮುಖ್ಯಮಂತ್ರಿ

ಒಂದೇ ಬಾರಿ ಪರಿಹಾರ

• **ಬಾಗಲಕೋಟೆ:** ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಭೂಸ್ವಾಧೀನವಾಗುವ ರೈತರಿಗೆ ಪರಿಹಾರ ನೀಡಲು ಈ ಬಾರಿಯ ಬಜೆಟ್‌ದಲ್ಲಿ 3 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು ಬರುವ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ ರೂ.ಗಳನ್ನು ರೈತರಿಗೆ ಪರಿಹಾರ ನೀಡಲು ತೆಗೆದಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಯುಕೆಪಿ ಮೂರನೇ ಹಂತದ ಭೂಸ್ವಾಧೀನವಾಗುವ ರೈತರಿಗೆ ಹಣ ಇಟ್ಟಿಲ್ಲ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. 8 ಗ್ರಾಮಗಳ 951 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ 446 ಕೋಟಿ ರೂ. ಪರಿಹಾರವನ್ನು ಈಗ ನೀಡಲಾಗುತ್ತಿದೆ ಎಂದರು.

ಬಿಜೆಪಿಯವರು ತಮ್ಮ ಅವಧಿಯಲ್ಲಿ ಯುಕೆಪಿ ಯೋಜನೆಗೆ ಪರಿಹಾರ ನೀಡಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದ ರೈತರು ಭೂಮಿ ನೀಡಲು ಮುಂದೆ ಬರಲಿಲ್ಲ. ಈಗ ರೈತರಿಗೆ ಭೂ ಪರಿಹಾರವನ್ನು ಒಂದೇ ಬಾರಿಗೆ ನೀಡಲು ಕಾಂಗ್ರೆಸ್ ಸರ್ಕಾರ ನಿರ್ಣಯಿಸಿದೆ. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ 40 ಲಕ್ಷ ರೂ, ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರೂ. ನೀಡಲು ಸರ್ಕಾರ ನಿರ್ಣಯಿಸಿದೆ. ಆದರೆ, ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಅನುಮತಿ ದೊರಕಿಲ್ಲ: ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ. ಕೇಂದ್ರಕ್ಕೆ ಹಲವು ಮನವಿಗಳ ನಂತರವೂ ಯುಕೆಪಿ, ಮಹದಾಯಿ ಸೇರಿದಂತೆ ಹಲವು ನೀರಾವರಿ ಯೋಜನೆಗೆ ಬೇಕಾದ ಅಗತ್ಯ ಅನುಮತಿಗಳನ್ನು ಕೇಂದ್ರ ಸರ್ಕಾರ ಇದುವರೆಗೆ ನೀಡಿಲ್ಲ. ಆದರೆ, ನಮ್ಮ ಸರ್ಕಾರ ಉತ್ತರ ಕರ್ನಾಟಕದ ಜನತೆಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ ಎಂದರು.



ಉಪಚುನಾವಣೆ ಗಿಮಿಕ್ ಅಲ್ಲ

ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಯಾಗಲು ಎಚ್.ವೈ.ಮೇಟಿಯವರೇ ಕಾರಣ. ಮೇಟಿಯವರ ಕನಸು ಇಂದು ನನಸಾಗಿದೆ. ಈ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಲು ಅವರು ಕಾಳಜಿ ತೆಗೆದುಕೊಂಡಿದ್ದರು. ಅವರ ಆಶಯದಂತೆ ಇವತ್ತು ಮೆಡಿಕಲ್ ಕಾಲೇಜ್ ಆರಂಭವಾಗುತ್ತಿದೆ. ಇದು ಉಪ ಚುನಾವಣೆಯ ಕಾರಣಕ್ಕಾಗಿ ಅಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್ ಸ್ಥಾಪನೆಯ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ವರ್ಷ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಆರೋಪ ಸುಳ್ಳು

ಗ್ಯಾರಂಟಿ ಯೋಜನೆಗಳಿಂದಾಗಿ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ನಮ್ಮ ಸರ್ಕಾರ ಗ್ಯಾರಂಟಿ ಹಾಗೂ ಅಭಿವೃದ್ಧಿಯನ್ನು ಸಮಾನ ಆದ್ಯತೆ ನೀಡುತ್ತಿದ್ದೇವೆ. ಪ್ರತಿ ವರ್ಷ ಗ್ಯಾರಂಟಿಗಳಿಗೆ ಸುಮಾರು 50 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಇದುವರೆಗೆ 1.22 ಲಕ್ಷ ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಬಿಜೆಪಿಯ ವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ, ಬಾಗಲಕೋಟೆ ಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲಿಲ್ಲ. ಜಾತಿ ಧರ್ಮಗಳ ಮಧ್ಯೆ ವೈಮನಸ್ಸು ತರುವುದು ಅವರ ದುರಾಲೋಚನೆಯಾಗಿದೆ ಎಂದರು. ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ, ಸಚಿವ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣ ಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಗ್ಯಾರಂಟಿ ಯೋಜನೆ ಅಧ್ಯಕ್ಷ ಅನಿಲ ದಡ್ಡಿ ಇದ್ದರು.

ಇರಾನ್‌ನ ಕುದ್ಸ್ ಮೆರವಣಿಗೆ ವೇಳೆ ಘಟನೆ

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

• **ಟೆಹ್ರಾನ್:** ಇರಾನ್ ಮತ್ತು ಅಮೆರಿಕ–ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷವು ಎರಡನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಶುಕ್ರವಾರ ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರಭಾಗದಲ್ಲಿ ಭೀಕರ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಜಮಾಯಿಸಿದ್ದ ಫಿರ್ದೋಸಿ ಚೌಕದ ವಾರ್ಷಿಕ ಕುದ್ಸ್ ದಿನದ ಮೆರವಣಿಗೆ ವೇಳೆ ಈ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಫಿರ್ದೋಸಿ ಚೌಕದ ಮೇಲೆ ದಾಳಿ: ದಾಳಿಗೂ ಮುನ್ನ ಇಸ್ರೇಲ್ ತನ್ನ ಫಾರ್ಸಿ ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಎಚ್ಚರಿಕೆ ನೀಡಿತ್ತು. ಮೆರವಣಿಗೆಯಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗುಲಾಮ್ ಹೊಸ್ಸೇನ್ ಮೊಹ್ಸೇನಿ ಎಜೆ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸ್ಫೋಟದ ನಂತರ ಈ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದ್ದು ಕಂಡುಬಂದರೂ, ಯಾವುದೇ ಪ್ರಾಣ ಹಾನಿಯ ಬಗ್ಗೆ ತಕ್ಷಣದ ಮಾಹಿತಿ ಲಭ್ಯವಾಗಿಲ್ಲ. ➡ಪುಟ ೪



ದುಬೈ ಅಮೆರಿಕ ರಾಯಭಾರ ಕಚೇರಿ ಮೇಲೂ ದಾಳಿ

ದುಬೈ ಮತ್ತು ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಮೇಲೆ ಭೀಕರ ದಾಳಿಗಳು ನಡೆದಿವೆ ಎಂದು ಶನಿವಾರ ವರದಿಯಾಗಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದ ಹೃದಯಭಾಗದಲ್ಲಿರುವ ಕಟ್ಟಡವೊಂದಕ್ಕೆ ಆಕಾಶದಲ್ಲಿ ಹೊಡೆದುರುಳಿಸಲಾದ ಕ್ಷಿಪಣಿಯ ಅವಶೇಷಗಳು ಬಂದು ಬಿಡಿದಿವೆ. ಕಳೆದ 24 ಗಂಟೆಗಳಲ್ಲಿ ದುಬೈ ಮೇಲೆ ನಡೆದ ಎರಡನೇ ದಾಳಿ ಇದಾಗಿದೆ. ಯಾವುದೇ ಪ್ರಾಣಹಾನಿ ಅಥವಾ ಬೆಂಕಿ ಅವಘಡ ಸಂಭವಿಸಿಲ್ಲ ಎಂದು ಮಾಧ್ಯಮ ಕಚೇರಿ ಖಚಿತಪಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• ಪುಟ ೪

ಅಮೆರಿಕ–ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

• **ವಾಷಿಂಗ್ಟನ್:** ಇರಾನ್ ಸಂಘರ್ಷದ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉನ್ನತ ಮಟ್ಟದ ಶೃಂಗಸಭೆ ನಡೆಸಲು ಪ್ರಯತ್ನಿಸುತ್ತಿರುವ ಬೆನ್ನಲ್ಲೇ, ಶನಿವಾರ ಉತ್ತರ ಕೊರಿಯಾ ಹತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾ ವಣೆ ಮಾಡುವ ಮೂಲಕ ಸವಾಲು ಹಾಕಿದೆ.

ಕ್ಷಿಪಣಿ ಪ್ರಚೋದನೆ: ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಮಿಲಿಟರಿ ವ್ಯಾಯಾಮದ ಸಮಯದಲ್ಲಿ ಈ ಉಡಾವಣೆ ಮಾಡಲಾಗಿದೆ ಎಂದು ವರದಿಯಾಗಿದೆ. ಒಂದು ಕ್ಷಿಪಣಿ ಟೋಕಿಯೊದ ವಿಶೇಷ ಆರ್ಥಿಕ ವಲಯದ ಹೊರಗಿನ ಸಮುದ್ರದಲ್ಲಿ ಬಿದ್ದಿದೆ ಎಂದು ವರದಿಯಾಗಿದೆ. ಈ ಪರೀಕ್ಷೆಗಳು ಪೆಂಟಗನ್‌ನ 'ಗೋಲ್ಡನ್ ಡೋಮ್' ರಕ್ಷಣಾ ವ್ಯವಸ್ಥೆಗೆ ನೇರ ಸವಾಲು ಎಂದು ವಿಶ್ಲೇಷಿಸಲಾಗುತ್ತಿದೆ. ➡ಪುಟ ೪

₹18,680 ಕೋಟಿ ಸಂಪರ್ಕ ಯೋಜನೆಗೆ ಮೋದಿ ಚಾಲನೆ

ನುಸುಳುಕೋರರಿಗೆ ಟಿಎಂಸಿ ರಕ್ಷಕ

• **ಕೋಲ್ಕತಾ:** ಆಡಳಿತಾರೂಢ ಟಿಎಂಸಿ ತನ್ನ ಆಡಳಿತದಲ್ಲಿ ಅನಿಯಂತ್ರಿತ ಅಕ್ರಮ ವಲಸೆಯು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವನ್ನೇ ಬದಲಾಯಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಗುಡುಗಿದ್ದಾರೆ. ನುಸುಳುಕೋರರ ಮತ ಬ್ಯಾಂಕ್ ರಕ್ಷಿಸಲು ಎಸ್ಐಆರ್‌ನ್ನೂ ವಿರೋಧಿಸುತ್ತಲೇ ಬಂದಿದೆ ಎಂದು ಆರೋಪಿಸಿದ್ದಾರೆ. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ಟಿಎಂಸಿ ಸಾಂವಿಧಾನಿಕ ಸಂಸ್ಥೆಗಳನ್ನು ಅವಮಾನಿಸುತ್ತಿದೆ ಎಂದು ಆರೋಪಿಸಿದರು. ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಕೌಂಟ್‌ಡೌನ್ ಪ್ರಾರಂಭವಾಗಿದೆ ಎಂದು ಹೇಳಿದರು. ➡ಪುಟ ೪



ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ, ಘರ್ಷಣೆ

ಪಶ್ಚಿಮಬಂಗಾಳದಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿ ಮುಂದುವರಿದಿದ್ದು, ಶನಿವಾರ ಕೇಂದ್ರ ಕೋಲ್ಕತಾದಲ್ಲಿ ಬಿಜೆಪಿ ಬೆಂಬಲಿಗರ ಮೇಲೆ ಟಿಎಂಸಿ ಗೂಂಡಾಗಳು ಕಲ್ಲು ತೂರಾಟ ನಡೆಸಿದಾಗ ಘರ್ಷಣೆ ಸ್ಫೋಟಿಸಿದೆ. ➡ಪುಟ ೪

ಪಾಕ್, ಬಾಂಗ್ಲಾ ವಲಸಿಗರಿಂದ ದೇಶಕ್ಕೆ ಅಪಾಯ: ಅಶೋಕ

ಬಿಜೆಪಿಯಿಂದ ಎಸ್ಐಆರ್ ಕಚೇರಿ

• **ಬೆಂಗಳೂರು:** ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ (ಎಸ್ಐಆರ್) ಸಂಬಂಧಿಸಿದ ಕಚೇರಿ ಉದ್ಘಾಟಿಸಲಾಯಿತು. ಈ ವೇಳೆ ಎಸ್ಐಆರ್ ಕುರಿತ ರಾಜ್ಯ ಕಾರ್ಯಾಗಾರ ನಡೆಯಿತು. ಎಸ್ಐಆರ್ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತೆಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು.

ಈ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಪಾಕಿಸ್ತಾನ, ಬಾಂಗ್ಲಾ ದೇಶದವರು ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಕಾಯಂ ನಾಗರಿಕರಾಗುತ್ತಾರೆ. ➡ಪುಟ ೪



ಔಟ್ ಗೋಯಿಂಗ್ ಸಿಎಂ: ಛಲವಾದಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಸಿದ್ಧರಾಗುತ್ತಿದ್ದಾರೆ, ಅವರು ಔಟ್ ಗೋಯಿಂಗ್ ಸಿಎಂ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ➡ಪುಟ ೪

ಮಂಡ್ಯದಲ್ಲಿ ವಾಹನ ಪರೀಕ್ಷೆ

• **ಮಂಡ್ಯ:** ಜಿಲ್ಲೆಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಆಟೊಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ ವಾಹನಗಳ ಪರೀಕ್ಷೆ, ಪ್ರಮಾಣೀಕರಣ ಮತ್ತು ತಾಂತ್ರಿಕ ಸಂಶೋಧನೆಗಳನ್ನು ಇಲ್ಲಿಯೇ ನಡೆಸಲಾಗುವುದು ಎಂದು ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಆಟೊಮೋಟಿವ್ ಇಂಡಿಯಾದಿಂದ ಸಂಶೋಧನೆ: ಎಚ್‌ಡಿಕೆ

ತಾಲೂಕಿನ ವಿ.ಸಿ.ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕರ್ನಾಟಕದಲ್ಲಿ ವಾಹನಗಳ ಪರೀಕ್ಷಾ ಕೇಂದ್ರದ ಕೊರತೆ ಇತ್ತು. ಇಲ್ಲಿ ಉತ್ಪಾದನೆಯಾದ ವಾಹನಗಳನ್ನು ಪರೀಕ್ಷೆಗಾಗಿ ಪೂನಾ ಅಥವಾ ಚೆನ್ನೈಗೆ ಕೊಂಡೊಯ್ಯಬೇಕಿತ್ತು. ➡ಪುಟ ೪

ಎಲ್‌ಪಿಜಿ ಅಭಾವ ಹಿನ್ನೆಲೆ | ಹೋಟೆಲ್‌ಗಳಿಗೆ ಪೂರೈಕೆ

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

• **ಬೆಂಗಳೂರು:** ಗ್ಯಾಸ್ ಬಿಕ್ಕಟ್ಟಿನ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಿ, ಬಯೋಗ್ಯಾಸ್ ಉತ್ಪಾದನೆ ಚಿಂತನೆ ಮುನ್ನೆಲೆಗೆ ಬಂದಿದೆ. ಇದನ್ನೇ ನಗರದ ಹೋಟೆಲ್‌ಗಳಿಗೆ ಸರಬರಾಜು ಮಾಡುವ ಕ್ರಮಕ್ಕೆ ಮುಂದಾಗಿದೆ.

ಕೋರಮಂಗಲದಲ್ಲಿರುವ ಜೈವಿಕ ಅನಿಲ ಘಟಕ(ಕಸ–ರಸ ಘಟಕ)ದಲ್ಲಿ 10 ಟನ್ ಬಯೋ ಗ್ಯಾಸ್ ಉತ್ಪಾದಿಸಿ ಪೈಪ್ ಮೂಲಕ ನೇರವಾಗಿ ಹತ್ತಿರದ ಹೋಟೆಲ್‌ಗೆ ವಿತರಣೆ ಮಾಡಲಾಗುತ್ತಿದೆ. ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಜಿಬಿಎ ಮುಂದಾಗಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲು ವಿವಿಧ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ. 12 ಬಯೋಗ್ಯಾಸ್ ಘಟಕಗಳಲ್ಲಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲಾಗುತ್ತಿದೆ. ಉಳಿದ 6 ಘಟಕಗಳಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿದೆ. ➡ಪುಟ ೪



- ಪ್ರಸ್ತುತ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಹಾಗೂ ಹೋಟೆಲ್ ಮಾಲಿಕರು ತಮ್ಮ ಆವರಣದಲ್ಲಿಯೇ ವಿಕೇಂದ್ರೀಕೃತ ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಜಿಬಿಎ ಮನವಿ
- ಮನೆಯಲ್ಲೇ ಉತ್ಪತ್ತಿಯಾಗುವ ಹಸಿ ತ್ಯಾಜ್ಯದಿಂದ ಗ್ಯಾಸ್ ಉತ್ಪಾದಿಸಿ ಅಡುಗೆ ಇಂಧನವಾಗಿ ಬಳಸಬಹುದು
- ಮನೆಮಟ್ಟದ ಘಟಕ ನಿರ್ಮಾಣಕ್ಕೆ ಸುಮಾರು ರೂ.20,000 ವೆಚ್ಚವಾಗಬಹುದು.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಲಭ್ಯ

• **ಹೊಸದಿಲ್ಲಿ:** ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ.

• ಪುಟ ೭

ಆಫ್ಘನ್ ಮೇಲೆ ಪಾಕ್ ಕ್ಷಿಪಣಿ ದಾಳಿ

• **ಕಾಬೂಲ್:** ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

• ಪುಟ ೭

ಕಿರುಸುದ್ದಿ

ಸಂಗೀತ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿ ವತಿಯಿಂದ ಮಾ.15 ರಂದು ಸಂಜೆ 6.30 ಕ್ಕೆ ಶ್ರೀಮಠದ ಕೈಲಾಸ ಮಂಟಪದಲ್ಲಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾಲಕಾಲೇಶ್ವರ ಕಲಾ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಭಾಗ್ಯಶ್ರೀ ಹೂಗಾರ, ಋಷಿ ದೇವೇಂದ್ರ, ಕಿರಣಗೌಡ ತುಪ್ಪದಗೌಡರ ಅವರಿಂದ ಭಕ್ತಿಗೀತೆಗಳು, ಜಾನಪದ ಗೀತೆಗಳು, ದಾಸರ ಪದಗಳ ಸಂಗೀತ ಕಾರ್ಯಕ್ರಮ ಜರುಗಲಿದೆ ಎಂದು ಶ್ರೀಮಠ ಚೇರಮನ್ ಚನ್ನವೀರ ಮುಂಗುರವಾಡಿ ಪ್ರಕಟಣೆಗೆ ತಿಳಿಸಿದ್ದಾರೆ.

ಪ್ರವೀಣ ಪವಾರ ಆಯ್ಕೆ



ಅಳ್ನಾವರ: ಇಲ್ಲಿನ ಸರ್ಕಾರಿ ಪ್ರೌಢಶಾಲೆಯ ನೂತನ ಶಾಲಾ ಉಸ್ತುವಾರಿ ಮತ್ತು ಅಭಿವೃದ್ಧಿ ಸಮಿತಿಯನ್ನು ಪಾಲಕರ ಸಮ್ಮುಖದಲ್ಲಿ ರಚನೆ ಮಾಡಲಾಗಿದ್ದು, ಸಮಿತಿ ಅಧ್ಯಕ್ಷರಾಗಿ ಪ್ರವೀಣ ಪವಾರ ಆಯ್ಕೆಯಾಗಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ.

ಚಿತ್ರಕಲೆಯಲ್ಲಿ ಪ್ರಥಮ



ಹುಬ್ಬಳ್ಳಿ: ಇತ್ತೀಚೆಗೆ ರಾಯಚೂರು ಕಲಾ ಸ್ಫೂರ್ತಿ ಅಕಾಡೆಮಿ ವತಿಯಿಂದ ಏರ್ಪಡಿಸಲಾಗಿದ್ದ 8ನೇ ರಾಜ್ಯಮಟ್ಟದ 2025-26ನೇ ಸಾಲಿನ ಚಿತ್ರಕಲಾ ಸ್ಪರ್ಧೆಯಲ್ಲಿ ಹುಬ್ಬಳ್ಳಿಯ ವಿ.ಎಸ್. ಪಿಳ್ಳೆ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಸಾನ್ವಿ ಯರಗೊಪ್ಪ ಪ್ರಥಮ ಸ್ಥಾನ ಪಡೆದಿದ್ದಾರೆ.

ಸಮ್ಮೇಳನ ಇಂದು

ಹುಬ್ಬಳ್ಳಿ: ಹುಬ್ಬಳ್ಳಿ ನಗರ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನ 2026 ಸಮಾರಂಭ ಮಾ. 15ರಂದು ಲಿಂಗರಾಜ ನಗರದ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಪಾಟೀಲ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8.15ಕ್ಕೆ ಧ್ವಜಾರೋಹಣ ನಡೆಯಲಿದೆ. ಪಾಲಿಕೆ ಸದಸ್ಯ ಉಮೇಶ ಕೌಜಗೇರಿ ರಾಷ್ಟ್ರ ಧ್ವಜಾರೋಹಣ, ಪರಿಷತ್ ಧ್ವಜಾರೋಹಣ ತಾಲೂಕು ಅಧ್ಯಕ್ಷೆ ವಿದ್ಯಾ ವಂಟಮೂರಿ ನೆರವೇರಿಸಲಿದ್ದಾರೆ. ಬೆಳಗ್ಗೆ 9 ಗಂಟೆಗೆ ಸರ್ವಾಧ್ಯಕ್ಷರ ಮೆರವಣಿಗೆ ಲಿಂಗರಾಜ ನಗರದ ದಕ್ಷಿಣ ಸಮುದಾಯ ಭವನದಿಂದ ಸಭಾಂಗಣದ ವರೆಗೆ ನಡೆಯಲಿದೆ. ಕಟ್ಟಿ ಮಂಗಳಾದೇವಿ ಹಾಗೂ ಆಂಜನೇಯ ದೇವಾಲಯ ಅಧ್ಯಕ್ಷ ಜಿ.ವಿ. ವಳಸಂಗ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಹಿರಿಯ ಸಾಹಿತಿ ಜಯಶ್ರೀ ದಂಡೆ ಅವರು ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆ ಕೃಷಿ ವಿವಿ ಕುಲಪತಿ ಡಾ.ಪಿ.ಎಲ್. ಪಾಟೀಲ ವಹಿಸುವರು. ಶಾಸಕ ಮಹೇಶ ಟೆಂಗಿನಕಾಯಿ ಹಾಗೂ ಪಾಲಿಕೆ ಉಪಮೇಯರ್ ಸಂತೋಷ ಚವ್ಹಾಣ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಶಾಸಕ ಪ್ರಸಾದ ಅಬ್ಬಯ್ಯ, ವಿಪ ಸದಸ್ಯ ಪ್ರದೀಪ ಶೆಟ್ಟರ, ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ಪತ್ರಕರ್ತ ಬಂಡು ಕುಲಕರ್ಣಿ, ಪಾಲಿಕೆ ಸದಸ್ಯೆ ಮೀನಾಕ್ಷಿ ವಂಟಮುರಿ, ಕೆಎಲ್‌ಇ ಸಂಸ್ಥೆ ನಿರ್ದೇಶಕ ಮಂಜುನಾಥ ಮುನವಳ್ಳಿ, ರಮೇಶ ಮಹಾದೇವಪ್ಪನವರ ಭಾಗವಹಿಸಲಿದ್ದಾರೆ. ಸರ್ವಾಧ್ಯಕ್ಷರನ್ನಾಗಿ ಸಾಹಿತಿ ಸ್ನೇಹಾ ಭೂಸನೂರ ಆಯ್ಕೆ ಮಾಡಲಾಗಿದೆ. ಸಂಜೆ 4.30ಕ್ಕೆ ಹುಬ್ಬಳ್ಳಿ ತಾಲೂಕು ಕಸಾಪ ಪದಾಧಿಕಾರಿಗಳ ಬಹಿರಂಗ ಸಭೆ ನಡೆಯಲಿದೆ. ಸಂಜೆ 5.30ಕ್ಕೆ ಸಮಾರೋಪ ನಡೆಯಲಿದೆ. ಅಧ್ಯಕ್ಷತೆ ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತರಾದ ಉಪ ಆಯುಕ್ತ ಗೋವಿಂದಪ್ಪ ಗೌಡಪ್ಪಗೋಳ, ಸವಾಧ್ಯಕ್ಷರ ನುಡಿ ಡಾ. ಸ್ನೇಹ ಭೂಸನೂರ, ವಿಪ ಸದಸ್ಯ ಎಚ್.ಎಫ್. ಚಕ್ಕಪ್ಪನವರ, ವಿಪ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ಪಾಲಿಕೆ ಸದಸ್ಯ ತಿಪ್ಪಣ್ಣ ಮಜ್ಜಗಿ ಭಾಗವಹಿಸಲಿದ್ದಾರೆ. ಸಂಜೆ 6.30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದರು. ಹುಬ್ಬಳ್ಳಿ ನಗರ ಅಧ್ಯಕ್ಷೆ ವಿದ್ಯಾ ವಂಟಮೂರಿ, ಕಾರ್ಯದರ್ಶಿ ಚನ್ನಬಸಪ್ಪ ಧಾರವಾಡ, ಶರಣಪ್ಪ ಕೊಟಗಿ ಇದ್ದರು.

ನಿಧನ ಸುದ್ದಿ

ಸುಧಾ ಕಾಂಬಳೆ



ಹುಬ್ಬಳ್ಳಿ: ನೇಕಾರ ನಗರದ ಸಂಯುಕ್ತ ಕರ್ನಾಟಕ ಕಾಲೋನಿಯ ಸುಧಾ ಶಂಕರ ಕಾಂಬಳೆ (58) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿರೂಪಾಕ್ಷಪ್ಪ ಜವಳಿ



ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದ ವಿರೂಪಾಕ್ಷಪ್ಪ ಪ. ಜವಳಿ (80) ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಸಹೋದರಿ ಹಾಗೂ ಮೊಮ್ಮಗ ಯೋಧ ಈರಣ್ಣ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಹುಬ್ಬಳ್ಳಿ: ನಗರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹುಬ್ಬಳ್ಳಿ ಶಹರ ಘಟಕದ ವತಿಯಿಂದ 11 ನೇ ಶಹರ ಸಾಹಿತ್ಯ ಪರಿಷತ್‌ಗೆ ಸರ್ವಾಧ್ಯಕ್ಷರಾದ ಸಾಹಿತಿ ಸ್ನೇಹಾ ಭೂಸನೂರ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹುಬ್ಬಳ್ಳಿ ಶಹರ ತಾಲೂಕು ಘಟಕದ ಅಧ್ಯಕ್ಷ ಗುರುಸಿದ್ದಪ್ಪ ಎಂ ಬಡಿಗೇರ ಮಾತನಾಡಿದರು. ಲೇಖಕಿ ಶಾಲಿನಿ ರುದ್ರಮುನಿ, ರಾಮು ಮೂಲಗಿ ನಿವೃತ್ತ ಪ್ರಾಧ್ಯಾಪಕ ಡಾ. ಶಿವಯೋಗಪ್ಪ ಎಮ್ಮಿ, ಬಸವ ಸಮಿತಿಯ ಗುರುಸಿದ್ದಪ್ಪ ಶಿವಶಿಂಪಿ , ಮಲ್ಲಿಕಾರ್ಜುನ ಕಮ್ಮಾರ, ಗೀತಾ ಅಂಗಡಿ ಇದ್ದರು.

ಅಂತರ್ ಕಂಪನಿಗಳ ಕ್ರೀಡಾಕೂಟಕ್ಕೆ ಅದ್ದೂರಿ ತೆರೆ

ಹುಬ್ಬಳ್ಳಿ: ಮೂರು ದಿನಗಳು ನಡೆದ 2025-26ನೇ ಸಾಲಿನ ಅಂತರ್ ಕಂಪನಿಗಳ (ಹೆಸ್ಕಾಂ, ಮೆಸ್ಕಾಂ, ಬೆಸ್ಕಾಂ, ಸೆಸ್ಕ್, ಚೆಸ್ಕಾಂ, ಕೆಪಿಟಿಸಿಎಲ್) ಕ್ರೀಡಾಕೂಟಕ್ಕೆ ಶುಕ್ರವಾರ ಅದ್ದೂರಿ ತೆರೆಬಿದ್ದಿದೆ. ದೇಶಪಾಂಡೆ ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಶುಕ್ರವಾರ ಸಂಜೆ ನಡೆದ ಕ್ರೀಡಾಕೂಟಗಳ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ರೀಡಾ ಕೂಟಗಳಲ್ಲಿ ಜಯಿಸಿದ ಕ್ರೀಡಾ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕ್ರಿಕೆಟ್ ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ತೋರುವ ಮೂಲಕ ಸೆಸ್ಕಾಂ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ಬೆಸ್ಕಾಂ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆಯಿತು. ಬೆಸ್ಕಾಂನ ಸಂಜಯ್ ಬೆಸ್ಟ್ ಬ್ಯಾಟ್ಸ್‌ಮನ್, ನರೇಂದ್ರ ಬಾಬು ಬೆಸ್ಟ್ ಬೌಲರ್ ಹಾಗೂ ಬೆಸ್ಟ್ ಪ್ಲೇಯರ್ ಆಫ್ ಟೋರ್ನಾಮೆಂಟ್ ಪ್ರಶಸ್ತಿ ಬೆಸ್ಕಾಂನ ಭರತ್ ಗೌಡ ಅವರ ಪಾಲಾಯಿತು. ಫುಟ್‌ಬಾಲ್ ಪಂದ್ಯದಲ್ಲಿ ಹೆಸ್ಕಾಂ ತಂಡ ವಿನ್ನರ್, ಬೆಸ್ಕಾಂ ರನ್ನರ್‌ಅಪ್ ಪ್ರಶಸ್ತಿ ಪಡೆದವು. ಬೆಸ್ಕಾಂನ ಸುನೀಲ್ ಬೆಸ್ಟ್ ಸ್ಕೋರರ್, ಹೆಸ್ಕಾಂನ ಸುಬ್ರಹ್ಮಣ್ಯ ಬೆಸ್ಟ್ ಗೋಲ್ ಕೀಪರ್ ಹಾಗೂ ಬೆಸ್ಟ್ ಪ್ಲೇಯರ್ ಆಫ್ ದಿ ಟೋರ್ನಮೆಂಟ್ ಹೆಸ್ಕಾಂನ ಅಜರುದ್ದಿನ್‌ಗೆ ಒಲಿಯಿತು. ಹಾಕಿ ಪಂದ್ಯದಲ್ಲಿ ಹೆಸ್ಕಾಂ ವಿನ್ನರ್, ಬೆಸ್ಕಾಂ ರನ್ನರ್‌ಅಪ್ ಆಯಿತು. ಮೆಸ್ಕಾಂನ ಪ್ರವೀಣ ಬೆಸ್ಟ್ ಗೋಲ್ ಕೀಪರ್, ಬೆಸ್ಕಾಂನ ಎನ್ ದೀಪಕ್ ಬೆಸ್ಟ್ ಫಾರ್ವರ್ಡ್ ಹಾಗೂ ಹೆಸ್ಕಾಂನ ಪ್ರವೀಣ ನಿಟ್ಟರ್ ಬೆಸ್ಟ್ ಡಿಫೆಂಡರ್ ಪ್ರಶಸ್ತಿ ಪಡೆದರು. ಬಿಲಿಯರ್ಡ್ ಪಂದ್ಯದಲ್ಲಿ ಬೆಸ್ಕಾಂ ವಿಜೇತರಾದರು, ಮೆಸ್ಕಾಂ ರನ್ನರ್ ಅಪ್ ಪ್ರಶಸ್ತಿಗೆ ಭಾಜನವಾಯಿತು. ಹೆಸ್ಕಾಂ ಕ್ರೀಡಾ ಸಮಿತಿಯ ಅಧ್ಯಕ್ಷ ದೀಪಕ್. ಬಿ. ಕಾಮತ್, ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮೈಕೆಲ್ ವಾಷಿಂಗ್ಟನ್, ಪಿ.ಆರ್ ಗವಿಕುಮಾರ್, ಪಿ.ಎಸ್. ಶಿಂಧೆ, ಹೆಸ್ಕಾಂ, ರಾಜೇಶ ಕಲ್ಯಾಣಶೆಟ್ಟಿ ಇದ್ದರು.



ಹುಬ್ಬಳ್ಳಿ: ಮೂರು ದಿನಗಳು ನಡೆದ 2025-26ನೇ ಸಾಲಿನ ಅಂತರ್ ಕಂಪನಿಗಳ (ಹೆಸ್ಕಾಂ, ಮೆಸ್ಕಾಂ, ಬೆಸ್ಕಾಂ, ಸೆಸ್ಕ್, ಚೆಸ್ಕಾಂ, ಕೆಪಿಟಿಸಿಎಲ್) ಕ್ರೀಡಾಕೂಟಕ್ಕೆ ಶುಕ್ರವಾರ ಅದ್ದೂರಿ ತೆರೆಬಿದ್ದಿದೆ. ದೇಶಪಾಂಡೆ ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಶುಕ್ರವಾರ ಸಂಜೆ ನಡೆದ ಕ್ರೀಡಾಕೂಟಗಳ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ರೀಡಾ ಕೂಟಗಳಲ್ಲಿ ಜಯಿಸಿದ ಕ್ರೀಡಾ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಉಪನ್ಯಾಸ, ಸಂವಾದ ಕಾರ್ಯಕ್ರಮ | ಪ್ರೊ. ಪ್ರಕಾಶ ಅಭಿಮತ

ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಿ



ಅಣ್ಣಿಗೇರಿ: ವಿದ್ಯಾರ್ಥಿಗಳು ಕೀಳು ಅಭಿರುಚಿ ತ್ಯಜಿಸಿ, ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಬೇಕು. ಸ್ಪರ್ಧಾತ್ಮಕ ಜಗತ್ತಿಗೆ ತಕ್ಕಂತೆ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಸೋಲಿಗೆ ದೃತಿಗೆಡದೆ ಸವಾಲಾಗಿ ಸ್ವೀಕರಿಸಬೇಕು ಎಂದು ಪ್ರೊ. ಪ್ರಕಾಶ ಸುಣಗಾರ ಹೇಳಿದರು.

ನಗರದ ಅಣ್ಣಿಗೇರಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ 'ವಿದ್ಯಾರ್ಥಿಗಳು ಎದುರಿಸುತ್ತಿರವ ಶೈಕ್ಷಣಿಕ ಹಾಗೂ ಸಾಮಾಜಿಕ ಸವಾಲುಗಳು' ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಹಾಗೂ ಕ್ರೀಡಾ ಮಂಟಪ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಎಚ್. ಬುಳ್ಳಣ್ಣವರ್ ಮಾತನಾಡಿ, ಕ.ವಿ.ವ. ಸಂಘವು 136 ವರ್ಷಗಳಿಂದ ಕನ್ನಡ ಕಟ್ಟುವ ಕೆಲಸ ಮಾಡುತ್ತಿದೆ. ಮರಾಠಿಮಯ ಕಾಲದಲ್ಲಿ ಕನ್ನಡಿಗರಲ್ಲಿ ಕನ್ನಡ ಭಾಷೆ, ಸಂಸ್ಕೃತಿಯ ಬಗ್ಗೆ ನಿರಂತರ ಅಭಿಮಾನ ಮೂಡಿಸುತ್ತ ಬಂದಿದೆ. ಕ.ವಿ.ವ. ಸಂಘ ಧಾರವಾಡಕ್ಕೆ ಸೀಮಿತವಾಗದೇ ವಿದ್ಯಾರ್ಥಿಗಳೆಡೆಗೆ ಹೋಗಿ ಕಾರ್ಯಕ್ರಮ ಆಯೋಜಿಸುತ್ತಿರುವುದು ಅಭಿನಂದನೀಯ ಎಂದರು.

ಯುವಜನ ಹಾಗೂ ಕ್ರೀಡಾ ಮಂಟಪದ ಸಂಚಾಲಕಿ ವಿಶ್ವೇಶ್ವರಿ ಹಿರೇಮಠ ಪ್ರಾಸ್ತಾವಿಸಿದರು. ವಸಂತ ಮುರ್ಡೇಶ್ವರ, ಸುಜಾತಾ ಹಡಗಲಿ, ಅಮೃತಪ್ಪ ಶೆಟ್ಟರ, ಶಶಿಧರ ಮುಖಂಡಮಠ, ಅಮೃತೇಶ್ ತಂಡರ, ಎಂ.ಎಸ್. ಪೂಜಾರ, ಈರಣ್ಣ ಗುರಿಕಾರ, ಹನುಮಂತಪ್ಪ ಕಂಬಳಿ, ಹುಸೇನಸಾಬ ಬೆಟಗೇರಿ, ಅಮೀನ ಪಾಪಣ್ಣವರ, ಮಲ್ಲಪ್ಪ ಮೀಶಿಯವರ, ಶ್ರೀನಿವಾಸ ಹರ್ಲಾಪೂರ, ಶಂಕರಗೌಡ ಪಾಟೀಲ, ಸುನಂದಾ ಹಾಡಕರ, ಜ್ಯೋತಿ ಮುತ್ತಗಿ, ತಿಪ್ಪೇಶ ನಾಯಕ, ಜಯಪ್ರಕಾಶ ದೊಡ್ಡೂರ, ಭಾರತಿ ಮಣ್ಣೂರ ಸೇರಿದಂತೆ ಮುಂತಾದವರಿದ್ದರು. ಡಾ. ಕಿರಣಕುಮಾರ ರಾಯರ ನಿರೂಪಿಸಿದರು. ಡಾ. ಬಾಬು ಬೆಣ್ಣಿ ಸ್ವಾಗತಿಸಿದರು. ಡಾ. ಅಣ್ಣಪ್ಪ ರೊಟ್ಟಿಗವಾಡ ವಂದಿಸಿದರು.

ತಾರತಮ್ಯ ಸಲ್ಲ

ಗಂಡು-ಹೆಣ್ಣು ತಾರತಮ್ಯ ಸಲ್ಲ. ಯಾವ ಜಾತಿಗೂ ಸೀಮಿತವಾಗಬಾರದು. ಮಾನವ ಜಾತಿ ಒಂದೇ ಎಂಬ ಭಾವನೆ ಬೇಕು. ಇಂದು ಎಲ್ಲಾ ಸೌಲಭ್ಯಗಳಿದ್ದು ಉಪಯೋಗಿಸಿಕೊಳ್ಳುವ ಸಾಮರ್ಥ್ಯ ಬೇಕು. ಸಕಾರಾತ್ಮಕ ಚಿಂತನೆ ಸಾಧನೆಗೆ ಪ್ರೇರಣೆಯಾಗುತ್ತವೆ ಎಂದು ಅಣ್ಣಿಗೇರಿ ಪಿಎಸ್‌ಐ ಉಮಾದೇವಿ ಹೇಳಿದರು.

- ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಶೈಕ್ಷಣಿಕ, ಸಾಮಾಜಿಕ ಸಮಸ್ಯೆ ಕುರಿತು ಉಪನ್ಯಾಸ
- ಮುಗಳಿಯ ಶ್ರೀ ಕಲ್ಮೇಶ್ವರ ಜಾನಪದ ಕಲಾ ತಂಡದವರಿಂದ ಮೂಲ ಜಾನಪದ ಹಾಡು
- ಹಾಸ್ಯ ಕಲಾವಿದ ಮಲ್ಲಪ್ಪ ಹೊಂಗಲ್ ಅವರಿಂದ ಹಾಸ್ಯ ಕಾರ್ಯಕ್ರಮ ನಡೆಯಿತು.

ಅಣ್ಣಿಗೇರಿಯಲ್ಲಿ ಸರ್ಕಾರ ಪಂಪ ಪ್ರಾಧಿಕಾರ ರಚಿಸಿ, ಪಂಪ ಉತ್ಸವದಲ್ಲಿ ಪಂಪ ಪ್ರಶಸ್ತಿ ಇಲ್ಲಿಯೇ ಪ್ರದಾನ ಮಾಡುವಂತೆ ಧಾರವಾಡದ ಕ.ವಿ.ವ. ಸಂಘ ಸರ್ಕಾರಕ್ಕೆ ಒತ್ತಾಯಿಸಲಿ.
■ **ರವಿರಾಜ ವೇರ್ಣೇಕರ,** ಅಣ್ಣಿಗೇರಿ ತಾಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ

ಯಶಸ್ಸಿಗೆ ನಿರಂತರ ಪ್ರಯತ್ನ ಅಗತ್ಯ

ವಿದ್ಯಾರ್ಥಿಗಳಿಗೆ ಜೀವನದಲ್ಲಿ ನಿರ್ದಿಷ್ಟ ಗುರಿ ಇರಬೇಕು. ಅಂದಾಗ ಜೀವನದಲ್ಲಿ ಸಾಧಿಸಬಹುದು. ಯಶಸ್ಸು ಒಂದೇ ದಿನದಲ್ಲಿ ಸಿಗುವುದಿಲ್ಲ, ಅದಕ್ಕೆ ನಿರಂತರ ಪ್ರಯತ್ನ, ಶ್ರಮ, ಬದ್ಧತೆ ಬೇಕು ಎಂದು ಪ್ರೊ. ಪ್ರಕಾಶ ಸುಣಗಾರ ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಸೈಬರ್ ಸುರಕ್ಷತೆ ಜಾಗೃತಿ

ಹುಬ್ಬಳ್ಳಿ: ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಕಚೇರಿ, ಹುಬ್ಬಳ್ಳಿಯ ಸಮರ್ಥ ಗ್ರೂಪ್ ಆಫ್ ಕಾಲೇಜುಗಳಲ್ಲಿ ಡಿಜಿಟಲ್ ಪಾವತಿಗಳ ಜಾಗೃತಿ ಕಾರ್ಯಕ್ರಮ ಆಯೋಜಿಸಿ, ವಿದ್ಯಾರ್ಥಿಗಳಲ್ಲಿ ಸೈಬರ್ ಸುರಕ್ಷತೆ ಮತ್ತು ಡಿಜಿಟಲ್ ಪಾವತಿ ಮಾರ್ಗಗಳ ಸುರಕ್ಷಿತ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ಅಧಿವೇಶನದಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಭದ್ರತಾ ಕ್ರಮಗಳು ಮತ್ತು ಆನ್‌ಲೈನ್ ವಂಚನೆಗಳನ್ನು ತಡೆಗಟ್ಟಲು ಮುನ್ನೆಚ್ಚರಿಕೆಗಳ ಬಗ್ಗೆ ಅರಿವು ಮೂಡಿಸಲಾಯಿತು. ಒಟಿಪಿಗಳು, ಪಾಸ್‌ವರ್ಡ್‌ಗಳು ಅಥವಾ ಬ್ಯಾಂಕಿಂಗ್ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳದಿರುವ ಪ್ರಾಮುಖ್ಯತೆಯನ್ನು ತಿಳಿಸಲಾಯಿತು. ಯುಪಿಐ, ಮೊಬೈಲ್ ಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್, ಡೆಬಿಟ್ ಕಾರ್ಡ್‌ಗಳು ಮತ್ತು ಕ್ಯೂಆರ್ ಕೋಡ್ ಪಾವತಿಗಳಂತಹ ವಿವಿಧ ಡಿಜಿಟಲ್ ಪಾವತಿ ವೇದಿಕೆಗಳನ್ನು ದಿನನಿತ್ಯದ ವಹಿವಾಟುಗಳಲ್ಲಿ ಅವುಗಳ ಪ್ರಾಯೋಗಿಕ ಬಳಕೆಯ ಜೊತೆಗೆ ವಿವರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಾದೇಶಿಕ ಮುಖ್ಯಸ್ಥ ದೊಡ್ಡರಂಗಪ್ಪ, ಇಂದಿನ ವೇಗವಾಗಿ ವಿಕಸನಗೊಳ್ಳುತ್ತಿರುವ ಆರ್ಥಿಕ ಪರಿಸರ ವ್ಯವಸ್ಥೆಯಲ್ಲಿ ಡಿಜಿಟಲ್ ಪಾವತಿಗಳು ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ ಮತ್ತು ವಿದ್ಯಾರ್ಥಿಗಳು ಮತ್ತು ಯುವ ನಾಗರಿಕರು ಅವುಗಳ ಪ್ರಯೋಜನಗಳು ಹಾಗೂ ಭದ್ರತಾ ಅಂಶಗಳನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. 115 ವರ್ಷಗಳ ಹಿಂದೆ ಸ್ಥಾಪನೆಯಾದಾಗಿನಿಂದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿಂಗ್ ವ್ಯವಹಾರ ಮತ್ತು ಆರ್ಥಿಕ ಸೇರ್ಪಡೆಯ ಮೇಲೆ ಮಾತ್ರ ಗಮನಹರಿಸಿಲ್ಲ, ಆದರೆ ಡಿಜಿಟಲ್ ಪಾವತಿಗಳು ಮತ್ತು ಸುರಕ್ಷಿತ ಡಿಜಿಟಲ್ ಬ್ಯಾಂಕಿಂಗ್ ಅಭ್ಯಾಸಗಳ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮತ್ತು ತಿಳುವಳಿಕೆಯನ್ನು ಹರಡಲು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ತೆಗೆದುಕೊಂಡ ಉಪಕ್ರಮಗಳನ್ನು ಎತ್ತಿತೋರಿಸುವ ಮೂಲಕ ಆರ್ಥಿಕ ಸಾಕ್ಷರತೆ ಮತ್ತು ಬ್ಯಾಂಕಿಂಗ್ ಜಾಗೃತಿಯ ಮೇಲೆ ಕೇಂದ್ರೀಕರಿಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಸಕ್ರಿಯವಾಗಿ ಕೊಡುಗೆ ನೀಡಿದೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಹುಬ್ಬಳ್ಳಿ ಮತ್ತು ಹುಬ್ಬಳ್ಳಿ ಮುಖ್ಯ ಶಾಖೆಯ ಪ್ರಾದೇಶಿಕ ಕಚೇರಿಯ ಬ್ಯಾಂಕ್ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ರೇಣುಕಾಚಾರ್ಯ ಜಯಂತಿ ನಾಳೆ: ತಡಸಮಠ

ಕಲಘಟಗಿ: ವೀರಶೈವ ಧರ್ಮ ಸಂಸ್ಥಾಪಕ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಮಾ.16ರಂದು ಪಟ್ಟಣದ ಹನ್ನೆರಡು ಮಠದಲ್ಲಿ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಎಸ್.ವಿ. ತಡಸಮಠ ತಿಳಿಸಿದರು.

ಅವರು ಹನ್ನೆರಡು ಮಠದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚಿಗೆ ರೇಣುಕಾಚಾರ್ಯರಂತಹ ಮಹಾಪುರುಷರನ್ನು ಒಂದೇ ಜಾತಿಗೆ ಸೀಮಿತ ಮಾಡುತ್ತಿದ್ದಾರೆ. ಆದರೆ ರೇಣುಕರು ಎಲ್ಲಾ ಜಾತಿ ಧರ್ಮದವರಿಗೂ ಅನ್ವಯಿಸುವ ಮಹನೀಯರು ಗುರುಗಳು ಎಂದರು.

ಅಜ್ಜಯ್ಯ ಹಿರೇಮಠ ಮಾತನಾಡಿ, ರೇಣುಕಾಚಾರ್ಯರ ಕರ್ತೃ ಗದ್ದುಗೆಗೆ ಮಹಾ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರುತಿ ಕಾರ್ಯಕ್ರಮ ಜರಗುವುದು. ಸೋಮವಾರ ಬೆಳಗ್ಗೆ 9 ಗಂಟೆಗೆ ಬೆಂಡಿಗೇರಿ ಓಣಿಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಿಂದ ರೇಣುಕಾಚಾರ್ಯರ ನೂತನ ಉತ್ಸವ ಮೂರ್ತಿಯ ಮೆರವಣಿಗೆಯು ಮುತ್ತೈದೆಯರಿಂದ ಕುಂಭಮೇಳ, ಪುರವಂತರಿಂದ ವೀರಗಾಸೆ, ಚಂಡಿವಾದ್ಯ, ಕರಡಿಮಜಲು, ಜಾಂಜಮೇಳ ಹಾಗೂ ವಿವಿಧ ವಾದ್ಯಮೇಳಗಳೊಂದಿಗೆ ಪಟ್ಟಣದ ರಾಜ ಬೀದಿಗಳಲ್ಲಿ ಮೆರವಣಿಗೆ ಮುಖಾಂತರ ಹನ್ನೆರಡು ಮಠಕ್ಕೆ ತಲುಪುವುದು ಎಂದರು.

ಗಂಗಾಧರ ಚಿಕ್ಕಮಠ ಮಾತನಾಡಿ, ಮೆರವಣಿಗೆ ನಂತರ ಮಧ್ಯಾಹ್ನ 11.30ಕ್ಕೆ ಧರ್ಮಸಭೆ ಜರುಗುವುದು. ಕಲಘಟಗಿ ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶಿರಕೋಳ ಹಿರೇಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡುವರು. ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ಇರುವುದು ಎಂದರು.

ಈ ಸಂದರ್ಭದಲ್ಲಿ ರೇವಣಸಿದ್ಧ ಶಿವಾಚಾರ್ಯ ಶ್ರೀಗಳು, ಶಿವು ತೇಗೂರಮಠ, ಶಂಕರಗೌಡ ಭಾವಿಕಟ್ಟಿ, ಶರಣಯ್ಯ ಬನ್ನಿಕೊಪ್ಪಮಠ, ಚರಣ ಪಾಟೀಲ, ಚನ್ನಬಸಯ್ಯ ಚಿಕ್ಕಮಠ, ಶಿವಪುತ್ರಯ್ಯ ತೇಗೂರಮಠ , ವೀರೇಶ ಹಾರೂಗೇರಿ, ರುದ್ರಯ್ಯ ಹಿರೇಮಠ, ಸಿದ್ದಯ್ಯ ಹಿರೇಮಠ, ಕರಬಸಯ್ಯ ನಾಗನಗೌಡರ, ಶ್ರೀಕಾಂತ ಮರಿಗೌಡರ ಸೇರಿದಂತೆ ಗುರುಹಿರಿಯರು ಇದ್ದರು.



ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿ ಸಮಿತಿ ಸಭೆ



ಹುಬ್ಬಳ್ಳಿ: ಶ್ರೀ ಸಮರ್ಥ ಸೇವಾ ಕೇಂದ್ರ ಟ್ರಸ್ಟ್ ಹಾಗೂ ಇತರೆ ಸಂಘ ಸಂಸ್ಥೆಗಳಿಂದ ಪ್ರವರ್ತಿತ ಅಖಿಲ ಭಾರತ ಬ್ರಾಹ್ಮಣ ಕ್ಷೇಮಾಭಿವೃದ್ಧಿ ನಿಧಿಯ ನೂತನ ಆಡಳಿತ ಮಂಡಳಿಯ ಸರ್ವ ಸದಸ್ಯರು ಹಾಗೂ ವಿಶೇಷ ಆಹ್ವಾನಿತರ ಸಭೆ ಶನಿವಾರ ನಡೆಯಿತು.

ಇಲ್ಲಿನ ಸಿಬಿಟಿ ಯಲ್ಲಿರುವ ಶ್ರೀ ಚಿದಂಬರ ಕೋ- ಆಪರೇಟಿವ್ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸಮಾಜದ ಗಣ್ಯರಾದ ವಾದಿರಾಜ್ ಎನ್. ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಜಿ. ಕೆ. ಕುಲಕರ್ಣಿ, ಸುಧೀಂದ್ರ ದೇಶಪಾಂಡೆ, ಸಿ.ಆರ್. ಜೋಶಿ, ಅನಂತಕುಲಕರ್ಣಿ ವೇದಿಯಲ್ಲಿದ್ದರು. ಸತ್ಯನಾರಾಯಣ ಆಚಾರ್ಯ, ಹನುಮಂತ ಟಕ್ಕಳಕಿ, ವೆಂಕಣ್ಣ ಶಂಕರ ಪಾಟೀಲ್, ಚಿದಂಬರ ತೋರಗಲ್, ವಿರೂಪಾಕ್ಷ ತಿಗಡಿಕರ್, ವೆಂಕಟೇಶ್ ಶಿವಪೂಜಿ, ಅರವಿಂದ ಕುರ್ತಕೋಟಿ, ದತ್ತಾತ್ರೇಯ ಮುತಾಲಿಕ್, ಉಮಾ ಪಾಠಕ್ ಮತ್ತಿತರರು ಕ್ಷೇಮಾಭಿವೃದ್ಧಿ ನಿಧಿ, ಬ್ರಾಹ್ಮಣ ಸಮುದಾಯ ಸಂಘಟನೆ, ಸಂಸ್ಕಾರ, ಒಗ್ಗಟ್ಟಿನ ಕುರಿತು ತಮ್ಮ ಅನಿಸಿಕೆ ಹಂಚಿಕೊಂಡರು. ಸಮಿತಿಯ ಸಿ. ಎಂ. ದೀಕ್ಷಿತ್, ರಾಜೇಂದ್ರ ಕುಲಕರ್ಣಿ, ಬಿ. ಆರ್. ಪಾಟೀಲ್, ಶರಶ್ಚಂದ್ರ, ಗುರುರಾಜ್ ಕುಲಕರ್ಣಿ, ಮಾಲತೇಶ ಕುಲಕರ್ಣಿ ಮತ್ತಿತರರಿದ್ದರು. ನರಸಿಂಹ ರಾವ್ ಸೋಮಲಾಪೂರ್ ನಿರೂಪಿಸಿದರು. ಅಂಬರೀಷ ಹಾನಗಲ್ ವಂದಿಸಿದರು.

ಖೋ-ಖೋ ಪಂದ್ಯಕ್ಕೆ ಪ್ರವೀಣ ಪೂಜಾರ ಆಯ್ಕೆ



ನವಲಗುಂದ: ಶ್ರೀ ಶಂಕರ ಮಹಾವಿದ್ಯಾಲಯದ ಬಿ.ಎ 6ನೇ ಸೆಮಿಸ್ಟರ್ ವಿದ್ಯಾರ್ಥಿ ಪ್ರವೀಣ ಪೂಜಾರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗಿದ ಪುರುಷರ ಖೋ-ಖೋ ತಂಡದ ಆಯ್ಕೆಯಲ್ಲಿ ಭಾಗವಹಿಸಿ, ಸತತ ಮೂರನೇ ಬಾರಿ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾನೆ. ದಾವಣಗೆರೆ ವಿಶ್ವವಿದ್ಯಾಲಯ ದಾವಣಗೆರೆಯಲ್ಲಿ ಜರುಗಲಿರುವ ಅಂತರ್ ವಿಶ್ವವಿದ್ಯಾಲಯಗಳ ಪುರುಷರ ಖೋ-ಖೋ ಪಂದ್ಯಾವಳಿಯಲ್ಲಿ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಲಿದ್ದಾನೆ.

ಮಾ.19ರಂದು ಯುಗಾದಿ ಉತ್ಸವ


ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಗೋಕುಲ ರಸ್ತೆಯ ಮಾರುತಿ ನಗರದ ಕೇಶವಕುಂಜದಲ್ಲಿ ಮಾ.19ರಂದು ಸಂಜೆ 7:15ಕ್ಕೆ ಯುಗಾದಿ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ ಆರ್. ಬಿಸ್ನಳ್ಳಿ ಆಗಮಿಸುವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯರಾದ ಶ್ರೀಧರ ನಾಡಿಗೇರ ಬೌದ್ಧಿಕ ನೀಡುವರು ಎಂದು ಹುಬ್ಬಳ್ಳಿ ಮಹಾನಗರ ಸಂಘಚಾಲಕ ಶಿವಾನಂದ ಅವಟಿ ತಿಳಿಸಿದ್ದಾರೆ.

ಅದಾಲತ್‌ನಲ್ಲಿ 111 ಪ್ರಕರಣ ಇತ್ಯರ್ಥ

ಕುಂದಗೋಳ: ಪಟ್ಟಣದ ಹಿರಿಯ ಹಾಗೂ ಕಿರಿಯ ನ್ಯಾಯಾಲಯ ಆವರಣದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ವಿವಿಧ ರೀತಿಯ ಒಟ್ಟು 111 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಸುಮಾರು 57,50,347 ಮೊತ್ತ ವಸೂಲಾಗಿದೆ.

ಈ ಲೋಕ್ ಅದಾಲತ್‌ನಲ್ಲಿ ಬ್ಯಾಂಕ್ ಸಾಲ, ಚೆಕ್ ಬೌನ್ಸ್, ಕಾರ್ಮಿಕ ವಿವಾದ, ಎಂವಿ ಸಿ (ಮೋಟಾರ್ ವಾಹನ ಅಪಘಾತ) ಪ್ರಕರಣಗಳು ಸೇರಿದಂತೆ ವಿವಿಧ ವಿಭಾಗಗಳ ಪ್ರಕರಣಗಳನ್ನು ಕಕ್ಷಿದಾರರ ಪರಸ್ಪರ ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಯಿತು. ರಾಷ್ಟ್ರೀಕೃತ ಹಾಗೂ ಸ್ಥಳೀಯ ಬ್ಯಾಂಕ್‌ಗಳಿಗೆ ಸಂಬಂಧಿತ ಪ್ರಕರಣಗಳಲ್ಲಿ 55 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಈ ಪ್ರಕರಣಗಳಿಂದ ಸುಮಾರು 34,44,269 ರೂ. ವಸೂಲಾಗಿದೆ. ಸಿವಿಲ್ ಹಾಗೂ ಇತರೆ ವಿಭಾಗಗಳಲ್ಲಿ 56 ಪ್ರಕರಣಗಳು ಇತ್ಯರ್ಥಗೊಂಡು ಸುಮಾರು 23,06,078 ಮೊತ್ತ ವಸೂಲಿಯಾಗಿದೆ. ಈ ಮೂಲಕ ಲೋಕ ಅದಾಲತ್‌ನಲ್ಲಿ ಒಟ್ಟು 111 ಪ್ರಕರಣಗಳನ್ನು ಪರಸ್ಪರ ರಾಜೀ ಪಂಚಾಯಿತಿ ಮುಲಕ ಇತ್ಯರ್ಥಪಡಿಸಿ, ಜನರಿಗೆ ವೇಗವಾಗಿ ನ್ಯಾಯ ದೊರಕುವಂತೆ ಮಾಡಲಾಗಿದೆ ಎಂದು ನ್ಯಾಯಮೂರ್ತಿಗಳು ತಿಳಿಸಿದ್ದಾರೆ. ಲೋಕ್ ಅದಾಲತ್‌ನಲ್ಲಿ ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶ ಅಬ್ದುಲ್ ಖಾದರ್ ಹಾಗೂ ಕಿರಿಯ ನ್ಯಾಯಾಲಯದ ನ್ಯಾಯಾಧೀಶೆ ಗಾಯಿತ್ರಿ ಹಾಗೂ ಇತರರಿದ್ದರು.



ದೈಹಿಕ ಸದೃಢತೆಗೆ ಗಮನ ಹರಿಸಿ



ಅಳ್ನಾವರ: ಗ್ರಾಮೀಣ ಕ್ರೀಡೆ ಮತ್ತು ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸುವ ಮೂಲಕ ದೈಹಿಕ ಸದೃಢತೆಗೆ ಗಮನ ಹರಿಸುವದು ಅಗತ್ಯವಿದೆ ಎಂದು ಪ.ಪಂ ಮಾಜಿ ಸದಸ್ಯ ನಾಗೇಮದ್ರ ಕುನ್ನೂರಕರ ಹೇಳಿದರು.

ಪಟ್ಟಣದ ಜೈ ಹನುಮಾನ ತಾಲೀಮ್ ಸಂಘದವರು ಆಯೋಜಿಸಿದ್ದ ಮೂರು ದಿನದ ಹೊನಲು ಬೆಳಕಿನ ಅಳ್ನಾವರ ಪ್ರೊ ಕಬಡ್ಡಿ ಲೀಗ್ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶೀ ಆಟಗಳು ಮನರಂಜನೆಯ ಜೊತೆಗೆ ನಮ್ಮ ದಣಿವನ್ನು ಆರಿಸುತ್ತದೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿರುವ ಕ್ರೀಡೆಗಳನ್ನು ಆಯೋಜಿಸುವುದು ಅವಶ್ಯವಿದೆ ಎಂದರು.

ಕ್ರೀಡಾಪ್ರೇಮಿ ಮಂಜುನಾಥ ನರಸನ್ನವರ ಮಾತನಾಡಿ, ಯುವಕರು ಪಾಠದ ಜೊತೆಗೆ ಆಟದ ಹವ್ಯಾಸಗಳನ್ನು ಬೆಳೆಸಿಕೊಳಬೇಕು ಮತ್ತು ಗ್ರಾಮೀಣ ಭಾಗದ ಯುವಕರು ತಮ್ಮ ನಿರಂತರವಾಗಿ ಆಟದಲ್ಲಿ ತೊಡಗುವ ಮೂಲಕ ವಿದೇಶಿ ನೆಲದಲ್ಲಿಯೂ ಸ್ವದೇಶಕ್ಕೆ ಕೀರ್ತಿ ತರುವಂತವರಾಗಬೇಕು ಎಂದರು.

ನಾರಾಯಣ ಮೋರೆ, ರಾಹುಲ್ ಶಿಂದೆ, ವಿವೇಕ ಪಾಟೀಲ, ವಿನಾಯಕ ಬರಗುಂಡಿ, ಯತೇಶ ಖಿರೋಜಿ, ಶಿವರಾಜ ಬರಗುಂಡಿ, ಸಚಿನ ಲಿಂಗನಮಠ, ಯಲ್ಲಾರಿ ಹುಬ್ಳೀಕರ, ಓಂಕಾರ ನಿಟ್ಟೂರಕರ, ನಾರಾಯಣ ಕಂಗ್ರಾಳಕರ, ರಾಹುಲ್ ಮಿಟಗಾರ, ಜಯವಂತ ಪೆಡ್ನೇಕರ, ವಿಶಾಲ ಕಾಕತ್ಕರ, ಕಿರಣ ಗಡಕರ ಇದ್ದರು.

ಅದಾಲತ್‌ನಲ್ಲಿ 706 ಪ್ರಕರಣ ಇತ್ಯರ್ಥ

ನವಲಗುಂದ: ತಾಲೂಕು ಕಾನೂನು ಸೇವಾ ಸಮಿತಿ ನವಲಗುಂದ ವತಿಯಿಂದ ಶನಿವಾರ ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದಲ್ಲಿ ಆಯೋಜಿಸಿದ್ದ ಬೃಹತ್ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಅಪರಾಧ, ಚೆಕ್ ಬೌನ್ಸ್, ಹಣ ವಸೂಲಾತಿ, ಮೋಟಾರು ವಾಹನ, ಸಿವಿಲ್, ಜನನ ನೋಂದಣಿ, ಲಘು ಪ್ರಕರಣ, ಪೂರ್ವ ವಾಜ್ಯ ಪ್ರಕರಣಗಳು ಸೇರಿದಂತೆ ವಿವಿಧ ಒಟ್ಟು 918 ಪ್ರಕರಣಗಳಲ್ಲಿ 706 ಪ್ರಕರಣಗಳು ಇತ್ಯರ್ಥಗೊಂಡವು.

ಸಂಧಾನಕಾರರಾಗಿ ಹಿರಿಯ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶ ಮಂಜುನಾಥ ಪಿ.ಪಾನಘಂಟಿ, ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶ ನವೀನ ಎಫ್. ಡಿಸೋಜ, ನ್ಯಾಯವಾದಿ ಪಿ.ಸಿ.ಹಿರೇಮಠ ಹಾಗೂ ಎಸ್.ಎಸ್. ಸೋಮನಕಟ್ಟಿ ಲೋಕ್ ಅದಾಲತ್‌ನಲ್ಲಿ ಭಾಗವಹಿಸಿದ್ದರು.

ವಕೀಲರ ಸಂಘದ ಅಧ್ಯಕ್ಷ ಪಿ. ಎಚ್. ಕೋನರಡ್ಡಿ, ನ್ಯಾಯವಾದಿಗಳಾದ ವಿ.ಟಿ. ಕುಲಕರ್ಣಿ, ಆನಂದ ಮುರಾಳ ಸೇರಿದಂತೆ ಕಾರ್ಯಾಲಯದ ಸಿಬ್ಬಂದಿ ಇದ್ದರು.



ಸಾಹಿತ್ಯ ಓದಿನಿಂದ ಮೌಲ್ಯಗಳ ಬೆಳವಣಿಗೆ



ಧಾರವಾಡ: ಇಂದಿನ ಯುವಕರಲ್ಲಿ ಸಂಸ್ಕಾರದ ಕೊರತೆಯಿದೆ. ಸಾಹಿತ್ಯದ ಓದು ಮತ್ತು ಅಧ್ಯಯನ ಯುವ ಜನಾಂಗದಲ್ಲಿ ಮೌಲ್ಯಗಳನ್ನು ತುಂಬುವ ಕೆಲಸವನ್ನು ಮಾಡುತ್ತದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಜೈನಶಾಸ್ತ್ರ ಅಧ್ಯಯನ ಪೀಠ ಹಾಗೂ ಜೆಎಸ್ಎಸ್ ಮಂಜುನಾಥೇಶ್ವರ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಸಂಸ್ಥೆಯ ವತಿಯಿಂದ ನಡೆದ ಸಾಹಿತ್ಯ-ಸಂಸ್ಕೃತಿ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ದಿಕ್ಸೂಚಿ ಭಾಷಣ ಮಾಡಿದ ಕವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ. ಜೆ.ಎಂ.ನಾಗಯ್ಯ, ಪ್ರಾಚೀನ ಕನ್ನಡ ಕಾವ್ಯಗಳ ಸಾಹಿತ್ಯಿಕ ಮೌಲ್ಯಗಳ ಪರಿಚಯಿಸಿದ ಅವರು, ರನ್ನ ಕವಿಯ ಅಜಿತನಾಥ ಪುರಾಣದ ಕೆಲ ಮಹತ್ವದ ಪ್ರಸಂಗಗಳು ಸ್ವಾರಸ್ಯಕರವಾಗಿ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಮಾತನಾಡಿ, ಜೈನ ಧರ್ಮದ ಸಂದೇಶ ಅಹಿಂಸೆ. ಇದು ಸಮಕಾಲೀನ ಜಗತ್ತಿಗೆ ಆದ್ಯತೆಯೂ ಹೌದು. ಆತ್ಮಕ್ಕೆ ಅಂಟಿದ ಕರ್ಮಗಳು ಕಳೆಯಲು ಅಹಿಂಸೆ ಅನುಸರಿಸಲು ಸಲಹೆ ನೀಡಿದರು. ಧರಣೇಂದ್ರ ಜವಳಿ, ಶಾಂತರಾಜ ಮಲ್ಲಸಮುದ್ರ, ಶಾಂತಿನಾಥ ಹೋತಪೇಟಿ, ಧನಪಾಲ ಮುನ್ನೊಳಿ, ಡಾ.ರಾಯಪ್ಪ ಬಾಳಿಕಾಯಿ, ಶಶಿಧರ ನರೇಂದ್ರ, ಡಾ. ವೈ.ಎಂ. ಭಜಂತ್ರಿ, ಡಾ.ಹನುಮಾಕ್ಷಿ ಗೋಗಿ, ಮಹಾವೀರ ಉಪಾಧ್ಯೆ, ಡಾ.ಅರುಣ ಶಿರಹಟ್ಟಿ ಇದ್ದರು. ಜೈನ ಅಧ್ಯಯನ ಪೀಠದ ಸಂಯೋಜಕ ಡಾ.ಜಿನದತ್ತ ಹಡಗಲಿ ಸ್ವಾಗತಿಸಿದರು. ಡಾ.ಬಿ.ಎನ್.ಭಾವಿ ನಿರೂಪಿಸಿದರು. ಡಾ.ಸಂಗಯ್ಯ ವಂದಿಸಿದರು.

ಏ.25ರಂದು ರಾಷ್ಟ್ರೀಯ ಸಮ್ಮೇಳನ: ಜಾಬಶೆಟ್ಟಿ

ಹುಬ್ಬಳ್ಳಿ: ಕಪ್ಪತಗುಡ್ಡ ನಂದಿವೇರಿ ಸಂಸ್ಥಾನ ಮಠ, ಕೆಎಲ್‌ಇ ತಾಂತ್ರಿಕ ವಿವಿ, ಕೃಷಿ ವಿವಿ, ಟ್ರಾನ್ಸ್ ಡಿಸಿಪ್ಲಿನರಿ ವಿವಿ ಸಹಯೋಗದಲ್ಲಿ ಔಷಧಿ ಸಸ್ಯಗಳ ಜೀವ ವೈವಿಧ್ಯತೆ, ಸಂರಕ್ಷಣೆ, ಕೃಷಿ ಮೌಲ್ಯವರ್ಧನೆ ಹಾಗೂ ಸುಸ್ಥಿರ ಬಳಕೆ ಕುರಿತು ರಾಷ್ಟ್ರೀಯ ಸಮ್ಮೇಳನ ಹಾಗೂ ಕ್ಷೇತ್ರ ಭೇಟಿ ಏಪ್ರಿಲ್ 25, 26 ಹಾಗೂ 27ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಮ್ಮೇಳನದ ಪ್ರಧಾನ ಸಂಚಾಲಕ ಬಾಲಚಂದ್ರ ಜಾಬಶೆಟ್ಟಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕೆಎಲ್‌ಇ ತಾಂತ್ರಿಕ ವಿವಿಯ ಬಿಟಿ ವಿಭಾಗ ಪ್ರೇಕ್ಷಾಗೃಹದಲ್ಲಿ ಏಪ್ರಿಲ್ 25 ಹಾಗೂ 26 ರಂದು ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಏಪ್ರಿಲ್ 27 ರಂದು ಕಪ್ಪತಗುಡ್ಡಕ್ಕೆ ಔಷಧಿ ಸಸ್ಯಗಳ ಅಧ್ಯಯನ ಹಾಗೂ ಔಷಧಿ ಸಸ್ಯಗಳ ಬೆಳೆಗಾರ ದೇವರಡ್ಡಿ ಅಗಸನಕೊಪ್ಪ ಕಡಕೋಳ ಅವರ ಸಾವಯವ ತೋಟಕ್ಕೆ ಭೇಟಿ ಇದೆ ಎಂದರು.

ಕಪ್ಪತಗುಡ್ಡ ನಂದಿವೇರಿ ಸಂಸ್ಥಾನ ಮಠ ಶಿವಕುಮಾರ ಸ್ವಾಮಿ ಸಾನಿಧ್ಯ ವಹಿಸಲಿದ್ದಾರೆ. ಕೆಎಲ್‌ಇ ತಾಂತ್ರಿಕ ವಿವಿ ಉಪ ಕುಲಪತಿ ಅಶೋಕ ಶೆಟ್ಟರ ಅಧ್ಯಕ್ಷತೆ ವಹಿಸುವರು. ಏಪ್ರಿಲ್ 26 ರಂದು ನಡೆಯುವ ಸಂಜೆ ಕಾರ್ಯಕ್ರಮದಲ್ಲಿ ಎರಡು ದಿನಗಳ ಸಮ್ಮೇಳನ ಸಂಕ್ಷಿಪ್ತ ವರದಿ, ಪ್ರಮಾಣ ಪತ್ರ ವಿತರಣೆ, ಗೌರವ ಸನ್ಮಾನ ಹಮ್ಮಿಕೊಳ್ಳಲಾಗಿದೆ ಎಂದರು. ಔಷಧೀಯ ಸಸ್ಯಗಳ ಬೆಳೆಗಾರರು ಹಾಗೂ ಖರೀದಿದಾರರು ಎದುರಿಸುತ್ತಿರುವ ಸವಾಲುಗಳು ಒಂದು ಅವಲೋಕನ, ಕರ್ನಾಟಕ ಹಾಗೂ ಕಪ್ಪತಗುಡ್ಡಕ್ಕೆ ಸಂಬಂಧಿಸಿದಂತೆ ಔಷಧೀಯ ಸಸ್ಯಗಳ ಮೌಲ್ಯಮಾಪನ ಹಾಗೂ ಸಂಪನ್ಮೂಲ ನಕ್ಷೀಕರಣ, ಔಷಧೀಯ ಸಸ್ಯಗಳ ವಲಯದ ಅವಕಾಶಗಳು ಹಾಗೂ ಕಾರ್ಯಕ್ರಮಗಳು, ಔಷಧೀಯ ಸಸ್ಯಗಳ ಸಾಂಪ್ರದಾಯಿಕ ಜ್ಞಾನ ಹಾಗೂ ಆಧುನಿಕ ಅನ್ವಯಿಕೆಗಳು, ಔಷಧೀಯ ಸಸ್ಯಗಳ ಬೆಳೆಗಾರರು, ಖರೀದಿದಾರರ ನೇರ ಸಂವಾದ ಹಾಗೂ ಒಡಂಬಡಿಕೆಗಳಿಗೆ ಪ್ರೋತ್ಸಾಹ, ಔಷಧೀಯ ಸಸ್ಯಗಳ ಗುಣಪಡಿಸುವ ಹಾಗೂ ತಡೆಗಟ್ಟುವ ಗುಣಲಕ್ಷಣಗಳು ಸೇರಿದಂತೆ ಅನೇಕ ವಿಷಯಗಳ ಕುರಿತು ಅಧಿವೇಶನಗಳಲ್ಲಿ ತಜ್ಞರ ಉಪನ್ಯಾಸ ನಡೆಯಲಿದೆ ಎಂದರು. ಶಿವಕುಮಾರ ಸ್ವಾಮೀಜಿ, ಡಾ. ಜಗನ್ನಾಥರಾವ್, ಡಾ. ಚರಂತಯ್ಯ ಹಿರೇಮಠ, ಡಾ. ಪ್ರಶಾಂತ ಇದ್ದರು.

ಜಂಗಿ ನಿಕಾಲಿ ಕುಸ್ತಿಗೆ ಚಾಲನೆ | ಸಚಿವ ಮನ್ಸುಖ್ ಮಾಂಡವೀಯ ಸಲಹೆ

ಜಾಗತಿಕ ಮಟ್ಟದಲ್ಲಿ ದೇಶದ ಕೀರ್ತಿ ಹೆಚ್ಚಿಸಿ



ಧಾರವಾಡ: ನರೇಂದ್ರ ಮೋದಿ ಸರ್ಕಾರ ಭಾರತದ ಮಣ್ಣಿನ ಕ್ರೀಡೆಗಳಾದ ಕುಸ್ತಿ ಮತ್ತು ಕಬಡ್ಡಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದೆ. ಕ್ರೀಡಾಪಟುಗಳು ದೇಶದ ಕೀರ್ತಿ ಪತಾಕೆ ಹಾರಿಸುವಂತೆ ಕೇಂದ್ರ ಕ್ರೀಡಾ ಇಲಾಖೆ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

ನಗರದ ಕರ್ನಾಟಕ ಕಾಲೇಜಿನ ಮೈದಾನದಲ್ಲಿ ನಡೆದ ಸಂಸದರ ಕ್ರೀಡಾಕೂಟದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಗೆ ಶನಿವಾರ ಅಧಿಕೃತ ಚಾಲನೆ ನೀಡಿ ಅವರು, ಖೇಲೋ ಇಂಡಿಯಾ ಮೂಲಕ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದರು.

ಕ್ರೀಡೆ ಹಾಗೂ ಕ್ರೀಡಾಪಟುಗಳ ಪ್ರೋತ್ಸಾಹಕ್ಕೆ ದೇಶದ ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಸಂಸದರ ಕ್ರೀಡಾ ಉತ್ಸವ ಆಯೋಜಿಸುತ್ತಿದೆ. ಅಲ್ಲದೇ, ಸೌಲಭ್ಯ ಕಲ್ಪಿಸುವ ಕಾರ್ಯವೂ ನಡೆದಿದೆ. ಇದರ ಸದ್ಬಳಕೆಯಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟುಗಳ ತಯಾರಿಸಲು ಸಲಹೆ ನೀಡಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ದೇಶದಲ್ಲಿ ಮೋದಿ ಸರ್ಕಾರ ಬಂದ ನಂತರ ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ದೇಶಕ್ಕೆ ಕ್ರೀಡಾನೀತಿ, ಖೇಲೋ ಇಂಡಿಯಾ, ಫಿಟ್ ಇಂಡಿಯಾ ಜಾರಿಗೊಳಿಸಿದ ಕೀರ್ತಿ ಕ್ರೀಡಾ ಸಚಿವ ಮಾಂಡವೀಯ ಅವರಿಗೆ ಸಲ್ಲುತ್ತದೆ ಎಂದರು.

ಶಾಸಕ ಅರವಿಂದ ಬೆಲ್ಲದ, ಧಾರವಾಡದಲ್ಲಿ ಜಾಗತಿಕ ಮಟ್ಟದ ಕ್ರೀಡಾ ಸೌಲಭ್ಯವನ್ನು ಒದಗಿಸಿದೆ. ಈ ಮೂಲಕ ಕ್ರೀಡಾಪಟುಗಳು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಶಾಸಕರಾದಎಂ.ಆರ್.ಪಾಟೀಲ್, ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ್, ಮೇಯರ್ ಜ್ಯೋತಿ ಪಾಟೀಲ್, ಉಪ ಮೇಯರ್ ಸಂತೋಷ ಚೌವ್ಹಾನ್, ಮಾಜಿ ಶಾಸಕ ಅಮೃತ ದೇಸಾಯಿ, ಪಾಲಿಕೆ ಸಭಾ ನಾಯಕ ಈರೇಶ ಅಂಚಟಗೇರಿ, ಜಿಲ್ಲಾಧಿಕಾರಿ ಸ್ನೇಹಲ್ ಆರ್, ಸಿಇಒ ಭವನೇಶ ಪಾಟೀಲ್, ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಎಡಿಸಿ ಗೀತಾ ಸಿ.ಡಿ., ರಿತಿಕಾ ವರ್ಮಾ ಇದರರು ಇದ್ದರು.

ತೂಕದ ಕುಸ್ತಿ ಸ್ಪರ್ಧೆ ಫಲಿತಾಂಶ

- 57 ಕೆ.ಜಿ. ವಿಭಾಗದಲ್ಲಿ ಭಜರಂಗಿ ದೊಡಮನಿ ಪ್ರಥಮ ಸ್ಥಾನ, ಕಾರ್ತಿಕ ಪೀರಣ್ಣವರ ದ್ವಿತೀಯ, ಪ್ರಕಾಶಯ್ಯ ದೊಡ್ಡಪೂಜಾರ ಹಾಗೂ ಮಕ್ತುಂಹುಸೇನ್ ಮುಲ್ಲಾ ತೃತೀಯ ಸ್ಥಾನ ಪಡೆದರು.
- 61ಕೆಜಿ ವಿಭಾಗದಲ್ಲಿ ಚೇತನ್ ಟುಕ್ಕೋಜಿ, ಉಮೇಶ ಬಿ. ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದರು. ತೃತೀಯ ಸ್ಥಾನ ಅಫ್ಜಲ್ ಕುಂಬಾರಗನವಿ ಹಾಗೂ ಮನೋಜ ಹೊಸಮನಿ ಹಂಚಿಕೊಂಡರು.
- 65 ಕೆ.ಜಿ.ವಿಭಾಗದಲ್ಲಿ ದಾದಾಫೀರ್ ಸೈಯದನವರ ಪ್ರಥಮ, ಶಿವಾಜಿ ಗಾಯಕವಾಡ ದ್ವಿತೀಯ, ಬಸವರಾಜ ಚಂದುನವರ್ ಹಾಗೂ ಪ್ರಜ್ವಲ್ ಹೊಸಮನಿ ತೃತೀಯ ಸ್ಥಾನ ಪಡೆದರು.
- 74 ಕೆ.ಜಿ.ವಿಭಾಗದಲ್ಲಿ ಅಭಿಷೇಕ ಹೂಗಾರ, ಆಕಾಶ ದಾನೆಣ್ಣವರ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದರೆ ಬಸವಂತ ಭಾವಕ್ಕನವರ ಹಾಗೂ ಕಾರ್ತಿಕ ಪಾಟೀಲ ತೃತೀಯ ಸ್ಥಾನ ಗಳಿಸಿದರು.

ಕ್ರೀಡಾ ಸಂಕೀರ್ಣ ಉದ್ಘಾಟಿಸಿದ ಸಚಿವ ಮಾಂಡವೀಯ

ಧಾರವಾಡಿಗರು ದೇಶದ ಹೆಸರು ಬೆಳೆಸಲಿ



ಧಾರವಾಡ: ಇಂದಿನ ಮಕ್ಕಳೇ ಭವಿಷ್ಯದ ಪ್ರಜೆಗಳು. ಉತ್ತಮ ಕ್ರೀಡಾಪಟುಗಳಾಗಿ ಧಾರವಾಡದ ಹೆಸರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸುವ ನಿಟ್ಟಿನಲ್ಲಿ ತಯಾರಾಗಬೇಕು ಎಂದು ಕೇಂದ್ರ ಯುವಜನ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸಲಹೆ ನೀಡಿದರು.

ನಗರದ ಕೋರ್ಟ್ ಸರ್ಕಲ್ ಹತ್ತಿರ ರೂ. 52ಕೋಟಿ ವೆಚ್ಚದಲ್ಲಿ ನಿರ್ಮಿಸಿದ ನೂತನ ಕ್ರೀಡಾ ಸಂಕೀರ್ಣ, ಅಂತಾರಾಷ್ಟ್ರೀಯ ಈಜುಕೊಳ ಉದ್ಘಾಟಿಸಿದ ಅವರು, ಈ ಸುಸಜ್ಜಿತ ಕ್ರೀಡಾ ಸಂಕೀರ್ಣ ಸದ್ಬಳಕೆಯ ಉತ್ತಮ ಸಾಧನೆ ಮಾಡಿ ಧಾರವಾಡ ಕೀರ್ತಿ ಹೆಚ್ಚಿಸಲು ಕಿವಿಮಾತು ಹೇಳಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಧಾರವಾಡದಲ್ಲಿ ಸಣ್ಣ ಈಜುಗೋಳ ಇತ್ತು. 2018ರಲ್ಲಿ ಹೊಸ ಈಜುಗೋಳ ನಿರ್ಮಿಸಲು ಯೋಜಿಸಿದ್ದೇವು. ಹಲವಾರು ಖಾಸಗಿ ಕಂಪನಿಗಳಿಂದ ಸಿಎಸ್‌ಆರ್ ನಿಧಿ ಬಳಸಿ, ಇಂದು ವಿಶ್ವ ದರ್ಜೆಯ ಕ್ರೀಡಾ ಸಂಕೀರ್ಣ ನಿರ್ಮಿಸಿದ್ದಾಗಿ ಹೇಳಿದರು.

ಈ ಕ್ರೀಡಾ ಸಂಕೀರ್ಣ ನಿರ್ವಹಣೆ ಕಷ್ಟವಿದೆ. ಹೀಗಾಗಿ ರಾಜ್ಯ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು. ಒಂದು ಸೊಸೈಟಿ ಮಾಡಿ ಇದನ್ನು ನಿರ್ವಹಿಸಬೇಕು. ಸದ್ಯ ಜಿಲ್ಲಾಧಿಕಾರಿಗಳು ನಿರ್ವಹಿಸಲು ಹೇಳಿದ ಅವರು, ಸಂಕಷ್ಟದಲ್ಲಿ ಇರುವ ಜಿಲ್ಲೆಯ ಸಾಯಿ ಸ್ಪೋರ್ಟ್ಸ್ ನವೀಕರಣಕ್ಕೆ ಸಲಹೆ ನೀಡಿದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಹಳೆಯ ಈಜುಕೊಳ 30 ಮೀಟರ್ ಇತ್ತು. ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ತರಬೇತಿಗೆ ತೊಂದರೆ ಮನಗಂಡು, ಇದೀಗ ವಿಶ್ವ ದರ್ಜೆ ಈಜುಕೊಳ ನಿರ್ಮಾಣ ಮಾಡಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಎಂ.ಆರ್.ಪಾಟೀಲ್, ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ್, ಮೇಯರ್ ಜ್ಯೋತಿ ಪಾಟೀಲ್, ಉಪ ಮೇಯರ್ ಸಂತೋಷ ಚೌಹ್ಹಾಣ, ಪಾಲಿಕೆ ಸಭಾ ನಾಯಕ ಈರೇಶ ಅಂಚಟಗೇರಿ, ಶಾಕೀರ್ ಸನದಿ, ಜಿಲ್ಲಾಧಿಕಾರಿ ಸ್ನೇಹಲ್ ಆರ್, ಸಿಇಒ ಭವನೇಶ ಪಾಟೀಲ ಇದ್ದರು.

> ಧಾರವಾಡದ ಕ್ರೀಡಾಪಟುಗಳಿಗೆ ರೂ.25 ಲಕ್ಷ ವೆಚ್ಚದ ಕ್ರೀಡಾ ಸಾಮುಗ್ರಿಗಳಿಗಾಗಿ ಮನವಿ ಸಲ್ಲಿಸಿದ್ದು, ಶೀಘ್ರವೇ ಅಗತ್ಯ ಸಾಮಾಗ್ರಿಗಳು ಪೂರೈಸಲಿದೆ.
> ■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

ಕಿರುಸುದ್ದಿ

ಸಮುದಾಯ ಒಡೆಯುವ ಕೆಲಸ ಸಲ್ಲ

ಹುಬ್ಬಳ್ಳಿ: ರಾಜಕಾರಣ ಸಲುವಾಗಿ ಕೆಲವು ಜನಪ್ರತಿನಿಧಿಗಳು ಛಲವಾದಿ ಹಾಗೂ ಮಾದಿಗ ಸಮುದಾಯಗಳನ್ನು ಒಡೆಯುವ ಕೆಲಸ ಮಾಡುತ್ತಿವೆ. ಆದರೆ, ಎರಡು ಸಮಾಜಗಳು ಇದಕ್ಕೆ ಆಸ್ಪದ ನೀಡದೆ ಎಲ್ಲರೂ ಒಂದೇ ಎಂಬ ಭಾವನೆಯಿಂದ ಬದುಕಬೇಕಿದೆ ಎಂದು ಕರ್ನಾಟಕ ರಾಜ್ಯ ಛಲವಾದಿ ಹಾಗೂ ಮಾದಿಗ ಸಮನ್ವಯ ಸಮಿತಿಯ ಮುಖಂಡ ವಿಶಾಲ್ ಆಲೂರ ಮನವಿ ಮಾಡಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಜನಪ್ರತಿನಿಧಿಗಳು ರಾಜಕಾರಣ ಮಾಡಿ. ಆದರೆ ಸಮುದಾಯಗಳ ವಿರುದ್ಧ ಎತ್ತಿ ಕಟ್ಟಿ ದ್ವೇಷ, ಅಸೂಯೆ ಮೂಡಿಸುವ ಭಾವನೆಗಳ ಬಿತ್ತುವ ಕೆಲಸ ಮಾಡಬೇಡಿ. ಈ ದುಷ್ಟ ಶಕ್ತಿಗಳನ್ನು ಮೆಟ್ಟಿನಿಂತು, ಈ ಎರಡು ಸಮುದಾಯಗಳ ಪ್ರಬಲ ನಾಯಕರ ಒಂದೇ ವೇದಿಕೆಯಲ್ಲಿ ಚಲವಾದಿಗಳು ಹಾಗೂ ಮಾದಿಗರು ಒಂದೇ ಎಂಬ ಭಾವನೆ ಇರಬೇಕು ಎಂದು ತಿಳಿಸಿದ್ದಾರೆ. ಮೀಸಲಾತಿಯಲ್ಲಿ ಸಮುದಾಯಗಳಿಗೆ ಸರಿಯಾಗಿ ಹಂಚಿಕೆಯಾಗಿ ಎರಡು ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕು. ಉದ್ಯೋಗದಲ್ಲಿ ಸರಿಸಮಾನವಾಗಿ ಹಂಚಿಕೆ ಆಗಬೇಕು. ಈ ಎರಡು ಪ್ರಬಲ ಸಮುದಾಯಗಳು ಒಂದಾಗಿ ಬಾಳಬೇಕು. ಎರಡು ಸಮುದಾಯದ ಜನರು ಒಗ್ಗಟ್ಟಾಗಿರ ಬೇಕು. ಮುಂದಿನ ದಿನಗಳಲ್ಲಿ ಇಂತ ವ್ಯಕ್ತಿಗಳಿಗೆ ನಮ್ಮ ಚಲವಾದಿ ಹಾಗೂ ಮಾದಿಗ ಸಮಿತಿ ಸಂಘಟನೆಯು ತಕ್ಕ ಪಾಠವನ್ನು ಕಲಿಸುತ್ತದೆ ಎಂದು ಎಂದು ಸಂಘದ ಅಧ್ಯಕ್ಷರು ಆನಂದ ಔದಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ ವಾಲೀಕಾರ, ಆಡಿವೇಶ ಡೊಂಕಪ್ಪಗೋಳ ತಿಳಿಸಿದ್ದಾರೆ.

ಮಾ.30ರಂದು ಬಂಗಾರಮಕ್ಕಿಯಲ್ಲಿ ಬೃಹತ್ ಉದ್ಯೋಗ ಮೇಳ

ಬಂಗಾರಮಕ್ಕಿ: ತಾಲೂಕಿನ ಬಂಗಾರಮಕ್ಕಿ ಶ್ರೀ ಕ್ಷೇತ್ರದಲ್ಲಿ ಮಾರ್ಚ್ 27ರಿಂದ ಆರಂಭವಾಗುತ್ತಿರುವ 'ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ 2026'ರ ಹಿನ್ನೆಲೆಯಲ್ಲಿ ಮಾರ್ಚ್ 30ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಡಿ.ಇಡಿ ಮತ್ತು ಬಿ.ಇಡಿ ಹಾಗೂ ಸ್ನಾತಕೋತ್ತರ ಪದವಿ ಪೂರೈಸಿದ ಅಭ್ಯರ್ಥಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದು. ಶ್ರೀ ಕ್ಷೇತ್ರ, ಬಂಗಾರಮಕ್ಕಿ ಟಾಟಾ ಎಲೆಕ್ಟ್ರಾನಿಕ್ಸ್, ಹಿಂದುಸ್ತಾನ್ ಕೊಕಾ ಕೋಲಾ ಬೆವರೇಜಸ್ ಪ್ರೈವೇಟ್ ಲಿಮಿಟೆಡ್, ಸ್ಟೈಟೆಕ್ ಡೈಸ್ ಆಂಡ್ ಮೌಲ್ಡ್ಸ್, ಶೋಧಾ ಮೋಟಾರ್ಸ್, ಪ್ರಥಮ್ ಎಜುಕೇಷನ್ ಫೌಂಡೇಶನ್, ಫಿಸಿಕ್ಸ್ ಮೋಟಾರ್ಸ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ 50ಕ್ಕೂ ಹೆಚ್ಚು ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳುತ್ತಿವೆ. ಆಸಕ್ತ ಅಭ್ಯರ್ಥಿಗಳು ತಮ್ಮ ಹೆಸರು ನೋಂದಾಯಿಸಿಕೊಳ್ಳುವ ಮೂಲಕ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಸರು ನೋಂದಾಯಿಸಿಕೊಳ್ಳಲು ಈ ಗೂಗಲ್ ಫಾರ್ಮ್ ಭರ್ತಿ ಮಾಡಲು ಕೋರಲಾಗಿದೆ. ಲಿಂಕ್ https://forms.gle/ya2ostkeRtizSKNw9 ಹೆಚ್ಚಿನ ಮಾಹಿತಿಗೆ ಈ ಮೊಬೈಲ್ ನಂಬರ್‌ಗಳಿಗೆ ಸಂಪರ್ಕಿಸಬಹುದು. 8217743455 ಮತ್ತು 9380643455 ಆಡಳಿತಕಚೇರಿ ಶ್ರೀಕ್ಷೇತ್ರ, ಬಂಗಾರಮಕ್ಕಿ.

ಖಮೇನಿ ಚಿತ್ರ ತೆರವುಗೊಳಿಸದಿದ್ದರೆ ಹೋರಾಟ: ಪ್ರಮೋದ ಮುತಾಲಿಕ್



ಬೆಳಗಾವಿ: ನಗರದಲ್ಲಿ ಹೆಚ್ಚುತ್ತಿರುವ ಇರಾನ್ ಮುಖಂಡ ಅಲಿ ಖಮೇನಿಯ ಭಾವಚಿತ್ರಗಳನ್ನು ಕೂಡಲೇ ಪೊಲೀಸ್ ಇಲಾಖೆ ತೆರವುಗೊಳಿಸಬೇಕು. ಇಲ್ಲದಿದ್ದರೇ, ನಗರದಲ್ಲಿ ಅಫಜಲ್ ಖಾನ್ ವಧೆ ಮಾಡಿದ ಛತ್ರಪತಿ ಶಿವಾಜಿ ಮಹಾರಾಜರು, ಮತ್ತು ಖಮೇನಿ ವಧೆ ಮಾಡಿದ ಇಸ್ರೇಲ್ ಪಿಎಂ ನೇತ್ಯಾನಹೂ ಭಾವಚಿತ್ರಗಳಲ್ಲಿ ನಗರದ ಪ್ರಮುಖ ಸ್ಥಳಗಳಲ್ಲಿ ಅಳವಡಿಸುತ್ತೇವೆ. ತಾಕತ್ತಿದ್ದರೆ ತೆರವುಗೊಳಿಸಿ ತೋರಿಸಿ ಎಂದು ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ ಮುತಾಲಿಕ್ ಸವಾಲು ಹಾಕಿದ್ದಾರೆ.

ಶನಿವಾರ ನಗರದ ಸರ್ಕಿಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇರಳ-2 ಚಲನಚಿತ್ರವನ್ನು ಮಹಿಳೆಯರು, ಯುವತಿಯರು ಮತ್ತು ಮಕ್ಕಳನ್ನು ಕರೆದುಕೊಂಡು ಹೋಗಿ ವೀಕ್ಷಿಸಬೇಕು. ಇದೊಂದು ಮನೋರಂಜನಾತ್ಮಕ ಚಿತ್ರವಲ್ಲದೇ, ಇದರಲ್ಲಿ ಹಿಂದು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ಲವ್ ಜಿಹಾದ್‌ನ್ನು ತೋರಿಸಿದ ವಾಸ್ತವಾಂಶದ ಆಧಾರಿತ ಚಲನಚಿತ್ರವಾಗಿದೆ ಎಂದರು.

ಶ್ರೀರಾಮಸೇನೆ ಲವ್ ಜಿಹಾದ್ ತಡೆಗಟ್ಟಲು ಸಹಾಯಣವಾಣಿ ಪ್ರಾರಂಭಿಸಿ 2 ವರ್ಷಗಳು ಗತಿಸಿದ್ದು, ಸುಮಾರು 2 ಸಾವಿರ ಕರೆಗಳು ಬಂದಿವೆ. ಅದರಲ್ಲಿ ಶೇ.75ರಷ್ಟು ಸಮಸ್ಯೆಯನ್ನು ಶ್ರೀರಾಮಸೇನೆ ಇತ್ಯರ್ಥಗೊಳಿಸಲಾಗಿದೆ ಎಂದು ಹೇಳಿದರು.

ಇನ್ನು ಕುಂಭಮೇಳದಲ್ಲಿ ಮೊನಾಲಿಸಾ ಎನ್ನುವ ರುದ್ರಾಕ್ಷಿ ಮಾರುತ್ತಿದ್ದ ಯುವತಿಯನ್ನು ಫರ್ಮಾನ್ ಖಾನ್ ಎಂಬಾತ ಮದುವೆಯಾಗಿದ್ದಾನೆ. ಕೇರಳ ಮತಾಂತರದ ಕೇಂದ್ರಬಿಂದುವಾಗಿದೆ. ಮೊನಾಲಿಸಾ ಎಂದು ಪ್ರಸಿದ್ಧಿ ಪಡೆದ ಯುವತಿಯೊಂದಿಗೂ ಮುಂದೊಂದು ದಿನ ಅನ್ಯಾಯವಾಗುವುದು ನಿಶ್ಚಿತ ಎಂದು ಹೇಳಿದರು.

ಇನ್ನು ಕಿತ್ತೂರು ರಾಣಿ ಚನ್ನಮ್ಮಳನ ಸ್ಮಾರಕವನ್ನು ಅಭಿವೃದ್ಧಿ ವಿಚಾರದಲ್ಲಿ ಬಜೆಟ್‌ನಲ್ಲಿ ಅನುದಾನ ನೀಡದ ವಿಚಾರವಾಗಿ ದೇಶಕ್ಕಾಗಿ ಹೋರಾಡಿದ ಪ್ರಥಮ ಮಹಿಳೆಗೆ ಜಾತಿ ರಾಜಕಾರಣ ತಂದು ಅಪಮಾನ ಮಾಡುತ್ತಿದ್ದಾರೆ. ಮಹಾಪುರುಷರ ಬಗ್ಗೆ ಅವಹೇಳನ ಸರಿಯಲ್ಲ. ರಾಣಿ ಚನ್ನಮ್ಮಳ ಸ್ಮಾರಕಕ್ಕಾಗಿ ನಡೆಯುತ್ತಿರುವ ಧರಣಿಗೆ ನಮ್ಮ ಬೆಂಬಲವಿದೆ ಎಂದರು.

ಶ್ರೀರಾಮನವಮಿ, ಯುಗಾದಿ ಸೇರಿದಂತೆ ಇನ್ನುಳಿದ ಹಬ್ಬ ಹರಿದಿನಗಳಿಗಾಗಿ ಹಿಂದೂಗಳಿಂದಲೇ ವಸ್ತುಗಳನ್ನು ಖರೀದಿಸಬೇಕೆಂದು ಹೇಳಿದರು. ಈ ವೇಳೆ ಶ್ರೀರಾಮಸೇನೆ ಬೆಳಗಾವಿ ಜಿಲ್ಲಾಧ್ಯಕ್ಷ ರವಿಕುಮಾರ್ ಕೋಕಿತಕರ, ಸೇರಿದಂತೆ ಶ್ರೀರಾಮ ಸೇನೆಯಮುಖಂಡರು,ಕಾರ್ಯಕರ್ತರು ಇದ್ದರು.

ಬೈಕ್-ಕಾರು ಅಪಘಾತ: ಇಬ್ಬರು ಗಂಭೀರ



ಕುಮಟಾ: ಬೈಕ್ ಹಾಗೂ ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಸಹೋದರರಿಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಬರ್ಗಿಯ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಭವಿಸಿದೆ.

ಬೈಕ್ ಸವಾರರು ಕಿಮಾನಿ ಕಡೆಯಿಂದ ಬೈಕ್‌ನಲ್ಲಿ ಬಂದು ಕುಮಟಾ ಕಡೆಗೆ ಹೋಗಲು ಹೆದ್ದಾರಿ ಕ್ರಾಸ್ ಮಾಡುತ್ತಿರುವಾಗ ಕುಮಟಾ ಕಡೆಯಿಂದ ಅಂಕೋಲಾ ಕಡೆಗೆ ವೇಗವಾಗಿ ಸಾಗುತ್ತಿದ್ದ ತೆಲಂಗಾಣ ನೋಂದಣಿ ಹೊಂದಿದ್ದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರರಿಬ್ಬರೂ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕುಮಟಾ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಅಪಘಾತದಲ್ಲಿ ಬೈಕ್ ಸವಾರರಾದ ಗುರು ಹಾಗೂ ವಿಠ್ಠಲ ಹರಿಕಾಂತ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳು ಬೆಟ್ಕುಳಿ ಗ್ರಾಮದ ನಿವಾಸಿಗಳು ಎಂದು ತಿಳಿದುಬಂದಿದೆ. ಅಪಘಾತದಿಂದ ಬೈಕ್ ಹಾಗೂ ಕಾರು ಸಂಪೂರ್ಣವಾಗಿ ಜಖಂಗೊಂಡಿವೆ. ಅಪಘಾತ ಸ್ಥಳಕ್ಕೆ ಗೋಕರ್ಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಪರಾಧ ಪತ್ತೆಗೆ ಐದು ಶ್ವಾನಗಳು ಎಂಟ್ರಿ



ಕಲಬುರಗಿ: ನಗರದ ಪೊಲೀಸ್ ಆಯುಕ್ತಾಲಯದ ಶ್ವಾನ ದಳಕ್ಕೆ ಈಗ ಐದು ನೂತನ ಸದಸ್ಯರ ಸೇರ್ಪಡೆಯಾಗಿದ್ದು, ಜಿಲ್ಲೆಯ ಭದ್ರತಾ ವ್ಯವಸ್ಥೆ ಮತ್ತಷ್ಟು ಬಲಗೊಂಡಿದೆ.

ಬೆಂಗಳೂರಿನ ಸಿ.ಎ.ಆರ್ (ದಕ್ಷಿಣ) ಘಟಕದಲ್ಲಿ ಆರು ತಿಂಗಳು ನಡೆದ ಸುದೀರ್ಘ ಹಾಗೂ ಕಠಿಣ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಐದು ಶ್ವಾನಗಳು ಶುಕ್ರವಾರ ನಗರದ ಕೇಂದ್ರ ಸ್ಥಾನಕ್ಕೆ ಮರಳಿವೆ.

ಪೊಲೀಸ್ ಪ್ರಧಾನ ಕಚೇರಿಯಿಂದ ಹಂಚಿಕೆಯಾಗಿದ್ದ ಈ ಶ್ವಾನ ಮರಿಗಳನ್ನು ಆಯ್ದು, ಅವುಗಳಿಗೆ ಅಪರಾಧ ತನಿಖೆ, ಸ್ಫೋಟಕಗಳ ಪತ್ತೆ ಹಾಗೂ ಮಾದಕ ವಸ್ತುಗಳ ಶೋಧ ಕಾರ್ಯದಲ್ಲಿ ವಿಶೇಷ ಪರಿಣತಿ ನೀಡಲಾಗಿದೆ. ಈ ಶ್ವಾನಗಳು ನಗರದಲ್ಲಿ ನಡೆಯುವ ವಿವಿಐಪಿ ಭದ್ರತೆ, ಸಾರ್ವಜನಿಕ ಸಮಾರಂಭಗಳು ಮತ್ತು ಗಂಭೀರ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಮಹತ್ವದ ಪಾತ್ರ ವಹಿಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಡೆಗೆ ಸೇರಿದ ಶ್ವಾನಗಳಲ್ಲಿ ಜರ್ಮನ್ ಶೆಫರ್ಡ್ ತಳಿಯ ರೂಬಿ ಹಾಗೂ ಆಲಿಸಿ ಸ್ಫೋಟಕ ಪತ್ತೆಯಲ್ಲಿ ನೈಪುಣ್ಯತೆಹೊಂದಿವೆ. ಲ್ಯಾಬ್ರಡಾರ್ ರಿಟ್ರೈವರ್ ತಳಿಯ ಸ್ಪಿಯರ್ಕಿ ಮತ್ತು ಕ್ರೀಡಾಕೂಟ ಸ್ಫೋಟಕ ಪತ್ತೆ ಕಾರ್ಯಕ್ಕೆ ನಿಯೋಜನೆಗೊಂಡಿವೆ. ವಿಶೇಷವಾಗಿ ಮಾದಕ ವಸ್ತುಗಳ ಪತ್ತೆಗಾಗಿ ಬೆಲ್ಜಿಯಂ ಮಾಲಿನೋಯಿಸ್ ತಳಿಯ ಲಿಯೋ ಶ್ವಾನಕ್ಕೆ ತರಬೇತಿ ನೀಡಲಾಗಿದೆ. ಇವುಗಳ ನಿರ್ವಹಣೆಗಾಗಿ ಹ್ಯಾಂಡ್ಲರ್‌ಗಳಾಗಿ ಗಾದಿಲಿಂಗಪ್ಪ, ಪ್ರಶಾಂತ್, ರಮೇಶ, ಭವಿಷ್ಯ, ಹರಿಶಗೌಡ, ಮನೋಜ ಹಾಗೂ ಸಂತೋಷ ಎಂಬ ಸಿಬ್ಬಂದಿ ನೇಮಿಸಲಾಗಿದೆ.

ಬೆಂಗಳೂರಿನಲ್ಲಿ ತರಬೇತಿ ಮುಗಿಸಿ ಬಂದ ಈ ಚತುರ ಶ್ವಾನಗಳನ್ನು ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ.ಅವರು ಆತ್ಮೀಯವಾಗಿ ಬರಮಾಡಿಕೊಂಡರು. ಈ ವೇಳೆ ಎಸಿಪಿ (ಸಿಎಆರ್) ಎಚ್.ಎಂ.ಡಿ. ಸರ್ದಾರ್ ಹಾಗೂ ಆರ್‌ಪಿಐ ಮಹದೇವ ಪಾಟೀಲ ಉಪಸ್ಥಿತರಿದ್ದರು.

> ನಮ್ಮ ಪೊಲೀಸ್ ಪಡೆಯಲ್ಲಿ ಶ್ವಾನದಳದ ಪಾತ್ರ ಬಹಳ ಮುಖ್ಯವಾದುದು. ಈ ಬಾರಿ ಅತ್ಯಾಧುನಿಕ ತರಬೇತಿ ಪಡೆದು ಇಲಾಖೆ ಸೇರಿರುವ ಈ ಶ್ವಾನಗಳು, ಅಪರಾಧ ಪತ್ತೆ ಹಾಗೂ ತನಿಖಾ ಪ್ರಕ್ರಿಯೆಯಲ್ಲಿ ಹೊಸ ವೇಗ ನೀಡಲಿವೆ. ಇವುಗಳ ಸೇರ್ಪಡೆಯಿಂದ ನಮ್ಮ ಇಲಾಖೆಯ ತನಿಖಾ ದಕ್ಷತೆ ಮತ್ತು ಸಾರ್ವಜನಿಕ ಸುರಕ್ಷತೆ ಮತ್ತಷ್ಟು ಹೆಚ್ಚಲಿದೆ ಎಂಬ ನಂಬಿಕೆ ನನಗಿದೆ.
> ■ ಡಾ. ಶರಣಪ್ಪ ಎಸ್.ಡಿ., ನಗರ ಪೊಲೀಸ್ ಆಯುಕ್ತ, ಕಲಬುರಗಿ

ಹೆಚ್ಚುತ್ತಿರುವ ಬಿಸಲಿನ ಧಗೆ | ಕುಂಬಳ ಬೆಳೆ ಇಳುವರಿ ಕುಸಿಯುವ ಭೀತಿ

ಟ್ಯಾಂಕರ್ ನೀರು ಮೊರೆ ಹೋದ ರೈತರು

▸ ಪುಷ್ಪವತಿ ಜಿಎಂ ಬಸಯ್ಯ

ದಿಗಂತ ವಿಶೇಷ



ಕುರುಗೋಡು: ಬಿಸಿಲಿನ ಧಗೆಗೆ ಒಣಗುತ್ತಿರುವ ಬೆಳೆ ಉಳಿಸಿಕೊಳ್ಳಲು ರೈತರು ಟ್ಯಾಂಕರ್ ನೀರಿನ ಮೊರೆ ಹೋಗುತ್ತಿದ್ದಾರೆ.

ಬೇಸಿಗೆಯಲ್ಲಿ ತುಂಗಭದ್ರಾ ಡ್ಯಾಂ ಎರಡನೇಯ ಬೆಳೆಯ ಗೇಟ್‌ಗಳ ನವೀಕರಣ ಕಾರ್ಯ ನಡೆಯುತ್ತಿದೆ. ಕೃಷಿ ಜಲಮೂಲಗಳೆಲ್ಲವೂ ಬತ್ತಿ ಹೋಗಿವೆ. ಹೀಗಾಗಿ ಬೆಳೆ ಬಾಡದಿರಲಿ ಎನ್ನುವ ಉದ್ದೇಶದಿಂದ ಟ್ಯಾಂಕರ್ ಮೂಲಕ ಜಮೀನುಗಳಿಗೆ ನೀರು ಸರಬರಾಜು ಮಾಡುತ್ತಿದ್ದಾರೆ.

ತಾಲೂಕಿನ ಮುಷ್ಟಗಟ್ಟೆ ಗ್ರಾಮದ ಎಚ್. ವೀರಾಪುರ ರಸ್ತೆಯಲ್ಲಿ ಬರುವ ಒಂದೂವರೆ ಎಕರೆ ಪ್ರದೇಶದಲ್ಲಿ ಕುಂಬಳ ಬೆಳೆ ಬೆಳೆದು ಉತ್ತಮ ಫಸಲು ನಿರೀಕ್ಷೆಯಲ್ಲಿದ್ದ ರೈತರು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಮೂಲಕ ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ.

ಬೆಳೆ ಉಳಿಸಿಕೊಳ್ಳಲು ಟ್ಯಾಂಕರ್ ಮೊರೆ: ಮುಂಗಾರು ಪೂರ್ವ ಮಳೆ ಕೊರತೆ ಮತ್ತು ಬಿಸಿಲಿನ ಝಳಕ್ಕೆ ಬೇಸಿಗೆಯ ಬೆಳೆಗಳು ಒಣಗುತ್ತಿದ್ದು, ಇಳುವರಿಯಲ್ಲಿ ಕುಂಠಿತವಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಇದು ರೈತರ ಆತಂಕಕ್ಕೆ ಕಾರಣವಾಗಿದೆ. ಸಕಾಲಕ್ಕೆ ಮಳೆಯಾಗದಿದ್ದರೆ ರೈತರ ಬದುಕು ಮೂರಾಬಟ್ಟೆಯಾಗಲಿದೆ. ಕೃಷಿ ಜಲಮೂಲಗಳೆಲ್ಲವೂ ಬತ್ತಿ ಹೋಗಿವೆ. ತಾಲೂಕಿನ ಕೆಲವು ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಬೆಳೆಗಳಿಗೆ ಗುಟುಕು ಹಾಕುತ್ತಿದ್ದರೆ, ಇನ್ನೊಂದಡೆ ಕಾಲುವೆಗಳಿಗೆ ನೀರು ಸರಬರಾಜು ಸ್ಥಗಿತಗೊಂಡಿದ್ದು ಟ್ಯಾಂಕರ್ ನೀರೂ ಸಿಗುತ್ತಿಲ್ಲ ಎನ್ನುವುದು ರೈತರ ಅಳಲು.

ಇಳುವರಿ ಕುಂಠಿತ

ಬಿಸಿಲಿನ ಪ್ರಖರತೆ ತೋಟಗಾರಿಕೆ ಬೆಳೆಗಳ ಮೇಲೆ ಪರಿಣಾಮ ಬೀರುತ್ತಿದ್ದು, ಇಳುವರಿ ಕುಂಠಿತಗೊಳ್ಳುವ ಆತಂಕವಿದೆ. ತಾಲೂಕಿನಲ್ಲಿ ಸದ್ಯ ಕೆಲ ತೋಟಗಾರಿಕೆ ಬೆಳೆಗಳು ಮಾತ್ರ ಇವೆ. ಹಿನ್ನೆಲೆಯಲ್ಲಿ ಕಳೆದ ಹಿಂಗಾರು ಬೆಳೆ ಕೈಕೊಟ್ಟಿದ್ದು, ಹೊಬಳಿ ವ್ಯಾಪ್ತಿಯಲ್ಲಿ ತೋಟಗಾರಿಕೆಯಲ್ಲಿ ಪ್ರಮುಖವಾದ ದಾಳಿಂಬೆ ಮತ್ತು ಅಂಜೂರ ಬೆಳೆಯ ಮೇಲೆ ಜಲಕ್ಷಾಮ ಸ್ವಲ್ಪಮಟ್ಟಿಗೆ ಪರಿಣಾಮ ಬೀರಿದೆ. ನೀರಿಲ್ಲದೆ ಧರೆಗುರುಳುತ್ತಿದ್ದು ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಟಿಪ್ಪರ್-ಬೈಕ್ ಡಿಕ್ಕಿ: ಓರ್ವ ಸಾವು

ಮುಂಡಗೋಡ: ತಾಲೂಕಿನಕಲಕೊಪ್ಪ ಕ್ರಾಸ್ ಹತ್ತಿರ ಟಿಪ್ಪರ್ ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಓರ್ವ ಸವಾರ ಮೃತಪಟ್ಟಿದ್ದು, ಮತ್ತೊಬ್ಬನಿಗೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಶನಿವಾರ ನಡೆದಿದೆ. ಹಾನಗಲ್ ತಾಲೂಕಿನ ಕೊಪ್ಪರಿಸಿಕೊಪ್ಪ ಗ್ರಾಮದ ಯಲ್ಲಪ್ಪ ಎಸ್.ಕೊಡದ್ ಸ್ಥಳದಲ್ಲಿಯೇ ಮೃತಪಟ್ಟ ವ್ಯಕ್ತಿ. ವಿಠ್ಠಲ್ ಎಸ್.ಚೋಳಪ್ಪನವರ್ ಗಂಭೀರವಾಗಿ ಗಾಯಯಗೊಂಡ ವ್ಯಕ್ತಿ ಎಂದು ಗುರುತಿಸಲಾಗಿದೆ. ಬೈಕ್ ಸವಾರ ಪಾಳಾ ಮಾರ್ಗವಾಗಿ ಶಿರಸಿಗೆ ಕಡೆ ತೆರಳುತ್ತಿದ್ದರು. ಟಿಪ್ಪರ್ ಶಿರಶಿ ಮಾರ್ಗದಿಂದ ಮುಂಡಗೋಡ ಕಡೆ ಬರುತ್ತಿದ್ದ ವೇಳೆ ಕಲಕೊಪ್ಪ ಕ್ರಾಸ್ ಹತ್ತಿರ ಮುಖಾಮುಖಿ ಡಿಕ್ಕಿಯಾಗಿದೆ ಎನ್ನಲಾಗಿದೆ. ಪರಿಣಾಮ ಸ್ಥಳದಲ್ಲಿಯೇ ಒಬ್ಬ ಮೃತಪಟ್ಟರೆ, ಮತ್ತೊಬ್ಬನ ಸ್ಥಿತಿ ಚಿಂತಾಜನಕವಾಗಿದೆ. ಮುಂಡಗೋಡದಲ್ಲಿ ಪ್ರಾಥಮಿಕ ಚಿಕಿತ್ಸೆಯ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ಇಲ್ಲಿನ ಪೊಲೀಸರು ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ.

ದೇಶದ ಸಮಸ್ಯೆಗಳಲ್ಲಿ ಚೆಲ್ಲಾಟ ಸರಿಯಲ್ಲ: ಬೊಮ್ಮಾಯಿ



ಕುಷ್ಟಗಿ: ದೇಶದ ಸಮಸ್ಯೆಗಳಲ್ಲಿ ಚೆಲ್ಲಾಟ ಆಡುವುದು ಸರಿಯಲ್ಲ. ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್, ಪೆಟ್ರೋಲ್, ಡಿಸೇಲ್ ಪೂರೈಕೆಯಾಗುತ್ತದೆ. ಇದರಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಮನೆಗಳಿಗೆ ಸಿಲಿಂಡರ್ ಪೂರೈಕೆಯಾಗುತ್ತಿದೆ. ಈಗಾಗಲೇ ನಮ್ಮ ದೇಶಕ್ಕೆ ನಾಲ್ಕು ಹಡುಗುಗಳ ಮೂಲಕ ಸಿಲಿಂಡರ್ ಬಂದಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದ ಶಾಸಕರ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಅಂತರಿಕ ತಿಕ್ಕಾಟ ಪ್ರಾರಂಭವಾಗಿದೆ. ಕಾಂಗ್ರೆಸ್‌ನಲ್ಲಿ ಎರಡು ಬಣಗಳಾಗಿವೆ. ಒಂದು ಬಣ ಖುರ್ಚಿ ಉಳಿಸಿಕೊಳ್ಳಲು, ಇನ್ನೊಂದು ಬಣ ಖುರ್ಚಿ ಕಸಿದುಕೊಳ್ಳಲು ಪ್ರಯತ್ನ ನಡೆಸಿದೆ. ರಾಜ್ಯದಲ್ಲಿ ಮುಂಬರುವ ಉಪ ಚುನಾವಣೆಯಲ್ಲಿ ದಾವಣಗೇರಿ ಮತ್ತು ಬಾಗಲಕೋಟೆಯಲ್ಲಿ ಬಿಜೆಪಿ ಗೆಲುವು ಸಾಧಿಸುತ್ತೇವೆ ಎಂದರು.

ರಾಜ್ಯ ಸರ್ಕಾರದಲ್ಲಿ ದುಡ್ಡು ಇಲ್ಲ. ಹಾಗಾಗಿ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಆದಷ್ಟು ಬೇಗನೆ ಮುಗಿಸಬೇಕು. ವಿಶ್ವದಲ್ಲಿ ಶಾಂತಿ ನೆಲಸಬೇಕು.

ಕೃಷ್ಣಾ ಬಿ ಸ್ಕೀಂ ಯೋಜನೆಯ ಈ ಮೊದಲು ಆಲಮಟ್ಟಿ ಅಣೆಕಟ್ಟಿನಿಂದ ತರುವ ಯೋಜನೆ ಇತ್ತು ನಾನು ನೀರಾವರಿ ಸಚಿವರಾಗಿದ್ದಾಗ ಆಲಮಟ್ಟಿಯಿಂದ ನಾರಾಯಣಪೂರುಗೆ ಬದಲಾಯಿಸಿದೆ. ನಂತರ ದಿನಗಳಲ್ಲಿ ಕಾಮಗಾರಿ ಪ್ರಾರಂಭಿಸಿದ್ದೇವೆ.

ಕೃಷ್ಣಾ ಬಿಸ್ಕೀಂನಿಂದ ಹನಿ ನೀರಾವರಿ ಪದ್ಧತಿ ಅಳವಡಿಸುವಂತೆ ಸರ್ಕಾರಕ್ಕೆ ಸಲಹೆ ನೀಡಿದ್ದೇವೆ. ಆದರೆ, ಕಾಂಗ್ರೆಸ್‌ನವರಿಗೆ ಅದರ ಬಗ್ಗೆ ಆಸಕ್ತಿಯಿಲ್ಲ. ದೇಶದಲ್ಲಿ ಕಾಂಗ್ರೆಸ್ ಕ್ಷೀಣಿಸುತ್ತಿದೆ. ಕುಷ್ಟಗಿ ನರಗುಂದ ಘಟಪ್ರಭಾ ರೈಲ್ವೆ ಯೋಜನೆಯನ್ನು ಆದಷ್ಟು ಬೇಗನೆ ಮಾಡಿಸುವ ಪ್ರಯತ್ನ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್, ಮಾಜಿ ಸಚಿವ ಹಾಲಪ್ಪ ಆಚಾರ್, ಬಿಜೆಪಿ ಮಂಡಲ ಅಧ್ಯಕ್ಷ ಮಹಾಂತೇಶ ಬಾದಾಮಿ, ಜಿಪಂ ಮಾಜಿ ಸದಸ್ಯ ಕೆ ಮಹೇಶ, ಬಿಜೆಪಿ ಯುವ ಮೋರ್ಚಾದ ಉಮೇಶ ಯಾದವ್ ಸೇರಿದಂತೆ ಇತರರಿದ್ದರು.

ಬನ್ನಿ ಮಹಾಂಕಾಳಿ ದೇವಸ್ಥಾನ ಪುನರ್ ಸ್ಥಾಪನೆಗೆ ಭೂಮಿಪೂಜೆ



ಹುಬ್ಬಳ್ಳಿ: ಇಲ್ಲಿಯ ಕುಸುಗಲ್ ರಸ್ತೆಯ ನೈರುತ್ಯ ರೈಲ್ವೆ ಗಾಲ್ಫ್ ಮೈದಾನದಲ್ಲಿ ಬನ್ನಿ ಮಹಾಂಕಾಳಿ ದೇವಿಯ ದೇವಸ್ಥಾನ ಪುನರ್‌ಸ್ಥಾಪನೆಗೆ ಶನಿವಾರ ಭೂಮಿಪೂಜೆ ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ವಿಶ್ವ ಹಿಂದು ಪರಿಷತ್ ಮುಖಂಡರು ಹಾಗೂ ವಾಯು ವಿಹಾರಿ ಸಂಘದ ಸದಸ್ಯರು ಭಾಗವಹಿಸಿದ್ದರು. ಇತ್ತೀಚೆಗೆ ನೈರುತ್ಯ ರೈಲ್ವೆ ಅಧಿಕಾರಿಗಳು ಮೈದಾನದಲ್ಲಿದ್ದ ಬನ್ನಿ ಮಹಾಕಾಳಿ ದೇವಿಯ ದೇವಸ್ಥಾನ ಹಾಗೂ ಐದು ಅಡಿ ಎತ್ತರದ ಸ್ವಾಮಿ ವಿವೇಕಾನಂದರ ಪುತ್ಥಳಿ ತೆರವು ಮಾಡಿದ್ದರು. ಇದರಿಂದ ಆಕ್ರೋಶಗೊಂಡ ವಾಯುವಿಹಾರಿ ಸಂಘದ ಸದಸ್ಯರು ಹಾಗೂ ವಿಶ್ವ ಹಿಂದು ಪರಿಷತ್ ಮುಖಂಡರು ಪ್ರತಿಭಟನೆ ಮಾಡಿದ್ದರು. ಅದೇ ಸ್ಥಳದಲ್ಲಿ ದೇವಸ್ಥಾನ ಹಾಗೂ ಪುತ್ಥಳಿ ಸ್ಥಾಪಿಸಬೇಕು ಎಂದು ಆಗ್ರಹಿಸಿ ಶನಿವಾರದ ವರೆಗೆ ಗಡವು ನೀಡಿದ್ದರು. ಈ ಹಿನ್ನೆಲೆ ರೈಲ್ವೆ ಅಧಿಕಾರಿಗಳ ದೇವಸ್ಥಾನ ಹಾಗೂ ಪುತ್ಥಳಿ ಮರುಸ್ಥಾಪಿಸುವುದಾಗಿ ಒಪ್ಪಿಕೊಂಡಿದ್ದರಿಂದ ಶನಿವಾರ ಹಿಂದು ಸಂಪ್ರದಾಯದಂತೆ ಶಾಸ್ತ್ರೋಸ್ತ್ರವಾಗಿ ಭೂಮಿ ಪೂಜೆ ನೆರವೇರಿಸಲಾಯಿತು. ಈ ವೇಳೆ ಹಿಂದು ಮುಖಂಡರಾದ ಜಯತೀರ್ಥ ಕಟ್ಟಿ, ಪ್ರಭು ನವಲಗುಂದಮಠ, ಶಿವಾನಂದ ಸತ್ತಿಗೇರಿ, ರಮೇಶ ಕದಂ, ಬಸವರಾಜ ಕುಂದಗೋಳಮಠ, ಪಾಲಿಕೆ ಸದಸ್ಯೆ ಮೀನಾಕ್ಷಿ ವಂಟಮೂರಿ ಸೇರಿದಂತೆ ಅನೇಕರಿದ್ದರು.

ಮಾ.22ರಿಂದ ಲಕ್ಷ್ಮೀ ನಾರಾಯಣ ದೇವರ ಬ್ರಹ್ಮೋತ್ಸವ



ಶಿರಸಿ: ತಾಲೂಕಿನ ಹುಲೇಕಲ್‌ನ ಐತಿಹಾಸಿಕ ಶ್ರೀ ವ್ಯಾಸರಾಜ ಮಠದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ದೇವರ ಬ್ರಹ್ಮೋತ್ಸವವನ್ನು ಮಾ.22ರಿಂದ 28ರ ವರೆಗೆ ಅತ್ಯಂತ ವೈಭವದಿಂದ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ವ್ಯಾಸರಾಜ ಸೇವಾ ಸಮಿತಿಯ ಗೋಪಾಲಕೃಷ್ಣ ಆನವಟ್ಟಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಂದಾಪುರದ ಶ್ರೀ ವ್ಯಾಸರಾಜ ಸಂಸ್ಥಾನದ ಪೀಠಾಧೀಶರಾದ ಶ್ರೀ 1008 ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರ ದಿವ್ಯ ಆಶೀರ್ವಾದದೊಂದಿಗೆ ಈ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಸುಮಾರು170 ವರ್ಷಗಳಹಿಂದೆಕಾರಣಾಂತರಗಳಿಂದ ನಿಂತು ಹೋಗಿದ್ದ ಈ ಮಹೋನ್ನತ ಬ್ರಹ್ಮೋತ್ಸವವನ್ನು ಈಗ ಪುನಃ ಆರಂಭಿಸಲು ನಿರ್ಧರಿಸಲಾಗಿದ್ದು, ಈ ಕ್ಷೇತ್ರವು ಅತಿ ಜಾಗೃತ ಶಕ್ತಿಯುತ ಸ್ಥಳವಾಗಿದೆ. ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಅಂದಾಜು 1 ರಿಂದ 2 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ಈ ಸುಸಂದರ್ಭದಲ್ಲಿ ಆಗಮಿಸುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದರು.

ಧಾರ್ಮಿಕ ವಿಧಿವಿಧಾನಗಳ ವಿವರ ನೀಡಿದ ಅವರು, ಮಾ.22ರಂದು ಸಂಜೆ ಅಂಕುರಾರ್ಪಣದೊಂದಿಗೆ ಉತ್ಸವಕ್ಕೆ ಚಾಲನೆ ಸಿಗಲಿದೆ. ಮಾ.23ರಂದು ಧ್ವಜಾರೋಹಣ ಮತ್ತು ಚತುರ್ವೇದ ಪಾರಾಯಣ ನಡೆದರೆ, ಮಾ.24 ಮತ್ತು 25ರಂದು ತತ್ವಹೋಮ, ಮೂಲ ಮಂತ್ರ ಹೋಮ ಹಾಗೂ ಮಹಾಪೂಜೆಗಳು ಜರುಗಲಿವೆ. ಮಾ.26ರಂದು ವಿಷ್ಣುಸಹಸ್ರನಾಮ ಹೋಮ ಹಾಗೂ ಸಂಜೆ ಅದ್ದೂರಿ ಕಲ್ಯಾಣೋತ್ಸವ ನಡೆಯಲಿದೆ.

ಮಾ.27ರಂದು ರಥಬೀದಿಯಲ್ಲಿ ಪಲ್ಲಕ್ಕಿ ಉತ್ಸವದ ಭವ್ಯ ಮೆರವಣಿಗೆ, ಅವಭೃಥ ಸ್ನಾನ ಹಾಗೂ ಧ್ವಜ ಅವರೋಹಣ ನೆರವೇರಲಿದ್ದು, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ಆಯೋಜಿಸಲಾಗಿದೆ. ಮಾ. 28ರಂದು ಫಲ ಮಂತ್ರಾಕ್ಷತೆಯೊಂದಿಗೆ ಮಹೋತ್ಸವಕ್ಕೆ ಮಂಗಳ ಹಾಡಲಾಗುವುದು. ಬ್ರಹ್ಮೋತ್ಸವದ ಅಂಗವಾಗಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಮಠದ ಆವರಣದಲ್ಲಿ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ಸಾರ್ವಜನಿಕರು ತನು-ಮನ-ಧನದ ಸಹಕಾರದೊಂದಿಗೆ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ ಶೆಟ್ಟಿ, ವಿನಾಯಕ ಶೆಟ್ಟಿ ಹಾಗೂ ರಾಮದಾಸ ಶೆಟ್ಟಿ, ನಾಗೇಶ ಶೆಟ್ಟಿ ಉಪಸ್ಥಿತರಿದ್ದರು.


4,824 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ

•**ಬೆಂಗಳೂರು:** ರಾಜ್ಯದ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳು ಮತ್ತು ಹೆಚ್ಚುವರಿ ಹೂಡಿಕೆಯ 2 ಯೋಜನೆಗಳ ಒಟ್ಟು 4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ 158ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.



ಐಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ,ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ನೀಡಿರುವ ಅನುಮೋದನೆಗಳಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ. ಶುಕ್ರವಾರ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿರುವ ಸಚಿವ ಎಂ.ಬಿ ಪಾಟೀಲ ಅವರು, 50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ರಾಜ್ಯದಲ್ಲಿ 3908.68 ಕೋಟಿ ಹೂಡಿಕೆ ಆಗಲಿದೆ. 12,475 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ತಿಳಿಸಿದ್ದಾರೆ. ಇನ್ನೂ 15 ಕೋಟಿಗಳಿಂದ 50 ಕೋಟಿ ಒಳಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ನೀಡಿರುವ ಅನುಮೋದನೆ ಫಲವಾಗಿ 350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಗೆ ನೀಡಿರುವ ಅನುಮೋದನೆಯಿಂದ 565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ರಾಮ ಬಾಣ



ನುಸುಳುಕೋರರಿಗೆ ಟಿಎಂಸಿ ರಕ್ಷಕ

ಪುಟ ೧➔ ಇಲ್ಲಿ ಬಂಗಾಳಿ ಹಿಂದುಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡಲಾಗುತ್ತಿದೆ. ಕಿರುಕುಳಕ್ಕೊಳಗಾದ ಹಿಂದು ನಿರಾಶ್ರಿತರಿಗೆ ಪೌರತ್ವ ನೀಡುವುದನ್ನು ಟಿಎಂಸಿ ವಿರೋಧಿಸಿದೆ ಎಂದು ಮೋದಿ ಹೇಳಿದ್ದಾರೆ.

ಇದೇ ವೇಳೆ, ಪಶ್ಚಿಮ ಬಂಗಾಳಕ್ಕೆ 18,680 ಕೋಟಿ ರೂ. ಮೊತ್ತದ ಬೃಹತ್ ರಸ್ತೆ ಸಂಪರ್ಕ ಯೋಜನೆಗಳನ್ನು ಅನಾವರಣಗೊಳಿಸಿದರು. ಇದರಲ್ಲಿ 231ಕಿ.ಮೀ. ದೀರ್ಘ ವ್ಯಾಪ್ತಿಯ ಖರಗ್‌ಪುರ–ಮೋರೆಗ್ರಾಮ್ ಆರ್ಥಿಕ ಕಾರಿಡಾರ್ ಚತುಷ್ಪಥ ಯೋಜನೆಗೆ ಶಿಲಾನ್ಯಾಸವೂ ಸೇರಿದೆ. ಈ ಮಾರ್ಗದಿಂದಾಗಿ ಪ್ರಯಾಣ ದೂರ 120ಕಿ.ಮೀ.ಗಳಷ್ಟು ಇಳಿಕೆಯಾಗಲಿದ್ದು, ಪ್ರಯಾಣದ ಅವಧಿ ಕೂಡ 7ರಿಂದ 8 ಗಂಟೆಗಳಷ್ಟು ಕಡಿಮೆಯಾಗಲಿದೆ. ಈ ರಸ್ತೆ ಯೋಜನೆಯು ಖರಗ್‌ಪುರ –ಸಿಲಿಗುರಿ ನಡುವಣ ಆರ್ಥಿಕ ಕಾರಿಡಾರ್‌ನ ಭಾಗವಾಗಿದ್ದು, ಇದು ಪಶ್ಚಿಮ್ ಮೇದಿನಿಪುರ್, ಬಂಕುರ, ಹೂಗ್ಲೀ , ಪುರ್ಬಾ ಬರ್ಧಮಾನ್, ಬೀರ್‌ಭೂಮ್ ಮತ್ತು ಮುರ್ಷಿದಾಬಾದ್ ಜಿಲ್ಲೆಗಳ ಮೂಲಕ ಹಾದುಹೋಗಲಿದ್ದು, ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಹಾಗೆಯೇ , 5.6ಕಿ.ಮೀ. ಉದ್ದದ ದುಬ್ರಜ್‌ಪುರ್‌ನ ಚತುಷ್ಪಥ ಬೈಪಾಸ್ ಮತ್ತು ಕಂಗ್‌ಶಬಾಟಿ ಮತ್ತು ಶಿಲಾಬಾಟಿ ನದಿಗಳಿಗೆ ಎನ್‌ಎಚ್–14ರಲ್ಲಿ ಪ್ರಮುಖ ಹೆಚ್ಚುವರಿ ಚತುಷ್ಪಥ ಸೇತುವೆಗಳಿಗೂ ಪ್ರಧಾನಿಯವರು ಶಿಲಾನ್ಯಾಸಗೈದರು. ಜತೆಗೆ ಎನ್‌ಎಚ್–19 ಮತ್ತು ಎನ್‌ಎಚ್–14ರ ಭಾಗಗಳನ್ನೂ ಉದ್ಘಾಟಿಸಿದರು.

ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ

ಪುಟ ೧➔ ಈ ಸಂದರ್ಭ ಬಿಜೆಪಿ ನಾಯಕರೊಬ್ಬರು ಹಾಗೂ ಪೊಲೀಸ್ ಅಧಿಕಾರಿಗೆ ಗಾಯಗಳಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುವ ಕೆಲ ಗಂಟೆಯ ಮೊದಲು ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ಪ್ರಧಾನಿ ಮೋದಿಯವರನ್ನು ಸ್ವಾಗತಿಸಲು ತೆರಳುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಹಲವೆಡೆಗಳಲ್ಲಿ ಕಲ್ಲು ತೂರಾಟ ಆರಂಭಗೊಂಡಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೇಜಿ

◈ ಕಸಾಪ ಜೊತೆ ಸಂಘರ್ಷ, ನಟ್ ಬೋಲ್ಟ್ ಟೈಟ್ ಮಾಡ್ತೇವೆ ಎಂದು ಸಿನಿಮಾದವರೊಂದಿಗೆ ಸಂಘರ್ಷ , ಬಿಗ್ ಬಾಸ್ ಜತೆಗೂ ಜಗಳ, ರಸ್ತೆ ಸರಿಯಿಲ್ಲ ಎಂದಿದ್ದಕ್ಕಾಗಿ ಉದ್ಯಮಿಗಳೊಂದಿಗೆ ಸಂಘರ್ಷ, ಬ್ಯಾಲೆಟ್ ಪೇಪರ್ ಬೇಕು ಎಂದು ಚುನಾವಣಾ ಆಯೋಗದೊಂದಿಗೆ ಸಂಘರ್ಷ ,ಇದು ಕರ್ನಾಟಕ ಸರಕಾರ

-ವಿ.ಸುನೀಲ್ ಕುಮಾರ್

- ಸಂಘರ್ಷವಿದ್ದಲ್ಲಿ ಸುದ್ದಿಯಾಗುತ್ತೆ, ಸುದ್ದಿ ಇದ್ದಲ್ಲಿ ಸ್ವಾರಸ್ಯವಿರುತ್ತೆ , ಮಾಧ್ಯಮಗಳಿಗೆ ಆಹಾರ ಲಭಿಸುತ್ತೆ, ರಾಜಕಾರಣಿಗಳಿಗೆ ಉಚಿತ ಪ್ರಚಾರ ಸಿಗುತ್ತೆ, ಸರ್ವೇ ಜನಾ: ಸುಖಿನೋ ಭವಂತು!

ದಿನ ಭವಿಷ್ಯ

ಮೇಷ
ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ವೃಷಭ
ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಬಿಪಿ, ಮಧುಮೇಹ ಇದ್ದವರು ಎಚ್ಚರ ವಹಿಸಿ.

ಮಿಥುನ
ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕಟಕ
ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಸಿಂಹ
ನಿಮ್ಮ ಧೋರಣೆಗೆ ಮನೆಯವರಿಂದ ವಿರೋಧ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಕ್ರೀಡಾಳುಗಳಿಗೆ ಸಾಧನೆಯ ಯಶ.

ಕನ್ಯಾ
ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನಿಜವಾಗಿ ಸಮಸ್ಯೆ ಕಾಡದು. ವಿವಾದವೊಂದು ಪರಿಹಾರ.

ತುಲಾ
ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ವೃಶ್ಚಿಕ
ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಧನು
ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಮಕರ
ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕುಂಭ
ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಧನಲಾಭ ಸಂಭವ.

ಮೀನ
ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30
ಅದೃಷ್ಟ ಸಂಖ್ಯೆ 0,5,9.1

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಸಂತ ರವಿದಾಸಗೆ ವಿಶಿಷ್ಟ ಸ್ಥಾನ

•**ಸಮಾಲ್ಖಾ (ಹರಿಯಾಣ):** ನಮ್ಮ ಶ್ರೇಷ್ಠ ಸಂತ ಪರಂಪರೆಯು ಭಾರತಕ್ಕೆ ದೇವರು ನೀಡಿದ ವಿಶೇಷ ಕೊಡುಗೆಯಾಗಿದೆ. ನಮ್ಮ ಸುದೀರ್ಘ ಇತಿಹಾಸದ ಪ್ರವಾಹದಲ್ಲಿ ಮಹಾನ್ ಸಂತ ಪರಂಪರೆಯು ಯಾವ ಸಮಾಜದಲ್ಲಿ ದೇವರ ಉಪಾಸನೆ ಮತ್ತು ಭಕ್ತಿಭಾವದ ಜಾಗರಣವನ್ನು ಮಾಡಿತೋ, ಅಲ್ಲಿಯೇ ಸಾಮಾಜಿಕ ರೀತಿಗಳು ಮತ್ತು ಬೇಧಭಾವವನ್ನು ನಿರ್ಮೂಲನೆ ಮಾಡುವ ಮೂಲಕ ಸಾಮರಸ್ಯದ ಸಮಾಜವನ್ನು ಬಲಪಡಿಸುವ ಪ್ರಯತ್ನಗಳನ್ನು ಮಾಡಿತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.




ಹರಿಯಾಣದ ಸಮಾಲ್ಖಾದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭೆ – 2026ರಲ್ಲಿ ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಆರ್‌ಎಸ್‌ಎಸ್ ಅವರಿಗೆ ಶ್ರದ್ಧೆಯ ಸುಮನಗಳನ್ನು ಅರ್ಪಿಸುತ್ತದೆ. ಮಹಾನ್ ಸಂತ ಪರಂಪರೆಯಲ್ಲಿ ಸಂತ ರವಿದಾಸ ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರ ಕ್ರಿಯಾಶೀಲ ಜೀವನ ಮತ್ತು ಕಾರ್ಯ ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಗೃಹಸ್ಥರಾಗಿದ್ದರೂ, ಸಾಂಸಾರಿಕ ವಿಷಯಗಳಲ್ಲಿ ಅಲಿಪ್ತರಾಗಿದ್ದು ಸಾಧು–ಸಂತರ ಮೇಲಿನ ಶ್ರದ್ಧೆ ಮತ್ತು ದೀನ–ಹೀನರ ಸೇವೆ ಅವರ ಸಹಜ ಸ್ವಭಾವವಾಗಿತ್ತು, ಆಧ್ಯಾತ್ಮಿಕ ದೃಷ್ಟಿಯಿಂದ ಪರಿಪೂರ್ಣವಾಗಿತ್ತು. ತಮ್ಮ ಜೀವನದ ಮೂಲಕ ಅವರು ಶ್ರಮದ ಘನತೆ ಮತ್ತು ಸಮಾಜದಲ್ಲಿ ಶುದ್ಧ, ಸಾತ್ವಿಕ ಮತ್ತು ಪಾರದರ್ಶಕ ಆಚರಣೆಯ ಮಹತ್ವವನ್ನು ಪುನಃಸ್ಥಾಪಿಸಿದರು ಎಂದರು.

ಭಕ್ತಿಪ್ರಜ್ಞೆಯ ಮಹಾನ್ ಸಂತ: ರವಿದಾಸ್ ಅವರು ಸಮಾಜದಲ್ಲಿ ಒಂದು ಹೊಸ ಚೇತನವನ್ನು ಪ್ರವಹಿಸಿದ ಭಕ್ತಿಪ್ರಜ್ಞೆಯ ಮಹಾನ್ ಸಂತರಾಗಿದ್ದರು. ಕಾಲಬಾಹ್ಯ ಪರಂಪರೆಯ ತ್ಯಾಗ ಹಾಗೂ ಕಾಲ ಸುಸಂಗತ ಸಾಮಾಜಿಕ ಪರಿವರ್ತನೆಯ ಅಂಗೀಕಾರ ಮಾಡುವಲ್ಲಿ ಸಮಾಜದ ಮನಸ್ಸನ್ನು ರೂಪಿಸುವಲ್ಲಿ ಅವರು ಐತಿಹಾಸಿಕ ಪಾತ್ರವನ್ನು ವಹಿಸಿದ್ದಾರೆ. ಅವರ ಚಿಂತನೆಗಳ ಮಹತ್ವವನ್ನು ಅರ್ಥೈಸಿಗೊಂಡು ಅವರ 41 ವಾಣಿಗಳನ್ನು ಗುರು ಗ್ರಂಥ ಸಾಹಿಬ್‌ನಲ್ಲಿ ಶಾಬಾದ್ ರೂಪದಲ್ಲಿ ಸೇರಿಸಲಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ರವಿದಾಸರು, ಅವರ ಶಿವಭಕ್ತಿ, ಸೇವಾ ಮನೋಭಾವ ಹಾಗೂ ಸಮಾಜದ ಮೇಲಿನ ನಿಶ್ಚಲಪ್ರೇಮದ ಕಾರಣ ಕಾಶಿಯ ವಿದ್ವತ್ ಜನರ ಸಹಿತ ಸಮಾಜದ ಎಲ್ಲಾ ವರ್ಗಗಳ ಜನರು ಅವರ ಮಹಾನತೆಯನ್ನು ಸ್ವೀಕರಿಸಿದರು. ಕಾಶಿ ನರೇಶ, ಹಾಗೂ ಮೀರಾಬಾಯಿಯಂತಹ ರಾಜಮನೆತನದ ಸದಸ್ಯರು ಕೂಡ ಅವರನ್ನು ತಮ್ಮ ಗುರು ಎಂದು ಪರಿಗಣಿಸಿದರು. ಗುರು ಮತ್ತು ಶಿಷ್ಯರ ರೂಪದಲ್ಲಿ ರವಿದಾಸರು ಮತ್ತು ಮೀರಾಬಾಯಿಯವರ ಬಾಂಧವ್ಯವು ನಿರ್ಗುಣ ಮತ್ತು ಅನುಕರಣೀಯ ಕಲಿಕೆಯೂ ಆಗಿದೆ ಎಂದರು.

ಮತಾಂತರಕ್ಕೆ ಬಂದವರು ಅನುಯಾಯಿಗಳಾದರು



ಮುಸ್ಲಿಂ ಆಕ್ರಮಣಕಾರರ ಭಯೋತ್ಪಾದನೆಯ ಆ ಕಠಿಣ ಸಮಯದಲ್ಲಿ, ಭಕ್ತಿಯ ನಿರ್ಮಲ ಧಾರೆಯ ಪ್ರವಹಿಸುತ್ತಾ ರವಿದಾಸರು ಧರ್ಮದ ಶ್ರೇಷ್ಠತೆಯನ್ನು ಉದ್ಘೋಷಿಸಿದರು ಮತ್ತು ಜನರಿಂದ ಧರ್ಮಪಾಲನೆ ಮಾಡುವುದಕ್ಕೆ ಆಗ್ರಹಿಸಿದರು. ಇವರನ್ನು ಇಸ್ಲಾಂಗೆ ಮತಾಂತರಿಸಿ ಮುಸ್ಲಿಮರಾಗಿಸುವುದಕ್ಕೆ ಹಲವಾರು ಪ್ರಯತ್ನಗಳು ನಡೆದವು. ಆದರೆ ಅವರ ಭಕ್ತಿ ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಪ್ರಭಾವಿತರಾಗಿ ಅವರನ್ನು ಮತಾಂತರಗೊಳಿಸಬೇಕಾದವರು ಅವರ ಅನುಯಾಯಿಗಳಾದರು. ವರ್ತಮಾನದ ಸಮಯದಲ್ಲಿ ವಿವಿಧ ವಿಭಜನಕಾರಿ ಶಕ್ತಿಗಳು ಜನಮಾನಸವನ್ನು ವರ್ಗ ಮತ್ತು ಜಾತಿಯ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿರುವಾಗ, ರವಿದಾಸ್ ಅವರ ಜೀವನ ಸಂದೇಶದ ಸಾರವನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವೆಲ್ಲರೂ ದೇಶ ಮತ್ತು ಸಮಾಜದ ಏಕತೆಗಾಗಿ ಕಾರ್ಯಮಾಡುವ ಸಂಕಲ್ಪವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಮಾದಕವಸ್ತುಗಳ ನಿರ್ಮೂಲನೆಗೆ ಕ್ರಮ

•**ಬೆಂಗಳೂರು:** ರಾಜ್ಯದ ಕಾರಾಗೃಹಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾರಾಗೃಹ ಇಲಾಖೆ ಈಗ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.



ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರ ವಿಶೇಷ ಸೂಚನೆಯ ಮೇರೆಗೆ, ರಾಜ್ಯಾದ್ಯಂತ ಇರುವ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಮಾದಕ ವಸ್ತು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಚುರುಕಿನಿಂದ ಸಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಸಿಬ್ಬಂದಿಯೇ ಒಳ ಉಡುಪಿನಲ್ಲಿ ಗಾಂಜಾ ಸರಬರಾಜು ಮಾಡಲು ಯತ್ನಿಸಿ ಸಿಕ್ಕಿಬಿದ್ದ ಘಟನೆ ಇಲಾಖೆಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಕಾರಾಗೃಹಗಳನ್ನು ಸಂಪೂರ್ಣವಾಗಿ ಮಾದಕ ದ್ರವ್ಯ ಮುಕ್ತಗೊಳಿಸುವ ಉದ್ದೇಶದಿಂದ ನಿಮ್ಹಾನ್ಸ್ ಆಸ್ಪತ್ರೆಯ ತಾಂತ್ರಿಕ ಸಹಯೋಗದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಜೈಲುಗಳಲ್ಲಿ ಸುಮಾರು ಶೇ. 10ರಷ್ಟು ಕೈದಿಗಳನ್ನು ಆಯ್ದುಕೊಂಡು ಪರೀಕ್ಷೆ ನಡೆಸಲಾಗುತ್ತಿದೆ.

ವಿಶೇಷ ಕಿಟ್ ಮೂಲಕ ಪರೀಕ್ಷೆ

ಕೈದಿಗಳು ಗಾಂಜಾ, ಹೆರಾಯಿನ್, ಕೊಕೈನ್ ಸೇರಿದಂತೆ ವಿವಿಧ ಮಾದಕ ವಸ್ತುಗಳನ್ನು ಸೇವಿಸಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಇಲಾಖೆಯು ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಿದೆ. ಜೈಲು ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಈ ತಪಾಸಣೆ ನಡೆಯುತ್ತಿದ್ದು, ಅನುಮಾನಾಸ್ಪದ ನಡವಳಿಕೆ ಹೊಂದಿರುವ ಅಥವಾ ಮೊದಲೇ ಚಟಕ್ಕೆ ಬಿದ್ದಿರುವ ಕೈದಿಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ.

ಶಿಕ್ಷೆಯಲ್ಲ, ಸುಧಾರಣೆಯೇ ಗುರಿ

ಈ ಅಭಿಯಾನದ ವಿಶೇಷವೆಂದರೆ, ಪರೀಕ್ಷೆಯಲ್ಲಿ ಮಾದಕ ವಸ್ತು ಸೇವನೆ ದೃಢಪಟ್ಟ ಕೈದಿಗಳ ಮೇಲೆ ಸದ್ಯಕ್ಕೆ ಯಾವುದೇ ಹೊಸ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದಿಲ್ಲ. ಬದಲಿಗೆ ಅವರನ್ನು ಸುಧಾರಿಸುವ ಹಾದಿಯನ್ನು ಇಲಾಖೆ ಆರಿಸಿಕೊಂಡಿದೆ. ಪಾಸಿಟಿವ್ ಬಂದ ಕೈದಿಗಳಿಗೆ ತಕ್ಷಣವೇ ವೃತ್ತಿಪರ ಕೌನ್ಸೆಲಿಂಗ್ ನೀಡಲಾಗುತ್ತದೆ. ತೀವ್ರವಾಗಿ ಚಟಕ್ಕೆ ಅಡಿಕ್ಟ್ ಆಗಿರುವವರನ್ನು ಗುರುತಿಸಿ, ಅವರಿಗೆ ಆಸ್ಪತ್ರೆಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಮುಖ್ಯವಾಹಿನಿಗೆ ತರಲು ಇಲಾಖೆ ನಿರ್ಧರಿಸಿದೆ.

ಯುಗಾದಿ, ರಂಜಾನ್ ಹಿನ್ನೆಲೆ: ಎರಡು ಸಾವಿರ ಹೆಚ್ಚುವರಿ ಬಸ್

ಪುಟ ೧➔ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ. ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮತ್ತಿತರ ಸ್ಥಳಗಳಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಇ–ಟಿಕೆಟ್ ಬುಕಿಂಗ್ www.ksrtc.karnataka.gov.in ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಮುಟ್ಟಿನ ರಜೆ: ಲಾಡ್ ಪ್ರತಿಕ್ರಿಯೆ

•**ಬೆಂಗಳೂರು:** ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾರ್ಥಿನಿಯರ ಮುಟ್ಟಿನ ರಜೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ ನೀಡಿದ್ದು, ರಾಜ್ಯ ಸರ್ಕಾರವು ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ರಜೆಯನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯಿಸಿ ರೂಪಿಸಿರುವ ನೀತಿಯನ್ನು ಪ್ರಶಂಶಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ. ರಾಜ್ಯದ ಮುಟ್ಟಿನ ರಜೆ ನೀತಿಯ ಕುರಿತು, ನಾವು ಸಂಬಂಧಿಸಿದ ಎಲ್ಲ ತಜ್ಞರು, ಉದ್ಯೋಗದಾತರು, ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ವೈದ್ಯರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಜೊತೆಗೆ ವ್ಯಾಪಕ ಚರ್ಚೆ ಮಾಡಿ, ಸಾಧಕ–ಬಾಧಕಗಳನ್ನು ಪರಿಶೀಲಿಸಿ ಸೂಕ್ತ ನೀತಿಯೊಂದನ್ನು ಜಾರಿಗೆ ತಂದಿದ್ದೇವೆ. ಘನವೆತ್ತ ಕೋರ್ಟ್ ಅಭಿಪ್ರಾಯಪಟ್ಟಿರುವಂತೆ, ನಾಲ್ಕೈದು ದಿನಗಳ ರಜೆ ಮತ್ತು ಅದನ್ನು ಕಾನೂನನ್ನಾಗಿ ರೂಪಿಸಿ ಜಾರಿಗೆ ತರುವುದು ಪ್ರಾಯೋಗಿಕವಾಗಿ ಸಾಧುವಲ್ಲ ಎಂದರು.

ಮಂಡ್ಯದಲ್ಲಿ ವಾಹನ ಪರೀಕ್ಷೆ

ಪುಟ ೧➔ ಆ ಕೊರತೆ ನೀಗಿಸಲು ಎಆರ್‌ಎಐನಿಂದ ಪರೀಕ್ಷಾ ಕೇಂದ್ರ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಜಾಗ ನೀಡುವಂತೆ ಪತ್ರ ಬರೆದಿದ್ದಾಗಿ ಹೇಳಿದರು.

ಕೈಗಾರಿಕೆ ಸ್ಥಾಪನೆಗೆ 100 ಎಕರೆ ಜಾಗ ನೀಡುವುದಾಗಿ ರಾಜ್ಯಸರ್ಕಾರ ಬಜೆಟ್ ಪುಸ್ತಕದಲ್ಲಿ ಘೋಷಣೆ ಮಾಡಿದ್ದಾರೆ. ಜಾಗ ಯಾವಾಗ ನೀಡುತ್ತಾರೆ ಎಂಬುದನ್ನು ನೋಡಬೇಕಿದೆ. ಅವರು ಜಾಗ ನೀಡಿದ ಬಳಿಕ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾನು ಕೈಗಾರಿಕೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಜಿಲ್ಲೆಯ ಜನರ ನಿರೀಕ್ಷೆಯನ್ನು ಯಾವುದೇ ಕಾರಣಕ್ಕೂ ಹುಸಿಗೊಳಿಸುವುದಿಲ್ಲ, ಜಿಲ್ಲೆಯ ವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವುದಲ್ಲದೆ, ಅಕ್ಕಪಕ್ಕದ ಜಿಲ್ಲೆಗಳ ಯುವಕರಿಗೂ ಉದ್ಯೋಗ ಸಿಗುವಂತೆ ಮಾಡುವುದಾಗಿ ಭರವಸೆ ನೀಡಿದರು.

ಜತೆಗೆ 200–300 ಕೋಟಿ ರೂ. ವೆಚ್ಚದಲ್ಲಿ ಸ್ಟಾರ್ಟಪ್ ಕಂಪನಿಗಳು ಆರಂಭಿಸುತ್ತೇನೆ. ಅಲ್ಲಿಯೂ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ದೇವೇಗೌಡರ ಬಗ್ಗೆ ಅಭಿಮಾನವಿಟ್ಟು ನನ್ನನ್ನು ಬಹುಮತದ ಅಂತರದಿಂದ ಗೆಲ್ಲಿಸಿದ್ದೀರಿ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು. ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕರಾದ ಡಾ. ಕೆ.ಅನ್ನದಾನಿ, ಜಿ.ಬಿ.ಶಿವಕುಮಾರ್, ಕೆ.ಸುರೇಶ್‌ಗೌಡ, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಂಡ್ಯ ವಿಧಾನಸಭಾ ಕ್ಷೇತ್ರದ ಮುಖಂಡ ಬಿ.ಎಸ್.ರಾಮಚಂದ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಭಾಗವಹಿಸಿದ್ದರು.

ಸಿಎಸ್‌ಆರ್ ಫಂಡ್ ನೀಡಿದ ಟಿವಿಎಸ್ ಕಂಪನಿಯ ಸಿಎಫ್‌ಒ ಸೇತುರಾಂ, ಉಪಾಧ್ಯಕ್ಷ ಪ್ರಸಾದ್ ಕೃಷ್ಣನ್, ಇನ್‌ಫೋಸಿಸ್‌ನ ಹಿರಿಯ ಉಪಾಧ್ಯಕ್ಷ ಸತೀಶ್ ಬಿ.ನಂಜಪ್ಪ, ಎಚ್‌ಎಂಟಿ ಅಧ್ಯಕ್ಷ ರಾಜೇಶ್ ಕೊಹ್ಲಿ, ಹಿಂದುಜಾ ಹಾಸ್ಪಿಟಲ್‌ನ ಡಾ.ಸಂಜಯ್‌ಕುಮಾರ್ ಬಜಾಜ್, ಪ್ರದೀಪ್, ಸೈಲ್ ಕಂಪನಿಯ ರಾಜೀವ್ ಪಾಂಡೆ, ಸಿವೈಕೆ ಪಾಂಡೆ ಅವರನ್ನು ಅಭಿನಂದಿಸಲಾಯಿತು.

ಬಿಜೆಪಿಯಿಂದ ಎಸ್‌ಐಆರ್ ಕಚೇರಿ

ಪುಟ ೧➔ ಇದು ದೇಶದ ಭದ್ರತೆಗೆ ಅಪಾಯಕಾರಿ. ಈ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಎಸ್‌ಐಆರ್ ಕರ್ನಾಟಕ–ತೆಲಂಗಾಣದ ಪ್ರಭಾರಿ ಅಲ್ಕಾ ಗುರ್ಜರ್, ವಿಧಾನ ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ಎಸ್‌ಐಆರ್ ರಾಜ್ಯ ತಂಡದ ಸಂಚಾಲಕ ಜಗದೀಶ್ ಹಿರೇಮನಿ ಸೇರಿ ರಾಜ್ಯ ತಂಡದ ಸದಸ್ಯರು ಕಾರ್ಯಕ್ರಮದಲ್ಲಿದ್ದರು.

ಔಟ್ ಗೋಯಿಂಗ್ ಸಿಎಂ: ಛಲವಾದಿ



ಪುಟ ೧➔ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸಿದ್ದರಾಮಯ್ಯ ರಾಜಕಾರಣವನ್ನೇ ಮೈಗೂಡಿಸಿಕೊಂಡು ಬಂದವರು. ತಮ್ಮ ಉಸಿರು ಇರುವವರೆಗೆ ರಾಜಕೀಯದಲ್ಲಿ ಇರುವೆ ಎಂದು ಹೇಳುತ್ತಾರೆ. ಅವರಿಗೆ ರಾಜಕೀಯವೇ ಜೀವನ ಆಗಿತ್ತು. ಆದರೆ ರಾಜಕೀಯ ಜೀವ ಕೊಟ್ಟ ಈ ರಾಜ್ಯದ ಜನರಿಗೆ ಅವರು ಕೊಟ್ಟಿದ್ದು ಏನು ಎಂದು ಪ್ರಶ್ನಿಸಿದರು. ಈಗ ಮಗನನ್ನು ರಕ್ಷಿಸಿ ಎನ್ನುತ್ತಾರೆ. ವಂಶಪಾರಂಪರ್ಯಕ್ಕೆ ಅವರು ಜೋತು ಬಿದ್ದಿದ್ದಾರೆ. ಅವರು ತಮ್ಮ ಮಗನ ಪರವಾಗಿ ಮಾತನಾಡುವುದನ್ನು ಬಿಟ್ಟು ರಾಜ್ಯದ ಜನರ ಪರ ಮಾತನಾಡಬೇಕಿತ್ತು. ಇದು ಅವರ ರಾಜಕೀಯ ಜೀವನದ ಅಂತ್ಯದ ದಿನಗಳ ಮಾತು ಎಂದು ಹೇಳಿದರು.

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

ಪುಟ ೧➔ ಯುದ್ಧ ಆರಂಭವಾದಾಗಿನಿಂದ ಇರಾನ್ ಸರ್ಕಾರ ಇಂಟರ್ನೆಟ್ ಸ್ಥಗಿತಗೊಳಿಸಿರುವುದರಿಂದ,ಇಸ್ರೇಲ್ ನೀಡಿದ್ದ ಎಚ್ಚರಿಕೆ ಬಹುತೇಕ ಜನರಿಗೆ ತಲುಪಿರಲಿಲ್ಲ ಎಂದು ಹೇಳಲಾಗಿದೆ. ಇನ್ನೊಂದೆಡೆ ಯುದ್ಧದಿಂದಾಗಿ ಭಾರತ ಸಮಸ್ಯೆ ಎದುರಿಸುತ್ತಿದ್ದರೂ ಹಂತ ಹಂತವಾಗಿ ಸಮಸ್ಯೆಯಿಂದ ಹೊರಬಂದು ನಾಗರಿಕರ ರಕ್ಷಣೆ ಮತ್ತು ದೈನಂದಿನ ಜೀವನಕ್ಕೆ ಸಮಸ್ಯೆಯಾಗದಂತೆ ಗಮನಹರಿಸುತ್ತಿದೆ.

ಅಮೆರಿಕ–ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

ಪುಟ ೧➔ ಚೀನಾದ 'ಡಿಎಫ್–17' ನಂತಹ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ತಡೆಯಲು ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಜಪಾನ್ ಪ್ರಧಾನಿ ತಕೈಚಿ, ಮುಂಬರುವ ವಾಷಿಂಗ್ಟನ್ ಭೇಟಿಯ ಸಮಯದಲ್ಲಿ ಈ ಬಹುಕೋಟಿ ಡಾಲರ್ ಯೋಜನೆಯಲ್ಲಿ ಸೇರುವ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ.

ರಾಜತಾಂತ್ರಿಕ ಕಾರ್ಯತಂತ್ರ: ಕಿಮ್ ಜೊಂಗ್–ಉನ್ ಅವರ ಈ ಪ್ರಚೋದನಾಕಾರಿ ಕ್ರಮಗಳ ಹೊರತಾಗಿಯೂ, ಚೀನಾದ ಪ್ರಭಾವ ಕುಗ್ಗಿಸಲು ಅಧ್ಯಕ್ಷ ಟ್ರಂಪ್, ಕಿಮ್ ಜಾಂಗ್–ಉನ್ ಅವರೊಂದಿಗೆ ವೈಯಕ್ತಿಕ ಬಾಂಧವ್ಯ ವೃದ್ಧಿಸಲು ಉತ್ಸುಕರಾಗಿದ್ದಾರೆ. ಚೀನಾದ ಭೂಪ್ರದೇಶದಲ್ಲಿ ಸಂಭವನೀಯ ಶೃಂಗಸಭೆ ನಡೆಸುವ ಬಗ್ಗೆ ದಕ್ಷಿಣ ಕೊರಿಯಾದ ಪ್ರಧಾನಿ ಕಿಮ್ ಮಿನ್–ಸಿಯೋಕ್ ಖಚಿತಪಡಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಯುಎಸ್ ನಡೆ ಕುತೂಹಲ ಮೂಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

•**ಹೊಸದಿಲ್ಲಿ:** ಈ ಹಿಂದೆ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳದಂತೆ ಭಾರತಕ್ಕೆ ಎಚ್ಚರಿಕೆ ನೀಡಿ ಸುಂಕ ಹೊರೆ ನೀಡಿದ್ದ ಅಮೆರಿಕ, ಇರಾನ್ ಜತೆ ಯುದ್ಧ ಮಾಡಿದ ಎರಡು ವಾರಗಳಲ್ಲೇ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವಂತೆ ಭಾರತ ಸೇರಿದಂತೆ ಜಗತ್ತಿಗೆ ಬೇಡಿಕೊಳ್ಳುತ್ತಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಕ್ಚಿ ಲೇವಡಿ ಮಾಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಬಗ್ಗೆ ಯುರೋಪಿನ ನಿಲುವನ್ನು ಟೀಕಿಸಿದ ಅರಕ್ಚಿ, ಇರಾನ್ ಮೇಲಿನ ಯುದ್ಧವು 'ಕಾನೂನುಬಾಹಿರ'ವಾಗಿದೆ. ಇರಾನ್ ಮೇಲಿನ ಕಾನೂನುಬಾಹಿರ ಯುದ್ಧ ಬೆಂಬಲಿಸುವುದರಿಂದ ರಷ್ಯಾದ ವಿರುದ್ಧ ಅಮೆರಿಕದ ಬೆಂಬಲ ಸಿಗುತ್ತದೆ ಎಂದು ಯುರೋಪ್ ಭಾವಿಸಿದೆ ಎಂದು ಹೇಳಿದರು.

ತವರಿನತ್ತ ಶಿವಾಲಿಕ್, ನಂದಾದೇವಿ

ಭಾರತದ ಮೊದಲ ಎಲ್‌ಪಿಜಿ ಸಾಗಣೆ ಹಡಗು ಶಿವಾಲಿಕ್ ಹಾರ್ಮುಜ್ ಜಲಸಂಧಿಯಿಂದ ಈಗಾಗಲೇ ತೆರಳಿದ್ದು, ಎರಡನೇ ಹಡಗು ನಂದಾದೇವಿ ಸಹ ಹಾರ್ಮುಜ್ ಜಲಸಂಧಿ ಯಿಂದ ಶನಿವಾರ ಪ್ರಯಾಣ ಆರಂಭಿಸಿದೆ. ಸುಮಾರು 46,000 ಟನ್‌ಗಳಿಗೂ ಹೆಚ್ಚು ಎಲ್‌ಪಿಜಿ ಇನ್ನೆರಡು ದಿನಗಳಲ್ಲಿ ತವರಿಗೆ ತಲುಪಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಭಾರತೀಯ ನೌಕಾಪಡೆಯ ಮಾರ್ಗದರ್ಶನದಲ್ಲಿ ಎರಡೂ ಹಡಗುಗಳು ಹಾರ್ಮುಜ್‌ನಿಂದ ಭಾರತದತ್ತ ಪ್ರಯಾಣ ಬೆಳೆಸಿವೆ. ಮುಂದಿನ ಎರಡು ದಿನಗಳೊಳಗೆ ಮುಂಬೈ ಅಥವಾ ಕಾಂಡ್ಲಾ ಬಂದರಿಗೆ ಹಡುಗಳು ಬರುವುದನ್ನು ನಿರೀಕ್ಷಿಸಲಾಗಿದೆ. ನಂದಾದೇವಿ ಹಡಗಿನಲ್ಲಿ 46,000 ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹಾಗೂ ಶಿವಾಲಿಕ್‌ನಲ್ಲೂ 40,000ದಿಂದ 55,000 ಟನ್‌ಗಳಷ್ಟು ಎಲ್‌ಪಿಜಿ ಇದೆಯೆಂದು ಮೂಲಗಳು ತಿಳಿಸಿವೆ. ಇವೆರಡೂ ಹಡಗುಗಳು ಭಾರತದ ಸಂಪೂರ್ಣ ಇಂಧನ ಪೂರೈಕೆ ಸರಪಣಿಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

ಪುಟ ೧➔ **ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ:** ಬಯೋಗ್ಯಾಸ್ ಘಟಕಗಳಲ್ಲಿ ಪ್ರತಿ ಟನ್ ಹಸಿ ತ್ಯಾಜ್ಯದಿಂದ ಸುಮಾರು 30ರಿಂದ 50 ಕೆಜಿ ಬಯೋಗ್ಯಾಸ್ ಉತ್ಪಾದನೆ ಸಾಧ್ಯವಾಗುತ್ತದೆ. ಪ್ರತಿ ಘಟಕದಲ್ಲಿ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ ನಡೆಯುತ್ತಿದೆ. ಇಲ್ಲಿ ಉತ್ಪಾದನೆಯಾಗುವ ಬಯೋಗ್ಯಾಸ್‌ನ್ನು ಘಟಕಗಳ ಒಳಾಂಗಣ ಬಳಕೆಗೆ ಬಳಸಲಾಗುತ್ತಿದ್ದು, ಹೆಚ್ಚುವರಿ ಬಯೋಗ್ಯಾಸ್ ಬಳಸಿ ಜನರೇಟರ್ ಮೂಲಕ ವಿದ್ಯುತ್ ಉತ್ಪಾದಿಸಿ ಸಮೀಪದ ಉದ್ಯಾನವನಗಳಲ್ಲಿ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದ್ದಾರೆ. ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆಜಿ ಬಯೋಗ್ಯಾಸ್ ಸರಬರಾಜು ಮಾಡಲಾಗುತ್ತಿದ್ದು, ಪ್ರತಿ ಕೆಜಿಗೆ ರೂ.70ರಂತೆ ದಿನಕ್ಕೆ ಸುಮಾರು ರೂ.8,400 ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ಬಯೋಗ್ಯಾಸ್‌ನ್ನು ಸಿಲಿಂಡರ್‌ಗಳಿಗೆ ತುಂಬಿಸಿ ಸರಬರಾಜು ಮಾಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಬಗ್ಗೆ ಬೆಲೆ ಸೇರಿದಂತೆ ಮತ್ತಿತರ ವಿಷಯದ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬಯೋಗ್ಯಾಸ್ ಘಟಕ ಸ್ಥಾಪನೆಗೆ ವೇಗ

ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಹಳ್ಳಿ ಪ್ರದೇಶದಲ್ಲಿ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಸಾತರಾಂ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ. ಅಲ್ಲದೆ ಹೊಸದಾಗಿ ನಾಲ್ಕು ವಿಕೇಂದ್ರೀಕೃತ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಲು ಕ್ರಮ ವಹಿಸಲಾಗಿದ್ದು, ಅವುಗಳಲ್ಲಿ ಎರಡು ಘಟಕಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭಗೊಳ್ಳಲಿವೆ. ಉಳಿದ ಎರಡು ಘಟಕಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಜಿಬಿಎ ತಿಳಿಸಿದೆ.

“ ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವ ಘಟಕಗಳನ್ನು ಉನ್ನತೀಕರಣಗೊಳಿಸಿ ಅಲ್ಲಿ ಬಯೋ ಗ್ಯಾಸ್ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದು.

■ **ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ**

ತರಬೇತಿಯಿಂದ ಕ್ರೀಡೆಯಲ್ಲೂ ದೇಶ ಮುಂಚೂಣಿ

ಮಂಡ್ಯ: ಭಾರತದ ಕೆಳಮಟ್ಟದ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಖೇಲೋ ಇಂಡಿಯಾ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಭಾರತವನ್ನು ಶ್ರೇಷ್ಠ ಕ್ರೀಡಾರಾಷ್ಟ್ರವಾಗಿ ರೂಪಿಸಲು ಸಹಕಾರಿಯಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ವಿಶ್ವಾಸದಿಂದ ನುಡಿದರು

ತಾಲೂಕಿನ ವಿ.ಸಿ.ಫಾರಂನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಕ್ರೀಡಾ ಪಟುಗಳುತರಬೇತಿಹಾಗೂಮೂಲಸೌಕರ್ಯಗಳಿಲ್ಲದೆಪರದಾಡುತ್ತಿದ್ದರು. ಕಳೆದ 11 ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಅತ್ಯಾಧುನಿಕ ಕ್ರೀಡಾ ಸೌಲಭ್ಯ, ಅಂತಾರಾಷ್ಟ್ರೀಯ ಮಟ್ಟದ ತರಬೇತಿಯನ್ನು ನೀಡುವ ಮೂಲಕ ಹೆಚ್ಚು ಹೆಚ್ಚು ಪದಕಗಳನ್ನು ಗೆಲ್ಲುವುದಕ್ಕೆ ಸಹಕಾರಿ ಯಾಗಿದೆ ಎಂದು ಹೇಳಿದರು.

2016ರಲ್ಲಿ ಖೇಲೋ ಇಂಡಿಯಾ ಆರಂಭವಾದ ಬಳಿಕ ಇಡೀ ರಾಷ್ಟ್ರದಲ್ಲಿ ಕ್ರೀಡಾ ಚಟುವಟಿಕೆಗಳು ಗರಿಗೆದರಿವೆ. ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ನಗರ ಪ್ರದೇಶಕ್ಕೆ ಸೀಮಿತವಾಗಿದ್ದ ಕ್ರೀಡಾ ಚಟುವಟಿಕೆಗಳು ಪ್ರತಿ ಹಳ್ಳಿ ಮತ್ತು ಶಾಲೆಗಳಲ್ಲೂ ಆರಂಭಗೊಂಡಿವೆ. ಗ್ರಾಮೀಣ ಭಾಗದಿಂದಲೂ ಉತ್ತಮ ಕ್ರೀಡಾಪ್ರತಿಭೆಗಳು ಬೆಳಕಿಗೆ ಬರುವಂತಾಗಿದೆ. ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್, ಒಲಂಪಿಕ್ಸ್ ಕ್ರೀಡಾಕೂಟದಲ್ಲೂ ಕ್ರೀಡಾಪಟುಗಳು ಚಿನ್ನ ಸೇರಿದಂತೆ ಹಲವು ಪದಕಗಳನ್ನು ಗೆಲ್ಲುವಂತಾಗಿದೆ ಎಂದು ತಿಳಿಸಿದರು.



ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ಅಥ್ಲೆಟಿಕ್ಸ್‌ನಲ್ಲಿ ವಿಕಾಸಗೌಡ ಹಾಗೂ ವ್ಹೀಲ್ ಚೇರ್ ಟೆನ್ನಿಸ್ ಆಟಗಾರ್ತಿ ಕೆ.ಆರ್. ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗುತ್ತಿದ್ದಾರೆ. ಇಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣದ ಸದುಪಯೋಗ ಪಡೆದುಕೊಂಡು ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಹೊರಬರಬೇಕು ಎಂದು ಹಾರೈಸುತ್ತೇನೆ ಎಂದು ಆಶಿಸಿದರು.

ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ

ಕೇಂದ್ರ ಸಂಪುಟದಲ್ಲಿ ನನ್ನ ಸಹೋದ್ಯೋಗಿ ಹಾಗೂ ಎನ್‌ಡಿಎ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರ ಪರಿಶ್ರಮದಿಂದ ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಕುಮಾರಸ್ವಾಮಿ ಅವರೇ, ಜನರಿಗಾಗಿ ನೀವು ಮಾಡಿರುವ ಕೆಲಸವು ಜನರು ನಿಮ್ಮ ಮೇಲೆ ತೋರಿಸುತ್ತಿರುವ ಪ್ರೀತಿಯಲ್ಲಿಯೇ ಕಾಣುತ್ತಿದೆ ಎಂದು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು. ವಿಶೇಷಚೇತನರ ಬಗ್ಗೆ ನೀವು ಹೊಂದಿರುವ ಮಮತೆ, ಬದ್ಧತೆಯನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ನನಗೆ ಬಹಳ ಸಂತೋಷ ಉಂಟು ಮಾಡಿದೆ. ನೀವು ಮಾಡುತ್ತಿರುವ ಈ ಕೆಲಸ ಶ್ಲಾಘನಾರ್ಹ. ನೀವು ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ಮೂಲಕ ವಿಶಿಷ್ಟಚೇತನರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ, ಪರಿಸರಕ್ಕೆ ಕೂಡ ಒಳ್ಳೆಯದು ಮಾಡುತ್ತಿದ್ದೀರಿ ಎಂದು ಮಾಂಡವೀಯ ಅವರು ಶ್ಲಾಘಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕರಾದ ಎಚ್.ಟಿ. ಮಂಜು, ಕೆ. ವಿವೇಕಾನಂದ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ. ಅನ್ನದಾನಿ, ಜಿ.ಬಿ. ಶಿವಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಬಿಜೆಪಿ ಮುಖಂಡ ಡಾ. ಸಿದ್ದರಾಮಯ್ಯ ಇದ್ದರು.

ಶಂಕುಸ್ಥಾಪನೆ



ಬಾಗಲಕೋಟೆ ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಶಂಕುಸ್ಥಾಪನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ ಇದ್ದರು.

ಕಿರುಸುದ್ದಿ

ವಿದೇಶಿ ಪ್ರವಾಸಿಗರ ನೆರವಿಗೆ ಬದ್ಧ: ಸಚಿವ ಪಾಟೀಲ್

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಯುದ್ಧದ ಸನ್ನಿವೇಶ ಹಾಗೂ ಅಂತಾರಾಷ್ಟ್ರೀಯ ಪ್ರಯಾಣದಲ್ಲಿನ ಅನಿಶ್ಚಿತತೆಯಿಂದಾಗಿ ರಾಜ್ಯದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರ ನೆರವಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಪ್ರಸ್ತುತ ಯುದ್ಧದ ಕಾರಣದಿಂದಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ವೀಸಾ ಸಂಬಂಧಿತ ಸಮಸ್ಯೆಗಳಿಂದ ಸಂಕಷ್ಟಕ್ಕೆ ಸಿಲುಕಿರುವ ವಿದೇಶಿ ಪ್ರವಾಸಿಗರು ಯಾವುದೇ ಸಹಾಯಕ್ಕಾಗಿ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ವಿದೇಶಿ ಅತಿಥಿಗಳಿಗೆ ಈ ಸಂಕಷ್ಟದ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಇಲಾಖೆಯು ವಿಶೇಷ ನಿಗಾ ವಹಿಸಿದೆ. ಅತಿಥಿ ದೇವೋ ಭವ ಎಂಬ ಆಶಯದಂತೆ, ರಾಜ್ಯದಲ್ಲಿರುವ ವಿದೇಶಿ ಪ್ರವಾಸಿಗರಿಗೆ ವೀಸಾ ನಿರ್ವಹಣೆ ಸೇರಿದಂತೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಇಲಾಖೆ ಸನ್ನದ್ಧವಾಗಿದೆ ಎಂದು ಅವರು ಭರವಸೆ ನೀಡಿದ್ದಾರೆ.

ಸಹಾಯಕ್ಕಾಗಿ ಸಂಪರ್ಕಿಸಿ: ವಿದೇಶಿ ಪ್ರವಾಸಿಗರು ಮಾಹಿತಿ ಅಥವಾ ತುರ್ತು ನೆರವಿಗಾಗಿ ಬೆಳಗ್ಗೆ 5:30 ರಿಂದ ರಾತ್ರಿ 10:00 ಗಂಟೆಯವರೆಗೆ, ಈ 89706 50021 ದೂರವಾಣಿ ಸಂಖ್ಯೆಗೆ ಕರೆ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಎಚ್.ಪಿ. ಜನಾರ್ಧನ 96119 21927 ಅವರನ್ನು ಸಂಪರ್ಕಿಸಿ.

ಐಟಿ, ಬಿಟಿ ಕ್ಷೇತ್ರದಿಂದ ಉದ್ಯೋಗಾವಕಾಶ

ವಿಧಾನ ಪರಿಷತ್: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡುತ್ತಿದೆ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕೆ.ಎಸ್. ನವೀನ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಐಟಿ ಕಂಪನಿಗಳ ಸ್ಥಾಪನೆ ಮತ್ತು ಸ್ಟಾರ್ಟ್‌ಅಪ್ ಪ್ರೋತ್ಸಾಹ ನೀಡಲು ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮಾಹಿತಿಯಂತೆ ಕಲಬುರಗಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುಮಾರು 21 ಐಟಿ ಕಂಪನಿಗಳು ಸ್ಥಾಪನೆಯಾಗಿವೆ. ಬಳ್ಳಾರಿಯ ಐಟಿ ಪಾರ್ಕ್‌ನಲ್ಲಿ ಈಗಾಗಲೇ ಸುಮಾರು 18 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಸಾರಥಿ ಯೋಜನೆ: ಆಯ್ಕೆ ಪಟ್ಟಿ ರದ್ದು

ವಿಧಾನ ಪರಿಷತ್: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2025-26ನೇ ಸಾಲಿನಲ್ಲಿ ಲಭ್ಯವಿರುವ ಸರ್ಕಾರದ ಸಾಂಸ್ಥಿಕ ಕೋಟಾದಡಿಯಲ್ಲಿ ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತೆ, ಮೈಕ್ರೋ ಕ್ರೆಡಿಟ್ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯ ಅಡಿ ಕೆಲವು ಫಲಾನುಭವಿಗಳನ್ನು ಕ್ರಮಬದ್ಧವಾಗಿ ಆಯ್ಕೆಯಾಗಿಲ್ಲವೆಂದು ಕಂಡು ಬಂದಿರುವ ಹಿನ್ನೆಲೆ ಈ ಪಟ್ಟಿಗಳನ್ನು ರದ್ದುಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು. ಸದಸ್ಯರಾದ ಟಿ.ಎನ್. ಜವರಾಯಿ ಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಫಲಾನುಭವಿಗಳನ್ನು ರದ್ದುಪಡಿಸಿರುವ ಪಟ್ಟಿಯನ್ನು ಪರಿಶೀಲಿಸಿ, ಕೆಲವು ಫಲಾನುಭವಿಗಳು ಅರ್ಹರಿದ್ದಲ್ಲಿ ಸಾಂಸ್ಥಿಕ ವಿವೇಚನಾ ಕೋಟಾದ ಮಿತಿಯ ಅಡಿಯಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ತೀರ್ಪು ಪ್ರಕಟವಾಗದಿದ್ದರೂ ರೈತರಿಗೆ ನೆರವು: ಡಿ.ಕೆ.ಶಿವಕುಮಾರ

ಸಂತ್ರಸ್ತರಿಗೆ ಶೀಘ್ರ ಪರಿಹಾರ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಾಗಿ ಬ್ರಿಜೇಶ್ ಪಟೇಲ್‌ರವರ ತೀರ್ಪು ಪ್ರಕಟವಾಗಿಲ್ಲ, ಕೋರ್ಟ್ ಆದೇಶವನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿಲ್ಲ, ಆದರೂ ನಮ್ಮ ಸರ್ಕಾರ ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಜಲ ನಮ್ಮ ಹಕ್ಕು ಎಂದು ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿ, ಮೂರನೇ ಹಂತದ ಯುಕೆಪಿ ಕಾಮ ಗಾರಿಗಾಗಿ 1 ಲಕ್ಷ 33 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಹಣ ಕೊಡಲು ಬದ್ಧರಾಗಿದ್ದೇವೆ. ಚೆಕ್ ಕೂಡ ನೀಡಲಾಗುತ್ತಿದೆ. ಈ ತೀರ್ಮಾಣದಿಂದ ಪಕ್ಕದ ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹಾಕಿ ರೈತರಿಗೆ ಪರಿಹಾರ ನೀಡದಂತೆ ತಕರಾರು ಅರ್ಜಿ ಹಾಕಿವೆ. ಆದರೂ ನಾವು ಈ ಬಗ್ಗೆ ಮನವರಿಕೆ ಮಾಡಲು ಕೇಂದ್ರ ಪ್ರಯತ್ನ ಪಟ್ಟಿದ್ದೇವೆ. ಹೀಗಾಗಿ ನಮ್ಮ ಸರ್ಕಾರ ರೈತರಿಗಾಗಿ ಬಲಿಷ್ಠವಾದ ತೀರ್ಮಾನ ಕೈಗೊಂಡಿದೆ ಎಂದರು.

ಜಾತಿಯನ್ನು ಕೇಳದೇ ಗುಣ ಕೇಳಬೇಕು. ಧರ್ಮ ಕೇಳದೇ ನಡತೆ ಕೇಳಬೇಕು ಎಂಬ ದಾರಿಯಲ್ಲಿ ರೈತರ ಬದುಕಿಗೆ ಸರ್ಕಾರ ನೆರವಾಗಲಿದೆ. ಸಣ್ಣ ನೀರಾವರಿ ಸಚಿವರು ಮತ್ತು ನಾವು ದೆಹಲಿಗೆ ತೆರಳಿ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ



> ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣವಾಗಲಿದೆ. ರಾಜ್ಯದಲ್ಲಿ 17945 ವಿದ್ಯಾರ್ಥಿಗಳು ಪ್ರತಿ ವರ್ಷ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಓದಿ ಪದವಿ ಪಡೆದುಕೊಳ್ಳಲಿದ್ದಾರೆ. 5070 ಪಿಜಿ ಸೀಟ್, 44,000 ನರ್ಸಿಂಗ್, ಮೆಡಿಕಲ್‌ಗೆ ಶಕ್ತಿ ತುಂಬಲು ಸರ್ಕಾರ ಕೆಲಸ ಮಾಡುತ್ತಿದೆ.
> ■ ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ

ನಮ್ಮ ಕೆಲಸಕ್ಕೆ ಅಡ್ಡಿ ಮಾಡಬಾರದು. ಯೋಜನೆಗೆ ಕೇಂದ್ರದಿಂದ ಅನುದಾನ ಕೂಡ ಬಿಡುಗಡೆ ಮಾಡಬೇಕು ಎಂದು ಒತ್ತಡ ಹಾಕುತ್ತೇವೆ ಎಂದರು.

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಕಳೆದ ವಿಧಾನಸಭೆಯ ಚುನಾವಣೆಯಲ್ಲಿ 14 ಸ್ಥಾನಗಳನ್ನು ಗೆಲ್ಲಿಸಿಕೊಟ್ಟ ಜನರ ಋಣ ತೀರಿಸಲು ಬಾಗಲಕೋಟೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸಿದ್ದೇವೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್, ಕ್ಯಾನ್ಸರ್ ಆಸ್ಪತ್ರೆ, ಟ್ರಾಮಾ ಸೆಂಟರ್, ಯೂನಿವರ್ಸ್‌ಲ್ ಹೆಲ್ತ್ ಮಾಡುವ ಮೂಲಕ ರಾಜ್ಯದ ಜನತೆಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು. ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್ ನಿರ್ಮಾಣವಾಗುತ್ತಿರುವ ಪರಿಣಾಮದಿಂದ ಗ್ರಾಮೀಣ ಭಾಗದ ರೈತರು ಮಕ್ಕಳು, ಸಾಮಾನ್ಯ, ಬಡವರ ಮಕ್ಕಳಿಗೆ ಮೆರಿಟ್ ಆಧಾರದ ಮೇಲೆ ಸೀಟ್ ಸಿಗಲಿದೆ ಎಂದರು.

ಸಚಿವ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ ಇದ್ದರು.

ಫ್ಲಿಪ್‌ಕಾರ್ಟ್ ವಿರುದ್ಧ ಕ್ರಮ ಕೈಗೊಳ್ಳಲು ಪತ್ರ

ಬೆಂಗಳೂರು: ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಎನ್ನುವ ಸಂಸ್ಥೆ 1 ರೂಪಾಯಿಗೆ 1 ಲೀಟರ್ ಹಾಲು ನೀಡಲು ಮುಂದಾಗಿದೆ. ರೈತ ಸಮುದಾಯವನ್ನು ಧ್ವಂಸ ಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ಶನಿವಾರ ಸದಾಶಿವನಗರದ ನಿವಾಸದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 1 ರೂಪಾಯಿಗೆ 1 ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್‌ಕಾರ್ಟ್ ಸಂಸ್ಥೆ ವಿರುದ್ಧ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ ಇವರಿಗೆ ಸೆಕ್ಷನ್ 19/1 ಎ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ದೂರು ನೀಡಲಾಗಿದೆ. ಜತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ-ಮೇಲ್ ಮುಖಾಂತರ ಕಳಿಸುತ್ತಿದ್ದೇನೆ ಎಂದು ತಿಳಿಸಿದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕು ಎಂದು ಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿ ಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ರೈತರಿಗೆ ನಾವು 38, 39, 40 ರೂಪಾಯಿ ಹಣವನ್ನು ಪಾವತಿ ಮಾಡುತ್ತಿದ್ದೇವೆ. ಇವರು 1 ರೂಪಾಯಿಗೆ ಕೊಡುವುದಕ್ಕೆ ಹೇಗೆ ಸಾಧ್ಯವಾಗು ತ್ತದೆ. ಯಾರಿಂದ ಖರೀದಿ ಮಾಡುತ್ತಿದ್ದಾರೆ. ಎಲ್ಲಿಂದ ಹಾಲು ಬರುತ್ತಿದೆ ಎಂದು ತಿಳಿದುಕೊಳ್ಳಬೇಕಿದೆ ಎಂದರು.

14.5 ಲಕ್ಷ ಲೀ ಹಾಲು ಮಾರಾಟ

ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ. ಈಗಾಗಲೇ ಎಲ್ಲಾ ಕಡೆ ಜಾಹೀರಾತು ನೀಡಿದೆ. ಸಾರ್ವಜನಿಕರ ಹಣವನ್ನ ಹೂಡಿಕೆ ಮಾಡಿ ಗ್ರಾಹಕರನ್ನ ಆಕರ್ಷಣೆ ಮಾಡಲಾಗುತ್ತಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು. ಬಮುಲ್ ಒಕ್ಕೂಟಕ್ಕೆ 40 ರಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕು ಎಂದರು.

ಪ್ರವಾಸಿಗರ ಸಂಖ್ಯೆ ಇಳಿಮುಖ

ಚಿಕ್ಕಮಗಳೂರು: ಜಿಲ್ಲೆಯ ವಿವಿಧ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಇಳಿಮುಖವಾಗಿದ್ದು, ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಂತಾಗಿದೆ.

ಚಿಕ್ಕಮಗಳೂರು ತಾಲ್ಲೂಕಿನ ಗಿರಿ ತಪ್ಪಲಿನ ನಿಸರ್ಗ ತಾಣಗಳಾದ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ದತ್ತಪೀಠ, ಕೆಮ್ಮಣ್ಣುಗುಂಡಿ ಇನ್ನಿತರೆ ಪ್ರದೇಶಗಳು ಶನಿವಾರ ಪ್ರವಾಸಿಗರಿಲ್ಲದೆ ಬಿಕೋ ಎನ್ನುತ್ತಿದ್ದವು. ವಾರಾಂತ್ಯದ ದಿನಗಳಲ್ಲಿ ಪ್ರವಾಸಿಗರು ಹಾಗೂ ಪ್ರವಾಸಿ ವಾಹನಗಳಿಂದ ಗಿಜಿಗುಡುವ ನಗರ ಸಮೀಪದ ಕೈಮರ ಚೆಕ್‌ಪೋಸ್ಟ್ ಸರ್ಕಲ್‌ನಲ್ಲಿ ಜನ, ವಾಹನ ಸಂಚಾರವೇ ಇರಲಿಲ್ಲ. ಪ್ರಮುಖ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದ ಪರಿಣಾಮ ಇಡೀ ಪ್ರದೇಶ ಬಿಕೋ ಎನ್ನುತ್ತಿರುವುದು ಕಂಡುಬಂತು.

ಯಾವುದೇ ಪರಿಸ್ಥಿತಿಯಲ್ಲೂ ವಾರಾಂತ್ಯದ ದಿನಗಳಲ್ಲಿ ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಗಳ ಐಟಿ ಉದ್ಯೋಗಿಗಳು ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಆದರೆ ಈ ವಾರಾಂತ್ಯದಲ್ಲಿ ಜಿಲ್ಲೆಗೆ ಭೇಟಿ ನೀಡಿರುವವರ ಸಂಖ್ಯೆ ಕ್ಷೀಣಿಸಿದೆ. ಇದರ ಪರಿಣಾಮ ಬಹುತೇಕ ಹೋಂಸ್ಟೇಗಳು, ರೆಸಾರ್ಟ್‌ಗಳು, ಲಾಡ್ಜ್‌ಗಳು ಪ್ರವಾಸಿಗರಿಲ್ಲದೆ ಖಾಲಿ ಉಳಿದಿದೆ.

ಪ್ರವಾಸಿ ಸ್ಥಳಗಳಲ್ಲಿ ಹೋಟೆಲ್‌ಗಳು, ಕ್ಯಾಂಟೀನ್, ಕಾಂಡಿಮೆಂಟ್ಸ್‌ಗಳು, ಬೇಕರಿಗಳು ಇನ್ನಿತರೆ ವ್ಯಾಪಾರ ವಹಿವಾಟಿಗೂ ಪೆಟ್ಟು ಬಿದ್ದಿದ್ದು, ಪ್ರವಾ ಸೋದ್ಯಮ ನಷ್ಟ ಅನುಭವಿಸುವಂತಾಗಿದೆ ಎಂದರು.



ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ

ಮಧ್ಯಪ್ರಾಚ್ಯದಲ್ಲಿ ತಲೆದೋರಿದುವ ಯುದ್ಧದ ಪರಿಸ್ಥಿತಿಯಿಂದ ಉಂಟಾಗಿರುವ ಅಡುಗೆ ಅನಿಲ ಅಭಾವದ ಕಾರಣ ಎಲ್ಲೆಡೆ ಹೋಟೆಲ್‌ಗಳು ಮುಚ್ಚಲ್ಪಡುತ್ತಿರುವುದರಿಂದ ಐಟಿ ಉದ್ಯೋಗಿಗಳು ಸೇರಿದಂತೆ ಇತರೆ ಪ್ರವಾಸಿಗರು ತಮ್ಮ ಪ್ರವಾಸದ ಯೋಜನೆಯನ್ನು ಕೈಬಿಟ್ಟಿರುವ ಸಾಧ್ಯತೆ ಇದೆ. ಇಂದಿನ ಒಟ್ಟಾರೆ ಪರಿಸ್ಥಿತಿ ಪ್ರವಾಸವನ್ನು ಸಂಪೂರ್ಣ ಆನಂದಿಸಲು ಪೂರಕವಾಗಿಲ್ಲ ಎನ್ನುವ ಕಾರಣಕ್ಕೆ ಪ್ರವಾಸಿಗರು ಹಿಂದೇಟು ಹಾಕುತ್ತಿದ್ದಾರೆ. ಇದು ಹೀಗೇ ಇರುವುದಿಲ್ಲ. ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ ಮರುಳಲಿದೆ ಎಂದು ಕೈಮರದ ಹೋಟೆಲ್ ಮಾಲೀಕ ಮುರುಗನ್ ಹೇಳುತ್ತಾರೆ.

ಕೈಮಗ್ಗ ಉತ್ಪನ್ನಗಳಿಗೆ ಉತ್ತಮ ಬೇಡಿಕೆ: ಸಚಿವ

ಬೆಂಗಳೂರು: ರಾಜ್ಯದ ಕೈಮಗ್ಗ ಉತ್ಪನ್ನಗಳು ಹೊರ ರಾಜ್ಯಗಳಲ್ಲಿ ಬೇರೆ-ಬೇರೆ ಬ್ರಾಂಡ್‌ಗಳಲ್ಲಿ ಮಾರಾಟವಾಗುತ್ತಿವೆ. ನಮ್ಮದೇ ಉತ್ಪನ್ನಗಳು ಬೇರೆ ರಾಜ್ಯಗಳಿಂದ ಬೇರೆ ಬ್ರಾಂಡ್‌ಗಳ ರೂಪದಲ್ಲಿ ರಾಜ್ಯಕ್ಕೆ ಬರುತ್ತಿವೆ. ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ರಾಜಾಜಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ಟೇಡಿಯಂನಲ್ಲಿ 14 ದಿನಗಳ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಉತ್ಪನ್ನಗಳಿಗೆ ನಮ್ಮಲ್ಲೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಯಶವಂತಪುರದಲ್ಲಿರುವ ಇಲಾಖೆಯ ಒಂದೂವರೆ ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಇತ್ತೀಚೆಗೆ ಪಾರಂಪರಿಕ ಕಲೆ ನಶಿಸಿ ಹೋಗುತ್ತಿದೆ ಎಂದರು.



ಅಂತಿಮ ಹಂತದಲ್ಲಿ ಜವಳಿ ನೀತಿ

2026-30 ಅವಧಿಯ ನೂತನ ಜವಳಿ ನೀತಿ ಅಂತಿಮ ಹಂತಕ್ಕೆ ಬಂದಿದೆ. ಮೆಗಾ ಮತ್ತು ಮಿನಿ ಇಂಡಸ್ಟ್ರೀಸ್‌ಗಳನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ನಡೆದಿದೆ. ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಪಿಎಂ ಮಿತ್ರ ನೂಲಿನಿಂದ ಬಟ್ಟೆ ಹಂತದವರೆಗೆ ಎಲ್ಲ ಚಟುವಟಿಕೆಗಳು ಪಾರ್ಕ್‌ನಲ್ಲಿ ಒಂದೇ ಸೂರಿನ ಅಡಿಯಲ್ಲಿ ಬರಲಿವೆ. ಈ ಯೋಜನೆ ಅನುಷ್ಠಾನವಾದರೆ ಕರ್ನಾಟಕದಲ್ಲಿ ಮೈಲಿಗಲ್ಲಾಗಲಿದೆ ಎಂದು ಶಿವಾನಂದ ಪಾಟೀಲ್ ಮಾಹಿತಿ ನೀಡಿದರು.

52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ

ವಿಧಾನ ಪರಿಷತ್: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದು, ವಿವಿಧ ಇಲಾಖೆಗಳಲ್ಲಿ 52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ ಹೊರಬೀಳಲಿದೆ. ಈ ಸಂಬಂಧ ಸರ್ಕಾರ ಮಟ್ಟದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಡಾ. ಎಂ.ಜಿ. ಮುಳೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ ಜಿಲ್ಲೆಯಲ್ಲಿ 106



ಹುದ್ದೆಗಳೂ ಸೇರಿ ರಾಜ್ಯಾದ್ಯಂತ 823 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಒಪ್ಪಿಗೆ ಸಿಗಬೇಕಿದೆ. ಉಳಿದಂತೆ ಖಾಲಿ ಇರುವ ಗ್ರೂ-ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಂಡು ಹಾಸ್ಟೆಲ್‌ಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ವಾರ್ಷಿಕವಾಗಿ ಒಬಿಸಿ ಇಲಾಖೆಯಿಂದಲೇ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ 1.41 ಲಕ್ಷ ವಿದ್ಯಾರ್ಥಿಗಳ ಹಾಸ್ಟೆಲ್ ಪ್ರವೇಶಾತಿ ಬೇಡಿಕೆ ಇದೆ ಎಂದರು.

ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಳ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ರೈಲ್ವೆ ಕಾಮಗಾರಿಗಳಿಗೆ ಸರ್ಕಾರದಿಂದ ಹಿನ್ನಡೆ

ಹುಬ್ಬಳ್ಳಿ: ಧಾರವಾಡ-ಬೆಳಗಾವಿ ಮಧ್ಯೆ ರೈಲ್ವೆ ಮಾರ್ಗದ ಯೋಜನೆ ಕಾಮಗಾರಿಗೆ ರಾಜ್ಯ ಸರ್ಕಾರ ಭೂಸ್ವಾಧೀನಕ್ಕೆ ಸಹಕಾರ ನೀಡುತ್ತಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದ್ದು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಟೈ ಹುಬ್ಬಳ್ಳಿ ಪದಾಧಿಕಾರಿಗಳು ಸರ್ಕಾರ ಮೇಲೆ ಒತ್ತಡ ಹಾಕಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಶನಿವಾರ ಟೈ ಹುಬ್ಬಳ್ಳಿ ವತಿಯಿಂದ ಏರ್ಪಡಿಸಿದ್ದ ಟೈಕಾನ್-2026 ಉತ್ತರ ಕರ್ನಾಟಕ ರೈಸಿಂಗ್ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್‌ಗೆ ಸ್ಥಾಪನೆಯಾಗಿದ್ದು, ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಿಸಿದೆ. ಇದರಿಂದ ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಿಲ್ಲ, ಈ ಬಗ್ಗೆ ಸಂಸ್ಥೆಗಳು ಸರ್ಕಾರದ ಗಮನಕ್ಕೆ ತರಬೇಕು ಎಂದರು. ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ ಕಾಮಗಾರಿಗೆ ಶೀಘ್ರದಲ್ಲಿಯೇ ಅನುಮೋದನೆ ದೊರೆಯಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಕೈಗಾರಿಕೋದ್ಯಮಿಗಳಿಗೆ ಬಹಳಷ್ಟು ಸಹಕಾರವಾಗಲಿದೆ. ಇದು ಬಂದರುಗಳಿಗೆ ಸಂಪರ್ಕದ ಕೊಂಡಿಯಾಗಲಿದ್ದು, ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ ವಾಣಿಜ್ಯೋದ್ಯಮಿಗಳಿಗೆ ಕೌಶಲ್ಯ ಬಹಳ ಅವಶ್ಯಕ. ದೇಶದ ಎಲ್ಲ ಕ್ಷೇತ್ರದಲ್ಲಿ ಅವಕಾಶಗಳು ತೆರದು ಕೊಂಡಿವೆ. ಕೃತಕ ಬುದ್ಧಿಮತ್ತೆ(ಎಐ), ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರ ಬೆಳೆದಿವೆ. ದೇಶದಲ್ಲಿ ಮುಂದಿನ ಐದು ವರ್ಷದಲ್ಲಿ ಕೋಟ್ಯಾಂತರ ಉದ್ಯೋಗಸೃಷ್ಟಿಯಾಗಲಿವೆ. ಕೃಷಿಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂದು ತಿಳಿಸಿದರು.

ದೇಶದಲ್ಲಿ 300ಕ್ಕೂ ಹೆಚ್ಚು ಮೊಬೈಲ್ ತಯಾರಿಕಾ ಕಂಪನಿಗಳಿದ್ದು, ವಿಶ್ವಕ್ಕೆ ಶೇ.30ರಷ್ಟು ಮೊಬೈಲ್‌ಗಳನ್ನು ಇಲ್ಲಿಂದ ರಫ್ತು ಮಾಡಲಾಗುತ್ತಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಬೇರೆ ರಾಜ್ಯಗಳಲ್ಲಿ ವಿದ್ಯುತ್ ದರ ಕಡಿಮೆಯಿದ್ದು, ರಾಜ್ಯದಲ್ಲಿ 90 ಪೈಸೆ ಹೆಚ್ಚಿಸಲಾಗಿದೆ. ಇದು ಕೈಗಾರಿಕೋದ್ಯಮಿಗಳಿಗೆ ಹೊರೆಯಾಗಲಿದೆ. ಭಾರತ ಉತ್ಪನ್ನಗಳಿಗೆ ವಿದೇಶದಲ್ಲಿ ಭಾರೀ ಬೇಡಿಕೆ ಇದೆ. ದೇಶದಲ್ಲಿ ವಿಮಾನ ನಿಲ್ದಾಣ, ರೈಲ್ವೆ ಮಾರ್ಗ, ರಸ್ತೆ ಸಂಪರ್ಕ ಮಾಡಿದ್ದರಿಂದ ಅಭಿವೃದ್ಧಿಗೆ ಸಹಕಾರವಾಗಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಟೈ ಇವತ್ತು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. 16 ವರ್ಷ ಹಿಂದೆ 5 ಜನ ಆರಂಭಿಸಿದ್ದೇವು. ಈಗ ಬಹಳ ಹೆಸರುಗಳಿಸಿದೆ. ನವೋದ್ಯಮಿಗಳಿಗೆ ಮಾರ್ಗ ದರ್ಶನ ಮಾಡಲಾಗುತ್ತಿದೆ. ಶಿಕ್ಷಣ ಸೇರಿದಂತೆ ನಾಲ್ಕು ಕ್ಷೇತ್ರದ ಒಳಗೊಂಡು ಮುಂದೆ ನಡೆದಿದೆ. ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವಂತೆ ವಾತಾವರಣ ನಿರ್ಮಾಣವಾಗಿದೆ. ಸ್ವಂತ ಯೋಜನೆ, ಆಲೋಚನೆಯಿಂದ ಅನೇಕರು ಉದ್ಯಮಿಗಳಾಗಿ ಬೆಳೆದಿದ್ದಾರೆ ಎಂದು ಹೇಳಿದರು.

ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಟೈ ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ, ವಿಶಾಲ ನಾಡ ಗೌಡರ, ವಿ.ಎಸ್. ವಿ ಪ್ರಸಾದ, ಅಮೃತ ಕಬಾಡೆ ಇದ್ದರು.

ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ಸೂಚನೆ

ಮಾ.28ರಂದು ಮೇಲುಕೋಟೆ ವೈರಮುಡಿ

ಮಂಡ್ಯ: ಮೇಲುಕೋಟೆಯಲ್ಲಿ ಪ್ರಮುಖ ಆಕರ್ಷಣೆಯಾದ ಮೇಲುಕೋಟೆ ವೈರಮುಡಿ ಉತ್ಸವ ಮಾ. 28ರಂದು ನಡೆಯಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ವಹಿಸುವಂತೆ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾ. 23ರಿಂದ ಏ. 4ರವರೆಗೆ ವೈರಮುಡಿ ಉತ್ಸವ ನಡೆಯಲಿದ್ದು, ಉತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿ ಭದ್ರತೆ ಒದಗಿಸುವಂತೆ ಸೂಚಿಸಿದರು.

ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ



ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯವರು ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆಯ ಸಂದರ್ಭದಲ್ಲಿ ಶಾಂತಿಯುತವಾಗಿ ಹಾಗೂ ಸಮಾಧಾನವಾಗಿ ಜನರು ದೇವರು ನೋಡುವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿ, ಭಕ್ತರಿಗೆ ಕುಡಿಯುವ ನೀರಿನ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ವೈರಮುಡಿ ಉತ್ಸವದಲ್ಲಿ ಜನಸಂದಣಿಯಾಗದಂತೆ ಬ್ಯಾರಿಕೇಡಿಂಗ್ ಅಳವಡಿಸಿ ಸಮಸ್ಯೆ ನಿವಾರಣೆಗೆ ಕ್ರಮ ವಹಿಸಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಭಕ್ತಾದಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಮತ್ತು ಸಂಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಆರೋಗ್ಯ ಸೇವೆಗಳು, ಸಾರಿಗೆ ವ್ಯವಸ್ಥೆ (ಕೆ.ಎಸ್.ಆರ್.ಟಿ.ಸಿ. ಬಸ್‌ಗಳು) ಮತ್ತು ಬಿಗಿ ಪೊಲೀಸ್ ಬಂದೋಬಸ್ತ್‌ಗೆ ಸಭೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪವಿಭಾಗಾಕಾರಿ ಶ್ರೀನಿವಾಸ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಶ್ನೋತ್ತರ ರತ್ನಮಾಲಿಕೆ



• ವಿದ್ವಾನ್ ನರಸಿಂಹ ಭಟ್

ಚಿಂತಾಮಣಿಯಂತೆ ದುರ್ಲಭವಾದುದು ಯಾವುದು?

• ಚತುರ್ಭದ್ರ

ಚಿಂತಾಮಣಿ ಎಂದರೆ ಚಿಂತಿಸಿದ್ದನ್ನು, ಯೋಚಿಸಿದ್ದನ್ನು, ಇಚ್ಛಿಸಿದ್ದನ್ನು ಕೊಡುವ ಒಂದು ರತ್ನವಿಶೇಷ. ಅದೊಂದು ಮಣಿರೂಪದಲ್ಲಿ ಇರುವಂತಹ ವಸ್ತು. ಅತ್ಯಂತ ಅಪರೂಪದ ವಸ್ತು. ಅದನ್ನು ಪಡೆದವನು ಆ ಮಣಿಯ ಸಹಾಯದಿಂದ ಅವನು ಏನನ್ನು ಬೇಕಾದರೂ ಪಡೆಯಬಹುದು. ಈ ಪ್ರಶ್ನೆಯಲ್ಲಿ ಮಣಿಯ ವಿಷಯವನ್ನು ಪ್ರಸ್ತಾಪಿಸಿಲ್ಲ. ಆದರೆ ಚಿಂತಾಮಣಿಯಂತೆ ದುರ್ಲಭವಾದದ್ದು ಯಾವುದು ಎಂಬ ಪ್ರಶ್ನೆ ಇಲ್ಲಿದೆ. ಅದಕ್ಕೆ 'ಚತುರ್ಭದ್ರ' ಎಂಬ ಉತ್ತರವನ್ನು ನೀಡಲಾಗಿದೆ. ಹಾಗಾದರೆ ಚತುರ್ಭದ್ರವು ಹೇಗೆ ಚಿಂತಾಮಣಿಯಾಗಿದೆ ಎಂಬುದನ್ನು ಚಿಂತಿಸಬೇಕಾಗಿದೆ.

ಚತುರ್ಭದ್ರ ಎಂದರೆ ನಾಲ್ಕು ಕಡೆ ಗಟ್ಟಿಯಾಗಿರುವ ಸಂಗತಿ ಎಂದರ್ಥ. ಅಂದರೆ ಒಂದು ವಿಷಯ ಅಥವಾ ಒಂದು ಪದಾರ್ಥ ಅಚಲವಾಗಿ ನೆಲೆ ನಿಲ್ಲಬೇಕಾದರೆ ಅದಕ್ಕೆ ಸುತ್ತಲೂ ರಕ್ಷಣೆ ಅತ್ಯಂತ ಅವಶ್ಯಕ. ಪ್ರಧಾನವಾಗಿ ನಾಲ್ಕು ದಿಕ್ಕುಗಳನ್ನು ಇಟ್ಟುಕೊಂಡು, ಆ ನಾಲ್ಕು ದಿಕ್ಕುಗಳಲ್ಲೂ ಯಾವುದೇ ರೀತಿಯ ಬಾಧೆ ಇಲ್ಲದಿದ್ದರೆ ಅದಕ್ಕೆ 'ಚತುರ್ಭದ್ರ' ಎಂಬುದಾಗಿ ಹೇಳಬಹುದು. ಹಾಗಾದರೆ ಇಲ್ಲಿ ಆ ಚತುರ್ಭದ್ರ ಯಾವುದು ಎಂದರೆ 'ಪುರುಷಾರ್ಥ'. ಪುರುಷಾರ್ಥಗಳನ್ನೇ 'ಚತುರ್ಭದ್ರ' ಎಂಬ ಇನ್ನೊಂದು ಪದದಿಂದ ಬಳಸಲಾಗಿದೆ. ''ಪುರುಷಾರ್ಥವಿದೆ. ಅದಕ್ಕನುಗುಣವಾದ ನಡೆ ನೋಡಿ ನಡೆಸಿದರೆ ಚತುರ್ಭದ್ರಮಯವಾದ ಜೀವನವಾಗುತ್ತದೆ'' ಎಂಬುದಾಗಿ ಶ್ರೀರಂಗ ಮಹಾಗುರುಗಳು ಈ ಪುರುಷಾರ್ಥ ಮತ್ತು ಚತುರ್ಭದ್ರ ಎಂಬ ವಿಷಯವನ್ನು ಹೀಗೆ ಸಮೀಕರಿಸಿದ್ದನ್ನು ನಾವು ಇಲ್ಲಿ ಗಮನಿಸಬೇಕು. ಆ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬುದಾಗಿ. ಒಬ್ಬ ವ್ಯಕ್ತಿ ಪರಿಪೂರ್ಣವಾಗಿ ಯಾವಾಗ ಆಗಬಲ್ಲ ಎಂದರೆ ಯಾವಾಗ ಈ ನಾಲ್ಕು ಪುರುಷಾರ್ಥಗಳನ್ನು ಅವನು ಅನುಭವಿಸಬಲ್ಲನೋ ಆಗ. ಅವನು ಯಾವುದೇ ರೀತಿಯ ಅಪೇಕ್ಷಿತವಾದ ಅಥವಾ ಚಿಂತಿತವಾದ ವಿಷಯವನ್ನು ಕ್ಷಣಾರ್ಧದಲ್ಲಿ ಪಡೆಯಬಲ್ಲ ಎಂದು ತಾತ್ಪರ್ಯ. ಅಂದರೆ ಅವನಿಗೆ ಈ ಪ್ರಪಂಚದ ಪ್ರತಿಯೊಂದು ಪದಾರ್ಥದ ಅರಿವು ಆಗಿರುತ್ತದೆ ಮತ್ತು ಆ ಪದಾರ್ಥಗಳ ಸ್ವಾಮ್ಯವೂ ಅವನದ್ದಾಗಿರುತ್ತದೆ. ಪದಾರ್ಥಗಳನ್ನು ಹೇಗೆ ಬಳಸಿಕೊಳ್ಳಬೇಕು? ಹೇಗೆ ಬಳಸಿಕೊಂಡರೆ ಆ ಪದಾರ್ಥವು ಮತ್ತು ಆ ಪದಾರ್ಥದಿಂದ ವ್ಯಕ್ತಿಗೂ ಒಂದು ಸಾರ್ಥಕತೆ ಎಂಬುದು ಉಂಟಾಗುತ್ತದೆ? ಎಂಬುದನ್ನು ಆತ ಅರಿಯಬಲ್ಲವನಾಗಿರುತ್ತಾನೆ. ಹಾಗಾಗಿ ಅವನಿಗೆ ಈ ನಾಲ್ಕು ಪುರುಷಾರ್ಥಗಳು ಚಿಂತಾಮಣಿಯಂತೆ ಕೆಲಸ ಮಾಡುತ್ತವೆ ಎಂಬುದು ಇದರ ತಾತ್ಪರ್ಯ. ಹಾಗಾದರೆ ಈ ನಾಲ್ಕು ಪುರುಷಾರ್ಥಗಳನ್ನು ಪಡೆಯಬೇಕಾದರೆ ಅವನಿಗೆ ಬೇಕಾದ ಮೂಲಭೂತ ಅವಶ್ಯಕತೆ ಏನು ಎಂಬುದನ್ನು ವಿವೇಕ ಚೂಡಾಮಣಿ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ-''ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ? ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ?'' ಎಂಬುದಾಗಿ. ಅಂದರೆ ಒಬ್ಬ ಮಾನವನಾಗಿ ಹುಟ್ಟಿ, ಅವನಿಗೆ ಮೋಕ್ಷ ಪಡೆಯಬೇಕೆಂಬ ಉತ್ಕಟ ಇಚ್ಛೆಯು ಉಂಟಾಗಿ, ಅದನ್ನು ಪೂರೈಸಲು ಒಬ್ಬ ಮಹಾಪುರುಷನ ಸಂಸರ್ಗ ಉಂಟಾದರೆ ಅವನಿಗೆ ಇನ್ನು ಉಳಿದ ಎಲ್ಲವೂ ಸುಲಭ. ಏಕೆಂದರೆ ಈ ಮೂರು ಸಿಗುವುದು ಅತ್ಯಂತ ದುರ್ಲಭ. ಈ ಮೂರನ್ನು ಪಡೆದವನು ಪುರುಷಾರ್ಥ ಸಂಪತ್ತಿಯನ್ನು ಸುಲಭವಾಗಿ ತನ್ನದಾಗಿಸಿಕೊಳ್ಳುತ್ತಾನೆ. ಅಂದರೆ ಆತ ಚತುರ್ಭದ್ರಮಯವಾದ ಬಾಳಾಟವನ್ನು ಮಾಡಿದಂತೆ ಆಗುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಇದೇ ಅವನಿಗೆ ಚಿಂತಾಮಣಿಯಂತೆ ಆಗುತ್ತದೆ.

ವ್ಯಾಸ ವೀಕ್ಷಿತ



• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ವಿಪ್ರವೇಷದಲ್ಲಿ ಭೇಟಿ

ಕೃಷ್ಣಾರ್ಜುನ-ಭೀಮಸೇನರು ಜರಾಸಂಧ ಸಂಹಾರಕ್ಕಾಗಿ ಆಗಮಿಸುತ್ತಿರುವಲ್ಲಿ ಕೆಲವರು ವೇದಪಾರಂಗತ ಬ್ರಾಹ್ಮಣರು ಕೆಲವು ಅಪಶಕುನಗಳನ್ನು ಕಂಡರು. ಅವನ್ನವರು ಜರಾಸಂಧನ ಗಮನಕ್ಕೆ ತಂದರು. ಅವಕ್ಕೆ ಪ್ರತಿಯಾಗಿ ಆತನ ಪುರೋಹಿತರು ಆತನನ್ನು ಆನೆಯ ಮೇಲೆ ಕೂರಿಸಿ ನಾಲ್ಕೂ ಎಡೆಗಳಲ್ಲಿ ಅಗ್ನಿಜ್ವಾಲನ ಮಾಡಿದರು. ಸಂಭಾವ್ಯವಾದ ಅನಿಷ್ಟಗಳ ಪರಿಹಾರಕ್ಕಾಗಿ ಜರಾಸಂಧ ದೀಕ್ಷಿತನಾಗಿ ವ್ರತಿಯಾದನು, ಉಪವಾಸ ಮಾಡಿದನು.

ಇತ್ತ ಸ್ನಾತಕವ್ರತಸ್ಥರಾಗಿ ಬ್ರಾಹ್ಮಣವೇಷದಲ್ಲಿದ್ದ ಈ ಮೂವರು ಆಯುಧಗಳನ್ನು ತೆಗೆದಿಟ್ಟರು. ಅವರಿಗೋ ಎಷ್ಟಾದರೂ ತಮ್ಮ ಬಾಹುಗಳೇ ಆಯುಧಗಳು! ಜರಾಸಂಧನೊಡನೆ ಯುದ್ಧಾಪೇಕ್ಷಿಗಳಾಗಿ ಅವರು ನಗರಪ್ರವೇಶವನ್ನು ಮಾಡಿದರು. ಆ ನರೋತ್ತಮರಾದ ಕೃಷ್ಣ-ಭೀಮ-ಧನಂಜಯರು ಅಲ್ಲಿಯ ರಾಜಮಾರ್ಗಗಳಲ್ಲಿ ಕಂಡದ್ದೇನು? ಭಕ್ಷ್ಯಾಪಣ-ಮಾಲ್ಯಾಪಣಗಳನ್ನು. ಎಂದರೆ, ಬೇಕಾದ್ದನ್ನು ತಿನ್ನಲು ಅಂಗಡಿಗಳು ಹಾಗೂ ಹೂಮಾಲೆಗಳ ಅಂಗಡಿಗಳು! ಅವುಗಳ ಸಿರಿಯನ್ನೂ, ಸರ್ವಕಾಮಗಳನ್ನೂ ಪೂರೈಸುವ ಅಲ್ಲಿಯ ಸಮೃದ್ಧಿಯನ್ನೂ ಅವರು ಕಂಡುಕೊಂಡರು. ಮಹಾಬಲಶಾಲಿಗಳಾದ ಅವರು ಹೂಕಟ್ಟುವವನೊಬ್ಬನಿಂದ ಮಾಲೆಗಳನ್ನು ಬಲಾತ್ಕಾರವಾಗಿ ಸ್ವೀಕರಿಸಿ ಮಾಲಾಧಾರಿಗಳಾದರು. ಅವರ ವಸ್ತ್ರಗಳೂ ನಾನಾವರ್ಣಗಳಿಂದ ಕೂಡಿದ್ದವು. ಹೊಳೆಯುವ ಕುಂಡಲಗಳನ್ನವರು ಧರಿಸಿದ್ದರು. ಜರಾಸಂಧನ ಅರಮನೆಯನ್ನು ಮುಟ್ಟಿದರು. ಅವರು ನಡೆದು ಬರುತ್ತಿದ್ದ ರೀತಿಯು ಹೇಗಿತ್ತೆಂದರೆ, ಹಸುಗಳು ಎಲ್ಲೆಲ್ಲಿವೆಯೆಂದು ಗೋಶಾಲೆಯನ್ನು ನೋಡಿಕೊಂಡು ನಡೆಯುತ್ತಿರುವ ಹಿಮಾಲಯದ ಸಿಂಹಗಳಂತೆ. ಯುದ್ಧಗಳಲ್ಲಿ ಶೋಭಿಸುವ ಅವರ ತೋಳ್ಗಳು ಮಹಾಗೃಹದ ಕಂಭಗಳಂತೆ ಇದ್ದುವು. ಒಟ್ಟಿನಲ್ಲಿ, ವಿಶಾಲವಕ್ಷಃಸ್ಥಳವುಳ್ಳವರೂ ಆನೆಗಳಂತಿರುವವರೂ ಆದ ಅವರನ್ನು ಕಂಡು ಮಾಗಧರಿಗೆ, ಎಂದರೆ ಮಗಧ ದೇಶದ ಪ್ರಜೆಗಳಿಗೆ, ವಿಸ್ಮಯವೇ ಉಂಟಾಯಿತು.ಜನಗಳು ಕಿಕ್ಕಿರಿದಿದ್ದ ಅಲ್ಲಿಯ ಮೂರು ಕಕ್ಷ್ಯಗಳನ್ನು ದಾಟಿದರು ಆ ಮೂವರು ಮಹಾಪುರುಷರು. ನಿರ್ಭಯರಾಗಿದ್ದ ಅವರು ಅಭಿಮಾನಿಗಳಾಗಿಯೇ ಜರಾಸಂಧನನ್ನು ಸಮೀಪಿಸಿದರು. ಜರಾಸಂಧನೂ ಅವರನ್ನು ಆದರದೊಂದಿಗೇ ಸತ್ಕರಿಸಿದನು. ಪಾದ್ಯ-ಮಧುಪರ್ಕಗಳಿಗೆ, ಗೋದಾನಕ್ಕೆ, ಅರ್ಹರಾದವರು ಅವರು. ಪ್ರತ್ಯುತ್ಥಾನ ಮಾಡಿ, ಎಂದರೆ ತಾನೇ ಎದ್ದು ಬಂದವನಾಗಿ, ಅವರಿಗೆ ವಿಧ್ಯನುಸಾರವಾದ ಆತಿಥ್ಯವನ್ನು ಸಲ್ಲಿಸಿದನು ಜರಾಸಂಧ. ತಮಗೆ ಸ್ವಾಗತ ಎಂದನು. ಆದರೆ ಭೀಮಾರ್ಜುನರು ಮೌನದಿಂದಿದ್ದರು. ಅವರಲ್ಲಿ ಕೃಷ್ಣನೇ ಎಷ್ಟಾದರೂ ಮಹಾಬುದ್ಧಿಶಾಲಿಯಲ್ಲವೇ? ಆತನೇ ಮಾತನಾಡಿದನು. ''ರಾಜಶ್ರೇಷ್ಠನೇ, ಇವರಿಬ್ಬರೂ ನಿಯಮದಲ್ಲಿರುವವರು, ಎಂದರೆ ಮೌನವ್ರತದಲ್ಲಿರತಕ್ಕವರು. ಮಧ್ಯರಾತ್ರಿಯು ಕಳೆದ ನಂತರವೇ ನಿನ್ನೊಡನೆ ಇವರು ಮಾತನಾಡತಕ್ಕವರು'' ಎಂದನು. ತದನುಸಾರ ಯಜ್ಞಗೃಹದಲ್ಲುಳಿದುಕೊಳ್ಳಲು ಅವರಿಗೊಂದು ವ್ಯವಸ್ಥೆ ಮಾಡಿ ತನ್ನ ಅಂತಃಪುರಕ್ಕೆ ತೆರಳಿದನು. ಅರ್ಧರಾತ್ರವು ಕಳೆಯಲು, ಆ ದ್ವಿಜರಿದ್ದೆಡೆಗೆ ತೆರಳಿದನು. ಆ ರಾಜನ ಈ ವ್ರತವು ಜಗದ್ ವಿಶ್ರುತವಾಗಿದ್ದಿತು. ಏನೆಂದರೆ, ಸ್ನಾತಕಬ್ರಾಹ್ಮಣರು ಬಂದರೆಂದರೆ ಅದು ಅರ್ಧರಾತ್ರವೇ ಆಗಿದ್ದರೂ ಸಹ ಅವರನ್ನು ತಾನೇ ಎದುರ್ಗೊಂಡು ಸ್ವಾಗತಿಸುತ್ತಿದ್ದನು. ಬಂದಿದ್ದವರ ವೇಷವೇ ಅಪೂರ್ವವಾಗಿದ್ದರಿಂದ, ಜರಾಸಂಧನು ವಿಸ್ಮಯದಿಂದಲೇ ಅವರ ಬಳಿ ಸಾರಿದನು. ಆತನನ್ನು ಕಾಣುತ್ತಲೇ, ಸ್ವಸ್ತ್ಯಸ್ತು, ನಿನಗೆ ಕಲ್ಯಾಣವಾಗಲಿ ಎಂದು ಅವರೆಂದರು. ಪರಸ್ಪರ ಮುಖ ನೋಡಿಕೊಂಡರು. ಬ್ರಾಹ್ಮಣವೇಷದಲ್ಲಿದ್ದ ಆ ಪಾಂಡವ-ಯಾದವರಿಗೆ ಕುಳಿತುಕೊಳ್ಳಿ ಎಂದು ಹೇಳಿದನು.

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com



''ಸುಮ್ಮನೆ ಇರಾಣಂದ್ರೆ ಇರಾಕ್ ಬಿಡಾಕಿಲ್ಲ'' ಎಂದಿದ್ದರು ವೈಎನ್ಕೆ. ಈಗ ಇರಾಕ್ ಯಾವುದಕ್ಕೂ ಬರಾಕ್ ಇಲ್ಲ. ಆದರೆ ಬರಾಕ್ (ಒಬಾಮಾ) ಇದ್ದ ಜಾಗಕ್ಕೆ ಬಂದವನು ಇಡೀ ಪ್ರಪಂಚವೇ ಸುಮ್ಮನೆ ಇರಾಕ್ ಬಿಡಾಕಿಲ್ಲ! ಒಂದು ಕಾಲದಲ್ಲಿ ಇದ್ದ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರಂತೆ'' ಎಂಬ ಗಾದೆಯನ್ನು ಈಗ ''ಬಾವಿಗೆ ಬೆಂಕಿ ಬಿದ್ದಾಗ ಗಡ್ಡ ಕೆರ್ಕೊಂಡ್ರಂತೆ'' ಎಂದು ಬದಲಾಯಿಸಿದ್ದಾರಂತೆ. ಕೊಲ್ಲಿ ರಾಷ್ಟ್ರಗಳ (ಶಾಂತಿಯುತ ದೇಶಗಳನ್ನು 'ಕೊಲ್ಲದಿರಿ ರಾಷ್ಟ್ರಗಳು' ಎನ್ನಬಹುದೆ?) ತೈಲಕೂಪಗಳಿಗೆ ಬೆಂಕಿ ಬಿದ್ದ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಗ್ಯಾಸ್ ಟ್ರಬಲ್ ಶುರುವಾಗಿದೆ. ಎಲ್‌ಪಿಜಿ ಸಿಲಿಂಡರ್ ದೊರಕುವುದು ನಿಧಾನವಾಗುವುದೆಂಬ ಸುದ್ದಿಯನ್ನು ಕೊಳಕ್ಕೀಡಿಯಾ.ಕಾಮ್ ರಾಸಭ ಕಂಠಕ್ಕೆ ಲೌಡ್‌ಸ್ಪೀಕರ್ ಅಳವಡಿಸಿಕೊಂಡು ಅರಚುತ್ತಿದೆ. 'ದಿನಾ ಬಾಯ್ಬಡ್ಕೊಳೋವ್ನು ಕಾಮನಹಬ್ಬ ಬಂದಾಗ ಸುಮ್ಮನಿರ್ತಾನೆಯೇ?' ಎಂಬಂತೆಯೇ ಜಾಲತಾಣಗಳು ಸಿಕ್ಕಸಿಕ್ಕವರ ಜನ್ಮ ಜಾಲಾಡುವ ತಾಣಗಳಾಗಿ ಬದಲಾಗಿವೆ.

''ಹೋಟೇಲಲ್ಲಿ ತಿಂದೂ ತಿಂದೂ ಗ್ಯಾಸ್ ಟ್ರಬಲ್ ಆಗ್ತಿತ್ತು. ಹೋಟೇಲಿಗೇ ಗ್ಯಾಸ್ ಟ್ರಬಲ್ ಶುರುವಾಗಿರೋದ್ರಿಂದ ಸಲಾಡ್ ತಿಂದು ಸಾಲಿಡ್ ಹೆಲ್ತ್ ಪಡೆಯಬಹುದು'' ಎಂದಿತು ಬಿಪಾಸಿಟಿವ್.ಎವರ್‌ನ ಟ್ವೀಟ್.

'ಸಿಲಿಂಡರ್ ಪ್ರಾಬ್ಲಂ ಅಂತೆ. ನನಗೂ ಸಿಲಿಂಡ್ರಿಕಲ್ ವಿಷನ್ನಿನದೇ ಪ್ರಾಬ್ಲಮ್ಮು. ಕ್ಯಾನ್ ಎನಿಬಡಿ ಸಜೆಸ್ಟ್ ಎ ಗುಡ್ ನೇತ್ರವೈದ್ಯ?'' ಎಂದಿತು ಬ್ಲೈಂಡ್.ಡೇಟ್.ಆರ್ಗ್.

''ಎಲ್‌ಪಿಜಿ ಶುರುವಾಗಿದ್ದೇ 1991ರಲ್ಲಿ. ಮೂವತ್ತೈದು ವರ್ಷಗಳು ತೊಂದರೆಯಿಲ್ಲದೆ ನಡೆಯಿತಲ್ಲ, ಅದೇ ಸಂತೋಷ'' ಎಂದು ಟ್ವೀಟಿಸಿತು ಮನ್ಮೋಹನ್.ಸಿಸ್ಯ.ನೆಟ್

''ಎಲ್‌ಪಿಜಿ ಸಿಲಿಂಡರ್‌ಗಳು ಅದಕ್ಕೂ ಮುಂಚೆ ಇದ್ದವು ಸಿಸ್ಯಾ'' ಎಂದು ಕೆಣಕಿತು ಗುರು.ಟ್ವೀಟ್

''ಓಹ್! ಸಿಲಿಂಡರ್ ಬಾಬ್ತೋ? ನಾನು ಲಿಬರಲೈಸೇಷನ್, ಪ್ರೈವೆಟೈಸೇಷನ್, ಗ್ಲೋಬಲೈಸೇಷನ್ ಎಲ್‌ಪಿಜಿ ಎಂದುಕೊಂಡೆ.'' ಮೊದ್ದ ಸ್ಮೈಲಿಯನ್ನು ಲಗತ್ತಿಸಿದ ಸಿಸ್ಯ.

''ಆಕ್ಚುಯಲಿ, ಗ್ಯಾಸ್ ಟ್ರಬಲ್ ಹೊಸದೇನಲ್ಲ. ಐದು ದಶಕಗಳ ಹಿಂದೆಯೇ ಆಗಾಗ್ಗೆ ದೊಂಬಿ ನಡೆಯುತ್ತಿತ್ತು'' ಎಂದಿತು ಓಲ್ಡೀ.ಏನ್ಷಿಯೆಂಟ್‌ನ ಟ್ವೀಟ್.

''ದೊಂಬಿ? ಎಂತಹ ದೊಂಬಿ?'' ಕೇಳಿತು ಕ್ಯೂರಿಯಸ್.ಕ್ಯಾಟ್

''ಕಲ್ಲುತೂರಾಟ, ಡೌನ್ ಡೌನ್ ಪ್ರಿನ್ಸಿಪಾಲ್, ಬಸ್ ಸುಡುವಿಕೆ... ಜನರಲಿ ದೊಂಬಿ.''

''ಸಿಲಿಂಡರ್ ಸಿಗುವುದು ನಿಧಾನವೆಂದು ಬಸ್ ಸುಟ್ಟರೆ?''

''ಓಹ್! ಯೂ ಮೀನ್ ಗ್ಯಾಸ್ ಸಿಲಿಂಡರ್! ನಾನೆಲ್ಲೋ ನೀವು ಗವರ್ನ್‌ಮೆಂಟ್ ಆರ್ಟ್ಸ್ & ಸೈನ್ಸ್ ಕಾಲೇಜಿನ ಬಗ್ಗೆ ಹೇಳ್ತಿದ್ದೀರಿ ಅನ್ಕೊಂಡಿದ್ದೆ. ಒಂದು ಕಾಲದಲ್ಲಿ ರೌಡಿಗಳೇ ಹೆಚ್ಚಾಗಿದ್ದ ಆ ಕಾಲೇಜನ್ನ ಗ್ಯಾಸ್ ಕಾಲೇಜ್ ಅಂತಾನೇ ಕರೀತಿದ್ದದ್ದು'' ವಿವರಿಸಿತು ಓಲ್ಡೀ. ಏತನ್ಮಧ್ಯೆ ''ಗ್ಯಾಸ್ ಟ್ರಬಲ್? ಈನೋ ಸೇವಿಸಿ'' ಎಂಬ ಜಾಹೀರಾತು ಟ್ರಾಫಿಕ್ ಜ್ಯಾಮ್ ಮಧ್ಯದಲ್ಲಿ ತೂರುವ ಆಟೋದಂತೆ ಆಗಾಗ್ಗೆ ಮೂಡಿ ಹೋಯಿತು.

''ಸಿಲಿಂಡರ್‌ಗಳಿಗೆ ಬರವಿಲ್ಲ. ನಮ್ಮ ಗೋಡೌನ್ ಭರ್ತಿ ಸ್ಟಾಕ್ ಇದೆ'' ಎಂದಿತು ಸರ್ಕಾರದ ಟ್ವೀಟ್. ''ಸರ್ಕಾರ ನಿಜ ಹೇಳುತ್ತಿದೆ'' ಎಂದಿತು ವಿಪಕ್ಷದ ಟ್ವೀಟ್. ಕೂಡಲೆ ಸರ್ಕಾರವು ಒಂದು ಏಕವ್ಯಕ್ತಿಯ ಆಯೋಗವನ್ನು ರಚಿಸಿ 'ವಿಪಕ್ಷವು ಆಡಳಿತಪಕ್ಷವು ಹೇಳಿದುದನ್ನು ಒಪ್ಪಿದೆಯೆಂದರೆ ನಮ್ಮದೋ, ಅದರದೋ ದೋಷವಿದೆ. ಕೂಲಂಕಷವಾಗಿ ತನಿಖೆ ನಡೆಸಿ ವರದಿಯನ್ನು ಕೂಡಲೆ ಒಪ್ಪಿಸಿ' ಎಂದು ಒಳಗೊಳಗೇ ಟ್ವೀಟಿಸಿತೆಂದು ಏನೇನೂ ಅರಿಯದ, ಆದರೆ 'ಬಲ್ಲ ಮೂಲಗಳು' ಎಂಬ ಬ್ಲಾಗ್ ತಿಳಿಸಿದೆ. ''ಆದರೆ ಕೆಲವೇ ನಿಮಿಷಗಳಲ್ಲಿ ವಿಪಕ್ಷವೇ ಇನ್ನೊಂದು ಪೋಸ್ಟ್ ಹಾಕಿದ್ದರಿಂದ ತನಿಖೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ'' ಎಂದೂ ಅದೇ ಬ್ಲಾಗ್ ತಿಳಿಸಿದೆ.

''ಸರ್ಕಾರವು ನಿಜ ಹೇಳಿದೆ. ಗೋಡೌನಿನಲ್ಲಿ ಸಿಲಿಂಡರ್‌ಗಳು ಇವೆ. ಆದರೆ ಅವೆಲ್ಲವೂ ಖಾಲಿ ಇವೆ'' ಎಂಬುದೇ ವಿಪಕ್ಷದ ಮುಂದುವರಿದ ಟ್ವೀಟ್ ಅಂತೆ. ಈ ಟ್ವಿಟರಾಟಿ ಇಷ್ಟಕ್ಕೇ ನಿಂತಿಲ್ಲ. ಇದೋ ಮುಂದಿನ ಟ್ವೀಟುಗಳು:

''ಸಿಲಿಂಡರ್ ಖಾಲಿ ಇಲ್ಲ'' ಸರ್ಕಾರದ ಟ್ವೀಟ್

''ಅಂದರೆ ನಿಮ್ಮ ತಲೆ ಖಾಲಿ ಇದೆ ಎಂದೋ?'' ವಿಪಕ್ಷದ ಟ್ವೀಟ್.

''ನಮ್ಮಲ್ಲಿ ಗ್ಯಾಸ್ ಟ್ರಬಲ್ಲೇ ಇಲ್ಲ.''

''ಮೂರು ಹೊತ್ತೂ ತಿಂದವರಿಗೆ ಗ್ಯಾಸ್ ಟ್ರಬಲ್ ಇರಲ್ಲ. ಹೊಟ್ಟೆಯನ್ನ ಖಾಲಿ ಬಿಟ್ಟುಕೊಂಡವರಿಗಷ್ಟೇ ಆ ತೊಂದರೆಯ ಪರಿಚಯ ಇರುತ್ತದೆ.''

''ನಾವು ಹೇಳಿದ್ದು ಸಿಲಿಂಡರ್ ತೊಂದರೆ ಇಲ್ಲವೆಂದು!''

''ತೊಂದರೆ ಇರುವುದು ಸಿಲ್ಲಿ ಲೀಡರ್‌ದು!''

ಇವೆಲ್ಲ ಪರಪಂಚದ ಗ್ಯಾಸ್ ಟ್ರಬಲ್ ಆದರೆ ನನ್ನದೇ ಆದ ಗ್ಯಾಸ್ ಟ್ರಬಲ್ ಉದ್ಭವಿಸುವುದರಲ್ಲಿತ್ತು. ಟ್ವಿಟರಾಟಿಯ ಗಲಭೆಯಲ್ಲಿ ತಲೆಯನ್ನು ಹುದುಗಿಸಿದ್ದವನನ್ನು ಮಡದಿಯ ಫೋನ್ ಕರೆ ಸೆಳೆಯಿತು.

''ವಾಟ್ ಈಸ್ ದ ಸ್ಟೋರಿ?''

''ಗ್ಯಾಸ್ ಟ್ರಬಲ್!''

''ಯಾವ ಬಾಬ್ತು?''

''ಸಿಲಿಂಡರ್‌ದು. ಗೇಟಲ್ಲಿ ವಾಚ್‌ಮನ್ ಹತ್ರ ಇಟ್ಟೋಗಿದ್ದಾನೆ. 'ತುಂಬಾ ಡೆಲಿವರಿಗಳು ಇವೆ. ಪ್ಲೀಸ್ ಕೋಆಪರೇಟ್' ಅಂತ್ಹೇಳಿ 'ಈ ನಂಬರಿಗೆ ಟಿಪ್ಸ್ ಕಳಿಸಿ' ಅಂತ ನಂಬರ್ ಕಳಿಸಿದ್ದಾನೆ ಡೆಲಿವರಿ ಬಾಯ್. ನಿಮಗೆ ನಂಬರ್ ಫಾರ್ವರ್ಡ್ ಮಾಡಿದ್ದೇನೆ'' ಎನ್ನುತ್ತಾ ಫೋನಿಟ್ಟಳು ಮಡದಿ.

ನಮ್ಮ ಅಪಾರ್ಟ್‌ಮೆಂಟಿನ ವಾಚ್‌ಮನ್ ನಿಜಕ್ಕೂ ಕಾಯುತ್ತಿರುವುದು ಯಮನನ್ನು ಮಾತ್ರ ಎಂಬುದು ನನ್ನ ದೃಢವಾದ ನಂಬಿಕೆ. ಬಾವಲಿಯ ಬೆಳಗಿನ ದೃಷ್ಟಿ, ಜೇಡದ ಶ್ರವಣಶಕ್ತಿ, ಆಮೆಯ ನಡಿಗೆಯ ಈತನನ್ನು ಗಾಂಧೀಜಿಯೇ 'ಕೈಸೇ ಹೋ ಅಂಕಲ್?' ಎಂದು ವಿಚಾರಿಸಿಕೊಂಡಿದ್ದರಂತೆ. ಅವನನ್ನು ಹೊರಲು ಜನರು ಬೇಕಾಗಿರುವ ಪರಿಸ್ಥಿತಿಯಲ್ಲಿರುವವನನ್ನು ಸಿಲಿಂಡರ್ ಹೊರು ಎನ್ನಲಾದೀತೇ! ನಾನೇ ಹೋದೆ. ಬೆಂಗಳೂರಿನ ರಸ್ತೆಗಳ ತದ್ರೂಪವಾಗಿರುವ ನಮ್ಮ ಅಪಾರ್ಟ್‌ಮೆಂಟಿನ ಬೇಸ್‌ಮೆಂಟಿನಲ್ಲಿ ಹಳ್ಳಗಳನ್ನು ಹಾರಿಸಿ, ಗುಡ್ಡಗಳಿಗೆ ಥೀ ಕೊಟ್ಟು ಪುಡಿಯಾಗಿಸಿ, ಸಿಲಿಂಡರನ್ನು ಲಿಫ್ಟಿಗೆ ವರ್ಗಾಯಿಸಿ ಫ್ಲಾಟಿಗೆ ತಂದೆ. ''ಗ್ಯಾಸ್ ಮುಗಿದಿತ್ತು. ಸಿಲಿಂಡರ್ ಚೇಂಜ್ ಮಾಡಿ ಪುಟ್ಟಿ ಬರುವಷ್ಟರಲ್ಲಿ ಅನ್ನಕ್ಕಿಡಿ'' ಎಂದಿತು ವಾಟ್ಸ್‌ಆಪ್.

ಸಿಲಿಂಡರ್‌ಗಳಿಗೆ ಮುತ್ತೈದೆಯ ಲಕ್ಷಣಗಳಿರುತ್ತವೆ. ಮೈಭರ್ತಿ ಕುಂಕುಮದ ಬಣ್ಣವಿರುವ ಇವಕ್ಕೆ ಕುತ್ತಿಗೆಯಲ್ಲಿ ಅರಿಶಿನದ ದಾರದ ಬದಲಿಗೆ ಬಿಳಿಯ ಬಣ್ಣದ ದಾರವೊಂದಿರುತ್ತದೆ. ವಿವಾಹಿತಳ ಅರಿಶಿನದ ದಾರವಾದರೂ ಸುಲಭವಾಗಿ ತುಂಡಾದೀತು, ಆದರೆ ಸಿಲಿಂಡರ್‌ನ ದಾರವು 'ಎಳೆದರಾಗಲಿ, ಅಲುಗಿಸಿದರಾಗಲಿ, ದಾರವನ್ನು ಹಿಡಿದೇ ಸಿಲಿಂಡರನ್ನು ಎತ್ತಿಹಿಡಿದರಾಗಲಿ, ನಾತಿಚರಾಮಿ' ಎಂಬಂತೆ ಭದ್ರವಾಗಿನೇತಾಡುತ್ತಿರುತ್ತದೆ. ಆ 'ತಾಳಿದಾರ'ವನ್ನು ಸಿಲಿಂಡರಿನ ಕೊರಳಿನಿಂದ ಬೇರ್ಪಡಿಸುವ ವಿಚ್ಛೇದನ ವಕೀಲನ ಕೆಲಸವನ್ನು ಮಾಡದಿದ್ದರೆ ಗ್ಯಾಸ್ ಹೊರಬರದೆ ಇಡೀ ಕಿಚನ್ 'ಗ್ಯಾಸ್ ಟ್ರಬಲ್'ನಿಂದ ನರಳುತ್ತದೆ.

ಹಳೆಯ ಸಿಲಿಂಡರಿನಿಂದ ಸರಬರಾಜುಮೂತಿಯನ್ನು ಹೊರಸೆಳೆದು ಹೊಸ ಸಿಲಿಂಡರಿಗೆ ಹೊಂದಿಸುವ ಮುನ್ನ ಸಿಲಿಂಡರಿನ 'ತಾಳಿದಾರ'ವನ್ನು ತೆಗೆಯಲು ಉದ್ಯುಕ್ತನಾದೆ. ಭೂಮಿಗೆ ಸಮಾನಾಂತರವಾಗಿ ದಾರವನ್ನು ಸೆಳೆದು ಹಿಡಿದು ಎಡಕ್ಕೆ ಬಲವಾಗಿ ಜಗ್ಗಿದೆ. ಊಹೂಂ. ದುಂಬಿ ಕೊರೆದರೂ ತೊಡೆಯಲುಗಿಸದ ಕರ್ಣನಂತೆ ದಾರವು ಯಥಾಸ್ಥಿತಿಯಲ್ಲಿತ್ತು.

ಎಡಕ್ಕೆ ಜಗ್ಗಿದೆ. ಅದು ಕಾರ್ಲ್ ಮಾರ್ಕ್ಸ್‌ನ ಅನುಯಾಯಿ ಅಲ್ಲವೆಂದು ದೃಢವಾಯಿತು. ದಾರವನ್ನು ಮುಷ್ಟಿಯಲ್ಲಿ ಹಿಡಿದು ಅನಾಮತ್ತಾಗಿ ಸಿಲಿಂಡರನ್ನು ಎತ್ತಿದೆ. ದಾರವು ಸ್ಥಿತಿಸ್ಥಾಪಕತ್ವವನ್ನು ಕಾಪಾಡಿಕೊಂಡಿತು. ಚಿಂತಾಕ್ರಾಂತನಾದೆ. ಕ್ಲಾಂತನಾದೆ. ಟ್ವಿಟರ್‌ನಲ್ಲಿ ಕಾಣಿಸಿಕೊಂಡ ಗ್ಯಾಸ್ ಟ್ರಬಲ್ ನನ್ನನ್ನೇನೂ ಕಾಡಿರಲಿಲ್ಲ. ಮೊನ್ನೆ ಬುಕ್ ಮಾಡಿದ್ದೆ, ಇವತ್ತು ಅನ್ನಕ್ಕಿಡಬೇಕಾದ ಸಮಯಕ್ಕೆ ಸರಿಯಾಗಿ ಸಿಲಿಂಡರ್ ಬಂದಿತ್ತು. ಆದರೆ ದಾರ?

'ಸಂಸ್ಕೃತದಲ್ಲಿ ಹೆಂಡತಿಯನ್ನು ದಾರಾ ಎಂದು ಕರೆಯುತ್ತಾರೆ'' ಎಂಬ ಮಾತು ನೆನಪಾಯಿತು. ಈ ದಾರದ ಸಮಸ್ಯೆ ಬಗೆಹರಿಯದಿದ್ದರೆ ಆ ದಾರಾ ಸಮಸ್ಯೆ ಆಗುವ ಸಂಭವವಿದೆ ಎಂದು ಮನ ಭವಿಷ್ಯ ನುಡಿಯಿತು. ಹೇಗಾದರೂ ದಾರವನ್ನು ಮಣಿಸಿ ದಾರಾಳನ್ನು ಮೆಚ್ಚಿಸಬೇಕೆಂದು ನಿರ್ಧರಿಸಿ ಮಡದಿ ಫಾರ್ವರ್ಡಿಸಿದ್ದ ನಂಬರಿಗೆ ಫೋನ್ ಮಾಡಿ, ವಿಷಯವನ್ನು ತಿಳಿಸಿ, ಗೋಗರೆದೆ. ಗೋರ್ಕಲ್ಲಿನ ಮೇಲಿನ ಮಳೆಯ ನೆನಪಾಯಿತು. ಪರಿಣಾಮವೂ ಡಿಟೋ.

ಬಾಗಿಲ ಬಳಿ ನೆರಳಾಡಿತು. ತಲೆಯೆತ್ತಿದೆ. 'ಕೈಸೇ ಹೋ ಅಂಕಲ್' ಅನ್ನಿಸಿಕೊಂಡವ ನಿಂತಿದ್ದ.

'ಅಮ್ಮ ಫೋನ್ ಮಾಡಿದ್ದರು'' ಎಂದ. ಅವರ ಅಮ್ಮ ಇದ್ದ ಸಮಯದಲ್ಲಿ ಗ್ರಹಂ ಬೆಲ್ ಹುಟ್ಟಿದ್ದನೋ ಇಲ್ಲವೋ ಎಂಬ ಆಲೋಚನೆಯೊಂದು ಸುಳಿದು ಕಷ್ಟದಲ್ಲಿಯೂ ನಗೆಯ ಸುಳಿಗಾಳಿ ಸುಳಿಯಿತು.

''ಸಿಲಿಂಡರ್‌ನ ದಾರ ತೆಗೆಯಕ್ಕೆ ಅಪ್ಪೋರಿಗೆ ಬರಲ್ಲ, ತಕ್ಕೊಡು ಅಂದ್ರು ಅಮ್ಮ.'' ನನಗೇ ಮಣಿಯದ ಆದಾನವದಾರವು ಗೋರಿಗೆ ಎರಡು ಹೆಜ್ಜೆ ದೂರ ಇವನಿಗೆ ಸಗ್ಗುವುದೇನು? ವಾಚ್‌ಮನ್ ನೇರವಾಗಿ ಸಿಲಿಂಡರ್ ಬಳಿ ಹೋದ. ಒಂದೇ ಒಂದು ಕ್ಷಣದಲ್ಲಿ 'ತಾಳಿದಾರ'ವನ್ನು ಸಿಲಿಂಡರಿನ ಕುತ್ತಿಗೆಯಿಂದ ಬೇರ್ಪಡಿಸಿ, ಸರಬರಾಜುಮೂತಿಯನ್ನು ತಗುಲಿಸಿ ಹೊರನಡೆದ.

ಮನೆಯ ಗ್ಯಾಸ್ ಟ್ರಬಲ್ ಸಾಲ್ವ್ ಆಯಿತು. ಪ್ರಪಂಚದ್ದು?

ಸದ್ಯದಲ್ಲೇ ಪ್ರಪಂಚದ ಎಲ್ಲ ತೊಂದರೆಗಳಿಗೂ ಪರಿಹಾರವನ್ನು ಹೊಂದಿರುವ 'ಯುದ್ಧಪ್ರೇಮಿ ಶಾಂತಿದೂತ' ಟ್ರಂಪ್ ಎಲ್ಲರ ಮನೆಗೂ ಸಿಲಿಂಡರ್ ಕಳುಹಿಸುವನಂತೆ. ನೀವು ಮಾಡಬೇಕಾದುದಿಷ್ಟೆ.

ಕೂಡಲೆ ನಿಮ್ಮ ಕನ್ಸ್ಯೂಮರ್ ನಂಬರನ್ನು ವೈಟ್‌ಹೌಸಿಗೆ ವಾಟ್ಸಪ್ ಮಾಡಿ!

ಆರ್ಷಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದ ಬನ್ನಂಜೆ

• ಗ.ನಾ. ಭಟ್ಟ

ಸಂಸ್ಕೃತವಾಙ್ಮಯದಲ್ಲಿ ಭರತಭೂಮಿಯ ಕೀರ್ತಿ ಎರಡು ಮಹಾಕಾವ್ಯಗಳಿಂದ ಅಮರವಾಗಿ ಅತ್ಯುನ್ನತವಾಗಿ ಬೆಳಗುತ್ತಿದೆ. ವೇದಗಳ ನಂತರ ರಾಮಾಯಣ ಮತ್ತು ಮಹಾಭಾರತಗಳು ಪರಮಪೂಜ್ಯ, ಜೀವನಾದರ್ಶ ಗ್ರಂಥಗಳಾಗಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲಿ ನೆಲೆಗೊಂಡಿವೆ. ಈ ಎರಡರಲ್ಲಿ ರಾಮಾಯಣವು ಹಿಮಾಲಯ ಪರ್ವತದಂತೆ ಅತ್ಯಂತ ರಮಣೀಯವೂ, ಗಗನಚುಂಬಿಯೂ ಆಗಿದ್ದರೆ ಮಹಾಭಾರತವು ಸಮುದ್ರದಂತೆ ವಿಸ್ತಾರವಾಗಿ ಪ್ರಕ್ಷುಬ್ಧವಾಗಿ ಜೀವನದ ತೊಡಕಿನ ಪ್ರಸಂಗಗಳನ್ನು ತೋರಿಸುತ್ತಾ ಮಾರ್ಗಜ್ಯೋತಿಯಾಗಿ ಕಂಗೊಳಿಸುತ್ತಿದೆ. ಮನುಷ್ಯಜೀವನದ ಅರ್ಥವೇನು? ಧರ್ಮವೇನು? ಸಾರಭೂತವಾದ ಗುಣಗಳೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ರಾಮಾಯಣ, ಮಹಾಭಾರತಗಳಿಂದ ನಾವು ಉತ್ತರಗಳನ್ನು ಕಂಡುಕೊಳ್ಳಬಹುದು.

ಆದರೂ ಅವು ಒಮ್ಮೊಮ್ಮೆ ನಮಗೆ ಎಟುಕುವುದಿಲ್ಲ. ಅದರ ಒಳಮರ್ಮವನ್ನು, ಸಂದೇಶ-ಆದರ್ಶಗಳನ್ನು, ಧರ್ಮಾಧರ್ಮಗಳನ್ನು, ಒಳಿತು-ಕೆಡುಕುಗಳನ್ನು ತೋರಿಸಿಕೊಡುವುದಕ್ಕೆ ಖಂಡಿತಕ್ಕೂ ಒಬ್ಬ ಗುರು ಬೇಕಾಗುತ್ತಾನೆ. ಅಂತಹ ಗುರುಗಳಲ್ಲಿ ಒಬ್ಬರು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯರು, ಇನ್ನೊಬ್ಬರು ವಾಲ್ಮೀಕಿ-ವ್ಯಾಸಹೃದಯಜ್ಞ ಎಂದೇ ಖ್ಯಾತರಾದ ಡಾ. ಕೆ.ಎಸ್.ನಾರಾಯಣಾಚಾರ್ಯರು. ಇವರಿಬ್ಬರೂ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ರಚಿಸಿದ ಕೃತಿಗಳು, ಮಾಡಿದ ಪ್ರವಚನಗಳು ನಮ್ಮೊಂದಿಗೆ ಇವೆ. ರಾಮಾಯಣ-ಭಾರತದ ಒಳಬಗೆ- ಗುಟ್ಟು-ಸ್ವಾರಸ್ಯಗಳನ್ನು ತಿಳಿಯುವುದಕ್ಕೆ ಇಬ್ಬರೂ ಒಂದೊಂದು ಮಾರ್ಗವನ್ನು ಅನುಸರಿಸಿದರು. ಕೆ.ಎಸ್.ನಾರಾಯಣಾಚಾರ್ಯರು ಐರೋಪ್ಯ ಸಾಹಿತ್ಯ ಕೃಷಿಯ ವಿಮರ್ಶಾ ಮಾನದಂಡವನ್ನೂ, ಭಾರತೀಯ ವ್ಯಾಖ್ಯಾನ ಪರಂಪರೆಯನ್ನೂ, ಇಲ್ಲಿಯ ಕಾವ್ಯಮೀಮಾಂಸೆಯ ಅಳತೆಗೋಲನ್ನೂ ಇಟ್ಟುಕೊಂಡು ಈ ಮಹಾಕಾವ್ಯಗಳ ಅಂತರಂಗವನ್ನು ಮೊಗೆದು ಮೊಗೆದು ಕೊಟ್ಟರು. ಬನ್ನಂಜೆಯವರು ಇಲ್ಲಿಯ ಮಹಾಕಾವ್ಯಗಳ ಉಪಕ್ರಮ-ಉಪಸಂಹಾರಗಳಿಂದಲೇ, ಅದರ ಪೂರ್ವೋತ್ತರ ಸಮನ್ವಯದಿಂದಲೇ ಅವುಗಳ ಅಂತರಂಗವನ್ನು ಬಿಡಿಸಿ ಬಿಡಿಸಿ ಕಾವ್ಯರಸಿಕರಿಗೆ ಉಣಬಡಿಸಿದರು.

ಪೂರ್ವೋತ್ತರಾವಿರೋಧೇನ ಕೋತ್ರಾರ್ಥೋಭಿಮತೋ ಭವೇತ್ ।
ಇತ್ಯಾದ್ಯಮೂಹನಂ ತರ್ಕಃ ಶುಷ್ಕತರ್ಕಂ ತು ವರ್ಜಯೇತ್ ॥

ಎಂಬ ಮಾನದಂಡವನ್ನಿಟ್ಟುಕೊಂಡು ಮಹಾಕಾವ್ಯಗಳ ಅಂತರಂಗಕ್ಕೆ ಹೊಸ್ಪರ್ಶವನ್ನು ನೀಡಿದರು. ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿದರು.

ಬನ್ನಂಜೆ ಗೋವಿಂದಾಚಾರ್ಯರು ಈ ನಾಡಿನ ಭಾಗ್ಯ. ಎಲ್ಲಿ ಬೇಕೆಂದರೆ ಅಲ್ಲಿ, ಯಾವಾಗ ಬೇಕೆಂದರೆ ಆವಾಗ ಕಾಣಸಿಗುವ ವ್ಯಕ್ತಿತ್ವವಲ್ಲ. ಅವರದ್ದು ಶತಮಾನಕ್ಕೊಮ್ಮೆ ಭೂಮಿಯಲ್ಲಿ ಹುಟ್ಟಿಬರುವ ಅಪರೂಪದ ಚೈತನ್ಯ. ಅಸಾಧಾರಣವಾದ ವೈದುಷ್ಯ, ಚಿಂತನೆ, ವಿಮರ್ಶೆ-ಇವನ್ನು ಒಂದೇ ಕಡೆ ನೋಡಬೇಕೆಂದರೆ ಅದು ಬನ್ನಂಜೆಯವರಲ್ಲಿ ಮಾತ್ರ. ಪ್ರಾಚೀನ ಸಾಹಿತ್ಯಗಳಿಗೆ ಭಾಷ್ಯಕಾರರಾಗಿ, ವ್ಯಾಖ್ಯಾನಕಾರರಾಗಿ, ಮಹಾವಾಗ್ಮಿಯಾಗಿ, ಕವಿಯಾಗಿ, ಕಥನಕಾರರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಪತ್ರಕರ್ತರಾಗಿ, ದಾರ್ಶನಿಕರಾಗಿ, ವೇದಾಂತಿಯಾಗಿ, ಸಂಶೋಧಕರಾಗಿ, ನೂರೈವತ್ತಕ್ಕೂ ಹೆಚ್ಚು ಕೃತಿರಚಯಿತರಾಗಿ ಅವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಅವರ ವ್ಯಕ್ತಿತ್ವದಲ್ಲಿ ಸುಂದರ ಭಾವುಕತೆಯೂ ಪ್ರೌಢ ವೈಚಾರಿಕತೆಯೂ ಮೇಳೈಸಿದ್ದವು. ಸಂಪ್ರದಾಯದೊಟ್ಟಿಗೆ ಆಧುನಿಕತೆಯೂ ಅಷ್ಟೇಪ್ರಮಾಣದಲ್ಲಿ ಬೆರೆತಿದ್ದವು. ಸರಳತೆ-ಸಂಕೀರ್ಣತೆಯೊಂದಿಗೆ ಸರಸತೆ-ವಿನೋದ, ಸ್ನೇಹ-ಸಾಹಸ-ಇವೆಲ್ಲವೂ ಮುಪ್ಪುರಿಗೊಂಡಿದ್ದವು. ವಿಕ್ಷಿಪ್ತತೆ ಅವರ ವಿಶೇಷ ಗುಣವಾಗಿತ್ತು. ''ನನ್ನದು ವಿಕ್ಷಿಪ್ತವಾದ ಅಧ್ಯಯನ, ವಿಕ್ಷಿಪ್ತವಾದ ಓದುವಿಕೆ, ವಿಕ್ಷಿಪ್ತವಾದ ಬದುಕು. ಆದರೂ ಅದೊಂದು ತನ್ನಷ್ಟಕ್ಕೆ ಒದಗಿ ಬಂದ ವೇದಿಕೆ'' ಎಂದು ಅವರೇ ಹೇಳಿಕೊಂಡಿದ್ದಾರೆ. (ಆತ್ಮನಿವೇದನೆ-28)

ಅವರು ಬಾಲ್ಯದಿಂದಲೂ ಜಿಜ್ಞಾಸುಪ್ರವೃತ್ತಿಯನ್ನು ಹೊಂದಿದ್ದರು. ಪ್ರಶ್ನೆ ಕೇಳುವುದು ಅವರ ಜಾಯಮಾನವಾಗಿತ್ತು. ಸಾಂಪ್ರದಾಯಿಕ ಪಂಡಿತರಿಂದ ಅವರಿಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರಿಂದ ಅವರು ತುಂಬಾ ಅತೃಪ್ತರಾದರು. ಇದಕ್ಕೆ ಪರಿಹಾರ ಏನು ಎಂದು ಅವರು ತಮ್ಮ ತಂದೆಯವರ ಬಳಿ ಕೇಳಿದಾಗ ''ಪ್ರಶ್ನೆ ನಿನಗೆ ಬಂತಲ್ಲ, ಆ ಪ್ರಶ್ನೆ ಎಲ್ಲಿಂದ ಬಂತು ಅಲ್ಲೇ ಉತ್ತರ ಹುಡುಕು'' ಅಂತ ಹೇಳಿದರು. ''ತಪಸಾ ಬ್ರಹ್ಮ ವಿಜಿಜ್ಞಾಸಸ್ವ'' ಎಂಬ ಉಪನಿಷದ್ವಾಣಿ ಅವರನ್ನು ಪ್ರೇರಿಸಿ, ಮುನ್ನಡೆಸಿತು. ''ತಂದೆಯವರ ಮಾತು ನಿಜವಾಗಿ ನನ್ನನ್ನು ಚಿಂತನೆಗೆ ಹಚ್ಚಿತು. ನನ್ನ ಜೀವನಕ್ಕೆ ಹೊಸ ರೂಪರೇಷೆ ನೀಡಿತು'' ಎಂದಿದ್ದಾರೆ ಬನ್ನಂಜೆ. ಅವರ ದೊಡ್ಡಪ್ಪ ಪಡುಮುನ್ನೂರು ಶ್ರೀನಿವಾಸಾಚಾರ್ಯರು, ಪೇಜಾವರ ಶ್ರೀಗಳು ಮತ್ತು ಭಂಡಾರಕೆರೆ ಶ್ರೀ ವಿದ್ಯಾಮಾನ್ಯ ತೀರ್ಥರು ಇವರುಗಳಿಂದ ಒಂದಿಷ್ಟು ಪಾಠ ಹೇಳಿಸಿಕೊಂಡಿದ್ದನ್ನು ಬಿಟ್ಟರೆ ಬನ್ನಂಜೆಯವರದ್ದು ಸ್ವಾಧ್ಯಾಯವೇ ಹೆಚ್ಚು. ಇದರ ಜೊತೆಗೆ ''ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ'' ಎಂಬ ಮಧ್ವಾಚಾರ್ಯರ ಒಂದು ಮಾತು ಅವರ ಸ್ವಾಧ್ಯಾಯವನ್ನು ಪೋಷಿಸಿತು. ಹೀಗೆ ಬಾಲ್ಯದಿಂದಲೇ ಸ್ವಾಧ್ಯಾಯ ಮತ್ತು ಪ್ರವಚನದ ಮೂಲಕ ಅವರು ಬೆಳೆದ ಪರಿ ವಿಸ್ಮಯಾವಹವಾದುದು.



ಇಂದು ಸಂಜೆ 5-30ಕ್ಕೆ ಮೈಸೂರಿನ ರಮಾಗೋವಿಂದ್ ಕಲಾವೇದಿಕೆಯಲ್ಲಿ (ಗಾನಭಾರತೀ ವೀಣೆ ಶೇಷಣ್ಣ ಭವನದ ಆವರಣ) 'ಬನ್ನಂಜೆ 90 ವಿಶ್ವನಮನ' ಕಾರ್ಯಕ್ರಮ ಜರುಗಲಿದೆ.

ಬನ್ನಂಜೆಯವರು ತಮ್ಮ ಓದಿನ ಬಲದಿಂದ, ಜಿಜ್ಞಾಸು ಮತ್ತು ಪ್ರಶ್ನೋತ್ಥಾಪಕಪ್ರವೃತ್ತಿಯಿಂದ ತಥಾಕಥಿತ ಸಾಹಿತ್ಯ ಮತ್ತು ಚರ್ವಿತಚರ್ವಣ ಹಳಸಲು ಮಾತುಗಳಿಂದ ಬಹುಬೇಗನೆ ಹೊರಬಂದುಬಿಟ್ಟರು. ಅದರ ಫಲವಾಗಿ ಅವರು ನೀಡಿದ ಒಂದೊಂದು ನವೋನವೀನ ಹೇಳಿಕೆಯೂ ಸಂಪ್ರದಾಯಶರಣರಿಗೆ, ಮಡಿವಂತರಿಗೆ ವ್ಯತಿರಿಕ್ತವಾಗಿ, ವಿರುದ್ಧವಾಗಿ ಕಾಣಿಸಿಕೊಂಡವು. ವಸ್ತುತಃ ಅವು ವಿರುದ್ಧವಾಗಿಯೂ, ವ್ಯತಿರಿಕ್ತವಾಗಿಯೂ ಇರಲಿಲ್ಲ. ಚಿಂತನ-ಮಂಥನದಿಂದ ಬಂದ ನವನೀತವಾಗಿತ್ತು. ಅದು ಇತರರಿಗೆ ಅರ್ಥವಾಗಲಿಲ್ಲ. ಅಂತಹವರ ಬಗ್ಗೆ ಅವರೇ ಹೇಳಿದ ಒಂದು ಮಾತು-''ಕುರುಡರಿಗೆ ಕಂಬ ಕಾಣದೇ ಇದ್ದರೆ ಅದು ಕಂಬದ ತಪ್ಪಲ್ಲ'' ಎಂದು. ಇದರಿಂದಾಗಿಯೇ ಬನ್ನಂಜೆ ತಥಾಕಥಿತ ಆಸ್ತಿಕರಿಗೆ ವೈರಿಗೆಯಾದರು; ತಥಾಕಥಿತ ನಾಸ್ತಿಕರಿಗೆ ಮಡಿವಂತರಾದರು. ಇದಕ್ಕೊಂದು ಸುಂದರ ಉದಾಹರಣೆಯೆಂದರೆ- ''ಸಂಸ್ಕೃತ ನಾಟಕಗಳನ್ನು ತೆಗೆದರೆ ಐವತ್ತರಿಂದ ಅರವತ್ತು ನಾಟಕಗಳು ರಾಮಾಯಣದ್ದೇ. ಎಲ್ಲ ಕವಿಗಳ ವಿಷಯ ಹೆಚ್ಚಾಗಿ ರಾಮಾಯಣದ್ದು. ಕಾಳಿದಾಸ ಮಹಾಭಾರತದ ಶಾಕುಂತಲ ತೆಗೆದುಕೊಂಡ. ನನಗೆ ವಾಲ್ಮೀಕಿಯ ಪ್ರಭಾವ ಅಷ್ಟೊಂದಿಲ್ಲ. ನನ್ನ ದೃಷ್ಟಿಯಲ್ಲಿ ವೇದವ್ಯಾಸರು ಒಂದು ಪರ್ವತವಾದರೆ ವಾಲ್ಮೀಕಿ ತಪ್ಪಲು ಇದ್ದ ಹಾಗೆ. ವ್ಯಾಸರ ಪ್ರಜ್ಞೆಯ ಮುಂದೆ ಏನೂ ಅಲ್ಲ. ಆದರೆ ವಾಲ್ಮೀಕಿಯ ಪ್ರಭಾವವೂ ನನ್ನ ಮೇಲಿದೆ. ಕಾಳಿದಾಸ ನನಗೆ ಯಾವ ಹಂತದಲ್ಲೂ ಪ್ರಭಾವ ಬೀರಲೇ ಇಲ್ಲ. ನನಗೆ ಮಹಾಕಾವ್ಯಗಳಲ್ಲಿ ತುಂಬಾ ಕಾಡಿದ್ದು ಭಾರವಿಯ ಕಿರಾತಾರ್ಜುನೀಯ. ಸಂಸ್ಕೃತವನ್ನು ಅವನು ದುಡಿಸಿಕೊಂಡ ಚೆಂದ ಇದೆಯಲ್ಲ ಅದ್ಭುತ ಅದು. ಅದರ ನಂತರ ಮಾಘ. ಕೆಲವರು ಮಹಾಕಾವ್ಯ ಅಂದರೆ ನೈಷಧ ಅಂತಾರೆ. ಯಾವುದೂ ಕೂಡಾ ಪ್ರಭಾವ ಮಾಡಲಿಲ್ಲ. ನನಗೆ ತುಂಬ ಖುಷಿ ಕೊಟ್ಟವನು ಭಾರವಿ. ನಾಟಕಗಳಲ್ಲಿ ತುಂಬಾ ಖುಷಿ ಕೊಟ್ಟವ ಭವಭೂತಿ ಮತ್ತು ಭಾಸ; ಕಾಳಿದಾಸ ಅಲ್ಲ'' ಎಂದು ಬನ್ನಂಜೆ ಹೇಳುತ್ತಾರೆ.

ಇಲ್ಲಿ ಒಂದು ಸೂಕ್ಷ್ಮವಿದೆ. ಇಲ್ಲಿ ಬನ್ನಂಜೆ ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಾಸ, ಭವಭೂತಿ ಮೊದಲಾದವರ ಬಗ್ಗೆ ತುಂಬಾ ಭಿನ್ನವಾಗಿ ಮಾತನಾಡಿದ್ದಾರೆ. ಇದು ಮಾಮೂಲಿ ಜಾಡಿಗಿಂತ ತುಂಬಾ ಭಿನ್ನವಾದ, ಹೊಸದಾದ ಮಾತು ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನೇ ಸ್ವಲ್ಪ ವಿವರಿಸಿ ಹೇಳುವುದಾದರೆ-

ಉಪಮಾ ಕಾಳಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ ॥
ಕಾವ್ಯೇಷು ನಾಟಕಂ ರಮ್ಯಮ್ ತತ್ರ ರಮ್ಯಾ ಶಕುಂತಲಾ ।
ತತ್ರಾಪಿ ಚತುರ್ಥೋಂಕೋ ತತ್ರ ಶ್ಲೋಕಚತುಷ್ಟಯಮ್ ॥

''ಉಪಮೆಗೆ ಕಾಳಿದಾಸ, ಅರ್ಥಗೌರವಕ್ಕೆ ಭಾರವಿ, ಪದಲಾಲಿತ್ಯಕ್ಕೆ ದಂಡಿ-ಈ ಮೂರೂ ಗುಣಗಳು ಮಾಘನಲ್ಲಿ ಇವೆ''. ''ಕಾವ್ಯಗಳಲ್ಲಿ ರಮಣೀಯವಾದುದು ನಾಟಕ; ಅದರಲ್ಲೂ ಶಕುಂತಲಾ; ಅದರಲ್ಲೂ ನಾಲ್ಕನೇ ಅಂಕ; ಅದರಲ್ಲೂ ನಾಲ್ಕನೆ ಶ್ಲೋಕ'' ಎಂದು ಯಾವನೋ ಒಬ್ಬ ತನ್ನ ಅನಿಸಿಕೆಯನ್ನು ಹರಿಬಿಟ್ಟ. ಇದನ್ನು ಹಿಂದುಮುಂದು ಯೋಚಿಸದೆ ಎಲ್ಲರೂ ಸ್ವೀಕರಿಸಿ ಪ್ರಚಾರ ಮಾಡತೊಡಗಿದರು. ಇಂತಹ ಕೊಂಡಾಟದ, ಅನಿಸಿಕೆಯ ಮಾತುಗಳು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ದಂಡಿಯಾಗಿ ಸಿಗುತ್ತವೆ. ಇಂತಹ ಮಾತುಗಳಿಗೆ ಬನ್ನಂಜೆ ಅಪವಾದ. ಅವರು ಸ್ವತಂತ್ರವಾಗಿ ಚಿಂತಿಸಿ, ತನಗೆ ಅನಿಸಿದ್ದನ್ನು ನೇರವಾಗಿ ದಿಟ್ಟವಾಗಿ ಸಹೃದಯರೆಲ್ಲರೂ ಮೆಚ್ಚುವಂತೆ ಸಾಧಾರಿತವಾಗಿ ಹೇಳುವವರು. ಇದು ಅನೇಕರಿಗೆ ಪಥ್ಯವಾಗುವುದಿಲ್ಲ. ಅಂತಹವರನ್ನು ಕಂಡೇ ಬನ್ನಂಜೆ 'ತಥಾಕಥಿತ ಸಾಹಿತಿಗಳು' ಎಂದು ಖಾರವಾಗಿ ಹೇಳಿದ್ದು.

ಬನ್ನಂಜೆಯವರ ಓದು ಆಳವಾದುದು, ವಿಶಾಲವಾದುದು ಮತ್ತು ಸೃಷ್ಟಿಶೀಲವಾದುದು. ಪ್ರವಚನವೂ ಹಾಗೆಯೇ. ಯಾವುದೇ ಆದರೂ ಕೂಡಾ ಭಿನ್ನವಾಗಿ, ಹೊಸದಾಗಿ, ವಿಚಿಕಿತ್ಸಕ ದೃಷ್ಟಿಯಿಂದ ನೋಡುವುದು ಅವರಕ್ರಮ. ಈ ಕಾರಣದಿಂದಲೇ ಅವರು ನಮ್ಮ ನಾಡಿನ ಪ್ರವಚನಕಾರರಲ್ಲಿ, ಲೇಖಕರಲ್ಲಿ, ಆರ್ಷಸಾಹಿತಿಗಳಲ್ಲಿ ಅಗ್ರಮಾನ್ಯರೆನಿಸಿಕೊಂಡರು.

ಅರಬ್ ರಾಷ್ಟ್ರಗಳ ವಿಶ್ವಾಸ ಕಳಕೊಂಡ ಅಮೆರಿಕ

• ದಿನೇಶ ನಾಯಕ್

ಇರಾನ್ ಸಮರ ಇನ್ನೂ ಮುಂದುವರಿದಿದ್ದು, ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಇರಾನ್ ತನ್ನ ಶತ್ರುಗಳಿಗೆ ಪ್ರಬಲ ಪ್ರತಿಯೇಟು ನೀಡುತ್ತಿದೆ. ಅದು ಇಸ್ರೇಲ್‌ನ ವಿರುದ್ಧ ದಾಳಿ ಮಾಡಿರುವುದಷ್ಟೇ ಅಲ್ಲದೇ ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕನ್ ಮಿಲಿಟರಿ ನೆಲೆಗಳ ಮೇಲೂ ದಾಳಿ ನಡೆಸಿದೆ. ಅದರ ಜತೆಗೇ ತೈಲ ಸಂಗ್ರಹಾಗಾರಗಳ ಮೇಲೆ, ತೈಲ ನಿಕ್ಷೇಪಗಳ ಮೇಲೆ ಕೂಡಾ ದಾಳಿ ನಡೆಸಿದೆ. ಅದು ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವ ಕಾರಣದಿಂದಾಗಿ ಇಡೀ ಜಾಗತಿಕ ತೈಲ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ. ಅಮೆರಿಕದ ಕೆಲವು ಯುದ್ಧವಿಮಾನಗಳನ್ನೂ ಹೊಡೆದುರುಳಿಸಿದೆ.

ಈ ಸಮರದಲ್ಲಿ ವಿನಾಕಾರಣ ಕೊಲ್ಲಿಯ ಕೆಲವು ದೇಶಗಳು ಸಿಲುಕಿಕೊಂಡಿವೆ. ಅಮೆರಿಕಕ್ಕೆ ಮಿಲಿಟರಿ ನೆಲೆ ಸ್ಥಾಪಿಸಲು ಅವಕಾಶ ನೀಡಿದ ಕಾರಣಕ್ಕಾಗಿ ಅವುಗಳೂ ದಾಳಿಗೆರವಾಗಿವೆ. ಅವುಗಳಿಗೆ 'ರಕ್ಷಣಾ ಕೊಡೆ' ಒದಗಿಸುವುದಾಗಿ ಹೇಳಿದ್ದ ಅಮೆರಿಕವು ಈ ಕಾರ್ಯದಲ್ಲಿ ಈಗ ವಿಫಲಗೊಂಡಿರುವುದು ಅದರ ಮಿತ್ರ ರಾಷ್ಟ್ರಗಳಿಗೆ ಅಸಮಾಧಾನ ಉಂಟು ಮಾಡಿದೆ. ತನ್ನ ಸ್ನೇಹಿತ ರಾಷ್ಟ್ರಗಳ ಮೇಲೆ ದಾಳಿಯಾಗದಂತೆ ತಾನು ತಡೆಯುವುದಾಗಿ ಅಮೆರಿಕ ಈ ಹಿಂದೆ ಹೇಳಿದ್ದರೂ ಈ ವಾಗ್ದಾನವನ್ನು ಪಾಲಿಸಲು ಅದು ವಿಫಲವಾಗಿದೆ. ಹಾಗಾಗಿ ಈಗ ಕೊಲ್ಲಿಯ ಕೆಲವು ರಾಷ್ಟ್ರಗಳು ತಮ್ಮದೇ ಆದ ಪರ್ಯಾಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳುವತ್ತ ಚಿಂತನೆ ನಡೆಸಿವೆ.

1960ರ ದಶಕದ ತನಕ ಗಲ್ಫ್ ರಾಷ್ಟ್ರಗಳಿಗೆ ಬ್ರಿಟನ್ ಸರಕಾರವು ಮಿಲಿಟರಿ ರಕ್ಷಣೆ ನೀಡುತ್ತಿತ್ತು. ಅಲ್ಲಿಂದ ಬಳಿಕ ಅಮೆರಿಕ ಈ ಹೊಣೆಯನ್ನು ಹೊತ್ತುಕೊಂಡಿತು. ಅಮೆರಿಕದ ನೆರವಿನ ಮೂಲಕ ಇರಾನ್ ಮತ್ತು ಸೌದಿ ಅರೇಬಿಯಾಗಳು ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಭದ್ರತಾ ವ್ಯವಸ್ಥೆಯ ಹೊಣೆಗಾರಿಕೆ ವಹಿಸಿಕೊಳ್ಳುವಂತಾಯಿತು. 1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದುದರಿಂದ ಈ ವ್ಯವಸ್ಥೆ ವಿಫಲಗೊಂಡಿತು. ಈ ಸಂದರ್ಭದಲ್ಲಿ ಅಮೆರಿಕವು ಗಲ್ಫ್‌ನ ಭದ್ರತಾ ಉಸ್ತುವಾರಿಯನ್ನು ತಾನೇ ನೋಡಿಕೊಳ್ಳುವುದಾಗಿ ಹೇಳಿತು. ಗಲ್ಫ್ ಪ್ರದೇಶದಲ್ಲಿ ನಡೆಯುವ ಯಾವುದೇ ದಾಳಿಯನ್ನು ಅಮೆರಿಕದ ಹಿತಾಸಕ್ತಿಗಳ ಮೇಲೆ ನಡೆಯುವ ದಾಳಿ ಎಂಬುದಾಗಿ ಪರಿಗಣಿಸಿ ಅದನ್ನು ಹಿಮ್ಮೆಟ್ಟಿಸಲಾಗುವುದು ಎಂದು ಅಮೆರಿಕ ಘೋಷಿಸಿತು. ಅದರಂತೆ ಗಲ್ಫ್‌ನ ಎರಡು ರಾಷ್ಟ್ರಗಳಾದ ಇರಾನ್ ಮತ್ತು ಇರಾಕ್‌ಗಳು ತಮ್ಮ ಭದ್ರತೆಗೆ ಅಪಾಯಕಾರಿ ಎಂದು ಭಾವಿಸಿದ್ದ ಹಲವಾರು ಗಲ್ಫ್ ರಾಷ್ಟ್ರಗಳು ಇವೆರಡು ದೇಶಗಳ ವಿರುದ್ಧವಾಗಿ 'ಗಲ್ಫ್ ಸಹಕಾರಿ ಮಂಡಳಿ' (ಜಿಸಿಸಿ) ರಚಿಸಿಕೊಂಡವು. ಅದಕ್ಕೆ ಅಮೆರಿಕವೂ ಸಹಕಾರ ನೀಡಿತು.

1991ರಲ್ಲಿ ಇರಾಕ್ ಸಮರದ ಬಳಿಕ ಅಮೆರಿಕವು ಅಲ್ಲಿ ಕೆಲವು ಶಾಶ್ವತ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಅಮೆರಿಕದ ನೌಕಾಪಡೆಯೊಂದು 1995ರಲ್ಲಿ ಬಹ್ರೇನ್‌ನಲ್ಲಿ ತಳವೂರಿತು. 1996ರಲ್ಲಿ ಕತಾರ್‌ನಲ್ಲಿ ಇನ್ನೊಂದು ನೆಲೆ ಸ್ಥಾಪಿಸಿತು. ಅಲ್ಲಿಂದ ಬಳಿಕ ಕೊಲ್ಲಿ ಪ್ರದೇಶದಲ್ಲಿ ಅಮೆರಿಕದ ನೆಲೆಗಳು ಇನ್ನಷ್ಟು ವಿಸ್ತಾರಗೊಂಡವು. 2017ರಲ್ಲಿ 'ಅರಬ್ ನ್ಯಾಟೋ' ವ್ಯವಸ್ಥೆ ರೂಪುಗೊಂಡಿತು. ಇದರಲ್ಲಿ ಈಜಿಪ್ಟ್ ಮತ್ತು ಜೋರ್ಡಾನ್‌ಗಳೂ ಸೇರಿಕೊಂಡವು. 2022ರಲ್ಲಿ ಈಜಿಪ್ಟ್, ಇರಾಕ್, ಜೋರ್ಡಾನ್ ಸೇರಿದಂತೆ ಗಲ್ಫ್ ರಾಷ್ಟ್ರಗಳೆಲ್ಲಾ ತಮ್ಮ ಪ್ರದೇಶಕ್ಕೆ ಎದುರಾಗುವ ಬೆದರಿಕೆಯನ್ನು ಒಟ್ಟಾಗಿ ಎದುರಿಸುವ ನಿರ್ಧಾರ ತಾಳಿದವು. ಕಳೆದ ವರ್ಷ ಇಸ್ರೇಲ್ ಹಮಾಸ್ ಮೇಲೆ ದಾಳಿ ನಡೆಸಿದಾಗಲೂ ಅಮೆರಿಕವು ಕತಾರ್‌ಗೆ ತಾನು ಭದ್ರತೆ ನೀಡುವುದಾಗಿ ವಾಗ್ದಾನ ನೀಡಿತ್ತು.

ಇದೀಗ ಇರಾನ್ ಯುದ್ಧ ಸ್ಫೋಟಿಸುವುದರೊಂದಿಗೆ ಅಮೆರಿಕ ನೀಡಿದ ಆಶ್ವಾಸನೆಗಳೆಲ್ಲಾ ಪೊಳ್ಳಾಗಿದೆ. ಗಲ್ಫ್ ರಾಷ್ಟ್ರಗಳು ಇರಾನಿನ ಕ್ಷಿಪಣಿ ದಾಳಿಗೆ ತುತ್ತಾಗುತ್ತಿವೆ. ಅವುಗಳ ಮೇಲೆ ದಾಳಿ ನಡೆಯದಂತೆ ರಕ್ಷಣೆ ನೀಡುವಲ್ಲಿ ಅಮೆರಿಕ ವಿಫಲವಾಗಿದೆ.

ಅಮೆರಿಕವು ತಮಗಿಂತ ಇಸ್ರೇಲ್‌ಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದೆ. ಇಸ್ರೇಲ್‌ಗೆ ವಾಯುರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದರೆ, ಇತರ ಗಲ್ಫ್ ದೇಶಗಳಿಗೆ ಅಂತಹ ವ್ಯವಸ್ಥೆ ಪೂರೈಸದ್ದರಿಂದ ಅವು ಇರಾನಿನ ರಾಕೆಟ್ ದಾಳಿಗೆ ತುತ್ತಾಗುತ್ತಿವೆ ಎಂದು ಕೊಲ್ಲಿ ರಾಷ್ಟ್ರಗಳು ಆಪಾದಿಸುತ್ತಿವೆ.

''ಅಮೆರಿಕವು ಕೊಲ್ಲಿ ರಾಷ್ಟ್ರಗಳಿಗೆ ನೆರವು ನೀಡುವುದಕ್ಕಿಂತ ಹೆಚ್ಚಾಗಿ ಕೊಲ್ಲಿ ರಾಷ್ಟ್ರಗಳೇ ಅಮೆರಿಕಕ್ಕೆ ರಕ್ಷಣೆ ನೀಡುವಂತಾಗಿದೆ'' ಎಂದು ಕುವೈತ್‌ನ ರಕ್ಷಣಾ ವಿಶ್ಲೇಷಕನೊಬ್ಬ ಹೇಳಿದ್ದು, ಅದಕ್ಕೆ ಕೊಲ್ಲಿಯ ಇತರ ದೇಶಗಳೂ ಸಹಮತ ವ್ಯಕ್ತಪಡಿಸಿವೆ.

ಯುದ್ಧ ಸಾರುವ ಮೊದಲು ತಮಗೆ ಆ ಕುರಿತಂತೆ ಮಾಹಿತಿಯನ್ನೂ ನೀಡದಿರುವ ಬಗ್ಗೆ ಕೂಡಾ ಈ ಕೊಲ್ಲಿ ರಾಷ್ಟ್ರಗಳು ಅಸಮಾಧಾನಗೊಂಡಿವೆ.

ಗಾಝಾ ಕದನ ನಡೆದಾಗ ಒಂದೆರಡು ವಿಷಯಗಳು ಸ್ಪಷ್ಟವಾಗಿದ್ದವು. ಇಸ್ರೇಲ್ ಮತ್ತು ಅಮೆರಿಕಗಳು ಇರಾನ್ ಮೇಲೆ ದಾಳಿ ನಡೆಸಲು ತಮ್ಮ ವಾಯುಪ್ರದೇಶ ಬಳಸಲು ಗಲ್ಫ್ ರಾಷ್ಟ್ರಗಳು ಅನುಮತಿ ನೀಡಿದ್ದವು. ಹಾಗಿದ್ದರೂ ಇರಾನ್ ಅವುಗಳ ಮೇಲೆ ದಾಳಿಗೆ ಮುಂದಾಗಿರಲಿಲ್ಲ. ಇತ್ತೀಚೆಗೆ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ದಾಳಿ ನಡೆಸಿದಾಗ ಇದೇ ಗಲ್ಫ್ ರಾಷ್ಟ್ರಗಳು ಇರಾನಿನ ತಮ್ಮ ಬೆಂಬಲ ವ್ಯಕ್ತಪಡಿಸಿದ್ದವು. ಆದರೆ ವಿಪರ್ಯಾಸವೆಂದರೆ ಇರಾನ್ ಈ ಬಾರಿ ಈ ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಇವೆಲ್ಲದರ ಹಿನ್ನಡೆಯಲ್ಲಿ ಗಲ್ಫ್‌ನ ಕೆಲವು ದೇಶಗಳು ತಮ್ಮ ಭದ್ರತೆಯ ಕುರಿತಂತೆ ಚಿಂತಿತವಾಗಿದ್ದು, ಪರ್ಯಾಯ ವ್ಯವಸ್ಥೆ ರೂಪಿಸಲು ಯೋಚಿಸುತ್ತಿವೆ. ಬಲಿಷ್ಠ ಶಕ್ತಿಯಾಗಿರುವ ಅಮೆರಿಕವು ಕೊಲ್ಲಿಯಲ್ಲಿ 13 ಮಿಲಿಟರಿ ನೆಲೆಗಳನ್ನು ಹೊಂದಿದ್ದರೂ ಕೇವಲ ಒಂದು ದೇಶದ ದಾಳಿಯನ್ನು ತಡೆಯಲು ವಿಫಲವಾಗಿರುವುದು ಈ ದೇಶಗಳಿಗೆ ಭ್ರಮನಿರಶನ ಉಂಟು ಮಾಡಿದೆ.

ಇರಾನಿನ ವಿರುದ್ಧ ದಾಳಿಗೆ ತಮ್ಮ ನೆಲೆಗಳನ್ನು ಮತ್ತು ವಾಯುಪ್ರದೇಶ ಬಳಸುವುದನ್ನು ನಿರ್ಬಂಧಿಸುವ ಕುರಿತಂತೆ ಈ ರಾಷ್ಟ್ರಗಳು ಚಿಂತಿಸುತ್ತಿವೆ. ಅಂತಹ ನಿರ್ಧಾರ ತಳೆದಲ್ಲಿ ಅದು ಈ ಸಮರದ ಮೇಲೆ ಮಹತ್ವದ ಪರಿಣಾಮ ಬೀರಲಿದೆ.

ಇರಾನ್ ಸಮರವು ಬೇಗ ಮುಗಿಯುವುದನ್ನು ಕೊಲ್ಲಿ ದೇಶಗಳು ಬಯಸುತ್ತಿವೆ. ಅದಕ್ಕೆ ಟ್ರಂಪ್ ಧೋರಣೆಯೇ ಅಡ್ಡಿಯಾಗಿದೆ. ಇದೂ ಅವುಗಳಿಗೆ ಅಮೆರಿಕದ ಕುರಿತಂತೆ ಅಸಮಾಧಾನ ಹೆಚ್ಚಿಸಿದೆ.

ಭಾರತೀಯರೆಂಬ ಸಂದೇಶ ಪ್ರದರ್ಶಿಸಿದರೆ ತೆರೆಯುತ್ತೆ ಜಲಸಂಧಿ | ನಾವು ಭಾರತಕ್ಕೆ ಸಂಬಂಧಪಟ್ಟ ಹಡಗುಗಳೆಂಬ ಸಂದೇಶ

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗಷ್ಟೇ ಅವಕಾಶ!



ಮಧ್ಯಪ್ರಾಚ್ಯ ಯುದ್ಧ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಇರಾನ್, ಹಾರ್ಮುಜ್ ಜಲಸಂಧಿಯಿಂದ ಹಾದುಹೋಗಲು ಭಾರತೀಯ ಮತ್ತು ಭಾರತಕ್ಕೆ ಸಂಬಂಧಪಟ್ಟ ಇತರ ಹಡಗುಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದೆ. ಭಾರತದ ರಾಷ್ಟ್ರಧ್ವಜ ಹಾಕಿರುವ ಹಡಗುಗಳು, ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ) ಎಂಬ ಸಂದೇಶ ಪ್ರದರ್ಶಿಸುವ ಮೂಲಕ ತಾವು ಭಾರತೀಯರು, ತಮ್ಮದು ಭಾರತೀಯ ಹಡಗುಗಳು ಎಂದು ಗುರುತಿಸಿಕೊಂಡರೆ ಮಾತ್ರ ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗಲು ಇರಾನ್ ಅವಕಾಶ ಮಾಡಿಕೊಡುತ್ತಿದೆ.

ವಿಶ್ವದ ಯಾವುದೇ ರಾಷ್ಟ್ರದ ಹಡಗುಗಳಿಗೂ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಇರಾನ್ ಅನುಮತಿಸಿಲ್ಲ. ಆದರೆ ಭಾರತೀಯರಿಗೆ ಅನುಮತಿಸಿದೆ ಎಂಬುದು ಜಾಗತಿಕವಾಗಿ ಭಾರತ ಎಷ್ಟು ಪ್ರಭಾವ ಬೀರಿದೆ, ಭಾರತದ ನಾಯಕತ್ವದ ಶಕ್ತಿ ಮತ್ತು ಇಂತಹ ಸಂಘರ್ಷದ ಸಮಯದಲ್ಲೂ ಭಾರತ ಮತ್ತು ಭಾರತೀಯರನ್ನು ಇರಾನ್ ಗೌರವದಿಂದ ನಡೆಸಿಕೊಳ್ಳುತ್ತಿರುವುದರ ಹಿಂದೆ ಭಾರತದ ರಾಜತಾಂತ್ರಿಕ ಶಕ್ತಿಯನ್ನು ತೋರಿಸುತ್ತದೆ.

ಭಾರತೀಯರಿದ್ದಾರೆ, ದಾರಿ ಬಿಡಿ! ಹಾರ್ಮುಜ್ ಜಲಸಂಧಿಯಲ್ಲಿ ಹಾದುಹೋಗುವ ಹಡಗುಗಳು ಭಾರತೀಯ ಹಡಗುಗಳೆಂದು ಗುರುತಿಸಿಕೊಳ್ಳಲು ಇಂಡಿಯನ್ಸ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ), ಆಲ್ ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಎಲ್ಲರೂ ಭಾರತೀಯರೇ ಇದ್ದಾರೆ) ಮತ್ತು ಆಲ್ ಇಂಡಿಯಾ ಕ್ರೂ (ಭಾರತೀಯ ಸಿಬ್ಬಂದಿ) ಎಂಬ ಡಿಸ್‌ಪ್ಲೇ ಸಂದೇಶಗಳನ್ನು ಪ್ರದರ್ಶಿಸುವ ಮೂಲಕ ಜಲಸಂಧಿ ಹಾದುಹೋಗಲು ಅನುಮತಿ ಪಡೆಯುತ್ತಿವೆ.

ತ್ರಿವರ್ಣ ಧ್ವಜವಿದ್ದರೆ ಮಾತ್ರ ಅನುಮತಿ: ಮಾಧ್ಯಮ ವರದಿಗಳ ಪ್ರಕಾರ, ಇರಾನ್ ಈಗ ಭಾರತದ ರಾಷ್ಟ್ರಧ್ವಜ ನೆಟ್ಟಿರುವ ಹಡಗುಗಳಿಗೆ ಮಾತ್ರ ಹಾರ್ಮುಜ್ ಅನ್ನು ಸುರಕ್ಷಿತವಾಗಿ ದಾಟಲು ಅನುಮತಿ ನೀಡುತ್ತಿದೆ. ಶುಕ್ರವಾರ ಬೆಳಗ್ಗಿನೊಳಗೆ ಕನಿಷ್ಠ ಐದು ಭಾರತೀಯ ಹಡಗುಗಳು ಈ ಜಲಸಂಧಿಯನ್ನು ದಾಟಿವೆ. ಇನ್ನೂ ಕೆಲವು ಹಡಗುಗಳು ಶಿಪ್ ಟ್ರ್ಯಾಕಿಂಗ್ ನಕ್ಷೆಗಳಲ್ಲಿ ಕಾಣಿಸಿಕೊಂಡಿವೆ. ಇತರ ಧ್ವಜ ಇರುವ ಭಾರತಕ್ಕೆ ಸಂಬಂಧಿಸಿದ ಹಡಗುಗಳಿಗೂ ಅವಕಾಶ ನೀಡಲಾಗಿದೆ.

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕಗಳ ನಾಶ ಶತಃಸಿದ್ಧ

ಖಾರ್ಗ್ ದ್ವೀಪದಲ್ಲಿರುವ ಇರಾನ್ ಸೇನಾ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಿದ್ದು, ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ. ಹಾರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಖಾರ್ಗ್‌ನ ತೈಲ ಘಟಕಗಳನ್ನೂ ಸಂಪೂರ್ಣ ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಎಚ್ಚರಿಕೆ ನೀಡಿದ್ದಾರೆ. ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಯುದ್ಧ ಮೂರನೇ ವಾರ ಪ್ರವೇಶಿಸಿದ್ದು, ಈಗಾಗಲೇ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಆಗುತ್ತಿರುವುದನ್ನು ಕಾಣಬಹುದು. ಯುದ್ಧ ಆರಂಭವಾದಲ್ಲಿಂದ ತೈಲ ಬೆಲೆಯಲ್ಲಿ ಶೇ.40 ಏರಿಕೆಯಾಗಿದೆ. ಇದರ ಬೆನ್ನಲ್ಲೇ ಖಾರ್ಗ್ ದ್ವೀಪದ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಬೆದರಿಕೆಯೊಡ್ಡಿದೆ. ಇಲ್ಲಿಂದಲೇ ಇರಾನ್ ತನ್ನ ಶೇ.90ರಷ್ಟು ತೈಲ ರಫ್ತು ಮಾಡುತ್ತದೆ. ಅಧ್ಯಕ್ಷ ಟ್ರಂಪ್ ಎಚ್ಚರಿಕೆಗೆ ಇರಾನ್ ಪ್ರತಿಕ್ರಿಯಿಸಿದ್ದು, ಒಂದು ವೇಳೆ ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಅಮೆರಿಕ ಸಂಪರ್ಕದಲ್ಲಿ ವ್ಯವಹರಿಸುವ ತೈಲ ಘಟಕಗಳನ್ನು ಸುಟ್ಟು ಬೂದಿ ಮಾಡುತ್ತೇವೆ ಎಂದು ಹೇಳಿದೆ.

ಖಾರ್ಗ್‌ನಲ್ಲಿ 15 ಸ್ಫೋಟ?

ಅಮೆರಿಕದ ದಾಳಿ ವೇಳೆ ಖಾರ್ಗ್ ದ್ವೀಪದಿಂದ 15ಕ್ಕೂ ಹೆಚ್ಚು ಸ್ಫೋಟಗಳ ಶಬ್ದ ಕೇಳಿದೆಯೆಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ವಾಯು ರಕ್ಷಣಾ ವ್ಯವಸ್ಥೆಗಳು, ನೌಕಾ ನೆಲೆ ಮತ್ತು ವಿಮಾನ ನಿಲ್ದಾಣಗಳು ನಾಶಗೊಂಡಿವೆ. ಆದರೆ ತೈಲ ಮೂಲ ಸೌಕರ್ಯಗಳಿಗೆ ಯಾವುದೇ ಹಾನಿ ಆಗಿಲ್ಲ ಎಂದು ವರದಿಯಾಗಿದೆ.



ಜೈಶಂಕರ್ ಚತುರ ವಿದೇಶಾಂಗ ನೀತಿ

ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಈ ವರದಿಗಳನ್ನು ದೃಢಪಡಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಜೈಸ್ವಾಲ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಇತ್ತೀಚೆಗೆ ಇರಾನ್ ಸಚಿವರೊಂದಿಗೆ ಮೂರು ಬಾರಿ ಮಾತನಾಡಿದ್ದಾರೆ. ಮಾತುಕತೆ ವೇಳೆ ಸಾಗಣೆ ಮತ್ತು ಭಾರತದ ಇಂಧನ ಭದ್ರತೆಯ ಕುರಿತು ಚರ್ಚಿಸಲಾಗಿದೆ. ಸದ್ಯ ಇದಕ್ಕಿಂತ ಹೆಚ್ಚೇನೂ ಹೇಳುವುದು ಬಹಳ ಮುಂಚಿತವಾಗುತ್ತದೆ ಎಂದು ವಕ್ತಾರ ಜೈಸ್ವಾಲ್ ಹೇಳಿದ್ದರು. ಇದಾದ ಬಳಿಕ ಭಾರತದ ಹಡಗುಗಳಿಗಾಗಿ ಮಾತ್ರ ಜಲಸಂಧಿ ದಾಟಲು ಇರಾನ್ ಅವಕಾಶ ನೀಡಿದೆ.

ಇರಾನ್ ನಾಯಕರ ಮಾಹಿತಿ ನೀಡಿದವರಿಗೆ ಭಾರೀ ನಗದು ಬಹುಮಾನ ಘೋಷಿಸಿದ ಅಮೆರಿಕ

ಮೊಜ್ತಬಾ ಮಾಹಿತಿ ನೀಡಿ, ₹92 ಕೋಟಿ ಪಡೆದುಕೊಳ್ಳಿ!

ವಾಷಿಂಗ್ಟನ್: ಇರಾನ್‌ನ ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸಹಿತ ನಾಯಕರ ಬಗ್ಗೆ ಇಂಚಿಂಚೂ ಮಾಹಿತಿ ನೀಡುವವರಿಗೆ 10 ದಶಲಕ್ಷ ಡಾಲರ್ (ಅಂದಾಜು 92,47,48,000 ರೂ.) ಭಾರೀ ಬಹುಮಾನವನ್ನು ಅಮೆರಿಕ ಸರ್ಕಾರದ ಭದ್ರತಾ ಇಲಾಖೆ ಘೋಷಿಸಿದೆ.

ಇಸ್ರೇಲ್ ದಾಳಿಗೆ ಗಾಯಗೊಂಡಿದ್ದಾರೆ ಎನ್ನಲಾದ ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸೇರಿದಂತೆ ಯಾವುದೇ ಇರಾನ್ ನಾಯಕರ ಮಾಹಿತಿ ಸಂಗ್ರಹಿಸಲು ಅಮೆರಿಕ ಪ್ರಯತ್ನಿಸುತ್ತಿದ್ದು, ಇವರ ಬಗ್ಗೆ ಯಾವುದೇ ಮಾಹಿತಿ ನೀಡುವವರಿಗೆ ಭಾರೀ ನಗದು ಬಹುಮಾನ ನೀಡುವುದಾಗಿ ಟ್ರಂಪ್ ಸರ್ಕಾರ ಘೋಷಿಸಿದೆ. ಇರಾನ್ ಉಗ್ರ ನಾಯಕರು ಎಂಬ ಶೀರ್ಷಿಕೆಯಲ್ಲಿ ಇರಾನ್ ಸರ್ವೋಚ್ಚ ನಾಯಕ ಮತ್ತು ಇತರ ನಾಯಕರ ಫೋಟೋ ಸಹಿತ ಹೆಸರುಗಳ ಪಟ್ಟಿಯನ್ನು ಅಮೆರಿಕದ ನ್ಯಾಯಕ್ಕಾಗಿ ರಾಜತಾಂತ್ರಿಕ ಭದ್ರತಾ ಸೇವೆಗಳ ಬಹುಮಾನ ಇಲಾಖೆ ತನ್ನ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿದೆ.

ಪಟ್ಟಿಯಲ್ಲಿನ ಪ್ರಮುಖರು: ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಸರ್ವೋಚ್ಚ ನಾಯಕನ ಕಚೇರಿ (ಎಸ್‌ಎಲ್‌ಒ) ಉಪ ಮುಖ್ಯಸ್ಥ ಅಲಿ ಅಸ್ಗರ್ ಹೆಜಾಜಿ, ಎಸ್‌ಎಲ್‌ಒ ಸೇನಾ ಸಲಹೆಗಾರ ಮೇಜರ್ ಜನರಲ್ ವೈ ಆರ್ ಸಫಾವಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖಾತಿಬ್ ಅವರ ಹೆಸರುಗಳು ಪಟ್ಟಿಯಲ್ಲಿವೆ.



ಸಾವು-ನೋವು ಮತ್ತು ರಾಜತಾಂತ್ರಿಕ ಆತಂಕ: ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಇದುವರೆಗೆ 773 ಜನರು ಮೃತಪಟ್ಟಿದ್ದು, 8.5 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಇರಾನ್‌ನಲ್ಲಿ ಸಾವಿನ ಸಂಖ್ಯೆ 1,300 ದಾಟಿದೆ ಎಂದು ವರದಿಯಾಗಿದೆ. ಇರಾಕ್‌ನಲ್ಲಿ ಅಮೆರಿಕದ ಇಂಧನ ಮರುಪೂರಣ ವಿಮಾನ ಪತನಗೊಂಡು ಆರು ಮಂದಿ ಸಿಬ್ಬಂದಿ ಮೃತಪಟ್ಟಿದ್ದಾರೆ. ಜರ್ಮನಿ ಸೇರಿದಂತೆ ಹಲವು ದೇಶಗಳು ಯುದ್ಧ ನಿಲ್ಲಿಸಲು ತಕ್ಷಣದ ಯೋಜನೆಯ ಆಗತ್ಯವಿದೆ, ಎಂದು ಪ್ರತಿಪಾದಿಸಿವೆ.

ಮಿಲಿಟರಿ ಸನ್ನದ್ಧತೆ ಮತ್ತು ಸೈನ್ಯ ನಿಯೋಜನೆ

ಈ ಬೆನ್ನಲ್ಲೇ ಅಮೆರಿಕ 2,500 ಮರೀನ್ ಸೈನಿಕರು ಮತ್ತು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯನ್ನು ಮಧ್ಯಪ್ರಾಚ್ಯಕ್ಕೆ ರವಾನಿಸಿದೆ. ಯುದ್ಧ ಆರಂಭವಾದ ದಿನದಿಂದ ಇರಾನ್‌ನ 15,000ಕ್ಕೂ ಹೆಚ್ಚು ಗುರಿಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ದಾಳಿ ನಡೆಸಿವೆ, ಎಂದು ವರದಿಯಾಗಿದೆ. ಕಳೆದ 24 ಗಂಟೆಗಳಲ್ಲಿ ಕ್ಷಿಪಣಿ ಉಡಾವಣಾ ಕೇಂದ್ರಗಳು ಸೇರಿದಂತೆ 200ಕ್ಕೂ ಹೆಚ್ಚು ನೆಲೆಗಳನ್ನು ಧ್ವಂಸಗೊಳಿಸಲಾಗಿದೆ. ಪ್ರತೀಕಾರವಾಗಿ ಇರಾನ್ ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿದ್ದು, ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗೆ ಏರಿಕೆಯಾಗಿದೆ.

ಹಾರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿ

ಇರಾನ್ ರಾಜತಾಂತ್ರಿಕರು ಜಲಸಂಧಿ ತಾಂತ್ರಿಕವಾಗಿ ತೆರೆದಿದೆ ಎಂದು ಹೇಳಿಕೊಂಡಿದ್ದರೂ, ನೌಕಾ ಸಂಚಾರ ಶೇ.90ರಷ್ಟು ಕುಸಿದಿದೆ. ವಿಮಾ ಕಂಪನಿಗಳು ರಕ್ಷಣೆ ಹಿಂಪಡೆದಿರುವುದರಿಂದ ಮತ್ತು ಡ್ರೋನ್ ದಾಳಿಯ ಭೀತಿಯಿಂದಾಗಿ ವಾಣಿಜ್ಯ ಹಡಗುಗಳು ಸಂಚಾರ ಸ್ಥಗಿತಗೊಳಿಸಿವೆ. ಈ ಜಲಸಂಧಿಯ ಮೂಲಕ ಸಾಗುವ ವಿಶ್ವದ ಶೇ.20 ರಷ್ಟು ತೈಲ ಮತ್ತು ವಾರ್ಷಿಕ 80 ಮಿಲಿಯನ್ ಟನ್ ಎಲ್‌ಪಿಜಿ ಪೂರೈಕೆಗೆ ಅಡ್ಡಿಯಾಗಿದ್ದು, 1970ರ ದಶಕದ ಮಾದರಿಯ ಇಂಧನ ಬಿಕ್ಕಟ್ಟು ಎದುರಾಗುವ ಆತಂಕ ಮೂಡಿದೆ.




ಮಧ್ಯಪ್ರಾಚ್ಯ ಇತಿಹಾಸದಲ್ಲೇ ಅತಿ ದೊಡ್ಡ ದಾಳಿ

ಖಾರ್ಗ್ ತೈಲ ರಫ್ತು ಕೇಂದ್ರದ ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ ಅವರು, ಇದನ್ನು ಮಧ್ಯಪ್ರಾಚ್ಯದ ಇತಿಹಾಸದಲ್ಲೇ ಅತಿ ಶಕ್ತಿಶಾಲಿ ಬಾಂಬ್ ದಾಳಿಗಳಲ್ಲೊಂದು ಎಂದು ಹೇಳಿಕೊಂಡಿದ್ದಾರೆ. ಆದರೆ ಈ ದಾಳಿಗೆ ಸಂಬಂಧಿಸಿ ಯಾವುದೇ ಸಾಕ್ಷ್ಯವನ್ನು ಅವರು ನೀಡಿಲ್ಲ.

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

ಖಾರ್ಗ್‌ನಲ್ಲಿರುವ ತೈಲ ಮೂಲಸೌಕರ್ಯಗಳನ್ನೂ ಸಂಪೂರ್ಣ ನಾಶ ಮಾಡುವುದಕ್ಕೂ ಮುನ್ನ ಇರಾನ್ ಎಚ್ಚೆತ್ತುಕೊಂಡು ಹಾರ್ಮುಜ್ ಜಲಸಂಧಿಯನ್ನು ತೆರಯಬೇಕು. ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗುವ ಹಡಗುಗಳಿಗೆ ಮುಕ್ತ ಮತ್ತು ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಇರಾನ್ ಇದನ್ನು ಮಾಡಿದರೆ ನಾನೂ ನನ್ನ ನಿರ್ಧಾರ ಮರುಪರಿಶೀಲಿಸುವೆ ಎಂದು ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.



ಕಿರುಸುದ್ದಿ

ಮಾತುಕತೆ ಮೂಲಕ ಸಂಘರ್ಷ ಪರಿಹಾರ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಮಾತುಕತೆ ಮೂಲಕ ಪರಿಹರಿಸಲು ಭಾರತವು ಬ್ರಿಕ್ಸ್ ಸದಸ್ಯ ರಾಷ್ಟ್ರಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.ದಿಲ್ಲಿಯಲ್ಲಿ ಅಂತರ ಸಚಿವಾಲಯದ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಜೈಸ್ವಾಲ್, ಕೆಲವು ಬ್ರಿಕ್ಸ್ ಸದಸ್ಯರು ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಸದಸ್ಯ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳು ಈ ಗುಂಪಿಗೆ ಒಮ್ಮತವನ್ನು ರೂಪಿಸಲು ಕಷ್ಟವಾಗಿಸಿವೆ ಎಂದು ಅವರು ಗಮನಿಸಿದರು.

ಪಾಕ್ ಸರ್ಕಾರಿ ನೌಕರರ ವೇತನ ಶೇ.30 ಕಡಿತ!


ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಯುದ್ಧದಿಂದ ತೈಲ ಕೊರತೆ ಹಿನ್ನೆಲೆ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ನೌಕರರ ವೇತನವನ್ನು ಶೇ.5ರಿಂದ ಶೇ.30ರವರೆಗೆ ಕಡಿತಗೊಳಿಸಲು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅನುಮೋದನೆ ನೀಡಿದ್ದಾರೆ. ಅಮೆರಿಕ-ಇಸ್ರೇಲ್-ಇರಾನ್ ನಡುವಿನ ಸಂಘರ್ಷದಿಂದ ತೈಲ ಬೆಲೆ ಏರಿಕೆಯಾಗಿದ್ದಲ್ಲದೆ, ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳನ್ನು ದಾಟಲು ಅನುಮತಿಸದ ಕಾರಣ ಜಾಗತಿಕ ತೈಲ ಪೂರೈಕೆ ಮೊಟಕುಗೊಂಡಿದೆ. ಈ ಹಿನ್ನೆಲೆ ಚರ್ಚಿಸಲು ಶನಿವಾರ ಉನ್ನತಮಟ್ಟದ ಸಭೆ ಕರೆದಿದ್ದ ಪಾಕ್ ಪ್ರಧಾನಿ, ಸರ್ಕಾರದ ಅನಗತ್ಯ ಖರ್ಚು ಕಡಿಮೆಗೊಳಿಸಲು ಸರ್ಕಾರಿ ನೌಕರರ ವೇತನ ಕಡಿತಗೊಳಿಸುವುದಾಗಿ ಪ್ರಕಟಿಸಿದ್ದಾರೆ.

ಆ್ಯಂಸ್ಟರ್‌ಡ್ಯಾಮ್ ಯಹೂದಿ ಶಾಲೆ ಮೇಲೆ ಬಾಂಬ್ ದಾಳಿ!

ಆ್ಯಂಸ್ಟರ್‌ಡ್ಯಾಮ್: ನೆದರ್‌ಲೆಂಡ್ ರಾಜಧಾನಿಯಲ್ಲಿ ಶನಿವಾರ ಮುಂಜಾನೆ ಭಯೋತ್ಪಾದಕ ಬಾಂಬ್ ದಾಳಿ ನಡೆದಿದ್ದು, ಯಹೂದಿ ಶಾಲೆಯೊಂದಕ್ಕೆ ಭಾರೀ ಹಾನಿಯಾಗಿದೆ. ಯಹೂದಿ ಸಮುದಾಯವನ್ನು ಗುರಿಯಾಗಿಸಿ ನಡೆಸಲಾದ ಉಗ್ರ ದಾಳಿಯೆಂದು ಆ್ಯಂಸ್ಟರ್‌ಡ್ಯಾಮ್ ಮೇಯರ್ ಫೆಮ್ಕೆ ಹಲ್ಸೆಮಾ ತಿಳಿಸಿದ್ದಾರೆ. ಸ್ಫೋಟದ ಬಳಿಕ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ತಕ್ಷಣವೇ ದುರಂತ ಸ್ಥಳಕ್ಕಾಗಮಿಸಿ ಹೆಚ್ಚಿನ ಹಾನಿ ಆಗುವುದನ್ನು ತಡೆದರು. ಇದು ಕಳೆದ ಎರಡು ದಿನಗಳಲ್ಲಿ ಎರಡನೇ ದಾಳಿಯಾಗಿದೆ. ಶುಕ್ರವಾರ ಬಂದರು ನಗರ ರೋಟರ್‌ಡ್ಯಾಮ್‌ನಲ್ಲಿ ಸ್ಫೋಟ ಸಂಭವಿಸಿತ್ತು. ರೋಟರ್‌ಡ್ಯಾಮ್‌ನಲ್ಲಿ ನಾಲ್ವರು ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿತ್ತು. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಯಹೂದಿಗಳನ್ನು ಗುರಿಯಾಗಿಸಿ ದಾಳಿ ನಡೆದಿದೆಯೆಂದು ವರದಿಯಾಗಿದೆ.

ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಶಾ

ಮೊಗಾ(ಬಿಹಾರ): ಯಾರಾದರೂ ರಾಜ್ಯವನ್ನು ಮಾದಕದ್ರವ್ಯಗಳಿಂದ ಮುಕ್ತಗೊಳಿಸಲು ಸಾಧ್ಯ ಎಂದರೆ ಅದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.



2027ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಶನಿವಾರ ಪಂಜಾಬ್ ಜನತೆಗೆ ಮನವಿ ಮಾಡಿದ್ದಾರೆ. ಇಂದು, ಸಾಲ, ಮಾದಕ ದ್ರವ್ಯಗಳು, ಧಾರ್ಮಿಕ ಮತಾಂತರಗಳು, ಭ್ರಷ್ಟಾಚಾರ ಮತ್ತು ದರೋಡೆಕೋರರ ದಾಳಿಯಿಂದ ಪಂಜಾಬ್ ನಾಶವಾಗಿದೆ ಎಂದು ಶಾ ಹೇಳಿದರು.

ಪಂಜಾಬ್ ಕಾಂಗ್ರೆಸ್, ಅಕಾಲಿಗಳು ಮತ್ತು ಆಪ್‌ಗೆ ಅನೇಕ ಅವಕಾಶಗಳನ್ನು ನೀಡಿದೆ. ಈಗ ಬಿಜೆಪಿಗೆ ಅವಕಾಶ ನೀಡಬೇಕು ಎಂದು ಹೇಳಿದರು. ನಾವು ಪಂಜಾಬ್‌ನಲ್ಲಿ ಬದಲಾವಣೆಯನ್ನು ತರುತ್ತೇವೆ ಎಂದು ಹೇಳಿದರು. ಭಗವಂತ್ ಮಾನ್ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರಿಗೆ ಎಟಿಎಂ ಆಗಿ ಮಾರ್ಪಟ್ಟಿದೆ ಎಂದು ಶಾ ಹೇಳಿದರು. 2027ರಲ್ಲಿ ಚುನಾವಣೆಗಳು ನಡೆಯಲಿದ್ದು, ಮೊಗಾವಿನಿಂದ ಬಿಜೆಪಿ ಒಂದು ರೀತಿಯಲ್ಲಿ ತನ್ನ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದೆ ಎಂದು ಶಾ ಹೇಳಿದರು.

ನಾನು ಪಂಜಾಬಿನ ಜನರಿಗೆ ಮನವಿ ಮಾಡಲು ಬಂದಿದ್ದೇನೆ ಎಂದು ತಮ್ಮ ಪಕ್ಷಕ್ಕೆ ಬೆಂಬಲ ಕೋರಿದರು. ನಾನು ತಾಯಂದಿರು, ಸಹೋದರಿಯರು ಮತ್ತು ವೃದ್ಧರು ಸೇರಿದಂತೆ ಪಂಜಾಬಿನ ಜನರಿಂದ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದು ಹೇಳಿದರು.

ಎನ್‌ಎಸ್‌ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

ಜೋಧ್‌ಪುರ: ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್‌ಎಸ್‌ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿಸಲಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ ಬೆನ್ನಲ್ಲೇ, ಮಧ್ಯಾಹ್ನ ಸುಮಾರು 1:30 ಗಂಟೆಗೆ ಬಿಡುಗಡೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಯಿತು. 2025ರ ಸೆಪ್ಟೆಂಬರ್ 26 ರಿಂದ ಬಂಧನದಲ್ಲಿದ್ದ ವಾಂಗ್‌ಚುಕ್, ಎನ್‌ಎಸ್‌ಎ ಅನ್ವಯದಲ್ಲಿ ನಿಗದಿಪಡಿಸಲಾದ ಗರಿಷ್ಠ ಅವಧಿಯ ಸುಮಾರು ಅರ್ಧದಷ್ಟು ಕಾಲ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಸ್ಥಳೀಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ, ಪತ್ನಿ ಗೀತಾಂಜಲಿ ಆಂಗ್ಮೋ ಬಿಡುಗಡೆಯ ಔಪಚಾರಿಕ ಪ್ರಕ್ರಿಯೆಗಳನ್ನು ಪೂರೈಸಿದರು.

ಬಂಧನದ ಹಿನ್ನೆಲೆ: ಲಡಾಖ್‌ನಲ್ಲಿ ತೀವ್ರ ಪ್ರತಿಭಟನೆಗಳು ನಡೆದ ನಂತರ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ವಾಂಗ್‌ಚುಕ್ ಅವರನ್ನು ಬಂಧಿಸಲಾಗಿತ್ತು.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ ಆರನೇ ಅನುಸೂಚಿಗೆ ಸೇರಿಸಬೇಕು ಎಂಬ ಬೇಡಿಕೆಗಳಿಗಾಗಿ ನಡೆದ ಈ ಪ್ರತಿಭಟನೆಗಳಲ್ಲಿ 22 ಪೊಲೀಸರು ಸೇರಿದಂತೆ 45ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ವಾಂಗ್‌ಚುಕ್ ಬಂಧನವನ್ನು ಹಿಂಪಡೆಯುವ ಕೇಂದ್ರದ ನಿರ್ಧಾರವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಸ್ವಾಗತಿಸಿದ್ದಾರೆ.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಸಮರ್ಪಕ ಲಭ್ಯ

ಹೊಸದಿಲ್ಲಿ: ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯಿಂದಾಗಿ ಇಂಧನ ಪೂರೈಕೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಬಗ್ಗೆ ಆತಂಕ ಬೇಡ ಎಂದಿದೆ.



ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಸಚಿವಾಲಯವು, ದೇಶದಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ಲಭ್ಯವಿದೆ. ಕೊರತೆ ಇದೆಎಂದು ಇಂಧನವನ್ನು ಸಡಿಲವಾದ ಕಂಟೈನರ್‌ಗಳಲ್ಲಿ ಸಂಗ್ರಹಿಸಬೇಡಿ.ಇದರಿಂದ ಅಪಾಯ ಹೆಚ್ಚಿದೆ ಎಂದು ಗ್ರಾಹಕರಿಗೆ ಸೂಚಿಸಿದೆ. ತಮಿಳುನಾಡಿನಲ್ಲಿ ಚಿಲ್ಲರೆ ಮಾರಾಟದ ಅಂಗಡಿಯೊಂದರಲ್ಲಿ ಪೆಟ್ರೋಲ್ ಅನ್ನು ಸಡಿಲವಾದ ಧಾರಕದಲ್ಲಿ ವಿತರಿಸಲಾಗುತ್ತಿದ್ದು, ಇದು ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸುವ ಪ್ರಕರಣವನ್ನು ಅಧಿಕಾರಿಗಳು ಪತ್ತೆ ಮಾಡಿದ ಬೆನ್ನಲ್ಲೇ ಈ ಸಲಹೆ ಬಂದಿದೆ.

ಉಲ್ಲಂಘನೆಗಳಿಗೆ ಕಟ್ಟುನಿಟ್ಟಾದ ಕ್ರಮದ ಬಗ್ಗೆ ಸರ್ಕಾರವು ಎಚ್ಚರಿಕೆ ನೀಡಿದೆ. ಈ ವಿಷಯದಲ್ಲಿ ಈಗಾಗಲೇ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಹೇಳಿದೆ. ಸಂಬಂಧಿತ ಪೆಟ್ರೋಲ್ ಪಂಪ್ ಅನ್ನು ಸ್ಥಗಿತಗೊಳಿಸಲಾಗಿದೆ. ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಪೆಟ್ರೋಲ್ ಮತ್ತು ಡಿಸೇಲ್ ಅನ್ನು ವಿತರಿಸುವಾಗ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ದೇಶದಾದ್ಯಂತದ ಎಲ್ಲಾ ಇಂಧನ ಚಿಲ್ಲರೆ ವ್ಯಾಪಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಐಎಸ್‌ಐ ಬೆಂಬಲಿತ ಉಗ್ರ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

ಅಮೃತಸರ: ಪಾಕಿಸ್ತಾನಿ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಶಸ್ತ್ರಾಸ್ತ್ರ ಜಾಲವೊಂದನ್ನು ಪಂಜಾಬ್ ಪೊಲೀಸರು ಬೇಧಿಸಿದ್ದು, ಭಾರೀ ಶಸ್ತ್ರಾಸ್ತ್ರ ಸಹಿತ ಇಬ್ಬರು ಉಗ್ರರನ್ನು ಬಂಧಿಸಿದ್ದಾರೆ.



ರಾಜ್ಯ ಪೊಲೀಸ್ ಮಹಾನಿರ್ದೇಶಕರ ಮಾರ್ಗದರ್ಶನದಲ್ಲಿ ಅಮೃತಸರ ಗ್ರಾಮೀಣ ಪೊಲೀಸರು ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಂದ ರೈಫಲ್‌ಗಳು, ಪಿಸ್ತೂಲ್‌ಗಳು, ಕಾಟ್ರಿಜ್‌ಗಳನ್ನು ವಶಪಡಿಸಲಾಗಿದೆ. ಪಂಜಾಬ್ ರಾಜ್ಯದೆಲ್ಲೆಡೆ ಭಾರತ ವಿರೋಧಿ ಮತ್ತು ಪೊಲೀಸ್ ವಿರೋಧಿ ಆಖ್ಯಾನವನ್ನು ಹರಡುವುದು ಇವರ ಉದ್ದೇಶವಾಗಿತ್ತೆಂದೂ, ಸಾಮಾಜಿಕ ಜಾಲತಾಣದ ಮೂಲಕ ಪಾಕಿಸ್ತಾನಿ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಗಡಿ ಸಂಘರ್ಷ ತೀವ್ರ | ಕುನಾರ್ ಪ್ರಾಂತ್ಯ ಪ್ರದೇಶಕ್ಕೆ ಭಾರೀ ಹಾನಿ

ಕುನಾರ್ ಪ್ರಾಂತ್ಯದ ಮೇಲೆ ಪಾಕ್ ಕ್ಷಿಪಣಿ ದಾಳಿ

ಕಾಬೂಲ್: ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

ಹಲವು ಜಿಲ್ಲೆಗಳ ಮೇಲೆ ನಡೆದ ಈ ಭೀಕರ ದಾಳಿಯನ್ನು ಕುನಾರ್‌ನ ಮಾಹಿತಿ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಜಿಯಾವುರ್ ರಹಮಾನ್ ಸ್ಪಿನ್ ಘರ್ ಖಚಿತಪಡಿಸಿದ್ದಾರೆ. ಪ್ರಾಂತ್ಯದಾದ್ಯಂತ ಭಾರೀ ಹಾನಿಯಾಗಿದೆ ಎಂದು ವರದಿಯಾಗಿದ್ದರೂ, ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ. ಫೆಬ್ರವರಿ 21 ರಂದು ತಾಲಿಬಾನ್ ಶಿಬಿರಗಳ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯ ನಂತರ ಆರಂಭವಾದ ಈ ಸಂಘರ್ಷ ಸತತವಾಗಿ ಮುಂದುವರಿದಿದೆ.

ವೈಮಾನಿಕ ದಾಳಿ ಮತ್ತು ಪ್ರತೀಕಾರ: ಪಾಕಿಸ್ತಾನ ವಾಯುಪಡೆ (ಪಿಎಎಫ್) ಕಂದಹಾರ್ ಪಕ್ತಿಯಾ ಮತ್ತು ಕಾಬೂಲ್‌ನಲ್ಲಿರುವ ಪ್ರಮುಖ ಗುರಿಗಳ ಮೇಲೆ ಸಮನ್ವಯದ ದಾಳಿಗಳನ್ನು ನಡೆಸಿದೆ. ಕಂದಹಾರ್ ನಗರದಲ್ಲಿರುವ ತಾಲಿಬಾನ್‌ನ 'ಅಲ್-ಬದರ್ ಕಾರ್ಪ್ಸ್' ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಹಿರಿಯ ಕಮಾಂಡರ್‌ಗಳನ್ನು ಹತ್ಯೆಗೆ ಪ್ರಯತ್ನಿಸಲಾಗಿದೆ, ಎಂದು ಗುಪ್ತಚರ ಮೂಲಗಳು ತಿಳಿಸಿವೆ.

ಈ ಕಾರ್ಯಾಚರಣೆಗಳನ್ನು ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ವಿರುದ್ಧ ನಡೆಸಲಾಗುತ್ತಿದೆ ಎಂದು ಪಾಕಿಸ್ತಾನ ಹೇಳಿಕೊಂಡರೆ, ಅಫ್ಘಾನ್ ಅಧಿಕಾರಿಗಳು, ಪಾಕಿಸ್ತಾನ ನಾಗರಿಕರನ್ನು ಹತ್ಯೆ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಈ ಆಕ್ರಮಣಗಳಿಗೆ ತಕ್ಕ ಉತ್ತರ ನೀಡಲಾಗುವುದು ಎಂದು ತಾಲಿಬಾನ್ ನಾಯಕತ್ವ ಎಚ್ಚರಿಕೆ ನೀಡಿದ್ದು, ಗಡಿ ಭಾಗದಲ್ಲಿ ಡ್ರೋನ್ ದಾಳಿ, ಘರ್ಷಣೆಗಳು ಮುಂದುವರಿದಿವೆ.



ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ

ಪಾಕಿಸ್ತಾನ-ಅಫ್ಘಾನಿಸ್ತಾನ ಸಂಘರ್ಷದಿಂದ ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ ಹೆಚ್ಚಿದ್ದು, ಭಯೋತ್ಪಾದನೆ ಹರಡುವಿಕೆ ಮತ್ತು ನಿರಾಶ್ರಿತರು ಬಿಕ್ಕಟ್ಟು ಎದುರಿಸಬಹುದು. ಭಾರತ ಈ ಭಾಗದಲ್ಲಿ ಶಾಂತಿ ಸ್ಥಾಪಕನಾಗಿ ಮತ್ತು ಅಫ್ಘಾನಿಸ್ತಾನಕ್ಕೆ ಮಾನವೀಯ ನೆರವು ನೀಡುತ್ತಿದೆ. ಈಗ, ಪಾಕಿಸ್ತಾನದ ಪಶ್ಚಿಮ ಗಡಿಯಲ್ಲಿನ ಈ ಉದ್ವಿಗ್ನತೆ ಭಾರತದ ಭದ್ರತಾ ಕಾರ್ಯತಂತ್ರದ ಮೇಲೆ ಪ್ರಭಾವ ಬೀರಲಿದ್ದು, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವಲ್ಲಿ ಭಾರತದ ಪಾತ್ರ ನಿರ್ಣಾಯಕವಾಗಲಿದೆ.

ಕಾಂಗ್ರೆಸ್‌ನಿಂದ ಭೀತಿ ಸೃಷ್ಟಿ: ಪ್ರಧಾನಿ ಮೋದಿ ಟೀಕೆ

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ

ಸಿಲ್ಚಾರ್: ಜಾಗತಿಕ ಸಂಘರ್ಷಗಳಿಂದ ಭಾರತೀಯ ಜನತೆಯ ಮೇಲಾಗುವ ಪರಿಣಾಮಗಳನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಆದ್ಯತೆ ನೀಡುತ್ತಿದೆ. ಆದರೆ ವಿರೋಧ ಪಕ್ಷ ಕಾಂಗ್ರೆಸ್ ದೇಶಾದ್ಯಂತ ಭೀತಿ ಹುಟ್ಟಿಸುವ ಮೂಲಕ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಶನಿವಾರ ಅಸ್ಸಾಂನ ಸಿಲ್ಚಾರ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ವದಂತಿ ಹಬ್ಬಿಸುತ್ತಿದೆ. ಸುಳ್ಳು ವಿಡಿಯೋಗಳ (ರೀಲ್ಸ್) ಮೂಲಕ ಜನರ ದಿಕ್ಕುತಪ್ಪಿಸುತ್ತಿದೆ ಎಂದು ಪ್ರತಿಪಾದಿಸಿದರು. ಜಾಗತಿಕ ಯುದ್ಧದ ಸಂದರ್ಭದಲ್ಲಿ ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ವಿರೋಧ ಪಕ್ಷ ವಿಫಲವಾಗಿದೆ ಎಂದು ಅವರು ಟೀಕಿಸಿದರು.

ನಿರ್ಲಕ್ಷ್ಯ ಮತ್ತು ಪರಿಣಾಮಗಳು: ಈಶಾನ್ಯ ಭಾರತದ ಐತಿಹಾಸಿಕ ನಿರ್ಲಕ್ಷ್ಯದ ಬಗ್ಗೆ ಮಾತನಾಡಿದ ಪ್ರಧಾನಿ, ದಶಕಗಳ ಕಾಲ ಈ ಪ್ರದೇಶವನ್ನು ದಿಲ್ಲಿ ಮತ್ತು ಕೇಂದ್ರದ ಆಡಳಿತಗಾರರ ಹೃದಯದಿಂದ ದೂರ ಇಡಲಾಗಿತ್ತು. ಸ್ವಾತಂತ್ರ್ಯದ ಸಮಯದಲ್ಲಿ ಬರಾಕ್ ಕಣಿವೆಯ ಸಮುದ್ರ ಮಾರ್ಗದ ಸಂಪರ್ಕವನ್ನು ಕಡಿತಗೊಳಿಸುವಂತೆ ಗಡಿ ಗುರುತಿಸಲು ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿತ್ತು. ಇದು ಈ ಭಾಗದ ಕೈಗಾರಿಕಾ ಸಾಮರ್ಥ್ಯವನ್ನು ಕುಂದಿಸಿತು ಎಂದು ಪ್ರಧಾನಿ ಆರೋಪಿಸಿದರು. ಪ್ರಸ್ತುತ ಬಿಜೆಪಿ ಸರ್ಕಾರ ರೈತರಿಗೆ 20,000 ಕೋಟಿ ರೂ.ಗೂ ಹೆಚ್ಚು ಹಣವನ್ನು ನೇರವಾಗಿ ತಲುಪಿಸಿದೆ ಎಂದು ಅವರು ತಿಳಿಸಿದರು.



ಮೂಲಸೌಕರ್ಯ ಯೋಜನೆಗಳ ಅನಾವರಣ: ಅಸ್ಸಾಂನಲ್ಲಿ ಶುಕ್ರವಾರದಿಂದ ಒಟ್ಟು 47,800 ಕೋಟಿ ರೂ. ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ಶನಿವಾರ ಸಿಲ್ಚಾರ್‌ನಲ್ಲಿ 23,550 ಕೋಟಿ ರೂ.ಗಳ ಯೋಜನೆಗಳನ್ನು ಅನಾವರಣಗೊಳಿಸಲಾಯಿತು. ಸಿಲ್ಚಾರ್ ಮತ್ತು ಮೇಘಾಲಯದ ಶಿಲ್ಲಾಂಗ್ ನಡುವೆ 22,864 ಕೋಟಿ ರೂ. ವೆಚ್ಚದ 'ಎಕ್ಸ್‌ಪ್ರೆಸ್‌ವೇ' ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ವಿವಿಧ ವಿನ್ಯಾಸಗಳಿಗೆ ಮಾರು ಹೋದ ಜನತೆ

ಗಮನ ಸೆಳೆಯುತ್ತಿರುವ ಗುಜರಾತ್ ಮಡಿಕೆ

▸ಕಿರಣ ಮಾಸಣಗಿ

◆**ಹಾವೇರಿ:** ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚುತ್ತಿದ್ದು, ಪ್ರಸ್ತುತ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ನಿರಂತರವಾಗಿ 36 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಲೇ ಇದ್ದು, ಮುಂದಿನ ದಿನಗಳಲ್ಲಿ ಅಂದರೆ ಏಪ್ರಿಲ್-ಮೇ ತಿಂಗಳಲ್ಲಿ ಇದು ಸುಮಾರು 43-44 ಡಿಗ್ರಿಗೆ ತಲುಪಬಹುದು ಎಂದು ಹವಾಮಾನ ತಜ್ಞರು ಅಂದಾಜಿಸಿದ್ದು, ಈಗಾಗಲೇ ಬೆಳಗಿನ 11ರಿಂದ ಸಂಜೆ 4ರ ಅವಧಿಯಲ್ಲಿ ಹೊರ ಹೋಗದಂತೆ ಎಚ್ಚರಿಸಿದ್ದಾರೆ.

ಬಿಸಿಲ ಬೇಗೆ ಹೆಚ್ಚಿದಂತೆ ಆರೋಗ್ಯಕ್ಕೆ ಪೂರಕವಾದ, ತಂಪಾದ ಪಾನೀಯಗಳಿಗೆ ಜನರು ಮಾರು ಹೋಗುತ್ತಿದ್ದು, ಇದರ ಬೆನ್ನಲ್ಲೇ ಜಿಲ್ಲಾ ಕೇಂದ್ರವಾದ ಹಾವೇರಿ ಸೇರಿದಂತೆ ಎಲ್ಲ ನಗರ ಪ್ರದೇಶಗಳಲ್ಲಿ ಗುಜರಾತ್ ಮಣ್ಣಿನ ಮಡಿಕೆಗಳ ಮಾರಾಟ ನಡೆದಿದೆ.

ಮಣ್ಣಿನಿಂದಲೇ ಮಾಡಿದ ಆದರೆ ಮಾದರಿ, ಬಣ್ಣ ಮತ್ತು ಕಲಾತ್ಮಕತೆ ಹೊಂದಿರುವ ಹಿನ್ನೆಲೆಯಲ್ಲಿ ನಗರದ ಅಲ್ಲಲ್ಲಿ ಸ್ಥಳೀಯ ಕುಂಬಾರರೇ ಅವುಗಳನ್ನು ತರಿಸಿ ಮಾರಾಟ ಮಾಡುತ್ತಿರುವುದು ಪರ್ಯಾಯ ಉದ್ಯೋಗ ಕಂಡುಕೊಂಡಂತಾಗಿದೆ. ಇದರಿಂದಾಗಿ ಕಳೆ ಕಳೆದುಕೊಂಡಿದ್ದ ಕುಂಬಾರಿಕೆ ಅಥವಾ ಕುಂಬಾರರಿಗೆ ಇದು ಉದ್ಯೋಗದಲ್ಲಿ ಕೊಂಚ ಆಶಾಭಾವ ಮೂಡಿಸಿದೆ.

ಗಮನ ಸೆಳೆಯುತ್ತಿವೆ ಗುಜರಾತ್ ಮಡಿಕೆ: ಪ್ರಸ್ತುತ ಗುಜರಾತ್ ಮಡಿಕೆಗಳು ಮಣ್ಣಿನಿಂದಲೇ ಮಾಡಿದ್ದರೂ ನಿಖರತೆ, ಖಚಿತತೆ ಜತೆಗೆ ಗುಣಮಟ್ಟವನ್ನೂ ಹೊಂದಿವೆ. ಆದರ ಜೊತೆಗೆ ಮನಸೆಳೆಯುವಂತಹ ಮಾದರಿಗಳು, ಮಣ್ಣಿನ ಲೋಟ, ನೀರಿನ ಬಾಟಲಿ, ತಲಾ 5ಲೀಟರ್, 10, 15 ಮತ್ತು 20 ಲೀಟರ್ ಸಾಮರ್ಥ್ಯದ ಈ ಮಡಿಕೆಗಳು ಇದೀಗ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸುವವರನ್ನು ಸೆಳೆದು ನಿಲ್ಲಿಸುತ್ತಿವೆ.



ಅವುಗಳಿಗೆ ನೀಡಿರುವ ಕಲಾತ್ಮಕ ಟಚ್, ಬಣ್ಣಗಳು, ಮುಚ್ಚಳ ಜತೆಗೆ ಗಮನ ಸೆಳೆಯುವಂತೆ ಅವುಗಳಿಗೆ ಪ್ಲಾಸ್ಟಿಕ್ ನಳ ಅಥವಾ ಟ್ಯಾಪ್ ಅಳವಡಿಕೆಯಿಂದಾಗಿ ಬಳಕೆ ಸುಲಭ ಎಂಬ ಭರವಸೆ ಮೂಡಿಸಿವೆ. ಹೀಗಾಗಿ ಜನರು ಈ ಗುಜರಾತ್ ಮಾದರಿ ಮಡಿಕೆ ಖರೀದಿಗೆ ಆಸಕ್ತಿ ತೋರುತ್ತಿದ್ದಾರೆ.

ಮಣ್ಣಿನ ಮಡಿಕೆಗೆ ತಾಂತ್ರಿಕ ಸ್ಪರ್ಶ: ಪ್ರಸ್ತುತ ಸ್ಥಳೀಯ ಕುಂಬಾರರು ತಾಂತ್ರಿಕತೆಯಲ್ಲಿ ಹಿಂದೆ ಇದ್ದರೂ ಮಾರುಕಟ್ಟೆಯಲ್ಲಿ ತಮ್ಮ ಕೈಚಳ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ತಾಂತ್ರಿಕತೆಯ ನೆರವು ಸಿಗದ ಹಿನ್ನೆಲೆಯಲ್ಲಿ ಇದೀಗ ಗುಜರಾತ್‌ನಲ್ಲಿ ಸಿದ್ಧಗೊಂಡ ಮಣ್ಣಿನ ಮಡಿಕೆಗಳನ್ನು ಇಲ್ಲಿಗೆ ತಂದು ಮಾರಾಟಕ್ಕೆ ಮುಂದಾಗಿದ್ದಾರೆ.

ಇನ್ನು ಈ ಮಡಿಕೆಗಳು ಯಂತ್ರಗಳಲ್ಲಿ ತಯಾರಾಗುತ್ತಿದ್ದು ಪ್ರತಿಯೊಂದೂ ಉದ್ದ, ಅಗಲ, ಸುತ್ತಳತೆ ಮತ್ತು ಎತ್ತರಗಳಲ್ಲಿ ಒಂದೇ ತೆರನಾದ ಅನುರೂಪತೆ ಹೊಂದಿವೆ. ಇನ್ನು ಅವುಗಳ ಹೊರಭಾಗಕ್ಕೆ ವಿವಿಧ ಡಿಸೈನ್‌ಗಳನ್ನು ಮೂಡಿಸಲಾಗಿದ್ದು ಅದಕ್ಕೆ ತಕ್ಕಂತೆ ಬಣ್ಣಗಳನ್ನೂ ನೀಡಲಾಗಿದೆ. ಇನ್ನು ಅವುಗಳಿಗೆ ಅನುರೂಪವಾದ ಮುಚ್ಚಳ ಡಿಸೈನ್ ಮಾಡಲಾಗಿದೆ.

ಅಷ್ಟೇ ಅಲ್ಲ ಸುಮಾರು 3-4 ಮಾದರಿಯಲ್ಲಿ ನೀರಿನ ಸಂಗ್ರಹದ ಮಡಿಕೆ, ನೀರಿನ ಬಾಟಲಿ ಮತ್ತು ಲೋಟ ಗಮನ ಸೆಳೆಯುತ್ತಿವೆ. ಇನ್ನು ಇವುಗಳನ್ನು ಯಂತ್ರಗಳಲ್ಲಿ ತಯಾರಿಸಿದ್ದು ಮಾತ್ರವಲ್ಲ, ಅಂತಿಮವಾಗಿ ಅವುಗಳಿಗೆ ವಿದ್ಯುತ್ ಶಾಖದಲ್ಲಿಯೇ ಒಣಗಿಸುವ ಮೂಲಕ ಬಣ್ಣದಲ್ಲಿ ವ್ಯತ್ಯಾಸ ಕಾಣದಂತೆ ರೂಪಿಸಲಾಗಿದೆ. ಹೀಗಾಗಿ ಇವುಗಳತ್ತ ಜನರು ಮನಸ್ಸು ಮಾಡುತ್ತಿದ್ದು, ಇದೀಗ ದಿನಂಪ್ರತಿ ನೂರಾರು ಸಂಖ್ಯೆಯಲ್ಲಿ ಮಾರಾಟಗೊಳ್ಳುವ ಮೂಲಕ 2-3 ತಿಂಗಳ ಕಾಲ ಕುಂಬಾರರರಿಗೆ ಉದರ ಪೋಷಣೆಗೆ ಮಾರ್ಗ ನೀಡಿವೆ.

ಒಟ್ಟಿನಲ್ಲಿ ಕಣ್ಮರೆಯಾಗುತ್ತಿರುವ ಕುಂಬಾರಿಕೆಗೆ ಹೊಸ ಸ್ಪರ್ಶ ನೀಡಿರುವ ಈ ಗುಜರಾತ್ ಮಾದರಿ ಮಣ್ಣಿನ ಮಡಿಕೆಗಳು ಸ್ಥಳೀಯ ಕುಂಬಾರರಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ನೀಡಿದ್ದು, ತಾಂತ್ರಿಕತೆ ಲಭಿಸಿದಲ್ಲಿ ಉದ್ಯೋಗದ ಮುಂದುವರಿಕೆಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು ಮತ್ತು ವೃತ್ತಿ ನಿರತರು ಹೊಸ ಚಿಂತನೆಗೆ ಮುಂದಾಗಬೇಕಿದೆ.

> **ಈ ಮಡಿಕಿ ಮಿಷನ್‌ನ್ಯಾಗ್ ರೆಡಿ ಮಾಡಿ, ಕರೆಂಟ್ ಬರ್ನರ್ ಮಿಷನ್‌ದಾಗ ಸುಟ್ಟ ಬಂದಾವ್ರಿ, ಹಿಂಗಾಗಿ ಡ್ಯಾಮೇಜ್ ಕಡಿಮಿ. ಆದ್ರ ಇವನ್ನ ನಮ್ಮಲ್ಲೆ ಮಾಡಾಕ ಬರಲ್ಲಾ, ನಮಗ್ ಅಷ್ಟ ತಿಳುವಳಿಕಿ ಇಲ್ಲಾ. ಅಲ್ಲಿಂದ ಇಲ್ಲಿಗಿ ತರಿಸಿ ಮಾರಾಟ ಮಾಡಾಕತ್ತೇವಿ. ಒಂದ್ ಗಡಿಗಿಗೆ 40-50 ರೂಪಾಯಿ ಉಳಿಸಿಕೊಂಡ ಮಾರಾಟಾ ಮಾಡಾಕತ್ತೇವಿ. ಈಗ ಬಿಸಿಲು ಹೆಚ್ಚಾದಂಗ ಹೆಚ್ಚಿಗಿ ಮಾರಾಟ ಆಗಾಕತ್ತಾವ್ರಿ.**
>
> ■ ಫಕೀರಪ್ಪ ಕುಂಬಾರ, ಸ್ಥಳೀಯ ಕುಂಬಾರ

ಬೆಂಕಿ ಅವಘಡಗಳ ಮಧ್ಯೆಯೂ ಸಾಧನೆ | 5 ವರ್ಷಗಳಲ್ಲಿ 1.95 ₹ ಕೋಟಿ ನಷ್ಟ

ಫೈರ್ ಸಿಬ್ಬಂದಿಗಳಿಂದ ₹7.98 ಕೋಟಿ ಆಸ್ತಿ ರಕ್ಷಣೆ

▸ರಾಚಪ್ಪಾ ಜಂಬಗಿ

ದಿಗಂತ ವಿಶೇಷ

◆**ಕಲಬುರಗಿ:** ನಗರದಲ್ಲಿ ಕಳೆದ ಐದು ವರ್ಷಗಳಲ್ಲಿ ಸಂಭವಿಸಿದ ಬೆಂಕಿ ಅವಘಡಗಳು ಸಾಕಷ್ಟು ಆಸ್ತಿ ನಷ್ಟಕ್ಕೆ ಕಾರಣವಾದರೂ, ಅಗ್ನಿಶಾಮಕ ದಳದ ಸಿಬ್ಬಂದಿಗಳ ತ್ವರಿತ ಸ್ಪಂದನೆ ಹಾಗೂ ಸಾಹಸಮಯ ಕಾರ್ಯಾಚರಣೆಯಿಂದ ಅಪಾರ ಪ್ರಮಾಣದ ಆಸ್ತಿಯನ್ನು ರಕ್ಷಿಸಲು ಸಾಧ್ಯವಾಗಿದೆ. ಬೆಂಕಿಯ ಜ್ವಾಲೆಗಳ ಮಧ್ಯೆಯೇ ಜೀವ ಹಾಗೂ ಆಸ್ತಿ ಕಾಪಾಡುವ ಕಾರ್ಯದಲ್ಲಿ ತೊಡಗಿರುವ ಫೈರ್ ಸಿಬ್ಬಂದಿಯ ಸೇವೆ ಗಮನ ಸೆಳೆದಿದೆ.

2020ರಿಂದ 2025ರವರೆಗೆ ಅಂದರೆ ಐದು ವರ್ಷಗಳ ಅವಧಿಯಲ್ಲಿ ನಗರ ಪ್ರದೇಶದ ಮನೆ, ಹೊಲ, ಅಂಗಡಿ ಮತ್ತು ಕಾರ್ಖಾನೆ ಇತ್ಯಾದಿಗಳಲ್ಲಿ ಸಂಭವಿಸಿದ ಅಗ್ನಿ ಅವಘಡಗಳಿಂದ ಸುಮಾರು 1.95 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಬೆಂಕಿಗಾಹುತಿಯಾಗಿದ್ದು, ಅದೇ ಅವಧಿಯಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಕೈಗೊಂಡ ತ್ವರಿತ ಕಾರ್ಯಾಚರಣೆಯಿಂದ ಸುಮಾರು 7.98 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ರಕ್ಷಿಸಲಾಗಿದೆ. ಇದರಿಂದ ಅಗ್ನಿಶಾಮಕ ದಳದ ತುರ್ತು ಸೇವೆಗಳ



ಮಹತ್ವ ಹಾಗೂ ಸಿಬ್ಬಂದಿಯ ನಿಸ್ವಾರ್ಥ ಸೇವೆ ಮತ್ತೊಮ್ಮೆ ಸಾಬೀತಾಗಿದೆ.

ಅಗ್ನಿಶಾಮಕ ದಳದಲ್ಲಿ ಬೆಂಕಿ ಅವಘಡಗಳ ತೀವ್ರತೆಯನ್ನು ಆಧರಿಸಿ ಕರೆಗಳನ್ನು ಸಣ್ಣ ಕರೆ, ಮಧ್ಯಮ ಕರೆ ಮತ್ತು ಗಂಭೀರ ಕರೆ ಎಂದು ಮೂರು ವಿಭಾಗಗಳಲ್ಲಿ ವರ್ಗೀಕರಿಸಲಾಗಿದ್ದು, ಕಳೆದ ಐದು ವರ್ಷಗಳಲ್ಲಿ ಒಟ್ಟು 693 ಸಣ್ಣ ಕರೆಗಳು ಹಾಗೂ 150 ಮಧ್ಯಮ ಕರೆಗಳು ದಾಖಲಾಗಿವೆ. ಇನ್ನು 2022-23ನೇ ಸಾಲಿನಲ್ಲಿ ಮಾತ್ರ 3 ಗಂಭೀರ ಕರೆ ದಾಖಲಾಗಿರುವುದು ಗಮನಾರ್ಹವಾಗಿದೆ.

ಸಾಮಾನ್ಯವಾಗಿ 0 ರಿಂದ 10 ಲಕ್ಷದೊಳಗಿನ ನಷ್ಟ ಸಂಭವಿಸಿದರೆ ಸಣ್ಣ ಕರೆ, 10 ರಿಂದ 50 ಲಕ್ಷದವರೆಗೆ ನಷ್ಟವಾದರೆ ಮಧ್ಯಮ ಕರೆ ಮತ್ತು 50 ಲಕ್ಷಕ್ಕಿಂತ ಹೆಚ್ಚಿನ ನಷ್ಟ ಉಂಟಾದರೆ ಗಂಭೀರ ಕರೆ ಎಂದು ಪರಿಗಣಿಸಲಾಗುತ್ತದೆ.

ವರ್ಷ	-ಆಸ್ತಿ ನಷ್ಟ	-ಆಸ್ತಿ ರಕ್ಷಣೆ (₹)
2020-21	1.35 ಕೋಟಿ,	4.68 ಕೋಟಿ
2021-22	2.28 ಕೋಟಿ,	5.16 ಕೋಟಿ
2022-23	6.70 ಕೋಟಿ,	70.95 ಕೋಟಿ
2023-24	2.48 ಕೋಟಿ,	5.57 ಕೋಟಿ
2024-25	3.01 ಕೋಟಿ,	8.75 ಕೋಟಿ

1008 ಜನರ ರೆಸ್ಕ್ಯೂ

ಪ್ರವಾಹ ಹಾಗೂ ವಿವಿಧ ವಿಕೋಪ ಸಂದರ್ಭಗಳಲ್ಲಿ ಅಗ್ನಿಶಾಮಕ ದಳವು ನಡೆಸಿದ ರಕ್ಷಣಾ ಕಾರ್ಯಾಚರಣೆಗಳಿಂದ ಕಳೆದ ಐದು ವರ್ಷಗಳಲ್ಲಿ ಸುಮಾರು 1008 ಜನರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಇದರಲ್ಲಿ 2020-21ರಲ್ಲಿ 17, 2021-22ರಲ್ಲಿ 17,2022-23ರಲ್ಲಿ 12, 2023-24ರಲ್ಲಿ 17, 2024-25ರಲ್ಲಿ 15 ಹಾಗೂ 2025ರ ಅಕ್ಟೋಬರ್ 31ರವರೆಗೆ 8 ಜನರು ರಕ್ಷಣಾ ಕಾರ್ಯಾಚರಣೆ ವೇಳೆ ಮೃತಪಟ್ಟಿರುವುದು ದೃಢಪಟ್ಟಿದೆ.

> **ನಗರದಲ್ಲಿ ಈಗಾಗಲೇ ಒಂದು ಹೈಟೆಕ್ ಅಗ್ನಿಶಾಮಕ ಠಾಣೆ ಕಾರ್ಯನಿರ್ವಹಿಸುತ್ತಿದೆ. ನಂದೂರ ಮತ್ತು ಯೂನಿವರ್ಸಿಟಿ ಬಳಿ ಹೊಸ ಠಾಣೆ ನಿರ್ಮಾಣಕ್ಕಾಗಿ ಸರ್ಕಾರದ ಬಳಿ ಪ್ರಸ್ತಾವನೆವಿದೆ. ಆದರೆ, ಇನ್ನೂ ಜಾಗ ಲಭ್ಯವಾಗಿಲ್ಲ. ಜಿಲ್ಲೆಯ ಕಮಲಾಪುರ ಬಳಿ ಜಾಗ ಸಿಕ್ಕಿದೆ. ಹಳೆಯ ವಾಹನದ ಅವಧಿ ಮುಗಿದ ಹಿನ್ನೆಲೆ ಶನಿವಾರವೇ ಠಾಣೆಗೆ ಒಂದು ಹೊಸ ವಾಹನ ಬಂದಿದೆ.**
>
> ■ ರವಿಕುಮಾರ್ ಎನ್.ಚೌಹಾಣ್, ಅಧಿಕಾರಿ, ಪ್ರಾದೇಶಿಕ ಅಗ್ನಿಶಾಮಕ ದಳ ವಿಭಾಗ, ಕಲಬುರಗಿ

> **ನಗರದಲ್ಲಿ ಸುಮಾರು 40 ವರ್ಷಗಳ ಹಿಂದೆ ನಿರ್ಮಾಣವಾದ ಒಂದೇ ಅಗ್ನಿಶಾಮಕ ಠಾಣೆಯಿದೆ. ನಗರದ ಜನಸಂಖ್ಯೆಗೆ ಅನುಗುಣವಾಗಿ ಮತ್ತು ತುರ್ತು ಸಂದರ್ಭಗಳಲ್ಲಿ ವೇಗವಾಗಿ ಕಾರ್ಯಾಚರಣೆ ನಡೆಸಲು ಇನ್ನೂ ಕನಿಷ್ಠ ಮೂರು, ರಾಮಮಂದಿರ, ನಂದೂರು ಹಾಗೂ ವಿಶ್ವವಿದ್ಯಾಲಯ ಬಳಿ ಹೊಸದಾಗಿ ಅಗ್ನಿಶಾಮಕ ಠಾಣೆ ನಿರ್ಮಿಸುವ ಅಗತ್ಯವಿದೆ.**
>
> ■ ಶರಣಬಸಪ್ಪ ಪಪ್ಪಾ, ಅಧ್ಯಕ್ಷರು, ಕೆಕೆಸಿಸಿಐ,ಕಲಬುರಗಿ

ಕಿರುಸುದ್ದಿ

ಮಾ.16ರಿಂದ ಶ್ರೀಶೈಲಂನಲ್ಲಿ ಸ್ಪರ್ಶ ದರ್ಶನಕ್ಕೆ ಅವಕಾಶವಿಲ್ಲ



◆**ಬೆಳಗಾವಿ:** ಆಂಧ್ರಪ್ರದೇಶದ ನಂದ್ಯಾಲ ಜಿಲ್ಲೆಯ ಶ್ರೀಕ್ಷೇತ್ರ ಶ್ರೀಶೈಲಂನಲ್ಲಿ ಮಾ.16 ರಿಂದ 20ರ ವರೆಗೆ 5 ದಿನಗಳ ಕಾಲ ಯುಗಾದಿ ಮಹೋತ್ಸವದ ಆಚರಣೆ ಜರುಗಲಿದ್ದು, ಶ್ರೀ ಕ್ಷೇತ್ರದಲ್ಲಿ ಮಾ.16ರಿಂದ 20ರವರೆಗೆ ಸ್ವಾಮಿಯವರ ಅಲಂಕಾರಿಕ ದರ್ಶನಕ್ಕೆ ಮಾತ್ರ ವ್ಯವಸ್ಥೆಗೊಳಿಸಲಾಗಿದ್ದು, ಈ ಸಂದರ್ಭದಲ್ಲಿ ಭಗವಂತನ ಸ್ಪರ್ಶ ದರ್ಶನಕ್ಕೆ ಅವಕಾಶವಿರುವುದಿಲ್ಲವೆಂದು ಬೆಳಗಾವಿ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

ಯುವಕನ ರಕ್ಷಣೆ

◆**ಅಂಕೋಲಾ:** ತಾಲೂಕಿನ ಅಚವೆ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿಭೂತಿ ಜಲಪಾತದ ನೀರಿನಲ್ಲಿ ಮುಳುಗುತ್ತಿದ್ದ ಯುವಕನನ್ನು ಜೀವರಕ್ಷಕ ಸಿಬ್ಬಂದಿ ರಕ್ಷಣೆ ಮಾಡಿ ಜೀವ ಉಳಿಸಿದ್ದಾರೆ. ತಮಿಳುನಾಡು ಮೂಲದ 8 ಜನ ಪ್ರವಾಸಿಗರ ತಂಡ ವಿಭೂತಿ ಫಾಲ್ಸ್ ಪ್ರವಾಸಕ್ಕೆ ಬಂದು ಜಲಪಾತದ ನೀರಿಗಿಳಿದ ಸಂದರ್ಭದಲ್ಲಿ ವಿಘ್ನೇಶ ಎಂಬಾತ ನೀರಿನಲ್ಲಿ ಅಪಾಯಕ್ಕೆ ಸಿಲುಕಿದ್ದನ್ನು ಗಮನಿಸಿದ ಜೀವರಕ್ಷಕ ಸಿಬ್ಬಂದಿ ವಿಜಯ ನಾಯಕ ತಕ್ಷಣ ಕಾರ್ಯ ಪ್ರವೃತ್ತರಾಗಿ ನೀರಿನಲ್ಲಿ ಮುಳುಗುತ್ತಿದ್ದ ಯುವಕನನ್ನು ರಕ್ಷಣೆ ಮಾಡಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1820	5315
ಉದ್ದಿನಕಾಳು	3859	6351
ಒಣ ಮೆಣಸಿನಕಾಯಿ	1696	58269
ಹೆಸರುಕಾಳು	1059	5439
ಹುರುಳಿ ಕಾಳು	3213	3536
ಜೋಳ	819	4009
ಮೆಕ್ಕೆಜೋಳ	1420	1815
ಮಡಿಕೆ (ಮಟಕಿ)	12325	13431
ಈರುಳ್ಳಿ	400	2200
ಆಲೂಗಡ್ಡೆ	1300	1700
ಸೋಯಾಬೀನ್	1369	5516

ಗ್ರ್ಯಾಚುಟಿ ನೀಡಲು ನಿವೃತ್ತರ ಆಗ್ರಹ



◆**ಧಾರವಾಡ:** ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗ್ರ್ಯಾಚುಟಿ ಹಣ ನೀಡುವಂತೆ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ನಿವೃತ್ತರ ಯೂನಿಯನ್ ಅಧ್ಯಕ್ಷೆ ನೂರಜಾನ್ ಸಮುದ್ರಿ ಆಗ್ರಹ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಐಸಿಡಿಎಸ್ ಯೋಜನೆಗೆ 50 ವರ್ಷ ದುಡಿದ ಕಾರ್ಯಕರ್ತೆಯರಿಗೆ ಅನ್ಯಾಯ ಮಾಡಿದ ಸರ್ಕಾರ, 2011ರಿಂದ 2023ರವರೆಗೆ ನಿವೃತ್ತಿ ಹೊಂದಿದವರಿಗೆ ಒಂದಿಷ್ಟು ಇಡಗಂಡು ನೀಡಿದೆ. ಗ್ರ್ಯಾಚುಟಿ ಹಣ ನೀಡಿಲ್ಲ ಎಂದು ಆರೋಪಿಸಿದರು. ಗ್ರ್ಯಾಚುಟಿ ಹಣ ನೀಡುವಂತೆ 1972ರಲ್ಲಿ ಕಾನೂನು ಜಾರಿಯಲ್ಲಿದೆ. 2019ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. 2023ರ ಬಳಿಕ ನಿವೃತ್ತಿ ಹೊಂದಿದವರಿಗೆ ಗ್ರ್ಯಾಚುಟಿ ನೀಡಿ, ಉಳಿದವರಿಗೆ ನೀಡದಿರುವುದು ಅನ್ಯಾಯ ಮಾಡುತ್ತಿದೆ ಎಂದು ಆಪಾದಿಸಿದರು.

ಗ್ರ್ಯಾಚುಟಿ ಹಣ ನೀಡುವಂತೆ 2020ರಿಂದ ಹೋರಾಟ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರವು ಈ ಬಾರಿ ಬಜೆಟ್‌ನಲ್ಲಿ ಗ್ರ್ಯಾಚ್ಯುಟಿ ನೀಡಬಹುದು ಎಂಬ ಆಶಾಭಾವ ಹೊಂದಿದ್ದೆವು. ಆದರೆ ಈ ಸಂಬಂಧ ಯಾವುದೇ ಘೋಷಣೆ ಮಾಡಿಲ್ಲ ಎಂದು ದೂರಿದರು. ಒಂದು ವೇಳೆ ಸರ್ಕಾರ ಗ್ರ್ಯಾಚುಟಿ ಹಣ ನೀಡದಿದ್ದರೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಧರಣಿ ಕೈಗೊಳ್ಳುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶಂಕರ ಹಲಗತ್ತಿ, ಸಾವಿತ್ರಿ ಕುಸಬಿ ಹಾಗೂ ಎ.ಎಸ್. ಫಿರ್ಜಾದೆ ಇದ್ದರು.

ಬುದ್ಧಿ ಬದಲಾವಣೆಯಾದರೆ ಮಾತ್ರ ವಚನಾಮೃತ ಸಾರ್ಥಕ



◆**ಉಪ್ಪಿನಬೆಟಗೇರಿ:** ಸಮಾಜದಲ್ಲಿ ನಮ್ಮ ಮನಸ್ಸು ಮತ್ತು ಬುದ್ಧಿ ಬದಲಾವಣೆಯಾದರೆ ಮಾತ್ರ ಶಿವ ಶರಣರು ಮಾಡಿಕೊಟ್ಟ ವಚನಾಮೃತ ಸಾರ್ಥಕವಾಗುತ್ತದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಡಾ.ವಿ. ಶ್ರೀಶಾನಂದ ಹೇಳಿದರು.

ಅವರು ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಶುವಾರ ನಡೆದ ಎರಡನೇ ದಿನದ ಅಲ್ಲಮ ಪ್ರಭು ದೇವರ ಚರಿತಾಮೃತ ಪ್ರವಚನ ಕಾರ್ಯಕ್ರಮದಲ್ಲಿ ಲವಣಗಿರಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. 12ನೇ ಶತಮಾನದಲ್ಲಿ ಕರ್ನಾಟಕ ದೊಡ್ಡದಾದ ಕ್ರಾಂತಿ ಮಾಡಿತು ಅಂದಿನಿಂದಲೇ ಬಸವ ಪಥ ಹುಟ್ಟಿತು. ಜಗತ್ತಿನಲ್ಲಿ ನ್ಯಾಯಯುತವಾಗಿ ಕಾಯಕ ಮಾಡಬೇಕು. ಬಸವಣ್ಣನವರ ಅನುಭವ ಮಂಟಪ ಸ್ಥಾಪಿಸಿ ಶರಣರು ತಮ್ಮ ಅನುಭವ ಹಂಚಿಕೊಂಡರು. ಮನುಷ್ಯ ಯಾವುದೇ ಕಾಯಕ ಮಾಡಲಿ ಅದು ಪರಿಶುದ್ಧ, ಪ್ರಮಾಣಿಕವಾಗಿದ್ದರೆ ಜೀವನದಲ್ಲಿ ಸುಖ ಶಾಂತಿ ಲಭಿಸುತ್ತದೆ. ಸಮಾಜದ ಅಭಿವೃದ್ಧಿಗಾಗಿ ಒಳ್ಳೆಯ ಚಿಂತನೆ ಮಾಡಬೇಕಾದರೆ ನಾಲ್ಕು ಜನ ಇದ್ದರೆ ಸಾಕು ಅವರ ಮುಂದೆ ಎಲ್ಲರೂ ಸಹಕಾರ ನೀಡುತ್ತಾರೆ. ಉಪ್ಪಿನಬೆಟಗೇರಿ ಗಾತ್ರ ಚಿಕ್ಕದಾಗಿರಬಹುದು ಆದರೆ ಇಲ್ಲಿಯ ಜನರ ಮನಸ್ಸು ಬಹಳ ದೊಡ್ಡದಾಗಿದೆ ಎಂದರು. ಅಮಿನಗಡದ ಪ್ರಭುಶಂಕರೇಶ್ವರ ಮಠದ ಶಂಕರರಾಜೇಂದ್ರ ಸ್ವಾಮೀಜಿ, ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಘಟಪ್ರಭಾ ಕೆಂಪಯ್ಯಸ್ವಾಮಿ ಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಂದೆ ತಾಯಿಗಳು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಿದರೆ ಅವರು ಮುಂದೆ ಉನ್ನತ ಹುದ್ದೆಗೆಸೇರಲು ಸಾಧ್ಯ ಎಂದರು. ಧಾರವಾಡ ಹಿರಿಯ ನ್ಯಾಯವಾದಿ ಎ.ಸಿ.ಚಾಕಲಬ್ಬಿಯವರು ಅಧ್ಯಕ್ಷತೆ ವಹಿಸಿದ್ದರು. ಗ್ರಾಮಸ್ಥರು ಭಜನೆ ಹಾಗೂ ವಿವಿಧ ವಾದ್ಯ ಮೇಳದೊಂದಿಗೆ ಮಹಿಳೆಯರು ಕುಂಭಹೊತ್ತು ನ್ಯಾಯ ಮೂರ್ತಿ ಡಾ. ವಿ. ಶ್ರೀಶಾನಂದವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಹಿರಿಯ ನ್ಯಾಯವಾದಿ ರವಿ ಯಲಿಗಾರ ಪ್ರಾಸ್ತಾವಿಸಿದರು. ಶಂಕರ ಪೂಜಾರ, ಯಶವಂತ ಮಡಿವಾಳರ ಪ್ರಸಾದಸೇವೆ ಸಲ್ಲಿಸಿದರು. ನಿರೂಪಾದಿ ದೇವರು, ಅಭಿನವ ಶಿವಾನಂದ ಶಿವಾಚಾರ್ಯರು, ಬೆಳ್ಳೊಬ್ಬಿ ರೇಣುಕಾ ದೇವರು, ಧಾರವಾಡ ಹಿರಿಯ ನ್ಯಾಯವಾದಿ ಎ.ಎಸ್. ಚಾಕಲಬ್ಬಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಮಹಾದೇವ ಕುಡವಕ್ಕಲಿಗೇರ, ಹಿರಿಯ ನ್ಯಾಯವಾದಿ ಪಿ.ಎಚ್. ನೀರಲಕೇರಿ, ಸಿದ್ದಣ್ಣ ಕಂಬಾರ, ಅನೀಲ ನಂದೂರ, ಧಾರವಾಡ ಹೆಸ್ಕಾ ಅಧಿಕಾರಿ ಈರಣ್ಣಾ ಸಿಂದಗಿಮಠ, ರಾಜು ಕೋಟಿ, ಜಾನಪದ ಕಲಾವಿದ ನರೇಂದ್ರ ರಮೇಶ ಕುರಬಗಟ್ಟಿ ಹಾಗೂ ಕಲ್ಲೂರ, ಕೊಟಬಾಗಿ, ಜೀರಗಿವಾಡ,ಗ್ರಾಮದ ಹಿರಿಯರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು. ಪ್ರಧಾನ ಶಿಕ್ಷಕ ಎಸ್.ಕೆ ಕೊಡಿ ಸ್ವಾಗತಿಸಿದರು. ರಮೇಶ ಮಡಿವಾಳರ ನಿರ್ವಹಿಸಿದರು.

ಚಂದ್ರಂಪಳ್ಳಿಯಲ್ಲಿ ಜೀಪ್ ಸಫಾರಿ, ಬೋಟಿಂಗ್‌ಗೆ ಚಾಲನೆ

◆**ಕಲಬುರಗಿ:** ಚಂದ್ರಂಪಳ್ಳಿ ಜಲಾಶಯ, ಗೊಟ್ಟಂಗೊಟ್ಟ, ಎತ್ತಿಪೊತ್ತ ಜಲಪಾತ ಸೇರಿದಂತೆ ದಟ್ಟ ಅರಣ್ಯದೊಂದಿಗೆ ವನ್ಯಜೀವಿ ತಾಣವಾಗಿರುವ ಜಿಲ್ಲೆಯ ಚಿಂಚೋಳಿಯನ್ನು ಮುಂದಿನ ಒಂದೂವರೆ ವರ್ಷದಲ್ಲಿ ಮಿನಿ ಪ್ರವಾಸಿ ಸರ್ಕ್ಯೂಟ್ ಮಾಡಲಾಗುವುದು ಎಂದು ಆರ್‌ಡಿಪಿಆರ್, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಚಿಂಚೋಳಿಯ ಚಂದ್ರಂಪಳ್ಳಿಯಲ್ಲಿ ಅರಣ್ಯ ಜೀಪ್ ಸಫಾರಿ ಹಾಗೂ ಚಂದ್ರಂಪಳ್ಳಿ ಜಲಾಶಯದಲ್ಲಿ ದೋಣಿ ವಿಹಾರ ಉದ್ಘಾಟಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಂಚೋಳಿ ಸುತ್ತಮುತ್ತ ವಿರುವ 8-10 ಪ್ರವಾಸಿ ತಾಣಗಳನ್ನು ಸರ್ಕ್ಯೂಟ್‌ನಲ್ಲಿ ಸೇರಿಸಲಾಗುವುದು. ಪ್ರವಾಸಿಗರು ಒಂದು ದಿನದ ಪ್ಯಾಕೇಜ್ ನಡಿ ಇದನೆಲ್ಲ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದೆಂದರು.



ಅರಣ್ಯ ಜೀಪ್ ಸಫಾರಿಗೆ 24 ಲಕ್ಷ ವೆಚ್ಚದಲ್ಲಿ ಎರಡು ಕ್ಯಾಂಪರ್ ವಾಹನ ಖರೀದಿಸಿ ಸಫಾರಿ ವಾಹನಗಳಾಗಿ ಮಾರ್ಪಡಿಸಲಾಗಿದೆ. 64 ಲಕ್ಷ ರೂ. ವೆಚ್ಚದಲ್ಲಿ ಸಫಾರಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ. 43 ಲಕ್ಷ ರೂ. ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಗೊಟ್ಟಂಗೊಟ್ಟದಲ್ಲಿ ಎರಡು ಹೆಚ್ಚುವರಿ ಟೆಂಟ್ ಹೌಸ್ ನಿರ್ಮಿಸಲಾಗಿದೆ. 14 ಲಕ್ಷ ರೂ. ವೆಚ್ಚದಲ್ಲಿ ಮನರಂಜನಾ ಚಟುವಟಿಕೆಗಳಿಗೆ 12 ಆಸನಗಳ ಮೋಟಾರ್ ದೋಣಿ ಮತ್ತು ಎರಡು ಪೆಡಲ್ ದೋಣಿಗಳು ಮತ್ತು ಕಯಾಕ್ ಒದಗಿಸಲಾಗಿದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ ಪಾಟೀಲ ಮಾತನಾಡಿದರು.

ಎಂಎಲ್ಸಿ ಜಗದೇವ ಗುತ್ತೇದಾರ,ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಅರುಣಕುಮಾರ ಪಾಟೀಲ,ಡಿಸಿ ಫೌಜಿಯಾ ತರನ್ನುಮ್, ವಲಯ ಅರಣ್ಯ ಸಂರಕ್ಷಣಾಧಿಕಾರಿ ಸುನಿಲ ಪನ್ವಾರ, ಸಿ.ಇ.ಓ ಭಂವರ್ ಸಿಂಗ್ ಮೀನಾ, ಎಸ್.ಪಿ.ಅಡ್ಡೂರು ಶ್ರೀನಿವಾಸಲು,ಜೆಡಿ ಸಮದ್ ಪಟೇಲ್, ಸಂತೋಷ ಇನಾಂದಾರ, ಸಂಜೀವ ಚವ್ಹಾಣ, ಸುಭಾಷ ರಾಠೋಡ, ಕೈಲಾಶನಾಥ ಪಾಟೀಲ, ದೀಪಕನಾಗ್ ಪುಣ್ಯಶೆಟ್ಟಿ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಸಿದ್ಧೇಶ್ವರ ಸ್ವಾಮಿಗಳ ಶಿಲಾಮೂರ್ತಿ ಮೆರವಣಿಗೆ

◆**ಹುಬ್ಬಳ್ಳಿ:** ಇಲ್ಲಿನ ಉಣಕಲ್ ಸದ್ಗುರು ಶ್ರೀ ಸಿದ್ಧೇಶ್ವರ ಸ್ವಾಮೀಜಿ ಯುಗಾದಿ ಜಾತ್ರಾ ಮಹೋತ್ಸವ ಹಾಗೂ ನೂತನ ಶಿಲಾ ಮಂದಿರ ಉದ್ಘಾಟನೆ, ಶಿಲಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ರಥೋತ್ಸವ ಅಂಗವಾಗಿ ಶನಿವಾರ ಸಿದ್ಧೇಶ್ವರ ಸ್ವಾಮಿಗಳ ಶಿಲಾ ಮೂರ್ತಿ ಹಾಗೂ ಕಳಸ ಮೆರವಣಿಗೆ ನಗರದಲ್ಲಿ ಅದ್ದೂರಿಯಾಗಿ ಜರುಗಿತು.

ಸಿದ್ಧಾರೂಢ ಸ್ವಾಮಿಗಳ ಮಠದಿಂದ ಸಿದ್ಧೇಶ್ವರ ಸ್ವಾಮಿಗಳ ನೂತನ ಶಿಲಾಮಂದಿರವರೆಗೆ ಶಿಲಾ ಮೂರ್ತಿಗಳ ಅದ್ದೂರಿ ಮೆರವಣಿಗೆ ಮಾಡಲಾಯಿತು. ಸಾವಿರಾರು ಮಹಿಳೆಯರು ಕುಂಭಹೊತ್ತು ಮೆರವಣಿಗೆ ಯುದ್ದಕ್ಕೂ ಸಾಗಿದರು. ಮೆರವಣಿಗೆಯಲ್ಲಿ ಕರಡಿ ಮಜಲು, ಜಗ್ಗಲಗಿ, ಡೊಳ್ಳು, ಜಾಂಜ್ ಮೇಳ ಸೇರಿದಂತೆ ಇತರ ವಾದ್ಯಗಳು ಮೆರಗು



ನೀಡಿದವು. 100 ಜೋಡೆತ್ತುಗಳ ಚಕ್ಕಡಿ, ಆನೆಗಳು, ಜಾನಪದ ಕಲಾವಿದರು ಮೆರವಣಿಗೆಗೆ ಕಳೆ ತಂದವು. ಶಿವಾಜಿ ಮಹಾರಾಜ, ಬಸವೇಶ್ವರರ ಮೂರ್ತಿಗಳನ್ನು ಹಾಗೂ ಹುಬ್ಬಳ್ಳಿ ಆರಾಧ್ಯ ದೈವ ಸಿದ್ಧಾರೂಢ, ಗುರುನಾಥರೂಢರ ಮೂರ್ತಿಗಳು ಮೆರವಣಿಯುದ್ದಕೂ ಸಾಗಿದವು. ಗ್ರಾಮ ದೇವತೆ, ಮಠ-ಮಂದಿರದ ಪ್ರತಿರೂಪ ಮಾಡಿ ಟ್ರ್ಯಾಕ್ಟರ್‌ಗಳಲ್ಲಿ ಕರೆ ತರಲಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ, ಸ್ವಾಮೀಜಿ, ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ, ಸಿದ್ಧಾರೂಢ ಸ್ವಾಮಿಗಳ ಮಠ ಟ್ರಸ್ಟ್ ಕಮಿಟಿ ಅಧ್ಯಕ್ಷ ಚನ್ನವೀರ ಮುಂಗುರವಾಡಿ, ಪಾಲಿಕೆ ಹಿರಿಯ ಸದಸ್ಯ ಹಾಗೂ ಸಿದ್ದಪ್ಪಜ್ಜ ಹೊಸಮಠ ಟ್ರಸ್ಟ್ ಕಮಿಟಿ ಅಧ್ಯಕ್ಷ ರಾಜಣ್ಣ ಕೊರವಿ ವಿವಿಧ ಗಣ್ಯರು ಉಪಸ್ಥಿತರಿದ್ದರು.

1.30 ಕೋಟಿ ರೂ. ವೆಚ್ಚದಲ್ಲಿ ಸಾಲುಮರದ ತಿಮ್ಮಕ್ಕಳ ವೃಕ್ಷವನ

◆**ಕಲಬುರಗಿ:** ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಸ್ಥಳೀಯ ಶಾಸಕ ಡಾ.ಅವಿನಾಶ ಜಾಧವ ಅವರೊಂದಿಗೆ ಅರಣ್ಯ ಇಲಾಖೆಯಿಂದ ಚಿಂಚೋಳಿ ಬಳಿಯ ಪೋಲಕಪಲ್ಲಿಯಲ್ಲಿ ಸುಮಾರು 1.30 ಕೋಟಿ ರೂ.ವೆಚ್ಚದಲ್ಲಿ ನವೀಕೃತ ಸಾಲು ಮರದ ತಿಮ್ಮಕ್ಕಳ ವೃಕ್ಷವನ ಉದ್ಘಾಟಿಸಿದರು.

ನಂತರ ಅಧಿಕಾರಿಗಳೊಂದಿಗೆ ವನದಲ್ಲಿ ಒಂದು ಸುತ್ತು ಹಾಕಿ ವಿವಿಧ ಸಸ್ಯ ರಾಶಿಗಳನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.ಲೋಟಸ್ ಎಕೋ ಪಾಂಡ್ ಬಳಿ ಪೋಟೋ ಗೆ ಪೋಸ್ ನೀಡಿದರು.

ಇದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯಿಂದ 2021-22ನೇ ಸಾಲಿನ ಲ್ಯಾಂಡ್ ಬಿಲ್ಡಿಂಗ್ ಯೋಜನೆ ಅಡಿಯಲ್ಲಿ 37.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಚಿಂಚೋಳಿ ಅರಣ್ಯ ವಲಯದ ಹೊಸ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ಮತ್ತು 2024-25ನೇ ಸಾಲಿನ ಲಿಂಕ್ ಡಾಕುಮೆಂಟ್ ಯೋಜನೆ ಅಡಿಯಲ್ಲಿ ಚಿಂಚೋಳಿ ಸಾಮಾಜಿಕ ಅರಣ್ಯ ವಲಯದ ಹೊಸ ವಲಯ ಅರಣ್ಯ ಅಧಿಕಾರಿಗಳ ಕಛೇರಿ ಕಟ್ಟಡ ಹಾಗೂ ಉಪ ವಲಯ ಅರಣ್ಯ ಅಧಿಕಾರಿಗಳ ವಸತಿ ಗೃಹ ಕಟ್ಟಡವನ್ನು ಸಹ ಉದ್ಘಾಟಿಸಲಾಯಿತು.



ಜಾಗೃತಿ ಅಭಿಯಾನಕ್ಕೆ ಚಾಲನೆ: ಜಿಲ್ಲಾಡಳಿತ, ಜಿಪಂ, ಕೃಷಿ ಇಲಾಖೆ ಹಾಗು ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ ಸಹಯೋಗದೊಂದಿಗೆ ಕಸ್ಕುಟ (ಅಂತರವಳ್ಳಿ / ಮುಂಗನ ಬಾಲ) ಕಳೆಯ ನಿರ್ವಹಣೆ ಹಾಗೂ ತೊಗರಿಯಲ್ಲಿ ಬರುವ ಗೊಡ್ಡು / ನೆಟೆ ರೋಗ ನಿರ್ವಹಣೆ ಕುರಿತು ರೈತಾಪಿ ಜನರಲ್ಲಿ ಅರಿವು ಮುಯಡಿಸಲು ಕೃಷಿ ಇಲಾಖೆಯ ಜಾಗೃತಿ ಅಭಿಯಾನಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿ,ಪೋಸ್ಟರ್ ಸಹ ಬಿಡುಗಡೆ ಮಾಡಿದರು. ಜೆಡಿ ಸಮದ್ ಪಟೇಲ್ ,ಕೃಷಿ ಉಪ ನಿರ್ದೇಶಕಿ ಅನುಸೂಯಾ ಹೂಗಾರ, ಕೃಷಿ ವಿಜ್ಞಾನಿ ರಾಜು ತೆಗ್ಗಳ್ಳಿ ಇದ್ದರು.

ಈ ಸಂದರ್ಭದಲ್ಲಿ ಎಂಎಲಸಿ ಜಗದೇವ ಗುತ್ತೇದಾರ, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕಲಬುರಗಿ ವಲಯದ ಅರಣ್ಯ ಸಂರಕ್ಷಣಾಽಕಾರಿ ಸುನಿಲ ಪನ್ವಾರ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಡಿ.ಸಿ.ಎಫ್ ಸುಮಿತ ಪಾಟೀಲ, ವಲಯ ಅರಣ್ಯಾಽಕಾರಿ ಸಂಜೀವಕುಮಾರ ಚವ್ಹಾಣ, ಮಾಜಿ ಶಾಸಕ ಕೈಲಾಸನಾಥ ಪಾಟೀಲ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಸುಭಾಷ ರಾಠೋಡ, ದೀಪಕನಾಗ್ ಪುಣ್ಯಶೆಟ್ಟಿ ಸೇರಿದಂತೆ ಅರಣ್ಯ ಇಲಾಖೆಯ ಇತರೆ ಅಧಿಕಾರಿಗಳು ಇದ್ದರು.

ವಾತ್ಸಲ್ಯ ಮನೆ ಹಸ್ತಾಂತರ

◆**ನವಲಗುಂದ:** ತಾಲೂಕಿನ ನಾಯಕನೂರು ಗ್ರಾಮದಲ್ಲಿ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ಜರುಗಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾ ಅಭಿವೃದ್ಧಿ ವತಿಯಿಂದ ಆಯೋಜನೆ ಮಾಡಲಾಗಿತ್ತು. ಯೋಜನೆಯ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಅವರುಯಲ್ಲಮ್ಮ ಮ್ಯಾಗೇರಿ ಅವರಿಗೆ ವಾತ್ಸವ್ಯ ಮನೆ ಹಸ್ತಾಂತರ ಮಾಡಿದರು. ರಾಜ್ಯದಲ್ಲಿ ನಿರ್ಗತಿಕ ತಾಯಂದಿರಿಗೆ ಧರ್ಮಸ್ಥಳ ಸಂಸ್ಥೆಯ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಮನೆಗಳನ್ನು ರಚನೆ ಮಾಡಿ ನೆರವಿಲ್ಲದ ಜನರಿಗೆ ಸೂರು ಕಲ್ಪಿಸುವ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದಾರೆ. ಇಂದು ನಾಯಕನೂರು ಗ್ರಾಮದಲ್ಲಿ ಹೊಸದಾಗಿ ರಚನೆ ಮಾಡಿದ ಮನೆ ಹಸ್ತಾಂತರ ಮಾಡಲಾಯಿತು ಎಂದರು. ತಾಲೂಕಿನ ಯೋಜನಾಧಿಕಾರಿ ದಿನೇಶ್ ಶೇರಿಗಾರ, ಪ್ರಮುಖರಾದ ಸಿದ್ದಣ್ಣ ಜಟ್ಟನ್ನವರ, ಬಸನಗೌಡ ಪಾಟೀಲ, ಒಕ್ಕೂಟದ ಅಧ್ಯಕ್ಷರಾದ ವಿಜಯಲಕ್ಷ್ಮೀ ಹಿರೇಮಠ, ಶಾರದಾ ಅಕ್ಕಿ, ಮೇಲ್ವಿಚಾರಕ ಮಹೇಶ, ಸಂಸ್ಥೆಯ ಕಾರ್ಯಕರ್ತರು ಸ್ವ-ಸಹಾಯ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಸಿಲಿಂಡರ್‌ಗಳ ಸ್ಟಾಕ್ ಪರಿಶೀಲನೆ



◆**ಬಳ್ಳಾರಿ:** ನಗರದ ಸಿರುಗುಪ್ಪ ರಸ್ತೆಯ ಭಾರತ್ ಗ್ಯಾಸ್‌ನ ಶ್ರೀ ಲಕ್ಷ್ಮೀನರಸಿಂಹ ಏಜೆನ್ಸಿಗೆ ಹಾಗೂ ಪಾರ್ವತಿನಗರದ ಹೆಚ್. ಪಿ. ಗ್ಯಾಸ್ ಶ್ರೀ ವೆಂಕಟೇಶ್ವರ ಗ್ಯಾಸ್ ಏಜೆನ್ಸಿಗೆ ಮಹಾನಗರ ಪಾಲಿಕೆ ಮೇಯರ್ ಪಿ. ಗಾದೆಪ್ಪ, ಪಾಲಿಕೆ ಆಯುಕ್ತ ಮಂಜುನಾಥ ಸೇರಿದಂತೆ ಅಽಕಾರಿಗಳ ತಂಡ ದಿಢೀರ್ ಭೇಟಿ ನೀಡಿ ಗ್ಯಾಸ್ ಸಿಲಿಂಡರ್‌ಗಳ ಸ್ಟಾಕ್‌ಗಳನ್ನು ಪರಿಶೀಲಿಸಿದರು.

ಯಾವುದೇ ಕಾರಣಕ್ಕೂ ಬಳ್ಳಾರಿಯ ನಾಗರಿಕರಿಗೆ ಗ್ಯಾಸ್‌ನ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ ಹಾಗೂ ಬುಕ್ಕಿಂಗ್ ಮಾಡಲು ಗ್ರಾಹಕರಿಗೆ ಅನಾನುಕೂಲ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಸರ್ಕಾರಿ ವಸತಿ ನಿಲಯಗಳಿಗೆ ಸಿಲಿಂಡರ್‌ಗಳ ಕೊರತೆ ಎದುರಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನ ವಹಿಸಬೇಕು, ಹೋಟೆಲ್‌ಗಳಿಗೆ ಯಾವುದೇ ಕಾರಣಕ್ಕೂ ಗೃಹಬಳಕೆಯ ಸಿಲಿಂಡರ್ ಗಳನ್ನು ಸರಬರಾಜು ಮಾಡುವುದು ಬೇಡ, ಕಾಳಸಂತೆಯಲ್ಲಿ ಹೋಟೆಲ್‌ಗಳಿಗೆ ಮಾರಾಟ ಮಾಡುವುದು ಕಂಡು ಬಂದರೆ ಖಂಡಿತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಮೇಯರ್ ಪಿ.ಗಾದೆಪ್ಪ ಹಾಗೂ ಪಾಲಿಕೆಯ ಆಯುಕ್ತರಾದ ಮಂಜುನಾಥ್ ಅವರು ಸೂಚಿಸಿದರು. ಹೋಟೆಲ್‌ಗಳಲ್ಲಿ ಕಮರ್ಷಿಯಲ್ ಸಿಲಿಂಡರ ಗಳನ್ನು ಬಳಸಬೇಕು, ಗೃಹಬಳಿಕೆಯ ಸಿಲಿಂಡರ್ ಬಳಸಿದರೆ ಅಂತಹ ಹೋಟೆಲ್ ಮಾಲೀಕರ ವಿರುದ್ಧ ಕ್ರಮಕೈಗೊಳ್ಳುವುದರ ಜೊತೆಗೆ ಹೋಟೆಲ್ ಪರವಾನಿಗೆ ರದ್ದುಪಡಿಸಲಾಗುವುದು ಎಂದು ಎಚ್ಚರಿಸಿದರು.

ಗುರುಗ್ರಾಮ್‌ನಲ್ಲಿ ನಡೆದ ಕೂಟ: ಮೊದಲೆರಡೂ ಸ್ಥಾನದಲ್ಲಿ ಕನ್ನಡತಿಯರು | ಗಮನ ಸೆಳೆದ ಸ್ನಿಗ್ಧ | ಸೋಲಲ್ಲಿ ಗೆದ್ದ ಪದ್ಮಪ್ರಿಯಾ

ಅಂತಾರಾಷ್ಟ್ರೀಯ ಜೂ. ಟೆನಿಸ್‌ನಲ್ಲಿ ಕನ್ನಡಿಗರದ್ದೇ ದರ್ಬಾರ್!

ಬೆಂಗಳೂರು: ಕರ್ನಾಟಕದ ಯುವ ಟೆನಿಸ್ ಆಟಗಾರ್ತಿ ಸ್ನಿಗ್ಧ ಕಾಂತಾ ಗುರುಗ್ರಾಮ್‌ನಲ್ಲಿ ಶನಿವಾರ ಮುಗಿದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡರು. ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯನ್ನು ಗೆದ್ದು ಬೀಗಿದರು. ಫೈನಲ್‌ನಲ್ಲಿ ಅವರು ಮತ್ತೊರ್ವ ಕರ್ನಾಟಕ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಅವರನ್ನು 6-4, 6-4 ಅಂಕಗಳಿಂದ ಸೋಲಿಸಿದರು. ಇದರೊಂದಿಗೆ ಮೊದಲೆರಡೂ ಸ್ಥಾನಗಳನ್ನು ಕನ್ನಡಿಗರೇ ಗಳಿಸಿದ್ದು, ಟೆನಿಸ್ ಕರ್ನಾಟಕ ಪಾರುಪತ್ಯ ಮುಂದುವರಿದಂತಿದೆ. ಇಬ್ಬರ ರ್ಯಾಂಕಿಂಗ್‌ಗೂ ಬೂಸ್ಟರ್ ಕೂಟ ನೀಡಿದೆ.



ನಿಯಂತ್ರಿತ ಆಟಕ್ಕೆ ಸಿಕ್ಕ ಜಯ

ಎರಡನೇ ಶ್ರೇಯಾಂಕಿತ ಆಟಗಾರ್ತಿಯಾಗಿದ್ದ 16 ವರ್ಷದ ಸ್ನಿಗ್ಧ ಕಾಂತಾ, ಇಡೀ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವಿನ ಫೇವರಿಟ್ ಆಗಿ ಮೆರೆದಿದ್ದರು. ಫೈನಲ್‌ನಲ್ಲಿ ಕೂಡ ನಿಯಂತ್ರಿತ ಆಟವಾಡಿದರು. ಎರಡು ಸೆಟ್‌ಗಳಲ್ಲೂ ಪ್ರಮುಖ ಅವಕಾಶಗಳನ್ನು ಬಳಸಿಕೊಂಡು ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಏಕ ಪಕ್ಷೀಯ ಗೆಲುವು ಸಾಧಿಸಿದರೂ ಅವರ ಪರಾಕ್ರಮ ಕೇವಲ ನಿರ್ಣಾಯಕ ಪಂದ್ಯಕ್ಕೆ ಸೀಮಿತವಾಗಿರಲಿಲ್ಲ. ಮೊದಲ ದಿನದಿಂದಲೂ ತಮ್ಮ ಅನುಭವದ ಜತೆಗೆ ನಿಯಂತ್ರಿತ ಪ್ರದರ್ಶನದೊಂದಿಗೆ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕಿತ ಆಟಗಾರ್ತಿ ದೀಪಶಿಖಾ ವಿನಾಯಗಮೂರ್ತಿ ಅವರನ್ನು 6-2, 3-6, 6-4 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು.

ರ್ಯಾಂಕಿಂಗ್‌ನಲ್ಲಿ ವೃದ್ಧಿ

ಈ ಜಯದಿಂದ ಸ್ನಿಗ್ಧ ಕಾಂತಾ ಅವರ ಜೂನಿಯರ್ ಅಂತರರಾಷ್ಟ್ರೀಯ ಟೆನಿಸ್ ಅಭಿಯಾನಕ್ಕೆ ಮಹತ್ವದ ಶ್ರೇಯಾಂಕ ಅಂಕಗಳು ಲಭಿಸಿವೆ. ಈ ಹಂಗಾಮಿನಲ್ಲಿ ಅವರು ತಮ್ಮ ವೃತ್ತಿಜೀವನದ ಅತ್ಯುತ್ತಮ 448ನೇ ಶ್ರೇಯಾಂಕಕ್ಕೂ ಏರಿದ್ದಾರೆ. 2025ರ ಮಾರ್ಚ್‌ನಲ್ಲಿ ರಾಯ್ಪುರದಲ್ಲಿ ನಡೆದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲೂ ಗರ್ಲ್ಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದು ಅವರು ಗಮನ ಸೆಳೆದಿದ್ದರು.

ಒಂದೂ ಸೆಟ್ ಸೋಲದೆ ಫೈನಲ್‌ಗೇರಿದ್ದ ಪದ್ಮಪ್ರಿಯಾ

ಇತ್ತ ರನ್ನರ್-ಅಪ್ ಆಗಿ ಹೊರಹೊಮ್ಮಿದ ಪದ್ಮಪ್ರಿಯಾ ರಮೇಶ್ ಕುಮಾರ್ ಕೂಡ ಕಮ್ಮಿಯೇನಿರಲಿಲ್ಲ. ಪಂದ್ಯಾವಳಿಯ ಪ್ರತಿಯೊಂದು ಪ್ರದರ್ಶನ ಅವರನ್ನು ಬಲಿಷ್ಠ ಆಟಗಾರ್ತಿ ಎಂಬುದನ್ನು ಸಾಬೀತುಪಡಿಸಿತು. ಗುರುಗ್ರಾಮ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಕೇವಲ 13 ವರ್ಷದ ಈ ಪ್ರತಿಭೆ ಫೈನಲ್‌ವರೆಗೆ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಬಂದಿದ್ದರು. ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಪ್ರಿಶಾ ನಿಖಿಲ್ ಶಿಂಡೆ ಅವರನ್ನು 6-4, 6-1 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು. ಮೈಸೂರು ಮೂಲದ ಪದ್ಮಪ್ರಿಯಾ ಈಗಾಗಲೇ ಭಾರತದ ಯುವ ಟೆನಿಸ್ ಕ್ಷೇತ್ರದಲ್ಲಿ ಭರವಸೆಯ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ. ಅವರು ಹಲವು ವಾರಗಳ ಕಾಲ ಭಾರತದ 14 ವರ್ಷದೊಳಗಿನ ಮಹಿಳೆಯರ ಶ್ರೇಯಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ರಾಷ್ಟ್ರೀಯ 16 ವರ್ಷದೊಳಗಿನ ಶ್ರೇಯಾಂಕದ ಮೊದಲ 100 ಆಟಗಾರರ ಪಟ್ಟಿಗೂ ಪ್ರವೇಶಿಸಿದ್ದಾರೆ. ಜೊತೆಗೆ ಏಷ್ಯಾ ಮಟ್ಟದ 14 ವರ್ಷದೊಳಗಿನ ಟೆನಿಸ್ ಸ್ಪರ್ಧೆಯಲ್ಲಿ ಪದಕ ಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

> ಸ್ನಿಗ್ಧ ಅವರಿಗೆ ಪ್ರಶಸ್ತಿ ಜಯಕ್ಕೆ ಅಭಿನಂದನೆಗಳು ಮತ್ತು ಪದ್ಮಪ್ರಿಯಾ ಅವರಿಗೆ ಫೈನಲ್ ಪ್ರವೇಶಿಸಿದಕ್ಕಾಗಿ ಅಭಿನಂದನೆಗಳು. ಅಂತಾರಾಷ್ಟ್ರೀಯ ಜೂನಿಯರ್ ಟೆನಿಸ್ ಸ್ಪರ್ಧೆಯಲ್ಲಿ ಮೊದಲೆರಡು ಸ್ಥಾನಗಳನ್ನು ಕರ್ನಾಟಕದವರೇ ಪಡೆದಿರುವುದು ರಾಜ್ಯ ಟೆನಿಸ್ ಬೆಳವಣಿಗೆಯ ಉತ್ತಮ ಸಂಕೇತವಾಗಿದೆ.
>
> ■ **ಸುನಿಲ್ ಯಾಜಮಾನ್, ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಸಂಯುಕ್ತ ಕಾರ್ಯದರ್ಶಿ**

» ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಗಮನಸೆಳೆದ ಕನ್ನಡಿಗರು

ಕಿರುಸುದ್ದಿ

ದಿಲ್ಲಿ ಮೆಂಟರ್ ಪೀಟರ್ಸನ್ ರಾಜೀನಾಮೆ

ಹೊಸದಿಲ್ಲಿ: ಇಂಗ್ಲೆಂಡಿನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಅವರು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಮಾರ್ಚ್ 28ರಿಂದ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ತಯಾರಿ ನಡೆಸುತ್ತಿವೆ. ಆಟಗಾರರು ಹಂತ-ಹಂತವಾಗಿ ತಂಡಗಳನ್ನು ಸೇರಿಕೊಳ್ಳುತ್ತಿದ್ದಾರೆ. ಈ ಮಧ್ಯೆ ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಆಗಿದ್ದ ಕೆವಿನ್ ಪೀಟರ್ಸನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ವೊಂದರ ಮೂಲಕ ನಿರ್ಧಾರ ಪ್ರಕಟಿಸಿದ್ದಾರೆ. ನನಗೆ ಆ ಪೋಸ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಸಮಯವಿಲ್ಲ. ಐಪಿಎಲ್‌ನಿಂದ ಹೊರಬೀಳಲಾರೆ, ದಿಲ್ಲಿ ಅಲ್ಲದೆ, ಭಾಗವಹಿಸುತ್ತಿರುವ ಎಲ್ಲಾ ಆಟಗಾರರೂ ಉತ್ತಮವಾಗಿ ಆಡಲಿ. ನಾನು ವೀಕ್ಷಣೆ ವಿವರಣೆಯಲ್ಲಿ ಎಲ್ಲರನ್ನೂ ಸಿಗುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಬಿನ್ನಿ, ದ್ರಾವಿಡ್, ಮಿಥಾಲಿಗೆ ಇಂದು ಪ್ರಶಸ್ತಿ

ಹೊಸದಿಲ್ಲಿ: ಕನ್ನಡಿಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಹಾಗೂ ಭಾರತ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಜೀವಮಾನ ಸಾಧನೆ ಪ್ರಶಸ್ತಿ ಭಾನುವಾರ ನಡೆಯಲಿರುವ ನಮನ್ ಕಾರ್ಯಕ್ರಮದಲ್ಲಿ ನೀಡಲಿದೆ. ಪ್ರತಿ ವರ್ಷವೂ ನಡೆಯುವ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರದಂದು ದಿಲ್ಲಿಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತೇವೆ ಎಂದು ಬಿಸಿಸಿಐ ತಿಳಿಸಿದ್ದು, ಪ್ರಶಸ್ತಿ ವಿಜೇತರ ಪಟ್ಟಿ ಬಿಡುಗಡೆ ಮಾಡಿದೆ. ಭಾರತ ತಂಡದ ಮಾಜಿ ಕ್ರಿಕೆಟಿಗ, ತರಬೇತುದಾರರಾದ ರಾಹುಲ್ ದ್ರಾವಿಡ್ ಮತ್ತು ಮಾಜಿ ಕ್ರಿಕೆಟಿಗ ಹಾಗೂ ಮಾಜಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರಿಗೆ ಕರ್ನಲ್ ಸಿ. ಕೆ ನಾಯ್ಡು ಜೀವಮಾನ ಪ್ರಶಸ್ತಿ ನೀಡಿದರೆ, ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪ್ರಧಾನ ತರಬೇತುದಾರ ಗೌತಂ ಗಂಭೀರ್ ಅವರು ಶನಿವಾರದಂದು ಮುಂಬೈನ ಶ್ರೀ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಪ್ಯಾರಾ ಅಥ್ಲೆಟಿಕ್ಸ್: ದಾಖಲೆ ಸಂಖ್ಯೆಯ ಪದಕ ಗೆದ್ದ ಭಾರತೀಯರು

208 ಪದಕ ಬಾಚಿದ ಭಾರತ



ಪ್ರೀತಿ ಪಾಲ್‌ಗೆ ಚಿನ್ನದ ಪದಕ

ಪ್ರೀತಿ ಪಾಲ್ ವೇಗಕ್ಕೆ ಪದಕ

ಮೀರಟ್ ಮೂಲದ 25 ವರ್ಷದ ಪ್ರೀತಿ ಪಾಲ್ ಮಹಿಳೆಯರ 200 ಮೀಟರ್ (ಟಿ-35/ಟಿ37 ವರ್ಗ) ಓಟವನ್ನು 30.26 ಸೆಕೆಂಡುಗಳಲ್ಲಿ ಮುಗಿಸಿ ಚಿನ್ನ ಗೆದ್ದರು. ರಷ್ಯಾದ ಕರೀನಾ ಮಚುಲ್ಸ್ಕಾಯಾ 32.22 ಸೆಕೆಂಡುಗಳಲ್ಲಿ ಬೆಳ್ಳಿ ಪದಕ ಪಡೆದುಕೊಂಡರೆ, ಭಾರತದ ಬಿನಾ ಶಂಭುಭಾ 32.35 ಸೆಕೆಂಡುಗಳಲ್ಲಿ ಕಂಚು ಗೆದ್ದರು. ಇದಕ್ಕೂ ಮುನ್ನ ಪ್ರೀತಿ ಪಾಲ್ ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲೂ ಚಿನ್ನದ ಪದಕ ಗೆದ್ದಿದ್ದರು. ಗೆಲುವಿನ ಬಗ್ಗೆ ಮಾತನಾಡುತ್ತಾ ಅವರು, ನಾನು ಗುರಿ ಇಟ್ಟಿದ್ದ ಸಮಯವನ್ನು ಕೇವಲ ಅಲ್ಪ ಅಂತರದಲ್ಲಿ ತಪ್ಪಿಸಿಕೊಂಡಿದ್ದೇನೆ. ನನ್ನ ವೈಯಕ್ತಿಕ ಅತ್ಯುತ್ತಮ ಸಮಯ 30.03 ಸೆಕೆಂಡುಗಳು. ಅಭ್ಯಾಸದಲ್ಲಿ ಈಗಾಗಲೇ 29.6 ಸೆಕೆಂಡುಗಳು ಓಡಿದ್ದೇನೆ. ಅಂತಿಮ ಹಂತದಲ್ಲಿ ದಣಿವು ಕಾಣಿಸುತ್ತಿದೆ, ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಪ್ರೀತಿ ಹೇಳಿದರು.

ಹೊಸದಿಲ್ಲಿ: ಸತತ ಎರಡು ದಿನಗಳ ಮಟ್ಟಿಗೆ ಕೂಟದಲ್ಲಿ ಅಸಾಮಾನ್ಯ ಪ್ರದರ್ಶನ ನೀಡಿರುವ ಭಾರತದ ಪ್ಯಾರಾ ಅಥ್ಲೀಟ್‌ಗಳು ಮುಕ್ತಾಯಗೊಂಡ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿ ಸ್ಪರ್ಧೆಯಲ್ಲಿ ಬರೋಬ್ಬರಿ 208 ಪದಕ ಬಾಚಿಕೊಂಡರು.

ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಅಥ್ಲೀಟ್ ಪ್ರೀತಿ ಪಾಲ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿ ಸ್ಪರ್ಧೆಯಲ್ಲಿ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದರು. ಮಹಿಳೆಯರ 200 ಮೀಟರ್ ಓಟದಲ್ಲಿ ಅವರು ಅಸಾಧಾರಣ ವೇಗದೊಂದಿಗೆ ಗೆಲುವು ಸಾಧಿಸಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ತಂದರು.

ಈ ಗೆಲುವಿನ ನಂತರ ಸ್ಪರ್ಧೆಯಲ್ಲಿ ಭಾರತ ಭರ್ಜರಿ ಪ್ರಾಬಲ್ಯ ತೋರಿತು. ಒಟ್ಟು 208 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿತು. ಇದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚು ಪದಕಗಳು ಸೇರಿವೆ. ಕಡಿಮೆ ದೇಶಗಳು ಭಾಗವಹಿಸಿದ್ದರೂ ಭಾರತವು ಸಂಪೂರ್ಣ ಮೇಲುಗೈ ಸಾಧಿಸಿತು.

ಪುರುಷರ ಶಾಟ್‌ಪುಟ್‌ನಲ್ಲಿ ಭಾರತೀಯರಾಟ:

ಪುರುಷರ ಶಾಟ್‌ಪುಟ್ 57 ವರ್ಗದಲ್ಲಿ ಭಾರತ ಮೂರುಪದಕಗಳನ್ನು ಗೆದ್ದಿತು. ಶುಭಮ್ ಜುಯಾಲ್ 14.45 ಮೀಟರ್ ತೂರಾಟದೊಂದಿಗೆ ಚಿನ್ನ, ಭಗತ್ ಸಿಂಗ್ 13.29 ಮೀಟರ್ ತೂರಾಟದೊಂದಿಗೆ ಬೆಳ್ಳಿ ಹಾಗೂ ಪ್ರಿಯಾಂಶ್ ಕುಮಾರ್ 13.07 ಮೀಟರ್ ತೂರಾಟದೊಂದಿಗೆ ಕಂಚು ಪಡೆದರು.

ಓಟದಲ್ಲಿ: ಪುರುಷರ 200 ಮೀಟರ್ (35 ವರ್ಗ) ಓಟದಲ್ಲಿ ವಿನಯ 28.18 ಸೆಕೆಂಡುಗಳಲ್ಲಿ ಚಿನ್ನ ಗೆದ್ದರು. ಅನುಭವ್ ಚೌಧರಿ 29.49 ಸೆಕೆಂಡುಗಳಲ್ಲಿ ಬೆಳ್ಳಿ ಪಡೆದರೆ, ಹಾಂಗ್ ಕಾಂಗ್‌ನ ಚುಯಿ ಯಿಯು ಚಾವೋ ಕಂಚು ಗೆದ್ದರು. ಇನ್ನು 200 ಮೀಟರ್ (ಟಿ-37/ಟಿ44 ವರ್ಗ) ಓಟದಲ್ಲೂ ಭಾರತ ಮೂರು ಪದಕಗಳನ್ನು ಗೆದ್ದಿತು. ರಾಕೇಶ್ ಭಾಯ್ ಭಟ್ 25.20 ಸೆಕೆಂಡುಗಳಲ್ಲಿ ಚಿನ್ನ, ಸಿದ್ಧಾರ್ಥ ಮಂಜು ಬೆಳ್ಳಾರಿ 28.23 ಸೆಕೆಂಡುಗಳಲ್ಲಿ ಬೆಳ್ಳಿ ಹಾಗೂ ರವಿಕಿರಣ ಆಸರೆಲ್ಲಿ 31.50 ಸೆಕೆಂಡುಗಳಲ್ಲಿ ಕಂಚು ಪಡೆದರು. ಪುರುಷರ 800 ಮೀಟರ್ (ಟಿ53/ಟಿ54 ವರ್ಗ) ಸ್ಪರ್ಧೆಯಲ್ಲೂ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಮನೋಜ್ ಕುಮಾರ್ ಸಭಾಪತಿ 1:57.41 ಸಮಯದಲ್ಲಿ ಚಿನ್ನ ಗೆದ್ದರು. ಮಣಿಕಂದನ್ ಜೋತಿ 2:11.14 ಸಮಯದಲ್ಲಿ ಬೆಳ್ಳಿ ಹಾಗೂ ಕಮಲಕಾಂತ ನಾಯಕ 2:20.83 ಸಮಯದಲ್ಲಿ ಕಂಚು ಪಡೆದರು.

ಫುಟ್ಬಾಲ್: ಜೂ. ತಂಡಕ್ಕೆ 2ನೇ ಜಯ

ಹೊಸದಿಲ್ಲಿ: ಮ್ಯಾನ್ಮಾರ್‌ನ ತುವುನ್ನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಅಂತಾರಾಷ್ಟ್ರೀಯ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತದ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ತಂಡ ರೋಚಕ ಹೋರಾಟದಲ್ಲಿ ಮ್ಯಾನ್ಮಾರ್ ತಂಡವನ್ನು 3-2 ಗೋಲುಗಳಿಂದ ಸೋಲಿಸಿ ಗಮನಸೆಳೆದಿದೆ. ಪಂದ್ಯ ಅಂತಿಮ ಕ್ಷಣಗಳಲ್ಲಿ ತಿರುವು ಪಡೆದಿದ್ದು, ಬದಲಾಯಿತ ಆಟಗಾರ್ತಿಯರ ಗೋಲುಗಳಿಂದ ಭಾರತ ಅದ್ಭುತ ಗೆಲುವು ದಾಖಲಿಸಿತು.

ಮೊದಲಾರ್ಧದಲ್ಲಿ ಮ್ಯಾನ್ಮಾರ್ ಉತ್ತಮ ಆರಂಭ ಕಂಡಿತು. 12ನೇ ನಿಮಿಷದಲ್ಲಿ ಕ್ವಿನ್ ವಿಂಟ್ ವಾರ ಕ್ಯಾಂಗ್ ಗೋಲು ಗಳಿಸಿ ಆತಿಥೇಯರಿಗೆ ಮುನ್ನಡೆ ತಂದರು. ಭಾರತ ತಂಡ 33ನೇ ನಿಮಿಷದಲ್ಲಿ ಅಲ್ವಾ ದೇವಿ ಸೆಂಚಾಮ್ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ರೆಡಿಮಾ ದೇವಿ ನೀಡಿದ ನಿಖರ ಪಾಸ್ ಅನ್ನು ನಿಯಂತ್ರಿಸಿಕೊಂಡ ಅಲ್ವಾ ದೇವಿ ಎಡ ಕಾಲಿನಿಂದ ಬಲಿಷ್ಠ ಶಾಟ್ ಹೊಡೆದು ಗೋಲು ದಾಖಲಿಸಿದರು. ಇದು 15 ವರ್ಷದ ಅಲ್ವಾ ದೇವಿ ಅವರ ಮೊದಲ ಯುವ ಅಂತಾರಾಷ್ಟ್ರೀಯ ಗೋಲಾಗಿದೆ.

ಆದರೆ ಮೊದಲಾರ್ಧದ ಅಂತ್ಯದ ಕ್ಷಣದಲ್ಲಿ ಮ್ಯಾನ್ಮಾರ್ ಮತ್ತೆ ಮುನ್ನಡೆ ಪಡೆದಿತು. 45ನೇ ನಿಮಿಷದಲ್ಲಿ ಸೌಂಗ್ ತಾಜಿನ್ ಊ ನೀಡಿದ ಕಾರ್ನರ್ ಕಿಕ್ ಅನ್ನು ಮಿನ್ ಹ್ಸ್ವೇನ್ ಮೇ ಜಿಟಾರ್ ತಲೆಯಿಂದ ಜಾಲದಲ್ಲಿ ಸೇರಿಸಿದರು. ಇದರಿಂದ ವಿರಾಮದ ವೇಳೆಗೆ ಮ್ಯಾನ್ಮಾರ್ 2-1 ಮುನ್ನಡೆ ಹೊಂದಿತ್ತು.



ಎರಡನೇ ಕ್ವಾರ್ಟರ್: ಎರಡನೇ ಕ್ವಾರ್ಟರ್‌ನಲ್ಲಿ ಎರಡು ತಂಡಗಳ ಮಧ್ಯೆ ಕಠಿಣ ಪೈಪೋಟಿ ನಡೆಯಿತು. ಮಧ್ಯಮೈದಾನದಲ್ಲಿ ಹೋರಾಟ ಹೆಚ್ಚಾಗಿದ್ದು, ಸ್ಪಷ್ಟ ಅವಕಾಶಗಳು ಕಡಿಮೆಯಾದವು. ಆದರೆ ಅಂತಿಮ ಕ್ಷಣಗಳಲ್ಲಿ ಭಾರತ ಪಂದ್ಯವನ್ನು ತಿರುಗಿಸಿತು. 88ನೇ ನಿಮಿಷದಲ್ಲಿ ಬದಲಾಯಿತ ಆಟಗಾರ್ತಿ ಅನುಷ್ಕಾ ಕುಮಾರಿ ಸಮಬಲದ ಗೋಲು ದಾಖಲಿಸಿದರು. ಸಹ ಆಟಗಾರ್ತಿ ಬೋನಿಫಿಲಿಯಾ ಶುಲ್ಲೈ ನೀಡಿದ ಪಾಸ್ ಅನ್ನು ಪಡೆದುಕೊಂಡ ಅನುಷ್ಕಾ ಸುಮಾರು 25 ಗಜ ದೂರದಿಂದ ಹೊಡೆದ ಶಾಟ್ ನೇರವಾಗಿ ಜಾಲ ಸೇರಿತು.

ಇದರಿಂದ ಉತ್ಸಾಹಗೊಂಡ ಭಾರತ ಕೊನೆಯ ಕ್ಷಣದಲ್ಲಿ ಜಯದ ಗೋಲು ದಾಖಲಿಸಿತು. ಹೆಚ್ಚುವರಿ ಸಮಯದ 91ನೇ ನಿಮಿಷದಲ್ಲಿ ಎಲಿಜಬೆತ್ ಲಕ್ರಾ ದೂರದಿಂದ ಚೆಂಡು ಕಳುಹಿಸಿದರು. ಮ್ಯಾನ್ಮಾರ್ ರಕ್ಷಣಾ ಆಟಗಾರ್ತಿ ಪಿನ್ ಮ್ಯಿಂಟ್ ಯಾನ್ ತಲೆ ಹೊಡೆತದಲ್ಲಿ ತಪ್ಪು ಮಾಡಿದ ಪರಿಣಾಮ ಚೆಂಡು ಜೋಯಾ ಕೈಗೆ ಸಿಕ್ಕಿತು. ಅವಕಾಶವನ್ನು ಬಳಸಿಕೊಂಡ ಜೋಯಾ ಎಡ ಕಾಲಿನಿಂದ ಚೆಂಡನ್ನು ಜಾಲದಲ್ಲಿ ಸೇರಿಸಿ ಭಾರತಕ್ಕೆ 3-2 ಗೆಲುವು ತಂದುಕೊಟ್ಟರು.

ಈ ಪಂದ್ಯ ಮುಂದಿನ ಮೇ 1ರಿಂದ 17ರವರೆಗೆ ಚೀನಾದ ಸುಝೌ ನಗರದಲ್ಲಿ ನಡೆಯಲಿರುವ ಏಷ್ಯಾ ಮಟ್ಟದ 17 ವರ್ಷದೊಳಗಿನ ಮಹಿಳಾ ಕಪ್ ಫುಟ್ಬಾಲ್ ಟೂರ್ನಿಗೆ ಭಾರತ ತಂಡದ ಸಿದ್ಧತೆಯ ಭಾಗವಾಗಿತ್ತು. ಗುರುವಾರ ನಡೆದ ಮೊದಲ ಸ್ನೇಹಪೂರ್ಣ ಪಂದ್ಯದಲ್ಲೂ ಭಾರತ 2-0 ಗೋಲುಗಳಿಂದ ಜಯ ಸಾಧಿಸಿತ್ತು

ಹಾಕಿ: ಫೈನಲ್‌ನಲ್ಲಿ ಭಾರತ ಪರಾಭವ



» ವಿಶ್ವಕಪ್ ಅರ್ಹತಾ ಸುತ್ತು
» ಇಂಗ್ಲೆಂಡ್‌ಗೆ 2-0ರ ಗೆಲುವು

ಹೈದರಾಬಾದ್: ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಮಹಿಳೆಯರ ವಿಶ್ವಕಪ್‌ನಲ್ಲಿ ಅರ್ಹತೆ ಗಿಟ್ಟಿಸಿಕೊಂಡ ನಂತರ ಫೈನಲ್ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ವಿರುದ್ಧ ಪರಾಭವಗೊಂಡಿತು.

ದೀರ್ಘಕಾಲದ ಪೈಪೋಟಿಯಲ್ಲಿ ಮಿಂಚಿದರೂ ಎದುರಾಳಿಗಳ ಕಮಾಲ್ ಮುಂದೆ ಭಾರತ ಕೂಟದಲ್ಲೇ ಮೊದಲ ಪಂದ್ಯ ಸೋತಿತು. ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಅಚ್ಚಳಿಯದ ಪ್ರದರ್ಶನ ನೀಡಿದ್ದ ಭಾರತ ಕೊನೆಯ ಪಂದ್ಯದಲ್ಲಿ ಸಿಕ್ಕ ಐದೂ ಅವಕಾಶಗಳನ್ನು ಕಳೆದುಕೊಂಡ ನಂತರ ಇಂಗ್ಲೆಂಡ್ 2-0ರಿಂದ ಪಂದ್ಯವನ್ನು ಗೆದ್ದು ಅರ್ಹತಾ ಸುತ್ತಿನ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಶನಿವಾರದ ಪಂದ್ಯದಲ್ಲಿ ಆರಂಭ ದಿಂದಲೂ ಉಭಯ ತಂಡಗಳು ಸಮಯೋಚಿತ ಆಟವಾಡಿದವು. ಪಂದ್ಯದ 23ನೇ ಸೆಕೆಂಡಿನಲ್ಲೇ ಎದುರಾಳಿ ಆಟಗಾರ್ತಿ ಥಾಂಪ್ಸನ್ ಹಸಿರು ಕಾರ್ಡ್ ಪಡೆದರು. 1.12 ನೇ ನಿಮಿಷದಲ್ಲೇ ಪೆನಾಲ್ಟಿ ಕಾರ್ನರ್ ಪಡೆದ ಭಾರತ ಗೋಲು ಗಳಿಸಲಿಲ್ಲ, ಡಿಫೆನ್ಸ್‌ನಲ್ಲಿ ಮಿಂಚಿದ ಇಂಗ್ಲೆಂಡ್ 12.51 ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ಪಡೆದುಕೊಂಡಿತು. ಗ್ರೇಸ್ ಖಾತೆ ತೆರೆದರು. ಎರಡನೇ ಕ್ವಾರ್ಟರ್ ಆರಂಭದಲ್ಲೇ ಮತ್ತೊಮ್ಮೆ ಒತ್ತಡ ಹೇರಿದ ಭಾರತ 22.51ನೇ ನಿಮಿಷದ ವೇಳೆ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡಿತು. ಆದಾಗ್ಯೂ ಖಾಲಿ ಕೈಯಲ್ಲೇ ಆಟ ಮುಂದುವರಿಸಿತು. 35ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡರೂ ಗೋಲು ಗಳಿಸಲಿಲ್ಲ ಭಾರತ. ಮೂರನೇ ಕ್ವಾರ್ಟರ್‌ಗೂ ಮುನ್ನ ಇಂಗ್ಲೆಂಡ್ ಗೋಲಿನ ಅಂತರ 2ಕ್ಕೆ ಹಿಗ್ಗಿಸಿಕೊಂಡಿತು. 43ನೇ ನಿಮಿಷದಲ್ಲಿ ನೀಲ್ ಎಲ್ಜಿಬೆತ್ ಗೋಲು ಬಾರಿಸಿ ಭಾರತೀಯರ ಮೇಲೆ ಭಾರೀ ಒತ್ತಡ ಹಾಕಿದರು. 59ನೇ ನಿಮಿಷದ ವೇಳೆ ಗೋಲು ಪೆನಾಲ್ಟಿ ಕಾರ್ನರ್ ಪಡೆದರೂ ಭಾರತ ಯಾವುದೇ ಗೋಲು ಗಳಿಸದೆ, ಖಾಲಿ ಕೈಯಲ್ಲೇ ಪಂದ್ಯ ಮುಗಿಸಿತು.

ಪಿಎಸ್‌ಎಲ್ ತ್ಯಜಿಸಿ ಐಪಿಎಲ್‌ಗೆ ಬ್ಲೆಸ್ಸಿಂಗ್?

ಹೊಸದಿಲ್ಲಿ: ಪಾಕಿಸ್ತಾನ, ಬಾಂಗ್ಲಾದೇಶ ಆಟಗಾರರನ್ನು ಬಿಸಿಸಿಐ ಧಿಕ್ಕರಿಸಿದಂತೆ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯನ್ನು ಸಲೀಸಾಗಿ ಧಿಕ್ಕರಿಸಿದ ಜಿಂಬಾಬ್ವೆ ವೇಗಿ ಬ್ಲೆಸ್ಸಿಂಗ್ ಮುಝರ್ಬಾನಿ ಶೀಘ್ರದಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಸೇರಿಕೊಳ್ಳಲಿದ್ದಾರೆ.



ಬಾಂಗ್ಲಾದೇಶ ಆಟಗಾರ ಮುಸ್ತಾಫಿಜುರ್ ರೆಹಮಾನ್ ಖರೀದಿಸಿದ್ದಕ್ಕಾಗಿ ಕೆಕೆಆರ್ ತಂಡ ಭಾರೀ ಹಿನ್ನಡೆ ಅನುಭವಿಸಿತ್ತು. ಸಂಘಟನೆಗಳ ತೀವ್ರ ಪ್ರತಿಭಟನೆ ಬೆನ್ನಲ್ಲೇ ಬಿಸಿಸಿಐ ಪಾಕ್ ಆಟಗಾರರಂತೆ ಬಾಂಗ್ಲಾದವರಿಗೂ ಗೇಟ್‌ಪಾಸ್ ನೀಡಿತ್ತು. ಕೆಕೆಆರ್ ತಂಡದಿಂದ ರೆಹಮಾನ್ ಹೊರಬಿದ್ದಿದ್ದರು. ಈ ನಿಟ್ಟಿನಲ್ಲಿ ಅವರ ಬದಲಿ ಆಟಗಾರರಾಗಿ ಕೆಕೆಆರ್‌ನಿಂದ ಬುಲಾವ್ ಬಂದಿದ್ದು, ಪಿಎಸ್‌ಎಲ್‌ನ ಇಸ್ಲಾಮಾಬಾದ್ ಯುನೈಟೆಡ್ ತಂಡಕ್ಕೆ ಆಯ್ಕೆಯಾಗಿದ್ದ ಅವರು ಆಡದಿರಲು ಹೇಳಿದ್ದಾರೆ ಎಂದು ಕ್ರಿಕ್ ಇನ್ಫೋ ವರದಿ ಮಾಡಿದೆ. ಈ ಹಿಂದೆ ಕೂಡ ಪಿಎಸ್‌ಎಲ್ ತಂಡಕ್ಕೆ ಆಯ್ಕೆಯಾಗಿದ್ದ ಬ್ಲೆಸ್ಸಿಂಗ್ ಈ ಬಾರಿ ಅಲ್ಲೂ ಕೂಡ ಅನ್‌ಸೋಲ್ಡ್ ಆಗಿದ್ದರು. ಆದರೆ ಇಸ್ಲಾಮಾಬಾದ್ ನೇರ ಖರೀದಿ ಮಾಡಿತ್ತು. 26ರಿಂದ ಶುರುವಾಗಲಿರುವ ಈ ಕೂಟಕ್ಕೂ ಮುನ್ನವೇ ಬ್ಲೆಸ್ಸಿಂಗ್ ಫ್ರಾಂಚೈಸಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬಾಕ್ಸಿಂಗ್: ಫೈನಲ್‌ಗೇರಿದ ನಾಲ್ವರು

ಬ್ಯಾಂಕಾಕ್: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಫ್ಯೂಚರ್ ಕಪ್ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಶನಿವಾರ ನಡೆದ ಸೆಮಿಫೈನಲ್ ಪೈಪೋಟಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ನಾಲ್ವರು ಆಟಗಾರರು ಅಂತಿಮ ಸುತ್ತಿಗೆ ಪ್ರವೇಶಿಸಿದ್ದಾರೆ.

ಚಂದ್ರಿಕಾ, ಗುಂಜನ್, ಚಾಯ್‌ಶ್ರೀ ದೇವಿ ಮತ್ತು ಅಂಬೇಕರ್ ಮೀತ್ಯೆ ತಮ್ಮ ತಮ್ಮ ವಿಭಾಗಗಳಲ್ಲಿ ವಿಶ್ವಾಸಾರ್ಹ ಜಯಗಳಿಸಿ ಪದಕದತ್ತ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ. ಮಹಿಳೆಯರ 51 ಕೆಜಿ ವಿಭಾಗದಲ್ಲಿ ಚಂದ್ರಿಕಾ ಅದ್ಭುತ ಪ್ರದರ್ಶನ ನೀಡಿ ಮೊರಾಕ್ಕೊದ ರಿಹಾಬ್ ಹಮ್ಮೌನ್ ವಿರುದ್ಧ ಎರಡನೇ ಸುತ್ತಿನಲ್ಲಿ ನಿರ್ಣಾಯಕ ಜಯ ಸಾಧಿಸಿದರು. ರೆಫರಿ ಸ್ಪರ್ಧೆಯನ್ನು ನಿಲ್ಲಿಸಿದ ಪರಿಣಾಮ ಚಂದ್ರಿಕಾ ಸುಲಭವಾಗಿ ಅಂತಿಮ ಸುತ್ತಿಗೆ ಪ್ರವೇಶಿಸಿದರು.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಗುಂಜನ್ ಉತ್ತರ ಕೊರಿಯಾದ ಯು ಗ್ಯೊಂಗ್ ಕಿಮ್ ವಿರುದ್ಧ 50 ಏಕಮತ ತೀರ್ಪಿನ ಮೂಲಕ ಗೆಲುವು ಸಾಧಿಸಿದರು. ಆರಂಭದಿಂದಲೇ ದಿಟ್ಟವಾಗಿ ಹೋರಾಡಿದ ಗುಂಜನ್ ಸ್ಪರ್ಧೆಯಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿ ಅಂತಿಮ ಸುತ್ತಿನ ಟಿಕೆಟ್ ಪಡೆದುಕೊಂಡರು.




ಮಹಿಳೆಯರ 54 ಕೆಜಿ ವಿಭಾಗದಲ್ಲಿ ಚಾಯ್ ಶ್ರೀ ದೇವಿ ಮತ್ತೊಂದು ಪ್ರಭಾವಿ ಪ್ರದರ್ಶನ ನೀಡಿದರು. ಮೆಕ್ಸಿಕೊದ ಸೋಫಿಯಾ ರಾಮಿರೆಜ್ ವಿರುದ್ಧ ನಡೆದ ಅರ್ಧ ಅಂತಿಮ ಪೈಪೋಟಿಯಲ್ಲಿ ಅವರು ಮೊದಲನೇ ಸುತ್ತಿನಲ್ಲೇ ರೆಫರಿ ಸ್ಪರ್ಧೆಯನ್ನು ನಿಲ್ಲಿಸುವಂತೆ ಮಾಡಿದರು. ಇದರಿಂದ ಚಾಯ್ ಶ್ರೀ ದೇವಿ ಸುಲಭವಾಗಿ ಅಂತಿಮ ಹಂತಕ್ಕೆ ಮುನ್ನಡೆದರು.

ಪುರುಷರಲ್ಲಿ: ಪುರುಷರ 50 ಕೆಜಿ ವಿಭಾಗದಲ್ಲಿ ಅಂಬೇಕರ್ ಮೀತ್ಯೆ ಉಜ್ಬೇಕಿಸ್ತಾನದ ಅಬ್ದುಗನಿ ಯಾರ್ಕಿಂಜೊನೊವ್ ವಿರುದ್ಧ 50 ಏಕಮತ ತೀರ್ಪಿನಿಂದ ಜಯಗಳಿಸಿ ಅಂತಿಮ ಸುತ್ತಿಗೆ ಪ್ರವೇಶಿಸಿದರು. ಉತ್ತಮ ತಂತ್ರ ಮತ್ತು ವೇಗದ ಮೂಲಕ ಅವರು ಪೈಪೋಟಿಯನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಇನ್ನೊಂದೆಡೆ ಮಹಿಳೆಯರ 57 ಕೆಜಿ ವಿಭಾಗದಲ್ಲಿ ರಾಧಾಮಣಿ ಲಾಂಗ್ಜಾಮ್ ಕಠಿಣ ಪೈಪೋಟಿ ನಡೆಸಿದರೂ ಅಂತಿಮವಾಗಿ ಸೋಲು ಅನುಭವಿಸಿದರು. ಉಕ್ರೇನ್‌ನ ಯೆವಾಂಹೆಲಿನಾ ಪೆತ್ರುಕ್ ವಿರುದ್ಧ ನಡೆದ ಪಂದ್ಯದಲ್ಲಿ ಅವರು 2-3 ಅಂತರದಲ್ಲಿ ಸೋತರು. ಇದರಿಂದ ರಾಧಾಮಣಿ ಕಂಚಿನ ಪದಕದೊಂದಿಗೆ ತಮ್ಮ ಅಭಿಯಾನವನ್ನು ಮುಗಿಸಿದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5924

ಎಡದಿಂದ ಬಲಕ್ಕೆ
2.ಮನಸಿನಿಂದ ಮಾಡಿದ ವಂದನೆ (3)
5.ಬಗೆ-ರೀತಿಗಳಿಲ್ಲಿ ತಿರುಗಿವೆ (2)
7.ದಕ್ಷವ್ಯಕ್ತಿಯ ಕರದಲ್ಲಿರುವ ಪಗಡೆಯ ದಾಳ (2)
8.ತರವಲ್ಲ ಎಂದದ್ದು ಈ ತಂತಿವಾದ್ಯದ ಸ್ವರವನ್ನು (3)
9.ಹದಗೊಳಿಸುವಿಕೆ-ಸ್ವಚ್ಛಗೊಳಿಸುವಿಕೆ (3)
10.ಮಾವನ ಪಕ್ಕದಲ್ಲಿ ಕಂಡ ಕುಳ್ಳವ್ಯಕ್ತಿ (3)
12.ಆಸಕ್ತಿಯಿಲ್ಲದಿರುವಿಕೆ-ಬೇಜಾರು (3)
13. ಇದು ಮನಸ್ಸಿನ ವ್ಯಥೆ-ವಿಷಾದ (2)
14.ಖರೀದಿಸಲು ಬೇಕಾದ ಮಾಧ್ಯಮ ತಿರುಗಿದೆ (2)
16.ಹೊಳೆಯುವ ಗಟ್ಟಿ ಬೆಲೆಬಾಳುವ ಕಲ್ಲು (3)

ಮೇಲಿನಿಂದ ಕೆಳಕ್ಕೆ
1.ಕೋಪದಿಂದ ವಿವೇಕ ಕಳೆದುಕೊಂಡವನು (3)
2.ಪ್ರಹ್ಲಾದನನ್ನು ರಕ್ಷಿಸಿದ ವಿಷ್ಣುವಿನ ರೂಪ (4)
3.ಒಂಬತ್ತು ಬಗೆಯ ಆಕಾಶ ಕಾಯಗಳು (4)
4.ಮುಂದೆ-ಎದುರುಗಡೆಯಿದು (3)
6.ಇದು ತರ್ಕವಿಲ್ಲದ ಚರ್ಚೆ (5)
7.ಇತರರು ಹೇಳಿದಂತೆ ನುಡಿಯುವುದು (5)
11.ಮಾರುತಿಯಿಲ್ಲಿ ತಲೆಕೆಳಗಾಗಿದ್ದಾನೆ (4)
12.ರೋಗಕ್ಕೆ ತುತ್ತಾಗು-ಕಾಯಿಲೆ ಬರು (4)
13.ಆಕಾಶದಲ್ಲಿ ಸಂಚರಿಸುವಂಥಾದ್ದು (3)
15.ಮರ-ಲೋಹದ ತೆಳುವಾದ ಸೀಳು (3)

5923 ಉತ್ತರ

ಎಡದಿಂದ ಬಲಕ್ಕೆ:
2.ಮನಸು 5.ಜ್ಞಾನಪೀಠ
6.ಮದಕರಿ 7.ಗಾಯ
8.ದಯ 10.ತಿದಿ
12.ದುಂಬಿ 13.ಆಚಮನ
15.ಹಾಡುಗಾರ
16.ದಿರಸು

ಮೇಲಿನಿಂದ ಕೆಳಕ್ಕೆ:
1.ಅನನ್ವಯ 2.ಮಠ
3.ಸುಮ 4.ಮಕರಂದ
7.ಗಾಣತಿ 9.ಬಿಳಿಯ
11.ದಿನಚರಿ
12.ದುಂದುಗಾರ 14.ನದಿ
15.ಹಾಸು

ಕಿರುಸುದ್ದಿ

ಪೂರ್ವಭಾವಿ ಸಭೆ

ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ದೇವರ ದಾಸೀಮಯ್ಯ ಜಯಂತಿ ಕುರಿತು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಅಧ್ಯಕ್ಷತೆಯಲ್ಲಿ ಪೂರ್ವಸಿದ್ಧತಾ ಸಭೆ ಜರುಗಿತು.


ದೇವರ ದಾಸಿಮಯ್ಯ ಜಯಂತಿಯನ್ನು ಮಾ.23 ರಂದು ಬೆಟಗೇರಿಯ ದೇವರ ದಾಸೀಮಯ್ಯ ವೃತ್ತದಲ್ಲಿ ವ್ಯವಸ್ಥಿತವಾಗಿ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಮಾತನಾಡಿ, ದೇವರ ದಾಸೀಮಯ್ಯ ಜಯಂತಿಯನ್ನು ತಾಲೂಕು ಮಟ್ಟದಲ್ಲಿ ಆಚರಿಸಲು ಕ್ರಮ ವಹಿಸಬೇಕು. ಜಯಂತಿ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪದವಿಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ, ಕ್ರೀಡೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ, ಸಮಾಜದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ನಡೆಸುವ ಕಾರ್ಯಕ್ರಮ ಜರುಗಲಿದೆ. ದೇವರ ದಾಸಿಮಯ್ಯ ಜಯಂತಿ ಕುರಿತು ಅಧ್ಯಯನ ಮಾಡಿದವರಿಂದ ಉಪನ್ಯಾಸ ಕಾರ್ಯಕ್ರಮ ಜರುಗಲಿದೆ ಎಂದರು. ಸಮಾಜದ ಹಿರಿಯರು, ಗಣ್ಯರು, ಮುಖಂಡರು, ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ.ತುಂಬರಮಟ್ಟಿ ಇತರರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಸ್ವಾಗತಿಸಿದರು.

ದತ್ತಿ ಉಪನ್ಯಾಸ ಇಂದು

ಗದಗ: ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಮಾ.15 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1689ನೇ ಶರಣ ಸಂಗಮದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು, ತಾಲೂಕು ಕದಳಿ ಮಹಿಳಾ ವೇದಿಕೆ, ಬಸವದಳದ ಸಂಯುಕ್ತಾಶ್ರಯದಲ್ಲಿ ''ನಿರ್ಭೀತರಾಣಿ ಅಬ್ಬಕ್ಕ'' ಹಾಗೂ ''ಲಿಂ.ಡಾ.ಮಾತೆ ಮಹಾದೇವಿ'' ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಎಂ.ಬಿ.ಲಿಂಗದಾಳ ವಹಿಸುವರು. ಉಪನ್ಯಾಸಕಿ ಗಿರಿಜಕ್ಕ ಧರ್ಮರಡ್ಡಿ, ಲಿಂ.ಡಾ. ಮಾತೆ ಮಹಾದೇವಿ ಕುರಿತು ಹಾಗೂ ಸುಧಾ ಹುಚ್ಚಣ್ಣವರ ಉಪನ್ಯಾಸ ನೀಡುವರು. ಕೆ.ಎ.ಬಳಿಗೇರ, ಎಂ.ಬಸವರಾಜ, ಅರವಿಂದ ಕೂರಾ ಆಗಮಿಸುವರು ಎಂದು ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಕಲ್ಲಿನಾಥ ಕುಲಕರ್ಣಿ ನಿಧನ



ಲಕ್ಷ್ಮೇಶ್ವರ: ಪಟ್ಟಣದ ಬ್ರಾಹ್ಮಣ ಸಮಾಜದ ಹಿರಿಯ ಮುಖಂಡ, ಸಮಾಜ ಸಂಘಟನೆಯ ಮುತ್ಸದ್ದಿ, ಶ್ರೀ ಶಂಕರಸೇವಾ ಸಮಿತಿಯ ನಿಕಟಪೂರ್ವ ಕಾರ್ಯದರ್ಶಿ ಆಗಿದ್ದ ಕಲ್ಲಿನಾಥ (ಕಲ್ಲಪ್ಪ), ಎಸ್.ಕುಲಕರ್ಣಿ(83) ಅವರು ಗುರುವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ. ಕೆ.ಎಸ್.ಕುಲಕರ್ಣಿ ಅವರ ನಿಧನಕ್ಕೆ ಗದಗ ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ವೆಂಕಟೇಶ ಕುಲಕರ್ಣಿ, ಪಟ್ಟಣದ ಬ್ರಹ್ಮವೃಂದ ಅಧ್ಯಕ್ಷ ಗೋಪಾಲ ಪಡ್ನೀಸ್, ತಾಲೂಕು ಬ್ರಾಹ್ಮಣ ಸಮಾಜ ಅಧ್ಯಕ್ಷ ಕೃಷ್ಣ ಕುಲಕರ್ಣಿ, ಶಿರಹಟ್ಟಿ ಬ್ರಾಹ್ಮಣ ಸಮಾಜದ ಅಧ್ಯಕ್ಷ ಎನ್.ಆರ್.ಕುಲಕಣಿ ಹಾಗೂ ನಿವೃತ್ತ ನೌಕರರು ಮತ್ತು ಹಿರಿಯ ನಾಗರಿಕರ ಸಂಘ, ತಾಲೂಕು ವೈದ್ಯರ ಸಂಘ ಸೇರಿದಂತೆ ಅನೇಕ ಮುಖಂಡರು, ಸಂಘ ಸಂಸ್ಥೆಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4989-8299
ಅಜವಾನ	6219-9069
ಅಲಸಂದಿ	1099-6321
ಕಡಲೆ	1019-5509
ಉದ್ದು	877-5712
ಹವೀಜ	7369-9599
ಒಣಮೆಣಸಿಕಾಯಿ	1099-60200
ಹೆಸರು	1417-5829
ಹುರಳಿ	1661-4356
ಜೋಳ	1216-4377
ಗೋವಿನಜೋಳ	1419-1770
ಮಡಕಿ	11000-11000
ಸಾಸವಿ	4029-5712
ನವಣಿ	2919-2919
ಕುಸಬಿ	2112-5039
ಎಳ್ಳು	7699-7699
ಸೂರ್ಯಕಾಂತಿ	1009-6862
ತೊಗರಿ	4244-5419
ಗೋಧಿ	1177-5757
ಶೇಂಗಾ ಬೀಜ	8400-8400



ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದ ಹತ್ತಿರ ಪಂಚಮಸಾಲಿ ಕೋ-ಆಪ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡ ಹಾಗೂ ಕಾರ್ಯಾಲಯ ಉದ್ಘಾಟನೆ ನಡೆಯಿತು. ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿದ್ದರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಸ್.ಪಿ.ಪಾಟೀಲ ವಹಿಸಿದ್ದರು. ಸಂಘದ ಉಪಾಧ್ಯಕ್ಷೆ ಚಂಪಾವತಿ ಚಿಂಚಲಿ, ನಿರ್ದೇಶಕರುಗಳಾದ ವಿಜಯಲಕ್ಷ್ಮೀ ಬಾಳಿಕಾಯಿ, ಸುಲೋಚನಾ ಜವಾಯಿ, ಫಕೀರಪ್ಪ ಅಣ್ಣಿಗೇರಿ, ಕುಬೇರಪ್ಪ ಮಹಾಂತಶೆಟ್ಟರ, ನೀಲಪ್ಪ ಕರ್ಜೇಕಣ್ಣವರ, ಸುರೇಶ ರಾಚನಾಯ್ಕರ, ಗಂಗನಗೌಡ ಪಾಟೀಲ, ಮಲ್ಲಪ್ಪ ತೋಟದ ಇತರರಿದ್ದರು.

ಬಾಲ್ಯ ವಿವಾಹ ಸಂಪೂರ್ಣ ತಡೆಗಟ್ಟಿ

ಶಿರಹಟ್ಟಿ: ಮಹಿಳೆಯರಿಗೆ ಸಮಾಜದಲ್ಲಿ ಸಮಾನತೆ, ಉತ್ತಮ ಸ್ಥಾನಮಾನ ಕಲ್ಪಿಸಬೇಕು. ಕ್ರೀಡೆ, ಕೃಷಿ, ಕೈಗಾರಿಕೆ ಕ್ಷೇತ್ರಗಳಲ್ಲಿ ಮಹಿಳೆಯರು ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ದಿವಾಣಿ ನ್ಯಾಯಾಧೀಶ ಸತೀಶ ಎಂ. ಹೇಳಿದರು.

ಸ್ಥಳೀಯ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ಗುರುವಾರ ಜಿಲ್ಲಾ ಆಡಳಿತ, ಜಿಪಂ, ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆಧುನಿಕ ಸಮಾಜದಲ್ಲಿ ಮೀಸಲಾತಿ, ಸಮಾನ ಹಕ್ಕು, ಶಿಕ್ಷಣ, ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ. ಮೂಢನಂಬಿಕೆಗಳ ವಿರುದ್ಧ ಮಹಿಳೆಯರು ಧ್ವನಿ ಎತ್ತಬೇಕು. ಶಿಕ್ಷಣ ಕಲಿಯುವ ವಯಸ್ಸಿನಲ್ಲಿ ಬಾಲ್ಯ ವಿವಾಹ ಮಾಡುವುದರಿಂದ ಹೆಣ್ಣುಮಕ್ಕಳ ಜೀವನ ನಾಶವಾಗುತ್ತದೆ. ಆದ್ದರಿಂದ ಬಾಲ್ಯ ವಿವಾಹವನ್ನು ಸಂಪೂರ್ಣ ತಡೆಗಟ್ಟಬೇಕು ಎಂದರು.

ಸರ್ಕಾರಿ ವಕೀಲೆ ಹೀನಾಕೌಸರ ಗುಂಜಳ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ವಿಶಿಷ್ಟ ಸ್ಥಾನಮಾನವಿದೆ. ಮಾತೃವಿನ ತ್ಯಾಗ, ಪ್ರೀತಿ ವರ್ಣಿಸಲಾಗದ್ದು. ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಅಂದಾಗ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದಿಲ್ಲ, ಪೌಷ್ಟಿಕ ಆಹಾರ ಸೇವನೆಯಿಂದ ಆರೋಗ್ಯವಂತ ಸಮಾಜ ಕಟ್ಟಲು ಸಾಧ್ಯ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕ ಮೃತ್ಯುಂಜಯ ಗುಡದಾನ್ವೇರಿ, ವಕೀಲ ಅನಿಲ್ ಮಾನೆ. ಎಎಸ್‌ಐ ಎಸ್.ಬಿ. ಬಾರಿಗಿಡದ, ಒಕ್ಕೂಟ ಅಧ್ಯಕ್ಷ ಲಲಿತಾ ಗೊಂದಕರ, ಗೀತಾ ಮುಳಗುಂದ, ವಿಜಯಲಕ್ಷ್ಮೀ ನವಲಗುಂದ, ಆನಂದ ಕೊಡ್ಲಿ ಇದ್ದರು.



ಶಿರಹಟ್ಟಿ: ಸ್ಥಳೀಯ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ಗುರುವಾರ ಜಿಲ್ಲಾ ಆಡಳಿತ, ಜಿಪಂ, ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ವಾಣಿ ನ್ಯಾಯಾಧೀಶ ಸತೀಶ ಎಂ. ಉದ್ಘಾಟಿಸಿದರು.

ಪ್ರಾಣಿಗಳಿಗೆ ಕುಡಿಯುವ ನೀರಿನ ದಾಹ ತಣಿಸಲು ಮುಂದಾದ ಅರಣ್ಯ ಇಲಾಖೆ

ನೀರಿನ ಕೃತಕ ಹೊಂಡ ನಿರ್ಮಾಣ

ಸಿ.ಎಸ್.ಅರಸನಾಳ

ಮುಂಡರಗಿ: ಉತ್ತರ ಕರ್ನಾಟಕದ ಸಹ್ಯಾದ್ರಿ ಕಪ್ಪತಗುಡ್ಡದ ವನ್ಯಪ್ರಾಣಿಗಳಿಗೆ ಈ ಬೇಸಿಗೆ ಬಿರು ಬಿಸಿಲಿನಲ್ಲಿ ಕುಡಿಯುವ ನೀರಿನ ದಾಹ ತಣಿಸಲು ಕಪ್ಪತಹಿಲ್ಸ ಅರಣ್ಯ ಇಲಾಖೆ ಅನೇಕ ಕಡೆಗಳಲ್ಲಿ ನೀರಿನ ಕೃತಕ ಹೊಂಡಗಳನ್ನು ನಿರ್ಮಾಣಮಾಡಿ, ಅವುಗಳಿಗೆ ಟೈಮ್ ಟು ಟೈಮ್ ಟ್ಯಾಂಕರ್‌ಗಳ ಮೂಲಕ ನೀರನ್ನು ತುಂಬಿಸಿ, ಜೀವಜಲದ ವ್ಯವಸ್ಥೆಮಾಡಿ ಮಾನವೀಯತೆಯನ್ನು ಮೆರೆಯುತ್ತಿದೆ.

ಬೇಸಿಗೆ ಬಂತೆಂದರೆ ಕಪ್ಪತಗುಡ್ಡದಲ್ಲಿರುವ ನೂರಾರು ಪ್ರಾಣಿ, ಪಕ್ಷಿಗಳಿಗೆ ಕುಡಿಯಲು ನೀರಿನ ಕೊರತೆ ಕಂಡುಬರುತ್ತದೆ. ಕಪ್ಪತಗುಡ್ಡದಲ್ಲಿ ನೀರಿನ ಯಾವುದೇ ಮೂಲಗಳು ಅಲ್ಲಿ ಇಲ್ಲ, ಆದ್ದರಿಂದ ಅರಣ್ಯ ಇಲಾಖೆ ಎಚ್ಚೆತ್ತು,ಅವಶ್ಯಕತೆ ಇದ್ದಲ್ಲಿ ಕೃತಕ ಹೊಂಡಗಳನ್ನು ನಿರ್ಮಿಸಿ ಅವುಗಳನ್ನು ಟ್ಯಾಂಕರ್ ಮೂಲಕ ನೀರಿನಿಂದ ತುಂಬಿಸಿ ಈ ಅರಣ್ಯ ಪ್ರದೇಶದಲ್ಲಿರುವ ಪ್ರಾಣಿ-ಪಕ್ಷಿಗಳ ನೀರಿನ ದಾಹವನ್ನು ತೀರಿಸುತ್ತಾ ಬಂದಿದೆ. ಈ ವರ್ಷವೂ ಕಪ್ಪತಗುಡ್ಡದ ಸುಮಾರು 27 ಕಡೆ ಇಂತಹ ಹೊಂಡಗಳನ್ನು ನಿರ್ಮಿಸಿ ಅನಕೂಲಮಾಡಿಕೊಡುತ್ತಿದೆ. ಅಪಾರ ಔಷಧೀಯ ಸಸ್ಯ ಸಂಪತ್ತನ್ನು ಹೊಂದಿದ ಕಪ್ಪತಗುಡ್ಡ ಅರಣ್ಯ ಪ್ರದೇಶವು ಸುಮಾರು 33 ಸಾವಿರ ಹೆಕ್ಟೇರ್ ವಿಸ್ತಾರವನ್ನು ಹೊಂದಿದ್ದು, ಇದರಲ್ಲಿ 2019 ರಲ್ಲಿ 24,415.73 ಹೆಕ್ಟೇರ್ ಪ್ರದೇಶ ವನ್ಯಜೀವಿಧಾಮಕ್ಕೆ ಒಳಪಟ್ಟಿದೆ. ಇಷ್ಟು ವಿಸ್ತಾರವಾದ ಅರಣ್ಯ ಪ್ರದೇಶದಲ್ಲಿ ಕೇವಲ 27 ನೀರಿನ ಹೊಂಡಗಳ ನಿರ್ಮಾಣ ಸಾಕಾಗುವುದಿಲ್ಲ,ಇನ್ನಷ್ಟು ಹೊಂಡಗಳ ನಿರ್ಮಾಣದ ಅವಶ್ಯಕತೆ ಇದೆ ಎಂದು ಪರಿಸರಪ್ರೇಮಿಯರು ಒತ್ತಾಯಿಸುತ್ತಿದ್ದಾರೆ. ಕಪ್ಪತಗುಡ್ಡದಲ್ಲಿ ಹೇಳಲಿಕ್ಕೆ 30 ರಿಂದ 40 ಕೆರೆ-ಝುರಿ-ಹಳ್ಳ-ಕೊಳ್ಳ ಮತ್ತು ಪಡಿಗಳಿವೆ ಎನ್ನಲಾಗುತ್ತಿದೆ. ಅವುಗಳೆಲ್ಲವೂ ಹೂಳು ತುಂಬಿ ಅವಸಾನದ ಅಂಚಿನಲ್ಲಿವೆ. ಇಲ್ಲಿನ ಕೆರೆಗಳಿಗೆ, ಹಳ್ಳ-ಝುರಿಗಳಿಗೆ ವಿಶೇಷ ಹೆಸರುಗಳಿವೆ. ಅರಣ್ಯ ಇಲಾಖೆ ಮನಸ್ಸು ಮಾಡಿದರೆ ವರ್ಷಕ್ಕೆ ಒಂದರಂತೆ ಕೆರೆಯ ಹೂಳು ತಗೆದು, ಮಳೆಗಾಲಕ್ಕೆ ಸಜ್ಜು ಮಾಡಿದರೆ, ಆ ಕೆರೆ ತುಂಬಿ ಬೇಸಿಗೆಯಲ್ಲಿ ಪ್ರಾಣಿಗಳ ನೀರಿನ ದಾಹ ತಣಿಸಲು ಸಹಕಾರಿಯಾಗುತ್ತದೆ. ನೀರು ತುಂಬಿದ ನೈಸರ್ಗಿಕ ಕೆರೆಗಳನ್ನು ನೋಡುವುದು ಕಣ್ಣಿಗೆ ಮುದ ನೀಡುತ್ತದೆ.

ದಿಗಂತ ವಿಶೇಷ

ಪ್ರಾಣಿ-ಪಕ್ಷಿಗೆ ಅನುಕೂಲ

ವನ್ಯಜೀವ ಧಾಮ ಆದನಂತರ ಆ ಭಾಗದಲ್ಲಿ ಬರುವ ಕೆರೆಗಳ ಜೀರ್ಣೋದ್ಧಾರ ಕಾರ್ಯ ತಗೆದುಕೊಂಡಿದ್ದರೆ ಕಪ್ಪತಗುಡ್ಡದ ವೈಶಿಷ್ಟತೆಯೇ ಬೇರೆಯಾಗುತ್ತಿತ್ತು. ಕಪ್ಪತಗುಡ್ಡ ವನ್ಯಜೀವಿಧಾಮ ಅರಣ್ಯ ಪ್ರದೇಶದಲ್ಲಿ ಚಿರತೆ, ಕರಡಿ, ತೋಳ, ಕೃಷ್ಣಮೃಗ, ಕತ್ತೆಕಿರುಬ, ಜಿಂಕೆ, ಮುಳ್ಳುಹಂದಿ, ಕಾಡುಹಂದಿ, ಕಾಡುಬೆಕ್ಕು ಅಲ್ಲದೆ ಅನೇಕ ಪ್ರಕಾರದ ಪಕ್ಷಿಗಳಿವೆ. ನವಿಲುಗಳಂತೂ ಹಿಂಡು-ಹಿಂಡಾಗಿವೆ. ಇವುಗಳಿಗೆ ಬೇಸಿಗೆ ಬಂತೆಂದರೆ ಎಲ್ಲಿಯೂ ಕುಡಿಯಲು ನೀರಿಲ್ಲದೆ ಮರಗುತ್ತವೆ. ಇಂತಹ ಹೊತ್ತಿನಲ್ಲಿ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ಕೃತಕ ನೀರಿನ ಹೊಂಡ ನಿರ್ಮಿಸಿ ಪ್ರಾಣಿ-ಪಕ್ಷಿಗಳ ನೀರಿನ ದಾಹ ತಣಿಸಲು ಮುಂದಾಗಿದೆ.



- ನೀರಿನ ಹೊಂಡಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ
- ಕಪ್ಪತಗುಡ್ಡದ ವ್ಯಾಪ್ತಿಯ ಡೋಣಿ, ಹಿರೇವಡ್ಡಟ್ಟಿ, ಬಾಗೇವಾಡಿ, ಹಮ್ಮಿಗಿ, ಚಿಕ್ಕವಡ್ಡಟ್ಟಿ ಮುಂತಾದಕಡೆಗಳಲ್ಲಿ ಒಟ್ಟು 27 ನೀರಿನ ಹೊಂಡಗಳನ್ನು ನಿರ್ಮಿಸಿ, ವೇಳೆಗೆ ಸರಿಯಾಗಿ ನೀರನ್ನು ತುಂಬಿಸಿ ಅನಕೂಲ

ಅವಶ್ಯಕತೆ ತಕ್ಕಂತೆ ಹೊಂಡ ನಿರ್ಮಾಣ

ಕಪ್ಪತಗುಡ್ಡದಲ್ಲಿ ಇರುವ ಪ್ರಾಣಿಗಳಿಗೆ ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಬಾರದೆಂದು ಇಲಾಖೆಯಿಂದ ಅಲ್ಲಲ್ಲಿ 27ಕ್ಕೂ ಹೆಚ್ಚು ಕೃತಕ ನೀರಿನ ಹೊಂಡಗಳನ್ನು ನಿರ್ಮಾಣ ಮಾಡಿ ಅವುಗಳಿಗೆ ಟ್ಯಾಂಕರ್ ಮೂಲಕ ನೀರನ್ನು ತುಂಬಿಸಲಾಗುತ್ತಿದೆ. ಜನವರಿ ಕೊನೆಯ ವಾರದಿಂದ ಮೇ ಮುಗಿಯುವವರೆಗೂ ಈ ಕಾರ್ಯ ನಿರಂತರ ನಡೆಯುತ್ತದೆ. ಹೊಂಡದಲ್ಲಿಯ ನೀರನ್ನು ಪ್ರಾಣಿಗಳು ಕುಡಿಯುತ್ತಿವೆ. ಅದು ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅವಶ್ಯಕತೆಯ ಅನುಗುಣವಾಗಿ ಇನ್ನೂ ಹೆಚ್ಚಿನ ನೀರಿನ ಹೊಂಡಗಳನ್ನು ನಿರ್ಮಿಸಲು ಕ್ರಮ ತಗೆದುಕೊಳ್ಳುತ್ತೇವೆ ಎಂದು ಮುಂಡರಗಿ ಕಪ್ಪತಹಿಲ್ಸ್‌ನ ಆರ್‌ಎಫ್‌ಒ ಮಂಜುನಾಥ ಮೇಗಲಮನಿ ತಿಳಿಸಿದ್ದಾರೆ.

> ಕಪ್ಪತಗುಡ್ಡದಲ್ಲಿರುವ ಕೆರೆಗಳ ಹೂಳೆತ್ತುವ ಕೆಲಸವನ್ನು ಇಲಾಖೆ ಕೈಗೆತ್ತಿಕೊಳ್ಳಬೇಕು. ಇದರಿಂದ ಮಳೆಗಾಲದಲ್ಲಿ ಆ ಕೆರೆಗಳಿಗೆ ನೀರು ಬಂದು ಪ್ರಾಣಿಗಳಿಗೆ ಒಂದೆಡೆ ಕುಡಿಯಲು ನೀರು ಸಿಗುವಂತಾಗುತ್ತದೆ. ವರ್ಷಕ್ಕೆ ಒಂದಾದರೂ ಕೆರೆ ಜೀರ್ಣೋದ್ಧಾರ ಮಾಡಬೇಕು. ಆ ಕೆರೆಗೆ ನಾಮಫಲಕವನ್ನು ಅಳವಡಿಸಿ ಪಕ್ಕತಗುಡ್ಡದ ಇತಿಹಾಸ ತಿಳಿಸುವ ಕಾರ್ಯ ನಡೆಯಬೇಕು.
> ■ ಭರಮಪ್ಪ ಕಿಲಾರಿ, ಪರಿಸರಪ್ರೇಮಿ, ಡೋಣಿ

ಕಣ್ಣಲ್ಲಿ ನೀರು ತರಿಸುವ ತಾಯಿ ನೆನಪು: ಬೊಮ್ಮಾಯಿ



ಗದಗ: ಜೀವನದ ಅಂತ್ಯದ ಸಮಯದಲ್ಲೂ ತಾಯಿ ನೆನಪಾದಾಗ ಕಣ್ಣು ಒದ್ದೆಯಾಗುತ್ತವೆ. ತಾಯ್ತನ ಎನ್ನುವ ಶಬ್ದ ದೊಡ್ಡದು. ಅದನ್ನು ಮಾತಿನಲ್ಲಿ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ, ತಾಯಿಯ ಪ್ರೀತಿಯನ್ನು ಅನುಭವಿಸಬೇಕು. ಅಂದಾಗ ಅವಳ ತ್ಯಾಗ ಅರ್ಥವಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಜಗದ್ಗುರು ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಲಿಂ.ಬಸಮ್ಮತಾಯಿ ಸಂಗನಗೌಡಪಾಟೀಲಹಾಗೂ ಲಿಂ.ಲಕ್ಷ್ಮಮ್ಮಗೌಡರ ಪುಣ್ಯಸ್ಮರಣೋತ್ಸವ ಮತ್ತು ಮಹಿಳಾ ದಿನಾಚರಣೆ ಅಂಗವಾಗಿ ಪ್ರತಿಭಾ ದೀಪ್ತಿ ಪ್ರಶಸ್ತಿ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ನನಗೆ ಈಗ 64 ವರ್ಷ ಜೀವನದ ಕೊನೆ ಹಂತದಲ್ಲಿದ್ದೇವೆ. ಆದರೂ ತಾಯಿ ನೆನಪಾದರೆ ಕಣ್ಣು ಒದ್ದೆಯಾಗುತ್ತವೆ. ತಾಯಿಯ ಪ್ರೀತಿ, ಮಮತೆ, ಕರುಳಿನ ಭಾವನೆ ಕೇವಲ ಅನುಭವಿಸಲು ಸಾಧ್ಯ. ಮನುಷ್ಯನ ಈ ಜನ್ಮ ಪೂರ್ವ ತಾಯಿ ಸಂಬಂಧ ಮಾತ್ರ ಇರುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಎಸ್.ಆರ್. ಬೊಮ್ಮಾಯಿ ಹಾಗೂ ಬಸವರಾಜ ಬೊಮ್ಮಾಯಿ ರಾಜ್ಯದ ಮುಖ್ಯಮಂತ್ರಿ ಆಗಲು ಅವರ ತಾಯಿ ಗಂಗಮ್ಮ ತಾಯಿಯ ಕಾಲ್ಗುಣ ಕಾರಣವಾಗಿತ್ತು. ಅವರ ಮಗ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಿದ್ದು ಸಂತಸ ತಂದಿದೆ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿ ಜಯಶ್ರೀ ಶಿವಾನಂದ ಮಾತನಾಡಿ, ಜನ್ಮಕೊಟ್ಟ ತಾಯಿ, ಹೊತ್ತ ಭೂಮಿ ಎರಡು ಸ್ವರ್ಗಕ್ಕಿಂತ ಮಿಗಿಲು. ವಿದ್ಯೆಯ ಜೊತೆಗೆ ಸುಸಂಸ್ಕೃತಿ ನೀಡುವುದು ತಾಯಿಯ ಮೂಲ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ಬಸಮ್ಮ ತಾಯಿ ಹಾಗೂ ಲಕ್ಷ್ಮಮ್ಮ ತಾಯಿ ಅಚ್ಚುಕಟ್ಟಾಗಿ ಮಾಡಿದ್ದು ಪ್ರಶಂಸನೀಯವಾಗಿದೆ ಎಂದರು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ಲಿಂ. ಬಸಮ್ಮನವರು ಐದು ಮುತ್ತಿನಂತ ಮಕ್ಕಳಿಗೆ ಜನ್ಮ ನೀಡಿದರು. ಅವರೆಲ್ಲರೂ ಉನ್ನತ ಸ್ಥಾನದಲ್ಲಿ ರಾರಾಜಿಸುತ್ತಿದ್ದಾರೆ. ಇದಕ್ಕೆ ಬಸಮ್ಮ ತಾಯಿ ನೀಡಿದ ಸಂಸ್ಕಾರವೇ ಮೂಲ ಕಾರಣ ಎಂದರು. ಐವರು ಸಾಧಕ ವಿದ್ಯಾರ್ಥಿನಿಯರಿಗೆ ಗೌರವ ಸನ್ಮಾನ ಮಾಡಲಾಯಿತು. ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಜಯಶ್ರೀ ಶಿವಾನಂದ, ಪ್ರಾಧ್ಯಾಪಕ ಡಾ.ಸಿದ್ಧಲಿಂಗೇಶ ಸಜ್ಜನಶೆಟ್ಟರ, ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಬಸವರಾಜ ಬಳ್ಳಾರಿ, ಚಂದ್ರಶೇಖರ ವಸ್ತ್ರದ, ಮಾತೃ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಎಂ.ಗೌಡ್ರ ಇದ್ದರು.

ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆ ಬರೆಯಲಿ

ಗದಗ: ಶಿಕ್ಷಕರು ಮಾಡುವ ಪಾಠವನ್ನು ಆಸಕ್ತಿಯಿಂದ ಕೇಳಿ, ಶ್ರದ್ಧೆಯಿಂದ ಪುಸ್ತಕ ಓದಿ, ಮನನ ಮಾಡಿಕೊಂಡು ಧೈರ್ಯದಿಂದ ಪರೀಕ್ಷೆ ಬರೆದು ಉತ್ತಮ ಫಲಿತಾಂಶ ಪಡೆಯಬೇಕು ಎಂದು ಗ್ರಾಪಂ ಮಾಜಿ ಅಧ್ಯಕ್ಷ ಕೆ.ಎಸ್. ಪೂಜಾರ ಹೇಳಿದರು.

ತಾಲೂಕಿನ ಲಕ್ಕುಂಡಿ ಗ್ರಾಮದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪ್ರೌಢಶಾಲೆಯ ಹಂತದ ಶಿಕ್ಷಣವು ಮಹತ್ವದಾಗಿದ್ದು ಹೆಚ್ಚು ಕಾಳಜಿ ವಹಿಸಿ ಅಭ್ಯಾಸ ಮಾಡಬೇಕು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಸಿ.ಸಿ.ಕುರಹಟ್ಟಿ ಮಾತನಾಡಿ, ಹೆಣ್ಣು ಮಕ್ಕಳಿಗೆ ಸರ್ಕಾರ ಶಿಕ್ಷಣ ಕಲಿಕೆಗೆ ಹೆಚ್ಚು ಮಹತ್ವ ನೀಡಿದೆ. ಮೊಬೈಲ್ ಹಾಗೂ ಟಿ.ವಿಯಿಂದ ದೂರವಿದ್ದು ಹೆಚ್ಚಿನ ಫಲಿತಾಂಶ ಮಾಡಿ ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯ ವೈ.ಎಚ್.ತಕ್ಕಲಕೋಟಿ ಮಾತನಾಡಿ, ಮಕ್ಕಳು ಪ್ರತಿ ದಿನ ಶಿಕ್ಷಕರು ನೀಡಿದ ಕೆಲಸವನ್ನು ಅಚ್ಚುಕಟ್ಟಾಗಿ ಪಾಲಿಸಿಕೊಂಡು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಮಕ್ಕಳ ಪ್ರತಿಭೆಗೆ ಸಮಾಜದಲ್ಲಿಯ ಪ್ರೋತ್ಸಾಹದ ಜತೆಗೆ ಸರ್ಕಾರದ ಅನೇಕ ಸೌಲಭ್ಯಗಳು ಲಭ್ಯವಿದ್ದು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಎಸ್.ಎಚ್.ಶೆಟ್ಟಿನಾಯ್ಕರ', ಎಂ.ಬಿ.ಗುಡಗೂರು ಮಾತನಾಡಿದರು. ಕಳೆದ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಎಸ್‌ಡಿಎಂಸಿ ಅಧ್ಯಕ್ಷ ಆರ್.ಎಚ್. ತಹಶೀಲ್ದಾರ, ಅಶೋಕ ಗದಗಿನ, ವಿಜಯಲಕ್ಷ್ಮೀ ಬಡಿಗೇರ, ಈರಪ್ಪ ಬಳೂಟಗಿ, ಕಲ್ಲಪ್ಪ ಬಣವಿ, ಗ್ರಾಪಂ ಮಾಜಿ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ನಿವೃತ್ತ ಶಿಕ್ಷಕ ಅಶೋಕ ಬೂದಿಹಾಳ, ಮಹಾಂತೇಶ ಕುಂಬಾರ, ಕರಿಯಪ್ಪ ರವಳೋಜಿ ಇದ್ದರು. ವೈ.ವೈ.ಬೆಟಗೇರಿ ಸ್ವಾಗತಿಸಿದರು. ಜೆ.ವಿ.ಹಿರೇಮಠ ನಿರೂಪಿಸಿದರು. ಎಸ್.ಇ. ಹಿರೇಮಠ ವಂದಿಸಿದರು. ಬಾಲಕಿಯರ ಸರಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಜೆ.ವಿ.ಹಿರೇಮಠ ತಮ್ಮ ತಂದೆಯವರ ಸ್ಮರಣಾರ್ಥವಾಗಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.96.16ರಷ್ಟು ಅಂಕ ಪಡೆದ ಗಾಯತ್ರಿ ಹಳ್ಳಿಗೆ 10 ಸಾವಿರ ರೂ.ನಗದು ಬಹುಮಾನ ಹಾಗೂ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ 7 ವಿದ್ಯಾರ್ಥಿಗಳಿಗೆ ತಲಾ 5 ಸಾವಿರ ರೂ. ನಗದು ಬಹುಮಾನ ಹಾಗೂ ಪುರಸ್ಕಾರ ನೀಡಿ ಗೌರವಿಸಿದರು.



ಚನ್ನಮ್ಮಾಜಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಶೀಘ್ರ: ಸಿಸಿಪಾ



ನರಗುಂದ: ಚನ್ನಮ್ಮಾಜಿ ಸಮುದಾಯ ಭವನ ನಿರ್ಮಾಣಕ್ಕೆ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2 ಎಕರೆ ಜಾಗ ಒದಗಿಸಿದ್ದರ ಜತೆಗೆ 50 ಲಕ್ಷ ರೂ. ನೀಡಿದ್ದರು ಮತ್ತು ಈಗಾಗಲೇ ಒಟ್ಟು 4 ಕೋಟಿ ಹಣವನ್ನು ಕೂಡಿಸಲಾಗಿದೆ. ಸಮಾಜ ಬಾಂಧವರ ಸಹಕಾರದೊಂದಿಗೆ ಕಾಮಗಾರಿ ಶೀಘ್ರ ಪ್ರಾರಂಭಿಸಲಾಗುವುದು ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಶನಿವಾರ ಪಟ್ಟಣದ ನೀರಾವರಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜ ವಿವಿಧೋದ್ದೇಶಗಳ ಸಂಘದ ನೇತೃತ್ವದಲ್ಲಿ ರಾಣಿ ಚನ್ನಮ್ಮಾಜಿ ಸಮುದಾಯ ಭವನ ನಿರ್ಮಾಣದ ಪೂರ್ವಭಾವಿ ಸಭೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ನಾನು ಪಿಡಬ್ಲ್ಯುಡಿ ಸಚಿವನಿದ್ದಾಗ ನನ್ನ ಇಲಾಖೆಯಿಂದ 2 ಕೋಟಿ ರೂ. ನೀಡಿದ್ದೆ. ಸರ್ಕಾರ ಬದಲಾದ ನಂತರ ಮರಳಿ ಹೋಗಿತ್ತು, ಮತ್ತೆ ಈಗ ಮರಳಿ ಬಂದಿದೆ. ಪುರಸಭೆಯಿಂದ 50 ಲಕ್ಷ ರೂ. ನೀಡಲಾಗಿದೆ. ನಾನು ವೈಯಕ್ತಿಕವಾಗಿ 1 ಕೋಟಿ ರೂ. ಕೊಡುವ ಭರವಸೆ ನೀಡಿದ್ದೆ. ಹೀಗೆ ಒಟ್ಟು ನಾಲ್ಕು ಕೋಟಿ ಹಣವಿದೆ. ಸಮುದಾಯ ಭವನ ನಿರ್ಮಾಣಕ್ಕೆ ಇದಿಷ್ಟೇ ಹಣ ಸಾಕಾಗಲ್ಲ, ಸಮಾಜ ಭಾಂದವರ ಸಹಕಾರ ಅವಶ್ಯ ಬೇಕೆ ಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ.ಎಫ್. ಕೆ.ಸವದತ್ತಿ, ಡಾ.ವಿ.ಎಸ್.ಪಾಟೀಲ, ಡಾ.ಸಿ.ಕೆ. ರಾಚನಗೌಡ್ರ, ಗುರುಪಾದಪ್ಪ ಕುರಹಟ್ಟಿ, ಎಸ್. ಆರ್.ಪಾಟೀಲ, ಎಂ.ಬಿ. ಮೆಣಸಗಿ, ದೇಸಾಯಿಗೌಡ ಪಾಟೀಲ, ಆರ್.ಎನ್. ಪಾಟೀಲ, ಶಿವಾನಂದ ಮುತವಾಡ, ಗುರುನಾಥಗೌಡ ಹುಡೇದಮನಿ, ಉಮೇಶಗೌಡ ಪಾಟೀಲ, ಪ್ರಕಾಶ ಪಟ್ಟಣಶೆಟ್ಟಿ, ಮುತ್ತನಗೌಡ ಪಾಟೀಲ, ಬನಹಟ್ಟಿ ರಾಜುಗೌಡ ಪಾಟೀಲ, ಪ್ರಭು ಎಲಿಗಾರ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಪಂಚಮಸಾಲಿ ಸಮಾಜ ಬಾಂಧವರಿದ್ದರು.

ತೊಟ್ಟಿಲು ತೂಗುವ ಕೈ ಜಗತ್ತನ್ನೇ ಆಳಬಲ್ಲದು: ಸವಿತಾ ತಾಂಬ್ರೆ



ಶಿರಹಟ್ಟಿ: ಇಂದು ಮಹಿಳೆಯರು ಪುರುಷರಿಗೆ ಸಮಾನವಾಗಿ ಎಲ್ಲ ರಂಗದಲ್ಲಿ ಕೆಲಸ ಮಾಡುತ್ತಿದ್ದು, ತೊಟ್ಟಿಲು ತೂಗುವ ಕೈ ಜಗತ್ತನ್ನೇ ಆಳಬಲ್ಲದು ಎಂಬ ಮಾತು ನಿಜವಾಗುತ್ತಿದೆ ಎಂದು ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ ಹೇಳಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆಯ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ತಮ್ಮದೇ ಆದ ಸಾಧನೆ ಮಾಡುತ್ತಿದ್ದಾರೆ. ಮನೆ ಕಾಯಕದಿಂದ ಹಿಡಿದು ಕೃಷಿ, ಐಎಎಸ್, ಐಪಿಎಸ್, ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ರಾಷ್ಟ್ರಪತಿ ಹುದ್ದೆಯವರೆಗೆ ಏರುವ ಮೂಲಕ ಮಹಿಳೆಯರು ಅದ್ಭುತ ಸಾಧನೆ ಮಾಡುತ್ತಿದ್ದಾರೆ ಎಂದರು.

ಮಹಿಳೆಯರು ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಸಬಲೀಕರಣ ಹೊಂದುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಕುಟುಂಬದ ಜವಾಬ್ದಾರಿಗಳ ಜತೆ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರಪಾತ್ರ ಬಹುದೊಡ್ಡದು ಎಂದರು.

ನಂದಾ ಕಪ್ಪತ್ತನವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯರಾದ ಎಚ್.ಎಂ. ದೇವಗಿರಿ, ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷೆ ಸುಧಾ ಹುಚ್ಚಣ್ಣನವರ. ವೀರಮ್ಮ ಕಳಸಾಪುರ, ರತ್ನ ಬದಿ, ರೇಣುಕಾ ಜಗಂಡಭಾವಿ, ನೀಲಮ್ಮ ನಿಟ್ಟಾಲಿ, ಗೀತಾ ಹಲಸೂರು, ಶಾಂತ ಪಾಟೀಲ ಇದ್ದರು.

ಸ್ಮಾರ್ಟ್ ಕ್ಲಾಸ್‌ಗಳಿಂದ ಕಲಿಕೆಗೆ ಉತ್ತಮ ವಾತಾವರಣ



ಲಕ್ಷ್ಮೇಶ್ವರ: ಸಮೀಪದ ಬಟ್ಟೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಉದ್ಘಾಟನೆ ಹಾಗೂ ಏಳನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭ ಮತ್ತು ಮಹಾ ಸರಸ್ವತಿ ಪೂಜಾ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಎಸ್.ಡಿ.ಎಂ. ಸಿ. ಅಧ್ಯಕ್ಷ ರಾಜೇಶಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು.

ಶಿರಹಟ್ಟಿ ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿಯ ಬಿ.ಆರ್.ಪಿ. ಬಸವರಾಜ ಯರಗುಪ್ಪಿ ಸ್ಮಾರ್ಟ್ ಕ್ಲಾಸ್ ಉದ್ಘಾಟಿಸಿ ಮಾತನಾಡಿ, ಸರ್ಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಎನ್ನದಂತೆ ಇಂದು ಸ್ಮಾರ್ಟ್ ಕ್ಲಾಸ್ ಗಳ ಮೂಲಕ ಕಲಿಕೆಗೆ ಉತ್ತಮ ವಾತಾವರಣ ರೂಪಿಸುತ್ತಿವೆ ಎಂದರು.

ಬಟ್ಟೂರ ಸಿ.ಆರ್.ಪಿ. ನವೀನ ಅಂಗಡಿ ಮಾತನಾಡಿ, ಶಾಲಾ ವಾತಾವರಣ, ಮಕ್ಕಳ ಕಲಿಕೆ, ಈಗಿನ ಪ್ರಧಾನ ಗುರುಗಳ ಎಂ. ಎಸ್. ಕಾಳೆ ಅವರ ಕಾರ್ಯಕ್ಷಮತೆ ಮತ್ತು ಸತತ 12 ವರ್ಷಗಳು ವಿಭಾಗ ಮಟ್ಟಕ್ಕೆ ಥ್ರೋ ಬಾಲ್ ನಲ್ಲಿ ಆಯ್ಕೆ ಗೊಳ್ಳುವಲ್ಲಿನ ಶ್ರಮ ವಹಿಸಿದ್ದಾರೆ ಎಂದರು.

ಸಿ ಆರ್ ಪಿ ಎಸ್.ಎನ್. ಸಾವಿರಕುರಿ ಮಾತನಾಡಿ, ನಾನು ಇದೇ ಶಾಲೆಯಲ್ಲಿ ಕಲಿತಿದ್ದು ಮುಂದಿನ ಶೈಕ್ಷಣಿಕ ವರ್ಷದಿಂದ ಏಳನೇ ತರಗತಿಯಲ್ಲಿ ಪ್ರಥಮ ,ದ್ವಿತೀಯ, ತೃತೀಯ ಬಂದ ಮಕ್ಕಳಿಗೆ ಬಹುಮಾನ ನೀಡುವುದಾಗಿ ತಿಳಿಸಿದರು. ಪ್ರಧಾನ ಗುರು ಎಂ. ಎಸ್.ಕಾಳೆ ದೈಹಿಕ ಶಿಕ್ಷಕರು ಥ್ರೋ ಬಾಲ್‌ನಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆಯಾದ ಮತ್ತು ಶಾಲಾ ಹಂತದಲ್ಲಿ ಬಹುಮಾನ ಗಳಿಸಿದ ಮಕ್ಕಳಿಗೆ ಬಹುಮಾನ ನೀಡುವ ಕಾರ್ಯಕ್ರಮ ನೆರವೇರಿಸಿದರು ಮತ್ತು ವಾರ್ಷಿಕ ವರದಿ ಮಂಡಿಸಿದರು. ರೇಖಾ ದಂಡಣ್ಣವರ, ಮಾರುತಿ ದೊಡಮನಿ, ಆರ್.ಪಿ.ದಂಡಣ್ಣವರ, ಎ.ಎ.ಕಪಟಕರ, ಪಿ.ಎನ್. ಹೊಳಲಾಪುರ, ವಿ.ಎನ್.ಪಿರಂಗಿ , ಎ.ಸಿ.ಹೂಗಾರ ಇದ್ದರು. ಆರ್.ಎಸ್ .ಪಾಟೀಲ ನಿರೂಪಿಸಿದರು. ಕೆ.ಎನ್. ಗಾರ್ಗಿ. ಸ್ವಾಗತಿಸಿದರು. ವಿ.ಎನ್. ಪಿರಂಗಿ ವಂದಿಸಿದರು.

ಮಹಿಳಾ ಕೈಗಾರಿಕೆಗಳಿಂದ ವಸ್ತು ಪ್ರದರ್ಶನ

ಗದಗ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಕೈಗಾರಿಕೆಗಳಿಂದ ವಸ್ತು ಪ್ರದರ್ಶನ ಹಾಗೂ ಮಾರಾಟ -2026 ರ ಕಾರ್ಯಕ್ರಮ ನಗರದ ಕೆ.ಎಚ್. ಪಾಟೀಲ ಸಭಾಭವನದಲ್ಲಿ ಮಾ.16 ರಂದು ನಡೆಯಲಿದೆ ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಸಾನ್ನಿಧ್ಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ವಹಿಸುವರು. ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಅಧ್ಯಕ್ಷ ಉಮಾ ರೆಡ್ಡಿ ಕಾರ್ಯಕ್ರಮ ಉದ್ಘಾಟನೆ ಮಾಡುವರು. ಮಹಿಳಾ ಮತ್ತು ಮಕ್ಕಳ ಇಲಾಖೆ ಉಪ ನಿರ್ದೇಶಕ ಪದ್ಮಾವತಿ ಜಿ., ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಭಾಗವಹಿಸಲಿದ್ದಾರೆ. ಅಧ್ಯಕ್ಷತೆ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ ವಹಿಸುವರು. ಈ ವೇಳೆ ಸುವರ್ಣ ಎಸ್. ಮದರಿಮಠ, ಸುನೀತಾ ಕೆ. ಪಾಟೀಲ ಹಾಗೂ ಪೌರ ಕಾರ್ಮಿಕರಿಗೆ, ಕ್ರೀಡಾಪಟುಗಳಿಗೆ ಮತ್ತು ಮಹಿಳಾ ಕಾರ್ಮಿಕರಿಗೆ ಸನ್ಮಾನಿಸಲಾಗುವುದು ಎಂದರು.

ಪೂರ್ಣಿಮಾ ಆಟದ, ಪಾರ್ವತಿ ಶಾಬಾದಿಮಠ, ನಾಗರತ್ನಮ್ಮ ಮುಳಗುಂದ, ಸುವರ್ಣ ಮದರಿಮಠ, ರೇಣುಕಾ ಅಮಾಥೆ, ಶಿಲ್ಪಾ ವೀರಲಿಂಗಯ್ಯಮಠ, ಸುಧಾ ಆಸೂಟಿ, ಸುಜಾತಾ ಗುಡಿಮನಿ ಇದ್ದರು.



ದಿ.ಕೆ.ಎಚ್. ಪಾಟೀಲ 101ನೇ ಜಯಂತ್ಯುತ್ಸವ ನಾಳೆ



ಗದಗ: ಸಹಕಾರಿ ರಂಗದ ಭೀಷ್ಮ ಮಾಜಿ ಸಚಿವ ದಿ.ಕೆ.ಎಚ್.ಪಾಟೀಲರ 101ನೇ ಜಯಂತ್ಯುತ್ಸವ ಸಮಾರಂಭ ಮಾ.16ರಂದು ಬೆಳಗ್ಗೆ 10.30ಕ್ಕೆ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ .ಪಾಟೀಲ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಿ. ಕಾಟನ್ ಸೇಲ್ ಸೊಸೈಟಿ ಶತಮಾನೋತ್ಸವದ ನೂತನ ಕಟ್ಟಡದ ಉದ್ಘಾಟನೆ ಹಾಗೂ ರಾಜೇಶ್ವರಿ ವಿದ್ಯಾನಿಕೇತನದ ವರ್ಗಗಳ ಸಂಕೀರ್ಣ ಇಂಧನ ಸಚಿವ ಕೆ.ಜೆ. ಜಾರ್ಜ್ ಉದ್ಘಾಟಿಸಲಿದ್ದಾರೆ. ಕೆ.ಎಚ್ .ಪಾಟೀಲ ಆಸ್ಪತ್ರೆಯ ನೂತನ ಕಟ್ಟಡಕ್ಕೆ ಭೂಮಿಪೂಜೆ ಮತ್ತು ಆಸ್ಪತ್ರೆಯಲ್ಲಿ ಈ ವರ್ಷ 100 ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ ಯೋಜನೆಗೆ ಚಾಲನೆ, 12 ಉಚಿತ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ, ಒಂದು ವರ್ಷದಲ್ಲಿ ಆಸ್ಪತ್ರೆಯಲ್ಲಿ ಜನಿಸುವ ಹೆಣ್ಣು ಮಗುವಿಗೆ ಹೆರಿಗೆ ವೆಚ್ಚ ಉಚಿತ, ಒಂದು ವರ್ಷದಲ್ಲಿ 1000 ಮೋತಿಬಿಂದು ಶಸ್ತ್ರಚಿಕಿತ್ಸೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ ಎಂದರು. ಕೆ.ಎಚ್.ಪಾಟೀಲ ಪ್ರತಿಷ್ಠಾನದ ವತಿಯಿಂದ ಊಟ, ಉಪಹಾರ ಒದಗಿಸುವ ಬುತ್ತಿ ಎನ್ನುವ ಆಲಯವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆಗೊಳಿಸಲಿದ್ದಾರೆ. ರಾಜ್ಯಸಭಾ ಮಾಜಿ ಸದಸ್ಯ, ಕೆಎಲ್‌ಇ ಸಂಸ್ಥೆಯ ಮಾಜಿ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆಗೆ ಈ ಬಾರಿಯ ಕೆ.ಎಚ್. ಪಾಟೀಲ ಪ್ರಶಸ್ತಿ ಪ್ರದಾನ ನಡೆಯಲಿದೆ. ಅವಿಭಜಿತ ಧಾರವಾಡ ಜಿಲ್ಲೆಯ ಕೆ.ಎಚ್.ಪಾಟೀಲ ಅವರ 100ಕ್ಕೂ ಹೆಚ್ಚು ಒಡನಾಡಿಗಳಿಗೆ ಸನ್ಮಾನ ಸಮಾರಂಭ ನಡೆಯಲಿದೆ ಎಂದರು. ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕ ಜಿ.ಎಸ್.ಪಾಟೀಲ, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಸಿ.ಸಿ. ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಮಾಜಿ ಸಚಿವ ಎ.ಎಂ. ಹಿಂಡಸಗೇರಿ, ಮಾಜಿ ಸಂಸದ ಐ.ಜಿ. ಸನದಿ, ಶಾಸಕರಾದ ಬಸವರಾಜ ಶಿವಣ್ಣವರ, ಪ್ರಸಾದ ಅಬ್ಬಯ್ಯ, ಯು.ಬಿ. ಬಣಕಾರ, ಎನ್.ಎಚ್. ಕೋನರೆಡ್ಡಿ, ಶ್ರೀನಿವಾಸ ಮಾನೆ, ಪ್ರಕಾಶ ಕೋಳಿವಾಡ, ಯಾಸೀರ್ ಅಹ್ಮದ್ ಖಾನ್ ಪಠಾಣ ಆಗಮಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಬಿ.ಬಿ.ಅಸೂಟಿ, ಪ್ರಭು ಬುರಬುರೆ, ಜೆ.ಕೆ.ಜಮಾದಾರ, ಕೃಷ್ಣಗೌಡ ಪಾಟೀಲ, ಅಶೋಕ ಮಂದಾಲಿ, ಸಿದ್ಧಲಿಂಗೇಶ ಪಾಟೀಲ, ಬಸವರಾಜ ಕಟ್ಟಿಮನಿ, ರವಿ ಮೂಲಿಮನಿ, ಶಕುಂತಲಾ ಅಕ್ಕಿ, ಉಮರಫಾರೂಕ್ ಹುಬ್ಬಳ್ಳಿ ಇದ್ದರು.

ಶಿವಾಜಿ, ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ ಶೀಘ್ರ | ಸಚಿವ ತಿಮ್ಮಾಪುರ

ನಾವೂ ಹಿಂದುಗಳೇ, ಹಿಂದೆ ಸರಿಯಲ್ಲ



ಬಾಗಲಕೋಟೆ: ನಾವೂ ಹಿಂದುಗಳೇ, ನಾವು ಯಾವತ್ತೂ ಹಿಂದೆ ಸರಿಯಲ್ಲ. ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿ, ಸಾಂಸ್ಕೃತಿಕ ನಾಯಕ ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಿದ್ದೇವೆ. ನಮ್ಮ ಸರ್ಕಾರ ಸರ್ವಜನಾಂಗದ ಶಾಂತಿಯ ತೋಟ ಮಾಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಅನುದಾನವೇ ಇಟ್ಟಿಲ್ಲ, ಸರ್ಕಾರದ ಬಳಿ ಹಣವೇ ಇಲ್ಲವೆಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ, ಮುಖ್ಯಮಂತ್ರಿಯವರು ರೈತರನ್ನು ಕೈ ಬಿಡುವುದಿಲ್ಲ. ಸರ್ಕಾರ ಯುಕೆಪಿ ಯೋಜನೆಗೆ ಬದ್ಧತೆಯಿಂದ ಕೆಲಸ ಮಾಡಲಿದೆ ಎಂದು ಹೇಳಿದರು.

ಹಲವಾರು ಹೋರಾಟದ ಫಲವಾಗಿ ಹಾಗೂ ದಿ.ಎಚ್.ವೈ.ಮೇಟಿ ಅವರ ಸತತ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕಾರಣವಾಯಿತು. ಈ ಭಾಗದ ನೀರಾವರಿ ಯೋಜನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಭೂಸ್ವಾಧೀನಕ್ಕೆ ಒಳಪಡುವ ರೈತರ ಜಮೀನುಗಳಿಗೆ ಪರಿಹಾರ ವಿತರಣೆಗೆ ಚಾಲನೆ ನೀಡಲಾಗಿದೆ. ಐಹೊಳೆ ಪ್ರವಾಸಿ ತಾಣದಲ್ಲಿರುವ ಮನೆಗಳ ಸ್ಥಳಾಂತರ ಕಾರ್ಯ, ಕೆರೆ ತುಂಬಿಸುವ ಕೆಲಸಕ್ಕೆ ಚಾಲನೆ ನೀಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ರೈತರ ಬಗ್ಗೆ ಕಾಳಜಿ ಹೆಚ್ಚಿನ ಕಾಳಜಿಯನ್ನು ಮುಖ್ಯಮಂತ್ರಿಗಳು ಹೊಂದಿದ್ದಾರೆ. ಈ ಭಾಗದ ಭೂಸ್ವಾಧೀನಕ್ಕೊಳಗಾದ ರೈತರಿಗೆ ಉತ್ತಮ ಪರಿಹಾರ ವಿತರಣೆ ಕ್ರಮಕೈಗೊಂಡಿದ್ದಾರೆ ಎಂದರು.

> **ಉತ್ತರ ಕರ್ನಾಟಕಕ್ಕೆ ಮೆಡಿಕಲ್ ಕಾಲೇಜು ಸ್ಥಾಪಿಸಿರುವುದು ಉತ್ತಮ ಕೊಡುಗೆಯಾಗಿದೆ. ವೈದ್ಯಕೀಯ ಶಿಕ್ಷಣದ ಜೊತೆಗೆ ಇದರ ಉಪಯೋಗ ಆರೋಗ್ಯ ರಕ್ಷಣೆಗೆ ಬಹುಪಾಲಾಗಿದೆ. ಯುಕೆಪಿ ಹಂತ-3 ಪೂರ್ಣಗೊಂಡಲ್ಲಿ ನೀರಾವರಿ ಯೋಜನೆಯಿಂದ ರೈತರ ಬಾಳು ಹಸನಾಗಲಿದೆ.**
> ■ **ಎಚ್.ಕೆ.ಪಾಟೀಲ,**
> **ಪ್ರವಾಸೋದ್ಯಮ ಸಚಿವ**

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ಲೋಕೋಪಯೋಗಿ ಇಲಾಖೆಯಿಂದ ಜಿಲ್ಲೆಗೆ 6.5 ಕೋಟಿ ಎಸ್‌ಸಿಪಿ ಹಾಗೂ 2 ಕೋಟಿ ಟಿಎಸ್‌ಪಿಯಲ್ಲಿ ನೀಡಲಾಗಿದೆ. ಈ ವರ್ಷ ಅಭಿವೃದ್ಧಿಗೆ ಕೆಲಸಕ್ಕೆ 60 ಕೋಟಿ ನೀಡಲಾಗುತ್ತಿದೆ ಎಂದರು.

ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾತನಾಡಿ, 450 ಕೋಟಿ ರೂ.ಗಳ ವೆಚ್ಚದಲ್ಲಿ ಮೆಡಿಕಲ್ ಕಾಲೇಜ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ರಾಜ್ಯ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಸಂಕಲ್ಪ ಹೊಂದಿದೆ. ರಾಜ್ಯದಲ್ಲಿ ಪ್ರತಿ ವರ್ಷ 4 ಸಾವಿರಕ್ಕು ಹೆಚ್ಚು ಸೀಟುಗಳು ದೊರೆಯುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಮಹಾದೇವಪ್ಪ, ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ, ಹುನಗುಂದ ಶಾಸಕ ಹಾಗೂ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಶಾಸಕರಾದ ಸಿದ್ದು ಸವದಿ, ಭೀಮಸೇನ ಚಿಮ್ಮನಕಟ್ಟಿ, ರಾಜ್ಯ ಕೈಗಾರಿಕಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನಿಲಕುಮಾರ ದಡ್ಡಿ ಎಸ್.ಜಿ.ನಂಜಯ್ಯನಮಠ, ಸಿಇಒ ಶಶಿಧರ ಕುರೇರ, ಡಿಸಿ ಸಂಗಪ್ಪ, ಎಸ್ಪಿ ಸಿದ್ದಾರ್ಥ ಗೋಯಲ್, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮಹಾಂತೇಶ ಹಟ್ಟಿ, ಸಿದ್ದು ಕೊಣ್ಣೂರ, ಬಾಯಕ್ಕ ಮೇಟಿ, ಮಲ್ಲಿಕಾರ್ಜುನ ಮೇಟಿ, ಬೆಳಗಾವಿ ಪ್ರಾದೇಶಿಕ ಜಾನಕಿ ಕೆ.ಎಂ. ಇದ್ದರು.

ರೂ.50 ಕೋಟಿ ವೆಚ್ಚದ ಸುಸಜ್ಜಿತ ಕ್ರೀಡಾ ಸಂಕೀರ್ಣ ಲೋಕಾರ್ಪಣೆ

ಧಾರವಾಡ: ವಿದ್ಯಾಕಾಶಿ ಧಾರವಾಡದ ಕ್ರೀಡಾಪಟುಗಳ ದಶಕಗಳ ಕನಸು ನನಸಾಗಿದ್ದು, ರೂ.50 ಕೋಟಿ ವೆಚ್ಚದಲ್ಲಿ ನಗರದ ಹೃದಯ ಭಾಗದಲ್ಲಿ ನಿರ್ಮಿಸಿದ ಅತ್ಯಾಧುನಿಕ ಕ್ರೀಡಾ ಸಂಕೀರ್ಣ, ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ ಲೋಕಾರ್ಪಣೆಗೊಂಡಿದೆ.

ಕ್ರೀಡಾ ಸಂಕೀರ್ಣ ಉದ್ಘಾಟಿಸಿದ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯಾ, ಧಾರವಾಡ ಕೇವಲ ಸಂಗೀತ, ಸಾಹಿತ್ಯಕ್ಕಷ್ಟೇ ಅಲ್ಲದೆ, ಇನ್ಮುಂದೆ ಕ್ರೀಡಾ ಕ್ಷೇತ್ರದಲ್ಲೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಲಿ ಎಂದು ಹಾರೈಸಿದರು. ಈ ಮೂಲಕ ಧಾರವಾಡ ಹೆಸರು ಜಾಗತಿಕ ಮಟ್ಟದಲ್ಲಿ ಬೆಳೆಸಲು ಸಲಹೆ ನೀಡಿದರು.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ, 2018ರಲ್ಲಿ ಈ ಯೋಜನೆಗೆ ಅಡಿಗಲ್ಲು ಹಾಕಲಾಗಿತ್ತು. ಕೋವಿಡ್ ಮತ್ತು ಅನುದಾನದ ಕೊರತೆಯಿಂದ ವಿಳಂಬವಾಗಿದ್ದ ಕಾಮಗಾರಿಯು ಪೂರ್ಣಗೊಂಡಿದ್ದು, ಧಾರವಾಡದ ಕ್ರೀಡಾ ಪ್ರತಿಭೆಗಳಿಗೆ ಜಾಗತಿಕ ಮಟ್ಟದ ವೇದಿಕೆ ಒದಗಿಸಲಿದೆ ಎಂದರು.

ದೆಹಲಿಯ ಐಐಟಿ ತಾಂತ್ರಿಕ ಮಾರ್ಗದರ್ಶನದಲ್ಲಿ ಸಂಕೀರ್ಣ ವಿನ್ಯಾಸಗೊಳಿಸಿದೆ. ಒಎನ್‌ಜಿಸಿ ಮತ್ತು ಎನ್‌ಎಂಡಿಸಿ ಸಂಸ್ಥೆಗಳ ಸಿಎಸ್‌ಆರ್ ನಿಧಿಯಡಿ ಸುಮಾರು ರೂ.50 ಕೋಟಿ ವೆಚ್ಚದಲ್ಲಿ 1.6 ಎಕರೆ ಜಾಗದಲ್ಲಿ ಈ ಬೃಹತ್ ಸಂಕೀರ್ಣ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಜಿ+3 ಮಹಡಿಯ ವಿನ್ಯಾಸ: ಈ ಭಾಗದ ಕ್ರೀಡಾಪಟುಗಳ ಬಹುದಿನದ ಕನಸು ಈಡೇರಿದೆ. ನೂತನ ತಂತ್ರಜ್ಞಾನ ಹಾಗೂ ಸ್ಟೀಲ್ ಸ್ಟಕ್ಚರ್ ಬಳಸಿ ನಿರ್ಮಿಸಲಾದ ಈ ಕಟ್ಟಡವು ಮೂರು ಅಂತಸ್ತುಗಳನ್ನು ಹೊಂದಿದೆ. ಇದರ ಸದ್ಬಳಕೆಯಿಂದ ಭವಿಷ್ಯದ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಹೆಚ್ಚಿನ ಪದಕ ಗೆಲ್ಲುವಂತೆ ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಈಜುಕೊಳ: ಒಲಿಂಪಿಕ್ ಮಾದರಿಯ ಈಜುಕೊಳದ ಜೊತೆಗೆ ಮಕ್ಕಳಿಗೆ ಮತ್ತು ಅಭ್ಯಾಸಕ್ಕಾಗಿ ಪ್ರತ್ಯೇಕ ಈಜುಕೊಳಗಳ ನಿರ್ಮಿಸಲಾಗಿದೆ. ಇದರಿಂದ ಧಾರವಾಡ ಕ್ರೀಡಾ ವಲಯದಲ್ಲಿ ಐತಿಹಾಸಿಕ ಪರಿವರ್ತನೆ ತಂದಿದೆ ಎಂದು ಹೇಳಿದರು.



ಒಳಾಂಗಣ ಕ್ರೀಡೆಗಳು: ಸಂಕೀರ್ಣದಲ್ಲಿ ಬ್ಯಾಡ್ಮಿಂಟನ್, ಕಬಡ್ಡಿ, ಜುಡೋ, ಟೇಬಲ್ ಟೆನಿಸ್, ಜಿಮ್ನಾಸ್ಟಿಕ್ಸ್ ಮತ್ತು ಕುಸ್ತಿಗಾಗಿ ಸುಸಜ್ಜಿತ ಅಂಕಣಗಳಿವೆ ಎಂದು ಮಾಹಿತಿ ನೀಡಿದರು.

ಕ್ರೀಡಾಪಟುಗಳಿಗೆ ವಿಶ್ರಾಂತಿ ಕೊಠಡಿಗಳು, ತರಬೇತುದಾರರ ಕೊಠಡಿ, ಆಧುನಿಕ ಜಿಮ್, ಕ್ಯಾಂಟೀನ್ ಮತ್ತು ವೀಕ್ಷಕರಿಗಾಗಿ ಗ್ಯಾಲರಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕ ಮಾತನಾಡಿದ ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಸರ್ಕಾರದ ಅನುದಾನ ಪಡೆಯದೆ, ಪ್ರಹ್ಲಾದ ಜೋಶಿ ಅವರ ಸತತ ಪರಿಶ್ರಮದ ಫಲದಿಂದ ಖಾಸಗಿ ಸಂಸ್ಥೆಗಳ ಸಹಕಾರದಿಂದ ನಗರದ ಕೋರ್ಟ್ ವೃತ್ತದ ಬಳಿ ನೂತನವಾಗಿ ನಿರ್ಮಿಸಲಾದ ಹೈಟೆಕ್ ಕ್ರೀಡಾ ಸಂಕೀರ್ಣ ಮತ್ತು ಅಂತಾರಾಷ್ಟ್ರೀಯ ಮಟ್ಟದ ಈಜುಕೊಳದ ಉದ್ಘಾಟನಾ ಧಾರವಾಡ ನಗರದ ಕ್ರೀಡಾ ಇತಿಹಾಸದಲ್ಲಿ ಇಂದು ಒಂದು ಹೊಸ ಮೈಲಿಗಲ್ಲಾಗಿದೆ ಎಂದು ಹೇಳಿದರು.

ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರಾದ ಎಂ.ಆರ್.ಪಾಟೀಲ, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಜಿಲ್ಲಾಧಿಕಾರಿ ಸ್ನೇಹಲ್ ಆರ್, ಜಿಪಂ ಸಿಇಒ ಭುವನೇಶ ಪಾಟೀಲ, ಆಯುಕ್ತ ಡಾ.ರುದ್ರೇಶ ಘಾಳಿ, ಪ್ರೋಬೇಷನರಿ ಐಎಎಸ್ ಅಧಿಕಾರಿ ರೀತಿಕಾ ವರ್ಮಾ ಇದ್ದರು.

ಕಿರುಸುದ್ದಿ

ಬಿಸಿಲಿನ ಝಳಕ್ಕೆ ಮೀನುಗಳ ಮಾರಣಹೋಮ



ಬೆಳಗಾವಿ: ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಕೆರೆಯಲ್ಲಿ ನೂರಾರು ಮೀನುಗಳು ಸತ್ತು ತೇಲಾಡುತ್ತಿರುವ ಘಟನೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಚಿಕ್ಕಬಾಗೇವಾಡಿ ಗ್ರಾಮದಲ್ಲಿ ನಡೆದಿದೆ. ಚಿಕ್ಕಬಾಗೇವಾಡಿ ಗ್ರಾಮದ ನಿವಾಸಿ ಶಂಕರಗೌಡ ಪಾಟೀಲ ಎಂಬುವವರು ತಮ್ಮ ಜಮೀನಿನ ಕೆರೆಯಲ್ಲಿ ಮೀನು ಸಾಕಾಣಿಕೆ ಮಾಡಿಕೊಂಡು ತಮ್ಮ ಜೀವನವನ್ನು ಕಟ್ಟಿಕೊಂಡಿದ್ದರು. ಬಿಸಿಲಿನ ತಾಪಮಾನಕ್ಕೆ ಸಾವಿರಾರು ಮೀನುಗಳು ಮೃತಪಟ್ಟಿದ್ದು, ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ 50 ಸಾವಿರ ಮೀನು ಬಿಟ್ಟಿದ್ದ ಮಾಲೀಕನು ಆಘಾತಗೊಂಡಿದ್ದಾನೆ. ಬೇಸಿಗೆ ಆರಂಭದಲ್ಲೇ ಮೀನು ಸಾಕಾಣಿಕೆದಾರರಿಗೆ ದೊಡ್ಡ ಮಟ್ಟದಲ್ಲಿ ಹೊಡೆತ ನೀಡಿದೆ. ಸಾವಿರಾರು ಮೀನುಗಳ ಸಾವಿನ ಬಗ್ಗೆ ಮೀನುಗಾರಿಗೆ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಹಾಗೂ ರಾಜ್ಯ ಸರ್ಕಾರ ಕೂಡಲೇ ಮೀನು ಸಾಗಾಣಿಕೆದಾರರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಮೀನು ಸಾಗಾಣಿಕೆದಾರ ಶಂಕರಗೌಡ ಪಾಟೀಲ ಆಗ್ರಹಿಸಿದ್ದಾರೆ.

ಎಲ್‌ಪಿಜಿ ಬಗ್ಗೆ ವಿರೋಧ ಪಕ್ಷಗಳಿಂದ ದಾರಿ ತಪ್ಪಿಸುವ ಕೆಲಸ: ಸಚಿವ ಜೋಶಿ

ಹುಬ್ಬಳ್ಳಿ: ವಿಶ್ವವೇ ಯುದ್ಧದ ಬಿಕ್ಕಟ್ಟು ಎದುರಿಸುತ್ತಿದೆ. ದೇಶದಲ್ಲಿ ಉತ್ತಮವಾದ ರಾಜತಾಂತ್ರಿಕತೆ, ವಿದೇಶಾಂಗ ನೀತಿಯಿಂದ ಭಾರತದಲ್ಲಿ ಯಾವುದೇ ಸಮಸ್ಯೆ ಎದುರಾಗಿಲ್ಲ. ಎಲ್‌ಪಿಜಿ ಅಭಾವದ ಬಗ್ಗೆ ವಿರೋಧ ಪಕ್ಷಗಳು ಜನರಲ್ಲಿ ಆತಂಕ ಸೃಷ್ಟಿಸಿ, ದಾರಿ ತಪ್ಪಿಸುವ ಕೆಲಸ ಮಾಡುತ್ತಿರುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕಿಡಿಕಾರಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುದ್ಧದಿಂದ ಎಲ್‌ಪಿಜಿ ಸಮಸ್ಯೆಯಾಗಿಲ್ಲ, ಜವಾಬ್ದಾರಿ ಇಲ್ಲದ ಎಲ್‌ಒಪಿ (ವಿರೋಧ ಪಕ್ಷದ ನಾಯಕ) ರಾಹುಲ್ ಗಾಂಧಿ ಸಮಸ್ಯೆಯಾಗಿದ್ದಾರೆ ಎಂದರು.

ದೇಶದಲ್ಲಿ ಎಲ್‌ಪಿಜಿ, ಕೆರೋಸಿಯನ್, ಎಫ್‌ಟಿಎ, ಪೆಟ್ರೋಲ್ ಡಿಸೇಲ್ ಅಭಾವವಿಲ್ಲ, ನಾವು ಸಾಕಷ್ಟು ಶೇಖರಣೆ ಮಾಡಿದ್ದೇವೆ. ವಿದೇಶದಲ್ಲಿ ಏನಾಗುತ್ತಿದೆ ಎಂಬುವುದು ಇಡೀ ವಿಶ್ವಕ್ಕೆ ಗೊತ್ತಿದೆ. ಎಲ್‌ಪಿಜಿ ಅಭಾವ ದೇಶದಲ್ಲಿ ಎಲ್ಲಿಯೂ ಆಗಿಲ್ಲ. ವಿರೋಧ ಪಕ್ಷದವರು ಆತಂಕ ಸೃಷ್ಟಿಸುತ್ತಿದ್ದು, ಇದರಿಂದ ಜನರು ಗ್ಯಾಸ್ ಸಿಲಿಂಡರ್‌ಗಳ ಹೆಚ್ಚು ಬುಕ್ ಮಾಡುತ್ತಿದ್ದಾರೆ. ವಾಣಿಜ್ಯ ಗ್ಯಾಸ್ ಸಿಲಿಂಡರ್ ಹೆಚ್ಚು ಬುಕ್ ಆಗಿದ್ದು, ಸೀಮಿತವಾಗಿ ನೀಡಲು ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಭಾರತ ಸುರಕ್ಷಿತವಾಗಿದೆ. ಇದು ಹೆಮ್ಮೆಯ ಸಂಗತಿ. ಬಿಕ್ಕಟ್ಟಿನ ಸಮಯದಲ್ಲಿ ವಿರೋಧ ಪಕ್ಷದವರು ಸಹಕಾರ ನೀಡಬೇಕು. ಆದರೆ, ರಾಹುಲ್ ಗಾಂಧಿಯವರು ಅಧಿವೇಶದಲ್ಲಿ ಎಲ್‌ಪಿಜಿ ಬಗ್ಗೆ ಮಾತನಾಡಿ ಓಡಿ ಹೋದರು. ಇದು ಬೇಜವಾಬ್ದಾರಿ ನಡೆಯಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸುಳ್ಳು ಹೇಳಿ ಜನರ ದಾರಿ ತಪ್ಪಿಸುತ್ತಿದೆ. ಇದರಿಂದ ಜನರು ಆತಂಕಗೊಂಡು ಬುಕ್ಕಿಂಗ್ ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರ ಉತ್ತಮವಾಗಿ ನಿರ್ವಹಣೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರ ವಿರುದ್ಧ ಪ್ರತಿಭಟನೆ ಮಾಡುವಂತೆ ಹೇಳಿಕೆ ನೀಡಿದ್ದಾರೆ. ಇದು ನೈತಿಕ ಅಧಪತನದ ಪರಾಕಾಷ್ಠೆ ಹಾಗೂ ಬೇಜವಾಬ್ದಾರಿ ಹೇಳಿಕೆಯಾಗಿದೆ ಎಂದು ಹರಿಹಾಯ್ದರು.

ದೇಶದಲ್ಲಿ ಕೆರೋಸಿಯನ್ ಶೇಖರಣೆ ಹೆಚ್ಚಿಸಲಾಗಿದೆ. ಸದ್ಯ 33 ಕೋಟಿ ಎಲ್‌ಪಿಜಿ ಸಂಪರ್ಕ ಮಾಡಲಾಗಿದೆ. ಪ್ರಮುಖ ದೇಶಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಅಭಾವ ಎದುರಾಗಿದ್ದು, ಭಾರತದಲ್ಲಿ ಎಲ್ಲಿಯೂ ಆಗಿಲ್ಲ. ಇರಾನನಿಂದಲೂ 2-3 ಶಿಪ್‌ಗಳು ಭಾರತಕ್ಕೆ ಬಂದಿವೆ. ಆಸ್ಟ್ರೇಲಿಯಾ, ಆಫ್ರಿಕಾ, ಕೆನಡಾ, ರಷ್ಯಾದಿಂದ ಗ್ಯಾಸ್ ತರಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸಿಲಿಂಡರ್ ಅಭಾವದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರು, ಪೆಟ್ರೋಲ್, ಡಿಸೇಲ್ ದರ ಹೆಚ್ಚಿಸಿ ಜನರಿಗೆ ಹೊರೆಯಾಗುವಂತೆ ಮಾಡಿದ್ದಾರೆ. ವಿಶ್ವದಲ್ಲಿ ಏನಾದರೂ ಸಹ ಮೋದಿ ಕಾರಣ ಎಂದು ಆರೋಪ ಮಾಡುತ್ತಾರೆ. ಇದು ಬೇಜವಾಬ್ದಾರಿ ಹೇಳಿಕೆಗಳು. ದೇಶದಲ್ಲಿ ಎಲ್ಲವೂ ಸರಿಯಿದ್ದು, ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು.

ರಾಜತಾಂತ್ರಿಕ ನೈಪುಣ್ಯತೆಯಿಂದ

ಜಾಗತಿಕ ಸಮಸ್ಯೆ ನಿಭಾಯಿಸಿದ ಮೋದಿ: ಬೊಮ್ಮಾಯಿ

ಗದಗ: ಅಮೆರಿಕಾ ಇಸ್ರೇಲ್ ಇರಾನ್ ಯದ್ಧದಿಂದ ಉಂಟಾದ ಜಾಗತಿಕ ಸಮಸ್ಯೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಮರ್ಥವಾಗಿ ನಿಭಾಯಿಸಿರುವುದರಿಂದ ದೇಶದಲ್ಲಿ ಸಾಕಷ್ಟು ಪೆಟ್ರೋಲ್ ಡಿಸೇಲ್ ಸಿಗುವಂತಹ ವ್ಯವಸ್ಥೆಯಾಗಿದೆ. ಕಾಂಗ್ರೆಸ್‌ನವರು ಹತಾಶರಾಗಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.



ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗೆ ಯಾವುದೇ ಸಮಸ್ಯೆ ಇಲ್ಲ, ಈ ಬಗ್ಗೆ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್ ಮುನಿಯಪ್ಪ ಅವರೇ ಹೇಳಿದ್ದಾರೆ. ವಾಣಿಜ್ಯ ಸಿಲಿಂಡರ್‌ಗಳಿಗೆ ಸ್ವಲ್ಪ ಸಮಸ್ಯೆಯಾಗಿದೆ. ಈ ಬಗ್ಗೆ ಆತಂಕಕ್ಕೊಳಗಾಗಬಾರದು. ಈಗಾಗಲೇ ಎಲ್‌ಪಿಜಿ ಹೊಂದಿರುವ ಐದಾರು ಹಡಗುಗಳು ಭಾರತದ ಕಡೆಗೆ ಬರುತ್ತಿವೆ. ಅವುಗಳನ್ನು ಸರಿಯಾಗಿ ವಿತರಣೆ ಮಾಡಿ, ಕಳ್ಳ ಮಾರುಕಟ್ಟೆಯಲ್ಲಿ ಮಾರಾಟವಾಗದಂತೆ ರಾಜ್ಯ ಸರ್ಕಾರ ನೋಡಿಕೊಳ್ಳಬೇಕು. ಎಂಟತ್ತು ದಿನದಲ್ಲಿ ಸಮಸ್ಯೆ ಬಗೆ ಹರಿಯಲಿದೆ ಎಂದು ಹೇಳಿದರು.

ನಾವು ಎಲ್‌ಪಿಜಿ ಗ್ಯಾಸ್‌ಗೆ ಗಲ್ಫ್ ದೇಶಗಳನ್ನು ಅವಲಂಬಿಸಬೇಕಿದೆ. ಯುದ್ಧದ ವಾತಾವರಣ ಇರುವುದರಿಂದ ಅಲ್ಲಿಂದ ಗ್ಯಾಸ್ ತರಬೇಕಿದೆ. ಭಾರತ ಸರ್ಕಾರದ ರಾಜತಾಂತ್ರಿಕ ನೈಪುಣ್ಯತೆಯಿಂದಾಗಿ ಇರಾನ್ ಈಗಾಗಲೇ ಪೆಟ್ರೋಲ್, ಡಿಸೇಲ್ ತೈಲ ಸಾಗಾಟಕ್ಕೆ ಅನುಮತಿ ನೀಡಿದೆ. ಗ್ಯಾಸ್ ಕೂಡ ಈಗಾಗಲೇ ಬರುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್‌ನವರು ಇತಿಹಾಸ ತಿರುಗಿ ನೋಡಬೇಕು. ಸದ್ದಾಂ ಹುಸೇನ್ ಇದ್ದಾಗ ಇರಾಕ್ ಯುದ್ಧದ ಸಂದರ್ಭದಲ್ಲಿ ಅವರು ಅಧಿಕಾರದಲ್ಲಿದ್ದರು. ಆಗ ಕೇಂದ್ರ ಸಚಿವರಾಗಿದ್ದ ಎ.ಕೆ. ಆ್ಯಂಟೋನಿ ರಾತ್ರಿ ಎಂಟು ಗಂಟೆಯ ನಂತರ ಯಾವುದೇ ಪೆಟ್ರೋಲ್ ತೆರೆಯಬಾರದು ಎಂದು ಆದೇಶ ಮಾಡಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಕಾರಣ ಅಂತಹ ಪರಿಸ್ಥಿತಿ ಇಲ್ಲ, ಅಲ್ಲದೇ ಶೇ.25% ಆಂತರಿಕ ಉತ್ಪಾದನೆ ಹೆಚ್ಚಳ ಮಾಡಿದ್ದಾರೆ. ಇದೆಲ್ಲವೂ ಗೊತ್ತಿದ್ದು ಕೂಡ ಕಾಂಗ್ರೆಸ್‌ನವರು ಆರೋಪ ಮಾಡುತ್ತಾರೆ. ತಮ್ಮ ಕಾಲದಲ್ಲಿ ಆಗಿರುವುದನ್ನು ನೆನಪು ಮಾಡಿಕೊಳ್ಳಲಿ ಎಂದು ಹೇಳಿದರು.

> **ತಪ್ಪು ಮುಚ್ಚಿಕೊಳ್ಳಲು ಆರೋಪ**
> ರಾಜ್ಯ ಕಾಂಗ್ರೆಸ್‌ನಲ್ಲಿ ಸಂಪುಟ ವಿಸ್ತರಣೆಗೆ ಜಿಲ್ಲೆಯ ಹಿರಿಯ ಶಾಸಕ ಜಿ.ಎಸ್.ಪಾಟೀಲ್ ಸೇರಿದಂತೆ ಶಾಸಕರು ಸಭೆ ಮಾಡಿದ್ದಾರೆ. ಆಂತರಿಕ ಬಿಕ್ಕಟ್ಟು ಇನ್ನಷ್ಟು ಉಲ್ಬಣ ಆಗುತ್ತದೆ. ಸಿದ್ದರಾಮಯ್ಯ ಅವರ ಬಜೆಟ್ ಬಗ್ಗೆ ಕಾಂಗ್ರೆಸ್‌ನವರೇ ನಮಗೇನು ಸಿಕ್ಕಿಲ್ಲ ಅನ್ನುವ ಪರಿಸ್ಥಿತಿ ಇದೆ. ಹೀಗಿರುವಾಗ ಬಹಳಷ್ಟು ಪ್ರತಿರೋಧ ಇದೆ. ಸಿಎಂ ಸಿದ್ದರಾಮಯ್ಯ ಅವರು ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಕೇಂದ್ರದ ಮೇಲೆ ಆರೋಪ ಮಾಡುವುದು ಮೊದಲಿನಿಂದಲೂ ಚಾಳಿ ಇದೆ. ಸುಳ್ಳನ್ನೆ ಹತ್ತು ಬಾರಿ ಹೇಳಿ ಸತ್ಯ ಮಾಡಲು ಹೋಗುತ್ತಾರೆ. ಈಗ ಎಲ್‌ಪಿಜಿಯೊಂದನ್ನು ಸೇರಿಸಿಕೊಂಡು ಆರೋಪ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದರು.

ಪೌರಕಾರ್ಮಿಕರಿಗೆ ಕಳಪೆಮಟ್ಟದ ಮೊಟ್ಟೆಗಳ ಪೂರೈಕೆ: ಆಕ್ರೋಶ

ಬೆಳಗಾವಿ: ದಿನ ಬೆಳಗಾದರೆ ನಗರವನ್ನು ಸ್ವಚ್ಛಂದವಾಗಿ ಇಡುವ ಪೌರಕಾರ್ಮಿಕರಿಗೆ ದಿನ ನಿತ್ಯವೂ ಕಳಪೆ ಮಟ್ಟದ ಆಹಾರ ಪೂರೈಕೆ ಮಾಡಲಾಗುತ್ತಿದೆ, ಎಂಬ ಗಂಭೀರ ಆರೋಪ ಕೇಳಿ ಬಂದಿದ್ದು, ಇದರಿಂದಾಗಿ ಪೌರ ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಬೆಳಗಾವಿ ನಗರದ ಚೌವಾಟಗಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 69 ಪೌರಕಾರ್ಮಿಕರಿಗೆ ನೀಡಲಾದ ಆಹಾರದಲ್ಲಿ ಕಳಪೆ ಗುಣಮಟ್ಟದ ಮೊಟ್ಟೆಗಳನ್ನು ಪೂರೈಕೆ ಮಾಡಲಾಗಿದೆ. ಕಾರ್ಮಿಕರಿಗೆ ನೀಡಲಾದ ಮೊಟ್ಟೆಗಳನ್ನು ಕುದಿಸಿದ ಬಳಿಕ ಅವು ಹಳದಿ ಬಣ್ಣಕ್ಕೆ ತಿರುಗಿರುವುದು ಕಂಡುಬಂದಿದೆ. ಈ ಬಗ್ಗೆ ಪೌರಕಾರ್ಮಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಇಂತಹ ಆಹಾರವನ್ನು ತಿನ್ನಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ದಿನವಿಡೀ ಕಷ್ಟಪಟ್ಟು ಕೆಲಸ ಮಾಡುವ ಪೌರಕಾರ್ಮಿಕರಿಗೆ ಸರಿಯಾದ ಹಾಗೂ ಆರೋಗ್ಯಕರ ಆಹಾರ ಒದಗಿಸಬೇಕಾದ ಜವಾಬ್ದಾರಿ ಅಧಿಕಾರಿಗಳದ್ದು. ಆದರೆ, ನಿರ್ಲಕ್ಷ್ಯದಿಂದ ಕಳಪೆ ಆಹಾರ ಪೂರೈಕೆ ಮಾಡಲಾಗುತ್ತಿದೆ ಎಂದು ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಇದಕ್ಕೆ ಸಂಬಂಧಿಸಿದಂತೆ ಸರಬರಾಜುದಾರರು ತಮ್ಮ ಸಮರ್ಥನೆ ನೀಡಿದ್ದು ಮೊಟ್ಟೆಗಳನ್ನು ಒಲೆಯ ಮೇಲೆ ಕುದಿಸಿದ ಪರಿಣಾಮ ಅವುಗಳ ಬಣ್ಣ ಬದಲಾಗಿದೆ ಎಂದು ಹೇಳಿದ್ದಾರೆ. ಆದರೆ, ಈ ಹೇಳಿಕೆಯನ್ನು ಕಾರ್ಮಿಕರು ಒಪ್ಪಲು ಸಿದ್ಧರಿಲ್ಲ. ಕಳಪೆ ಗುಣಮಟ್ಟದ ಮೊಟ್ಟೆಗಳನ್ನು ಪೂರೈಕೆ ಮಾಡಿರುವುದರಿಂದಲೇ ಈ ಪರಿಸ್ಥಿತಿ ಉಂಟಾಗಿದೆ ಎಂದು ಪೌರಕಾರ್ಮಿಕರು ಅಸಮಾಧಾನ ಹೊರ ಹಾಕಿದ್ದಾರೆ.

ಈ ಘಟನೆ ಬೆಳಗಾವಿ ಮಹಾನಗರ ಪಾಲಿಕೆಯ ಮೇಲ್ವಿಚಾರಣೆ ವ್ಯವಸ್ಥೆಯ ಮೇಲೆಯೂ ಕಾರ್ಮಿಕರು ಪ್ರಶ್ನೆ ಮಾಡಿ ಆಹಾರ ಪೂರೈಕೆ ಪ್ರಕ್ರಿಯೆಯಲ್ಲಿ ಗುಣಮಟ್ಟ ಪರಿಶೀಲಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ಪೌರಕಾರ್ಮಿಕರು ತಕ್ಷಣವೇ ಉತ್ತಮ ಗುಣಮಟ್ಟದ ಆಹಾರ ಪೂರೈಸುವಂತೆ ಆಗ್ರಹಿಸಿದ್ದಾರೆ. ಅಲ್ಲದೆ, ಕಳಪೆ ಆಹಾರ ಪೂರೈಕೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಮಹಾನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಪೌರಕಾರ್ಮಿಕರು ಒತ್ತಾಯಿಸಿದ್ದಾರೆ.

ಜಂಗಿ ಕುಸ್ತಿಗೆ ವರುಣನ ಅವಕೃಪೆ

ಧಾರವಾಡ: ನಗರದ ಐತಿಹಾಸಿಕ ಕರ್ನಾಟಕ ಮಹಾವಿದ್ಯಾಲಯದ ಮೈದಾನದಲ್ಲಿ ಶನಿವಾರ ಸಂಜೆ ಅತ್ಯಂತ ರೋಚಕ ಹಂತ ತಲುಪಿದ್ದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಗೆ ವರುಣ ದಿಢೀರ್ ಆಗಮನದ ಮೂಲಕ ಅಡ್ಡಿಪಡಿಸಿದನು.

ಭಾರೀ ಮಳೆಯಿಂದಾಗಿ ಕುಸ್ತಿ ಅಖಾಡವು ಕೆಸರು ಗದ್ದೆಯಾದ ಪರಿಣಾಮ ಪಂದ್ಯಗಳನ್ನು ಅರ್ಧಕ್ಕೆ ಸ್ಥಗಿತಗೊಳಿಸಬೇಕಾದ ಅನಿವಾರ್ಯತೆ ಎದುರಾಯಿತು.

ಅನಿರೀಕ್ಷಿತ ಮಳೆ: ಶನಿವಾರ ಸಂಜೆ ಸುಮಾರು 6.30ರ ಸುಮಾರಿಗೆ ಗುಡುಗು ಸಹಿತ ಭಾರೀ ಮಳೆ ಸುರಿಯಿತು. ಇದರಿಂದಾಗಿ ಮೈದಾನದಲ್ಲಿದ್ದ ಸಾವಿರಾರು ಕುಸ್ತಿ ಅಭಿಮಾನಿಗಳು ಅಕ್ಷರಶಃ ಮಳೆಯಲ್ಲಿ ನೆನೆಯಬೇಕಾಯಿತು.

ಕೆಸರಾದ ಅಖಾಡ: ಕುಸ್ತಿಗಾಗಿ ಸಿದ್ಧಪಡಿಸಲಾಗಿದ್ದ ಮಣ್ಣಿನ ಅಖಾಡವು ಮಳೆಯ ನೀರಿನಿಂದಾಗಿ ಸಂಪೂರ್ಣ ಕೆಸರಾಯಿತು. ಪೈಲ್ವಾನರು ಪಟ್ಟುಗಳನ್ನು ಹಾಕಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಯಿತು.

ಪ್ರೇಕ್ಷಕರ ಪರದಾಟ: ಕುಸ್ತಿ ನೋಡಲು ಮೈದಾನದ ಗ್ಯಾಲರಿ ಹಾಗೂ ಸುತ್ತಮುತ್ತ ನೆರೆದಿದ್ದ ಸುಮಾರು 5 ಸಾವಿರಕ್ಕೂ ಹೆಚ್ಚು ಜನರು ಮಳೆಯಿಂದ ರಕ್ಷಿಸಿಕೊಳ್ಳಲು ಗಿಡಗಳ ಕೆಳಗೆ ಹಾಗೂ ಕಟ್ಟಡಗಳ ಆಶ್ರಯ ಪಡೆಯಲು ಓಡಾಡಿದರು.

ಅಭಿಮಾನಿಗಳ ನಿರಾಸೆ: ಬಹಳ ದಿನಗಳ ನಂತರ ಧಾರವಾಡದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕುಸ್ತಿ ನಡೆಯುತ್ತಿದೆ ಎಂದು ಕಾತರದಿಂದ ಕಾಯುತ್ತಿದ್ದ ಕುಸ್ತಿ ಪ್ರೇಮಿಗಳಿಗೆ ಮಳೆರಾಯ ತಣ್ಣೀರೆರಚಿದಂತಾಯಿತು. ಮಳೆ ನಿಂತ ನಂತರವೂ ಮೈದಾನ ಹಸಿಯಾಗಿದ್ದರಿಂದ ಪಂದ್ಯಾವಳಿಯ ಅಂತಿಮ ಹಂತದ ರೋಚಕತೆ ಕುಂದಿತು.

> **ಪ್ರಮುಖ ಪಂದ್ಯಗಳು ಸ್ಥಗಿತ**
> ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ಮನ್ಸುಖ್ ಮಾಂಡವೀಯಾ ಅವರ ಸಮ್ಮುಖದಲ್ಲಿ ಇರಾನ್ ಮತ್ತು ಭಾರತದ ಘಟಾನುಘಟಿ ಪೈಲ್ವಾನರ ನಡುವಿನ ಹೈ-ವೋಲ್ಟೇಜ್ ಪಂದ್ಯಗಳು ನಡೆಯಬೇಕಿತ್ತು. ಆದರೆ, ಧಾರಾಕಾರ ಮಳೆಯಿಂದಾಗಿ ಅಖಾಡವು ಜಾರುತ್ತಿದ್ದ ಕಾರಣ ಪೈಲ್ವಾನರ ಸುರಕ್ಷತೆಯ ದೃಷ್ಟಿಯಿಂದ ಸಂಘಟಕರು ಕುಸ್ತಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು.

ಕೆಸರು ಗದ್ದೆಯಾದ ಕೆಸಿಡಿ ಮೈದಾನ

ಕುಸ್ತಿ ಅಭಿಮಾನಿಗಳಿಗೆ ನಿರಾಸೆ

ಮಳೆಗೆ ವಿದ್ಯುತ್ ಕಣ್ಣಾಮುಚ್ಚಾಲೆ | ಸಂಚಾರ ವ್ಯತ್ಯಯ

ವರುಣನ ಅಬ್ಬರಕ್ಕೆ ವಿದ್ಯಾಕಾಶಿ ಜನ ಹೈರಾಣ

ಧಾರವಾಡ: ನಗರದಲ್ಲಿ ಶನಿವಾರ ಸಂಜೆ ಸುರಿದ ಧಾರಾಕಾರ ಮಳೆಯು ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದೆ. ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಬಿರುಗಾಳಿ, ಗುಡುಗು ಸಹಿತ ಮಳೆಗೆ ನಗರದ ತಗ್ಗು ಪ್ರದೇಶಗಳು ಜಲಾವೃತವಾಗಿ, ರಸ್ತೆಗಳು ಕೆರೆಯಂತಾಗಿ ಮಾರ್ಪಟ್ಟಿವೆ.

ವಿದ್ಯುತ್ ಕಣ್ಣಾಮುಚ್ಚಾಲೆ: ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಗಾಳಿ ಮಳೆಗೆ ಮರಗಳ ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ಕೆಸಿಡಿ ರಸ್ತೆ, ಸಪ್ತಾಪುರ, ಮತ್ತು ಮಾಳಮಡ್ಡಿ, ಪ್ರಮುಖ ಬಡಾವಣೆಗಳಲ್ಲಿ ಗಂಟೆಗಟ್ಟಲೆ ಕತ್ತಲು ಆವರಿಸಿತು. ವಿದ್ಯುತ್ ಕಣ್ಣಾಮುಚ್ಚಾಲೆ ಜನರನ್ನು ಹೈರಾಣಾಗಿಸಿತು.

ರಸ್ತೆಗೆ ಹರಿದ ಚರಂಡಿ ನೀರು: ನಗರದ ಚರಂಡಿಗಳು ಸರಾಗವಾಗಿ ಹರಿಯಲು ಸಾಧ್ಯವಾಗದೆ, ಚರಂಡಿ ನೀರು ರಸ್ತೆಯ ಮೇಲೆ ಹರಿಯಿತು. ಟೋಲೋ ನಾಕಾ ನಡುಗಡ್ಡೆಯಾಗಿ ಮಾರ್ಪಟ್ಟಿತು. ಎಪಿಎಂಸಿ ರಸ್ತೆ, ಸುಭಾಷ್ ರಸ್ತೆಗಳಲ್ಲಿ ಚರಂಡಿ ನೀರು ರಸ್ತೆಗೆ ಬಂದಿದ್ದರಿಂದ ಪಾದಚಾರಿಗಳು ಮತ್ತು ವಾಹನ ಸವಾರರು ದುರ್ವಾಸನೆ ನಡುವೆಯೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಸಂಚಾರ ವ್ಯತ್ಯಯ: ರಸ್ತೆಗಳ ಮೇಲೆ ಮೊಣಕಾಲುದ್ದ ನೀರು ನಿಂತಿದ್ದರಿಂದ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತು. ಕೆಸಿಡಿ ಮೈದಾನ ಬಳಿ, ಜ್ಯುಬಿಲಿ ವೃತ್ತದಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದು, ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.



ಮಳೆಯ ನಡುವೆಯೇ ವಾಹನಗಳು ಕೆಟ್ಟು ನಿಂತು ಸವಾರರು ಮಳೆಯಲ್ಲಿ ನೆನೆಯುತ್ತ ವಾಹನ ತಳ್ಳುವ ದೃಶ್ಯಗಳು ಕಂಡುಬಂದವು.

ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು: ಲಕ್ಷ್ಮೀಸಿಂಗನಕೇರಿ, ಜನ್ನತ್ ನಗರ ಸೇರಿದಂತೆ ಹಲವು ತಗ್ಗು ಪ್ರದೇಶಗಳ ಮನೆಗಳಿಗೆ ಮಳೆ ನೀರು ನುಗ್ಗಿದ್ದು, ನಿವಾಸಿಗಳು ಮನೆಯಲ್ಲಿದ್ದ ನೀರನ್ನು ಹೊರ ಹಾಕಲು ಕಷ್ಟ ಪಡಬೇಕಾಯಿತು. ಮಳೆಯಿಂದಾಗಿ ವ್ಯಾಪಾರ ವಹಿವಾಟುಗಳಿಗೂ ಭಾರೀ ಹೊಡೆತ ಬಿದ್ದಿದೆ.

ಮಲ್ಲಿಕಾರ್ಜುನ ಚರಂತಿಮಠ ನಿವಾಸಕ್ಕೆ ಸಿಎಂ, ಡಿಸಿಎಂ ಭೇಟಿ

ಕಾಂಗ್ರೆಸ್ ಟಿಕೆಟ್ ಕೇಳಿಲ್ಲ: ಮಲ್ಲಿಕಾರ್ಜುನ

ಬಾಗಲಕೋಟೆ: ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭೇಟಿ ನೀಡಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಲ್ಲಿಕಾರ್ಜುನ ಚರಂತಿಮಠವರ ನಿವಾಸಕ್ಕೆ ಭೇಟಿ ನೀಡಿ ಟೀ ಸೇವಿಸಿದ ಬಳಿಕ ಕುಶಲೋಪರಿ ನಡೆಸಿದರು. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಚರಂತಿಮಠವರು ಸಿಎಂ ಮತ್ತು ಡಿಕೆಶಿಯವರನ್ನು ಸನ್ಮಾನಿಸಿ ಗೌರವಿಸಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಮಲ್ಲಿಕಾರ್ಜುನ ಚರಂತಿಮಠ, ನವನಗರದ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲು ಆಗಮಿಸುವ ಸಂದರ್ಭದಲ್ಲಿ ನಮ್ಮ ಮನೆಗೆ ಭೇಟಿ ನೀಡಲು ವಿನಂತಿ ಮಾಡಿಕೊಂಡಿದ್ದೇ ಹೀಗಾಗಿ ಮುಖ್ಯಮಂತ್ರಿಗಳು, ಡಿ.ಕೆ.ಶಿವಕುಮಾರ ಅವರು ಬಂದಿದ್ದಾರೆ. ಭೇಟಿ ನೀಡಿದ ಸಂದರ್ಭದಲ್ಲಿ ರಾಜಕೀಯ ಬೆಳವಣಿಗೆ ಕುರಿತು ಯಾವುದೇ ಚರ್ಚೆಯಾಗಿಲ್ಲ ಎಂದರು.

ನಾನು ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಕೇಳಿಲ್ಲ. ಹುಲ್ಲಪ್ಪ ಮೇಟಿಯವರು ನಿಧನರಾದ ಬಳಿಕ ಅವರ ಕುಟುಂಬದವರಿಗೆ ಟಿಕೆಟ್ ಕೊಡಬೇಕು ಎಂಬುದು ಎಲ್ಲರ ಆಶಯವಿದೆ. ಹೈಕಮಾಂಡ್ ತೀರ್ಮಾನ ಕೂಡ ಅದೇ ಇರಬಹುದು. ನಾನು ಬಾಗಲಕೋಟೆ ಮತಕ್ಷೇತ್ರದ ಟಿಕೆಟ್ ಆಕಾಂಕ್ಷಿ ಅಲ್ಲ. ನನಗೆ ಯಾವುದೇ ಸ್ಥಾನ ಮಾನ ನೀಡುವ ಕುರಿತು ಕೂಡ ಚರ್ಚೆಯಾಗಿಲ್ಲ. ಯಾವ ತಂತ್ರಗಾರಿಕೆ ಬಗ್ಗೆಯೂ ಚರ್ಚೆ ನಡೆದಿಲ್ಲ ಎಂದು ಹೇಳಿದರು.



ಮುಖ್ಯಮಂತ್ರಿಯವರ ಜತೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಆರ್.ಬಿ.ತಿಮ್ಮಾಪುರ, ಶರಣಪ್ರಕಾಶ ಪಾಟೀಲ, ಶಾಸಕ ಜೆ.ಟಿ.ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಮಲ್ಲಿಕಾರ್ಜುನ ಮೇಟಿ, ಹೊಳಬಸು ಶೆಟ್ಟರ, ಬಾಯಕ್ಕ ಮೇಟಿ, ಪ್ರಕಾಶ ತಪಶೆಟ್ಟಿ, ಸಂತೋಷ ವಸ್ತ್ರಾನಿ, ದುಂಡಪ್ಪ ಎಳೆಮ್ಮೆ ಇನ್ನಿತರರು ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮಾ.19ರಂದು ಯುಗಾದಿ ಉತ್ಸವ

ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಯುಗಾದಿ ಉತ್ಸವ ಸಮಿತಿ ಇವರಿಂದ ಪರಾಭವ ಸಂವತ್ಸರದ ಯುಗಾದಿ ಉತ್ಸವದ ಅಂಗವಾಗಿ ಮಾ.19ರಂದು ಮಧ್ಯಾಹ್ನ 3ಕ್ಕೆ ಹಾರ್ಸಿಕಟ್ಟಾದಿಂದ ವಾಜಗದ್ದೆಯವರೆಗೆ ಬೈಕ್ ರ‍್ಯಾಲಿ, ವಾಜಗದ್ದೆ ದುರ್ಗಾವಿನಾಯಕ ದೇವರ ದರ್ಶನ, ಅಘನಾಶಿನಿಯ ಉಪಹೊಳೆ ವಾಜಗದ್ದೆ ಹೊಳೆಗೆ ಪೂಜೆ ನಂತರ ಹಾರ್ಸಿಕಟ್ಟಾ ಗಜಾನನೋತ್ಸವ ಸಮಿತಿಯಲ್ಲಿ ಸಂಜೆ 4.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಮನ್ನೆಲೆಮಾವಿನ ಮಠದ ಶ್ರೀ ಮಾಧವಾನಂದ ಭಾರತಿ ಶ್ರೀಗಳು ಹಾಗೂ ಶಿರಳಗಿಯ ಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಭಾರತೀ ಶ್ರೀಗಳು ಸಭಾ ಕಾರ್ಯಕ್ರಮದ ಸಾನಿಧ್ಯವಹಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ಹಾರ್ಸಿಕಟ್ಟಾ ಯುಗಾದಿ ಉತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಾ.22 ರಂದು ಕೃತಿ ಬಿಡುಗಡೆ

ಅಂಕೋಲಾ: ಅಂಕೋಲೆಯ ಸರಳ, ಸಜ್ಜನ, ಸಾಹಿತಿ ಶಾಂತಾರಾಮ ನಾಯಕ ಹಿಚಕಡ ಅವರು ಮಾ.23ರಂದು ತಮ್ಮ ಸಾರ್ಥಕ ಬದುಕಿನ 87 ನೇ ವಯಸ್ಸಿಗೆ ಪಾದಾರ್ಪಣೆ ಮಾಡುತ್ತಿದ್ದಾರೆ. ತನ್ನಿಮಿತ್ತ ಅಂಕೋಲೆಯ ಡಾ.ದಿನಕರ ದೇಸಾಯಿ ಪ್ರತಿಷ್ಠಾನ, ಶಾಂತಾರಾಮ ನಾಯಕರ ಹೊಸಕೃತಿ 'ನಾಡೋಜ, ನ್ಯಾಯಮೂರ್ತಿ ಎಸ್.ಆರ್. ನಾಯಕ' ಕೃತಿ ಬಿಡುಗಡೆ ಹಾಗೂ ಅವರ ಸಾಹಿತ್ಯದ ಅವಲೋಕನ, ಸಂವಾದ, ಕವನ ವಾಚನ ಕಾರ್ಯಕ್ರಮ ಹಮ್ಮಿಕೊಂಡಿದೆ. ಶಾಂತಾರಾಮ ನಾಯಕರ ಹಿಚಕಡ ಮನೆಯಂಗಳದಲ್ಲಿ ಮಾ.22ರಂದು ಮಧ್ಯಾಹ್ನ 3.30 ಗಂಟೆಗೆ ಜರುಗಲಿದೆ.ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣಗುಂದಿ ಅಧ್ಯಕ್ಷತೆಯನ್ನು ವಹಿಸಿ, ಪುಸ್ತಕಬಿಡುಗಡೆಯನ್ನುನೆರವೇರಿಸಲಿದ್ದಾರೆ. ಶಾಂತಾರಾಮ ನಾಯಕರ ಈವರೆಗಿನ ಕಾವ್ಯದ ಅವಲೋಕನವನ್ನು ಪ್ರೊ. ನಾಗರಾಜ ಹೆಗಡೆ ಅಪಗಾಲ, ಗ್ರಂಥಾವಲೋಕನವನ್ನು ಕವಿ ಫಾಲ್ಗುಣ ಗೌಡ ಮಾಡಲಿದ್ದಾರೆ. ಶಾಂತಾರಾಮ ನಾಯಕರ ಬಿಡುಗಡೆಯಾಗಲಿರುವ ಕೃತಿಯನ್ನು ನಿವೃತ್ತ ಉಪನ್ಯಾಸಕ ಶ್ರೀಧರ ನಾಯಕ ಪರಿಚಯಿಸಲಿದ್ದಾರೆ. ನಿವೃತ್ತ ಪ್ರಾ.ಮೋಹನ ಹಬ್ಬು ಉಪಸ್ಥಿತರಿರಲಿದ್ದಾರೆ. ಪ್ರತಿಷ್ಠಾನದ ಕಾರ್ಯದರ್ಶಿ ಜಗದೀಶ ಜಿ. ನಾಯಕ ಹೊಸ್ಕೇರಿ, ಸಹಕಾರ್ಯದರ್ಶಿ ಜಯಶೀಲ ಆಗೇರ, ಕೋಶಾಧಿಕಾರಿ ಮಹಾಂತೇಶ ರೇವಡಿ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರು ಭಾಗವಹಿಸಲು ಕೋರಿದ್ದಾರೆ.



ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ರೈತರ ಮಕ್ಕಳಿಗೆ ಕೃಷಿ ಹಾಗೂ ತೋಟಗಾರಿಕೆಯಲ್ಲಿ ಕೌಶಲ ಬೆಳೆಸುವ ನಿಟ್ಟಿನಲ್ಲಿ, ಸಿದ್ದಾಪುರದ ಹೊಸೂರಿನಲ್ಲಿರುವ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2026–27ನೇ ಸಾಲಿನ 10 ತಿಂಗಳ ತೋಟಗಾರಿಕೆ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ತರಬೇತಿಯು ಮೇ 2, 2026 ರಿಂದ ಫೆಬ್ರವರಿ 28, 2027 ರವರೆಗೆ ನಡೆಯಲಿದೆ.ಆಸಕ್ತ ಅಭ್ಯರ್ಥಿಗಳು ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪೋಷಕರು ಕಡ್ಡಾಯವಾಗಿ ಕೃಷಿ ಭೂಮಿಯನ್ನು ಹೊಂದಿರಬೇಕು ಮತ್ತು ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರವನ್ನು ಪಡೆದಿರಬೇಕು. ವಯೋಮಿತಿಯ ಕುರಿತಂತೆ, ಸಾಮಾನ್ಯ ಅಭ್ಯರ್ಥಿಗಳಿಗೆ 18 ರಿಂದ 30 ವರ್ಷ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 18 ರಿಂದ 33 ವರ್ಷ ಮತ್ತು ಮಾಜಿ ಸೈನಿಕರಿಗೆ 33 ರಿಂದ 65 ವರ್ಷದ ವಯೋಮಿತಿ ನಿಗದಿಪಡಿಸಲಾಗಿದೆ. ಅರ್ಜಿ ನಮೂನೆಗಳನ್ನು ಶಿರಸಿಯ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿ (ಜಿಪಂ), ಕಾರವಾರದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ರಾವ) ಕಚೇರಿ ಅಥವಾ ಇಲಾಖೆಯ ಅಧಿಕೃತ ವೆಬ್‌ಸೈಟ್ https://horticulturedir.karnataka.gov.in ಮೂಲಕ ಮಾ.12ರಿಂದ ಏ. 13ರವರೆಗೆ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಏ.15ರಂದು ಸಂಜೆ 5.30 ಗಂಟೆಯೊಳಗೆ ನಿಗದಿತ ಕಚೇರಿಗಳಿಗೆ ಸಲ್ಲಿಸಬೇಕು.ಅರ್ಜಿ ಶುಲ್ಕವಾಗಿ ಸಾಮಾನ್ಯ ಅಭ್ಯರ್ಥಿಗಳು ರೂ.30 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಂಗವಿಕಲ ಅಭ್ಯರ್ಥಿಗಳು ರೂ. 15 ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್, ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕೆ–2 ಪೇಮೆಂಟ್ ಚಲನ್ ಅನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ಜಿಪ) ಉತ್ತರ ಕನ್ನಡ, ಶಿರಸಿ ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಭ್ಯರ್ಥಿಗಳಿಗೆ ಏ.23ರಂದು ಬೆಳಗ್ಗೆ 11 ಗಂಟೆಗೆ ಶಿರಸಿಯ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಸಂದರ್ಶನವನ್ನು ಆಯೋಜಿಸಲಾಗಿದೆ. ಅಂತಿಮ ಆಯ್ಕೆಪಟ್ಟಿಯನ್ನು ಏ.27ರಂದು ಪ್ರಕಟಿಸಲಾಗುವುದು ಎಂದು ಇಲಾಖೆ ತಿಳಿಸಿದೆ.



ಯಲ್ಲಾಪುರ: ಪಟ್ಟಣದ ಅಡಿಕೆ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ.ಎಸ್.ಅಲ್ಲಯ್ಯನವರಮಠ ಅವರನ್ನು ಸನ್ಮಾನಿಸಿದರು. ಪಿಎಂಜೆಎಫ್ ಲಯನ್ಸ್ ಜೈ ಅಮೋಲ ಜಿ.ನಾಯ್ಕ ದಂಪತಿಗೆ ಶಿವಲಿಂಗಯ್ಯನವರು ವಿಶ್ವದ ಪ್ರಥಮ ಸಂಸತ್ತು ಶರಣರ ಅನುಭವ ಮಂಟಪದ ಚಿತ್ರಪಟವನ್ನು ನೀಡಿ ಗೌರವಿಸಿದರು. ಅಧ್ಯಕ್ಷ ಶೇಷಗಿರಿ ಪ್ರಭು, ಹಿರಿಯ ಲಯನ್‌ಗಳಾದ ಎಸ್.ಎಲ್.ಭಟ್ಟ, ನಂದನ ಬಾಳಿಗಿ , ಶಾಂತಾರಾಮ ಹೆಗಡೆ, ಮಂಜುನಾಥ ನಾಯ್ಕ ಇತರ ಸದಸ್ಯರು ಇದ್ದರು.

ಅಂಬೇಡ್ಕರ್ ಧ್ವಜಸ್ತಂಭ ತೆರವು ಖಂಡಿಸಿ ಮನವಿ

ದಾಂಡೇಲಿ: ಗಾಂಧಿನಗರದ ವಾರ್ಡ್ ನಂ. 02ರಲ್ಲಿ ಅಂಬೇಡ್ಕರ್ ಅಭಿಮಾನಿ ಸೇನೆ ಭೀಮ ಧ್ವನಿ ಸಂಘದಿಂದ 2026ರ ಜ.1ರಂದು ಸ್ಥಾಪಿಸಲಾಗಿದ್ದ ಅಂಬೇಡ್ಕರ್ ಅವರ ಧ್ವಜಸ್ತಂಭವನ್ನು ನಗರಸಭೆ ತೆರವುಗೊಳಿಸಿರುವುದನ್ನು ಅಂಬೇಡ್ಕರ್ ಅಭಿಮಾನಿ ಸೇನೆ ಭೀಮಧ್ವನಿ ಸಂಘವು ಖಂಡಿಸಿ ನಗರ ಸಭೆಗೆ ಮನವಿಯನ್ನು ಸಲ್ಲಿಸಿದರು. ನಗರ ಸಭೆಗೆ ಅಂಬೇಡ್ಕರ್ ಅಭಿಮಾನಿ ಸೇನೆ ಭೀಮ ಧ್ವನಿ ಸಂಘದ ಅಧ್ಯಕ್ಷ ರವಿ ಮಾಳಕರಿ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ನೀಡಿದ ಮನವಿಯಲ್ಲಿ ಅಂಬೇಡ್ಕರ್ ಅಭಿಮಾನಿ ಸೇನೆ ಭೀಮ ಧ್ವನಿ ಸಂಘವು ಕಳೆದ ಸುಮಾರು ವರ್ಷಗಳಿಂದ ಕೇವಲ ಮೂರು ಗುಂಟೆ ಜಾಗಕ್ಕಾಗಿ ನಗರ ಸಭೆಗೆ ಮನವಿ ಸಲ್ಲಿಸುತ್ತಾ ಬಂದಿದೆ. ಸಂಘದ ಮನವಿಗೆ ನಗರಸಭೆಯಿಂದ ಯಾವುದೇ ಸ್ಪಂದನೆ ಸಿಗದೇ ಇರುವ ಹಿನ್ನಲೆಯಲ್ಲಿ ಸಂಘವು ಡಿಸೆಂಬರ್ 31, 2025ರಂದು ಜಿಲ್ಲಾಧಿಕಾರಿ ಕಾರವಾರ, ಡಿಯುಡಿಸಿ ಕಾರವಾರ ಹಾಗೂ ನಗರಸಭೆ ಪೌರಾಯುಕ್ತರಿಗೆ ಲಿಖಿತ ಮನವಿಯನ್ನು ಸಲ್ಲಿಸಿತ್ತು. ಆನಂತರ ಜನವರಿ 1ರಂದು ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಸಾರ್ವಜನಿಕರ ಉಪಸ್ಥಿತಿಯಲ್ಲಿ ಗಾಂಧಿ ನಗರದ ವಾರ್ಡ್ ನಂ.2ರಲ್ಲಿ ಅಂಬೇಡ್ಕರ್ ರವರ ಧ್ವಜಸ್ತಂಭ ಸ್ಥಾಪಿಸಲಾಯಿತು. ಇದೀಗ ನಗರಸಭೆಯವರು ಯಾವುದೇ ನೋಟೀಸನ್ನು ನೀಡದೆ ಧ್ವಜಸ್ಥಂಭವನ್ನು ತೆರವುಗೊಳಿಸಿರುವುದುನ್ನು ಖಂಡಿಸಿ, ಈ ಬಗ್ಗೆ ಏಳು ದಿನಗಳೊಳಗೆ ಉತ್ತರ ನೀಡುವಂತೆ, ಒಂದು ವೇಳೆ ಉತ್ತರ ನೀಡದಿದ್ದದಲ್ಲಿ ಕಾನೂನಾತ್ಮಕ ಹೋರಾಟ ಮಾಡುವುದಾಗಿ ಮನವಯಲ್ಲಿ ತಿಳಿಸಲಾಗಿದೆ. ಅಂಬೇಡ್ಕರ್ ಅಭಿಮಾನಿ ಸೇನೆ ಭೀಮ ಧ್ವನಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ದಾಂಡೇಲಿ: ಗಾಂಧಿನಗರದ ವಾರ್ಡ್ ನಂ. 02ರಲ್ಲಿ ಅಂಬೇಡ್ಕರ್ ಅಭಿಮಾನಿ ಸೇನೆ ಭೀಮ ಧ್ವನಿ ಸಂಘದಿಂದ 2026ರ ಜ.1ರಂದು ಸ್ಥಾಪಿಸಲಾಗಿದ್ದ ಅಂಬೇಡ್ಕರ್ ಅವರ ಧ್ವಜಸ್ತಂಭವನ್ನು ನಗರಸಭೆ ತೆರವುಗೊಳಿಸಿರುವುದನ್ನು ಅಂಬೇಡ್ಕರ್ ಅಭಿಮಾನಿ ಸೇನೆ ಭೀಮಧ್ವನಿ ಸಂಘವು ಖಂಡಿಸಿ ನಗರ ಸಭೆಗೆ ಮನವಿಯನ್ನು ಸಲ್ಲಿಸಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ

ತಂತ್ರಜ್ಞಾನದ ಸದುಪಯೋಗ ಪಡೆದುಕೊಳ್ಳಿ

ಮುಂಡಗೋಡ: ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ತಂತ್ರಜ್ಞಾನದ ಸದುಪಯೋಗ ಪಡೆದುಕೊಳ್ಳಲು ಪೂರಕವಾದ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಬಳಕೆಅನಿವಾರ್ಯವಾಗಿದ್ದು,ಸ್ಮಾರ್ಟ್‌ಬೋರ್ಡ್ ಮತ್ತು ಟ್ಯಾಬ್‌ಗಳ ಮೂಲಕ ವಿದ್ಯಾರ್ಥಿಗಳು ದೃಶ್ಯ–ಶ್ರವ್ಯ ಮಾಧ್ಯಮದ ಕಲಿಕೆಯನ್ನು ಸುಲಭವಾಗಿ ಆಸ್ವಾದಿಸಬಹುದಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಶನಿವಾರ ಮಳಗಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಸಂಸ್ಥೆಯಾದ ಒಎನ್‌ಜಿಸಿಯ ಸಿಎಸ್ಆರ್ ನಿಧಿಯಡಿ, ಜನಶ್ರೀಧಾನ್ ಫೌಂಡೇಶನ್ ವತಿಯಿಂದ ಮಳಗಿ ಶಾಲೆಗೆ ಒದಗಿಸಲಾದ ಅತ್ಯಾಧುನಿಕ ಸ್ಮಾರ್ಟ್ ಬೋರ್ಡ್‌ಗಳು ಹಾಗೂ ಶಾಲೆಯ ವಿದ್ಯುತ್ ಸ್ವಾವಲಂಬನೆಗಾಗಿ ಅಳವಡಿಸಲಾದ5 ಕಿ.ವ್ಯಾ ಸೌರ ವಿದ್ಯುತ್ ಉಪಕರಣಗಳ ಲೋಕಾರ್ಪಣೆ ಹಾಗೂ ಶಿಕ್ಷಾ ಟ್ಯಾಬ್‌ಗಳನ್ನು ವಿತರಿಸಿ ಮಾತನಾಡಿದರು.

ಸೌರ ವಿದ್ಯುತ್ ಘಟಕದ ಸ್ಥಾಪನೆಯಿಂದಾಗಿ ಶಾಲೆಯು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿದ್ದು, ನಿರಂತರ ಡಿಜಿಟಲ್ ಕಲಿಕೆಗೆ ಇದು ಭದ್ರ ಬುನಾದಿ ಒದಗಿಸಲಿದೆ. ಈ ಅಭಿವೃದ್ಧಿ ಕಾರ್ಯವು ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹೊಸ ವೇಗ ನೀಡಲಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಮತ್ತು 'ಡಿಜಿಟಲ್ ಇಂಡಿಯಾ' ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ತಾಲೂಕಿನ ಮಳಗಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಒಂದು ಐತಿಹಾಸಿಕ ಬದಲಾವಣೆಗೆ ಸಾಕ್ಷಿಯಾಗಿದೆ ಎಂದರು.ಜನಶ್ರೀಧಾನ್ ಫೌಂಡೇಶನ್‌ನ ಅಧಿಕಾರಿ, ಡಿಡಿಪಿಐ ಡಿ.ಆರ್.ನಾಯ್ಕ, ಕ್ಷೇತ್ರ ಶಿಕ್ಷಣಾಧಿಕಾರಿ ಸಸುಮಾ ಜಿ, ಮುಖಂಡರಾದ ಎಲ್.ಪಾಟೀಲ್, ಮಂಜುನಾಥ ಪಾಟೀಲ, ಅಶೋಕ ಚಲವಾದಿ, ಶಾಲಾ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರು ಉಪಸ್ಥಿತರಿದ್ದರು.



» 5 ಕಿ.ವ್ಯಾ ಸೌರ ವಿದ್ಯುತ್ ಉಪಕರಣಗಳ ಲೋಕಾರ್ಪಣೆ

» ಶಿಕ್ಷಾ ಟ್ಯಾಬ್ ವಿತರಣೆ



ಗೋಕರ್ಣ: ಇಲ್ಲಿನ ಬಸ್ ನಿಲ್ದಾಣದ ಆವಾರಣದಲ್ಲಿ ನಿರ್ಮಿಸಿದ ವಸತಿ ಗೃಹದಿಂದ ತ್ಯಾಜ್ಯ ನೀರು ಚರಂಡಿಗೆ ಬಿಡಲಾಗುತ್ತಿದ್ದು, ಹೊಲಸು ವಾಸನೆ, ಸೊಳ್ಳೆ ಕಾಟದಿಂದ ತೊಂದರೆ ಯಾಗುತ್ತಿದೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು ಎಂದು ಈ ಕಟ್ಟಡದ ಅಕ್ಕಪಕ್ಕದ ನಿವಾಸಿಗಳು ಶಾಸಕ ದಿನಕರ ಶೆಟ್ಟಿ ಬಳಿ ಮನವಿ ಮಾಡಿದರು.

ಮಾ.19ರಿಂದ ಯುಗಾದಿ ಉತ್ಸವ

ಶಿರಸಿ: ನಗರದ ಯುಗಾದಿ ಉತ್ಸವ ಸಮಿತಿಯ ವತಿಯಿಂದ 28ನೇ ವರ್ಷದ ಯುಗಾದಿ ಉತ್ಸವವನ್ನು ಮಾ.19ರಂದು ಅತ್ಯಂತ ವೈಭವ ಹಾಗೂ ಸಾಂಸ್ಕೃತಿಕ ಪರಂಪರೆಯೊಂದಿಗೆ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ರಮೇಶ ದುಭಾಶಿ ತಿಳಿಸಿದರು.

ನಗರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಳೆದ 27 ವರ್ಷಗಳಿಂದ ಪ್ರಾಚೀನ ಸಂಸ್ಕೃತಿಯ ಉಳಿವಿಗಾಗಿ ನಡೆಸಿಕೊಂಡು ಬರುತ್ತಿರುವ ಈ ಆಚರಣೆ ಇಂದು ದೇಶಕ್ಕೇ ಮಾದರಿಯಾಗಿದೆ.ಈಬಾರಿಪರಾಭವನಾಮ ಸಂವತ್ಸರದ ನೂತನ ವರ್ಷಾಚರಣೆಯನ್ನು ಸ್ಮರಣೀಯವಾಗಿಸಲು ಭರ್ಜರಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಉತ್ಸವದ ಯಶಸ್ವಿಗಾಗಿ ನಗರದಲ್ಲಿ ಒಟ್ಟು 100 ಉಪಸಮಿತಿಗಳನ್ನು ರಚಿಸಲಾಗಿದ್ದು, ಸದಸ್ಯರು ಸುಮಾರು 15 ಸಾವಿರ ಮನೆಗಳಿಗೆ ತೆರಳಿ ಅಕ್ಷತೆ ನೀಡುವ ಮೂಲಕ ಸಾರ್ವಜನಿಕರನ್ನು ಆಹ್ವಾನಿಸುತ್ತಿದ್ದಾರೆ. ಪ್ರತಿ ಮನೆಯಿಂದ ಕನಿಷ್ಠ ಒಬ್ಬರಾದರೂ ಕಡ್ಡಾಯವಾಗಿ ಉತ್ಸವದಲ್ಲಿ ಪಾಲ್ಗೊಳ್ಳಬೇಕು ಎಂದು ವಿನಂತಿಸಿದರು.

ಉತ್ಸವದ ಪೂರ್ವಭಾವಿಯಾಗಿ ಮಾ.18ರಂದು ಮಧ್ಯಾಹ್ನ 4 ಗಂಟೆಗೆ ವಿಕಾಸಾಶ್ರಮ ಮೈದಾನದಿಂದ ಸುಮಾರು 500ಕ್ಕೂ ಅಧಿಕ ಬೈಕ್ ಬೃಹತ್ ರ‍್ಯಾಲಿ ನಡೆಯಲಿದೆ. ಮಾ.19ರಂದು ನಡೆಯಲಿರುವ ಮುಖ್ಯ ಶೋಭಾಯಾತ್ರೆಯು ವಿಕಾಸಾಶ್ರಮದಿಂದ ಹೊರಟು ಅಶ್ವಿನಿ ವೃತ್ತ, ದೇವಿಕೆರೆ, ಸಿಪಿ ಬಜಾರ್ ಮಾರ್ಗವಾಗಿ ಮಾರಿಕಾಂಬಾ ದೇವಸ್ಥಾನದಲ್ಲಿ ಸಂಪನ್ನಗೊಳ್ಳಲಿದೆ. ಮೆರವಣಿಗೆಯ ಉದ್ದಕ್ಕೂ ಮಹಿಳೆಯರ ಪೂರ್ಣಕುಂಭ ಸ್ವಾಗತ ಹಾಗೂ ಕೇಸರಿ ಧ್ವಜಗಳ ಹಾರಾಟ ಪ್ರಮುಖ ಆಕರ್ಷಣೆಯಾಗಲಿದೆ. ಆಟೋ ಚಾಲಕರಿಗೆ 500 ಧ್ವಜಗಳನ್ನು ನೀಡಲಾಗುತ್ತಿದ್ದು, ಸಾರ್ವಜನಿಕರಿಗಾಗಿ ನಿಗದಿತ ದರದಲ್ಲಿ ಧ್ವಜಗಳು ಲಭ್ಯವಿರಲಿವೆ ಎಂದರು.

ಮಾ. 19ರ ಸಂಜೆ 5.30ಕ್ಕೆ ವಿಕಾಸಾಶ್ರಮ ಮೈದಾನದಲ್ಲಿ ಸಭಾ ಕಾರ್ಯಕ್ರಮ ಜರುಗಲಿದೆ. ಸ್ವರ್ಣವಲ್ಲೀಯ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಬಣ್ಣದಮಠದ ಶ್ರೀ ಶಿವಲಿಂಗ ಸ್ವಾಮೀಜಿ ಹಾಗೂ ಜೈನಮಠದ ಶ್ರೀ ಭಟ್ಟಾಕಲಂಕ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಂಗಳೂರಿನ ಗಜಾನನ ಪೈ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು.

ಸಮಿತಿ ಸಂಚಾಲಕ ಕೃಷ್ಣ ಎಸಳೆ, ಸಹ ಸಂಚಾಲಕ ಸುರೇಶ ಶೆಟ್ಟಿ, ಉಪಾಧ್ಯಕ್ಷ ಚಂದ್ರು ಎಸಳೆ, ಪ್ರಧಾನ ಕಾರ್ಯದರ್ಶಿ ಉಪೇಂದ್ರ ಮೇಸ್ತ ಸೇರಿದಂತೆ ಮಹಿಳಾ ಸಮಿತಿ ಅಧ್ಯಕ್ಷೆ ರಾಧಿಕಾ ನಾಯ್ಕ ಹಾಗೂ ಇತರ ಪ್ರಮುಖರು ಉಪಸ್ಥಿತರಿದ್ದರು.



ಮಾರ್ಚ್ 16ರಂದು ಹಳಿಯಾಳ ಬಂದ್‌ಗೆ ಕರೆ



ಹಳಿಯಾಳ: ಕಾಳಿ ನದಿಯಿಂದ ಕೆರೆ ತುಂಬಿಸುವ ಯೋಜನೆ ಆಮೆಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ ಮಾರ್ಚ್ 16ರಂದು ಸಹಸ್ರಾರು ಸಂಖ್ಯೆಯಲ್ಲಿ ರೈತರಿಂದ ಹಳಿಯಾಳ ಬಂದ್‌ಗೆ ಕಬ್ಬು ಬೆಳೆಗಾರರ ಹಿತಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಕರೆ ನೀಡಿದ್ದಾರೆ.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಳಿ ನದಿಯಿಂದ ಕೆರೆ ತುಂಬಿಸುವ ಯೋಜನೆ ನಿಜವಾದ ಬಜೆಟ್‌ಗಿಂತ ಹೆಚ್ಚಿನ ಅನುದಾನ ನುಂಗಿ ನೀರು ಕುಡಿದಿದೆ. ಆ ಕಾರಣದಿಂದಾಗಿ ಯೋಜನೆ ಜಾರಿಯಲ್ಲಿ ವಿಳಂಬವಾಗುತ್ತಿದೆ. ರೈತಾಪಿ ಜನತೆ ನೀರಿಗಾಗಿ ಹಪ ಹಪಿಸುವಂತಾಗಿದ್ದು, ಇದುವರೆಗೆ ನೀರು ಹರಿಸದೇ ಇರುವ ಕಾರಣ ಮಾರ್ಚ್ 16ರಂದು ಹಳಿಯಾಳ ಬಂದ್‌ಗೆ ಕರೆ ನೀಡಲಾಗಿದೆ ಎಂದರು.

166 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥ

ಅಂಕೋಲಾ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ನಿರ್ದೇಶನದಂತೆ ತಾಲೂಕು ಕಾನೂನು ಸೇವಾ ಸಮಿತಿಯ ವತಿಯಿಂದ ತಾಲೂಕಿನ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮದಲ್ಲಿ 166 ವ್ಯಾಜ್ಯ ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡವು.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಪೀಠದಲ್ಲಿ ತೆಗೆದುಕೊಂಡ 103 ಪ್ರಕರಣಗಳಲ್ಲಿ 55 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಕಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಪೀಠದಲ್ಲಿ ತೆಗೆದುಕೊಂಡ 77 ಪ್ರಕರಣಗಳಲ್ಲಿ 58 ಪ್ರಕರಣಗಳನ್ನು ರಾಜಿ ಸಂಧಾನ ಮಾಡಲಾಗಿದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಪೀಠದಲ್ಲಿ ತೆಗೆದುಕೊಂಡ 74 ಪ್ರಕರಣಗಳಲ್ಲಿ 53 ಪ್ರಕರಣಗಳು ರಾಜಿ ಮೂಲಕ ಇತ್ಯರ್ಥಗೊಂಡಿವೆ.ವ್ಯಾಜ್ಯ ಪ್ರಕರಣಗಳಲಿಂದ ಸುಮಾರು 2.17 ಕೋಟಿ ರೂಪಾಯಿ ಇತ್ಯರ್ಥಗೊಂಡಿದೆ.ವ್ಯಾಜ್ಯ ಪೂರ್ವ 22 ಪ್ರಕರಣಗಳನ್ನು ಸಹ ಲೋಕ ಅದಾಲತ್ ಮೂಲಕ ರಾಜಿ ಮಾಡಲಾಗಿದ್ದು ಸುಮಾರು3.16 ಲಕ್ಷ ರೂಪಾಯಿ ಇತ್ಯರ್ಥಗೊಂಡಿದೆ.



ವೈವಾಹಿಕ ಬಿಕ್ಕಟ್ಟಿನ ಪ್ರಕರಣವೊಂದು ಲೋಕ ಅದಾಲತ್‌ನಲ್ಲಿ ಸಂಧಾನ ಮಾಡುವ ಮೂಲಕ ಬೇರೆಯಾಗಿದ್ದ ದಂಪತಿ ನ್ಯಾಯಾಲಯದಲ್ಲಿ ಪರಸ್ಪರ ಹಾರ ಬದಲಾಯಿಸಿ ಸಿಹಿ ಹಂಚಿ ಒಂದಾಗಿ ಬದುಕುವ ನಿರ್ಧಾರ ಮಾಡಿದರು.ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶೆ ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಪ್ರಿಯಾ ಜೋಗಳೆಕರ್, ವಕೀಲರ ಸಂಘದ ಅಧ್ಯಕ್ಷೆ ಪ್ರತಿಭಾ ನಾಯ್ಕ, ಉಪ ತಹಶೀಲ್ದಾರ ಗಿರೀಶ ಜಾಂಬಾವಳಿಕರ್, ಸಂಧಾನಕಾರ ವಕೀಲ ಆಕಾಶ ನಾರ್ವೇಕರ, ವಕೀಲ ವಿನಾಯಕ ನಾಯ್ಕ ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು, ಸದಸ್ಯರು, ಕಾನೂನು ಸೇವಾ ಸಮಿತಿಯ ಸಿಬ್ಬಂದಿ ಉಪಸ್ಥಿತರಿದ್ದರು.

ಲೋಕ ಅದಾಲತ್ : 280 ಪ್ರಕರಣ ಇತ್ಯರ್ಥ

ಹೊನ್ನಾವರ: ನ್ಯಾಯಾಲಯ ಸಂಕೀರ್ಣದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ಕ್ರಿಮಿನಲ್ ಪ್ರಕರಣಗಳು, ಸಿವಿಲ್ ಪ್ರಕರಣಗಳು, ಮೋಟಾರ ಅಪಘಾತ ಪರಿಹಾರ ವಿಮಾ ಪ್ರಕರಣಗಳು ರಾಜಿ ಸಂದಾನದ ಮೂಲಕ ಇತ್ಯರ್ಥಗೊಂಡವು. ಹೊನ್ನಾವರ ಸಿವಿಲ್ ಜಡ್ಜ ಹಿರಿಯ ವಿಭಾಗ ಮತ್ತು ಎಮ್.ಎ.ಸಿ.ಟಿ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣಗಳು 39, ಮೋಟಾರ ಅಪಘಾತಪರಿಹಾರ ಪ್ರಕರಣಗಳು 2, ವಾಂಟಣಿ ದಾವೆ 1, ಅಮಲ್ಜಾರಿ ಪ್ರಕರಣಗಳು 8, ಒಟ್ಟೂ 50 ಪ್ರಕರಣಗಳು ಇತ್ಯರ್ಥಗೊಂಡವು. ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಸಿ. ಚಂದ್ರಶೇಖರ, ಸಂದಾನದಾರರಾಗಿ ವಿ.ಎಮ್. ಭಂಡಾರಿ ಉಪಸ್ಥಿತರಿದ್ದರು. ಹೊನ್ನಾವರ ಹೆಚ್ಚುವರಿ ಜೆಎಮ್‌ಎಫ್‌ಸಿ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ 143 ಪ್ರಕರಣಗಳು ರಾಜಿ ಮೂಲಕ ಪ್ರಕರಣಗೊಂಡವು, 26 ಚೆಕ್ ಬೌನ್ಸ್ ಪ್ರಕರಣಗಳು, 3 ವಾಂಟಣಿ ದಾವೆಗಳು, 23 ಅಮಲ್ಜಾರಿ ಪ್ರಕರಣಗಳು, 91 ಲಘು ಕ್ರಿಮಿನಲ್ ಪ್ರಕರಣಗಳು ನಿಖಾಲಿಗೊಂಡವು. ಹೊನ್ನಾವರ ಪ್ರಿನ್ಸಿಪಲ್ ಜೆ. ಎಮ್.ಎಫ್. ಸಿ ನ್ಯಾಯಾಲಯಕ್ಕೆ ಸಂಬಂಧಪಟ್ಟ 280 ಪ್ರಕರಣಗಳು ಇತ್ಯರ್ಥಗೊಂಡವು, ಅವುಗಳಲ್ಲಿ 48 ಚೆಕ್ ಬೌನ್ಸ ಪ್ರಕರಣಗಳು, 1 ಕ್ರಿಮಿನಲ್ ಪ್ರಕರಣಗಳು, 3 ಬ್ಯಾಂಕ ಹಣಕಾಸು ಪ್ರಕರಣಗಳು 202 ಲಘು ವ್ಯಾಜ್ಯ ಪ್ರಕರಣಗಳು ಇತ್ಯರ್ಥಗೊಂಡವು. ಜೆಎಮ್‌ಎಫ್‌ಸಿ ನ್ಯಾಯಾಧೀಶ ಅನಿಲ್ ಜೊನ್ ಸಿಕ್ವೇರಾ, ಸಂದಾನಕಾರರಾಗಿ ಎಮಆಯ್.ಹೆಗಡೆ, ಉಪಸ್ಥಿತರಿದ್ದರು. ಸರ್ಕಾರಿ ಅಭಿಯೋಜಕಿಯರಾದ ಸಂಪದಾ ಗುನಗಾ, ಪೂರ್ಣಿಮಾ ನಾಯ್ಕ ಉಪಸ್ಥಿತರಿದ್ದರು.



ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ:ಡಾ.ಕೆ.ವಿ. ಶಿವರಾಮು

ಸಿದ್ದಾಪುರ: ಕೇವಲ ಪರೀಕ್ಷೆಗಳಲ್ಲಿ ಅಂಕ ಪಡೆಯುವುದಷ್ಟೇ ಮುಖ್ಯವಲ್ಲ, ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಕೂಡ ಅಷ್ಟೇ ಮುಖ್ಯ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಸಹ ಮಹತ್ವ ನೀಡಬೇಕಾಗುತ್ತದೆ. ಕ್ರೀಡೆಗಳು ಸೃಜನಶೀಲತೆ ಹೆಚ್ಚಿಸುವುದರ ಮೂಲಕ ಸಂತೋಷವನ್ನು ವೃದ್ಧಿಸುತ್ತದೆ ಎಂದು ಶಿರಸಿ ಗಣೇಶ ನೇತ್ರಾಲಯದ ಕಣ್ಣಿನ ತಜ್ಞ ಡಾ. ಕೆ.ವಿ.ಶಿವರಾಮು ಅವರು ಹೇಳಿದರು.

ಪಟ್ಟಣದ ಸಿದ್ಧಿವಿನಾಯಕ ಪ್ರೌಢಶಾಲಾ ಆವರಣದಲ್ಲಿ ಅಂತಾರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್, ಸಿದ್ದಾಪುರ ನ್ಯಾಚುರೋಪತಿ ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಎಮ್.ಎಮ್.ಜೋಶಿ ಗಣೇಶ ನೇತ್ರಾಲಯ ಸಹಯೋಗದೊಂದಿಗೆ ಹಮ್ಮಿಕೊಂಡ ಥ್ರೋಬಾಲ್ ಮೂಲಕ ರಿಫ್ಲೆಕ್ಸಾಲಜಿ ಮತ್ತು ದೈಹಿಕ ಚಟುವಟಿಕೆಗಳ ಪರಿಣಾಮ–ಕಣ್ಣಿನ ಆರೋಗ್ಯ ನಿರ್ವಹಣೆ, ಶೈಕ್ಷಣಿಕ ಸಾಧನೆ ಹಾಗೂ ದೈಹಿಕ ಆರೋಗ್ಯದ ಮೇಲೆ ಅದರ ಪ್ರಭಾವದ ಕುರಿತಾದ ಅಧ್ಯಯನದ ಸಮಾರೋಪಸಮಾರಂಭವನ್ನುಶನಿವಾರಉದ್ಘಾಟಿಸಿಅವರುಮಾತನಾಡಿದರು.ನಾವು ಆರೋಗ್ಯವಾಗಿದ್ದರೆ ಏನನ್ನಾದರೂ ಸಾಧಿಸಬಹುದು. ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಮತೋಲನ ಇದ್ದರೆ ಮಾತ್ರ ಆರೋಗ್ಯವಂತ ಎನಿಸಿಕೊಳ್ಳುತ್ತಾನೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ಮಾತನಾಡಿದರು.



ಅತಿಥಿಗಳಾಗಿದ್ದ ಬೆಂಗಳೂರು ಆಕಾಶವಾಣಿ ಸಹಾಯಕ ನಿರ್ದೇಶಕಿ ನೂತನಾ ದೋಶೆಟ್ಟಿ, ಸಿದ್ದಾಪುರ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯದಪ್ರಾಂಶುಪಾಲರಾದಡಾ.ವಾಣಿಜೀರಗಲ್‌ಮಾತನಾಡಿದರು. ಪಟ್ಟಣದ ಸಿದ್ಧಿವಿನಾಯಕ ಬಾಲಕರ ಪ್ರೌಢಶಾಲೆಯ ಮುಖ್ಯಾಧ್ಯಾಪಕ ಅರುಣ ಭಾಗವತ, ಎ.ನಾಗರಾಜ ದೋಶೆಟ್ಟಿ ಇದ್ದರು. ಬಾಲಕಿಯರ ಪ್ರೌಢಶಾಲೆಯ ಮುಖ್ಯಾಧ್ಯಾಪಕ ರಾಜಾರಾಮ ದೀಕ್ಷಿತ ಅಧ್ಯಕ್ಷತೆ ವಹಿಸಿದ್ದರು. ಅಂತಾರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್ ಸಹಾಯಕ ಕಾರ್ಯದರ್ಶಿ ಸಂಪೂರ್ಣಾ ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಶಾಲೆಯ ದೈಹಿಕ ಶಿಕ್ಷಕ ಉಮೇಶ ಸ್ವಾಗತಿಸಿದರು. ಶಿಕ್ಷಕಿ ರಜನಿ ಹೆಗಡೆ ನಿರ್ವಹಿಸಿದರು.

ಮಹಿಳಾ ಪತಂಜಲಿಯ ಪದಾಧಿಕಾರಿಗಳ ಆಯ್ಕೆ

ಅಂಕೋಲಾ: ಮಹಿಳಾ ಪತಂಜಲಿ ಯೋಗ ಸಮಿತಿಯ ಅಂಕೋಲಾ ಶಾಖೆಗೆ ಹೊಸ ಕಾರ್ಯಕಾರಿ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಪತಂಜಲಿ ಯೋಗ ಸಮೂಹದ ಅಂಕೋಲಾ ತಾಲೂಕಾಪ್ರಮುಖರಾದ ವಿನಾಯಕ ಗುಡಿಗಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರುಪಮಾ ಶ್ಯಾಮಸುಂದರ ಅವರನ್ನು ನೂತನ ಅಧ್ಯಕ್ಷೆ , ಪ್ರಭಾರಿಗಳಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಕಾರ್ಯದರ್ಶಿ/ ಸಂಘಟನಾ ಮಂತ್ರಿಯಾಗಿ ಸಹನಾ ತೇಲಂಗ್, ಸಹ ಕಾರ್ಯದರ್ಶಿಗಳಾಗಿ ನಾಗವೇಣಿ ನಾಯ್ಕ, ಯೋಗಿತಾ ಶೆಟ್ಟಿ, ಖಜಾಂಚಿಗಳಾಗಿ ಲತಾ ನಾಯ್ಕ, ಮಮತಾ ನಾಯ್ಕ, ಸಂಧ್ಯಾ ಕಾಕರಮಠ, ಸೋಶಿಯಲ್ ಮೀಡಿಯಾ ಪ್ರಭಾರಿಯಾಗಿ ರಶ್ಮಿ ನಾಯಕ, ಯುವ ಪ್ರಭಾರಿಯಾಗಿ ನಾಗರತ್ನಾ ನಾಯ್ಕ ಅವರನ್ನು ಹಾಗೂ ಗೌರವ ಸಲಹೆಗಾರರಾಗಿ ಜಯಲಕ್ಷ್ಮಿ ಕಾಮತ, ಆಶಾಲತಾ ವೆರ್ಣೇಕರ್ ಅವರುಗಳು ಸಹ ಅವಿರೋಧವಾಗಿ ಆಯ್ಕೆಯಾದರು.

ಸಭೆಯಲ್ಲಿ ಮಹಿಳಾ ಪತಂಜಲಿ ಯೋಗ ಸಮಿತಿಯ ನಿಕಟ ಪೂರ್ವ ಪ್ರಭಾರಿಗಳಾದ ಜೋತ್ಸ್ನಾ ನಾರ್ವೇಕರ್, ಕಿಸಾನ್ ಸಮಿತಿಯ ಪ್ರಭಾರಿಗಳಾದ ಅಭಯ ಮರಬಳ್ಳಿ, ಭಾರತ ಸ್ವಾಭಿಮಾನ ಟ್ರಸ್ಟ್‌ನ ಪ್ರಭಾರಿಗಳಾದ ಡಾ. ವಿಜಯದೀಪ, ಜಿಲ್ಲಾ ಸೋಶಿಯಲ್ ಮೀಡಿಯಾ ಪ್ರಭಾರಿ ಸ್ಮಿತಾ ರಾಯಚೂರು, ಜಿಲ್ಲಾ ಸಂವಹನ ಪ್ರಭಾರಿ ರಾಧಿಕಾ ಆಚಾರಿ, ಸಮಿತಿಯ ಪ್ರಮುಖರಾದ ರಾಮಾ ನಾಯ್ಕ ಮತ್ತಿತರು ಉಪಸ್ಥಿತರಿದ್ದರು.



ಸಚಿವ ವೈದ್ಯರ ಮೇಲಿನ ಆರೋಪ ಖಂಡನೀಯ

ಅಂಕೋಲಾ: ಜಿಲ್ಲೆಯಲ್ಲಿ ಶರಾವತಿ ಪಂಪ್ ಸ್ಟೋರೇಜ್, ಬೇಡ್ತಿ ನದಿ ತಿರುವು ವಿರೋಧಿ ಹೋರಾಟಗಳು ಸಾರ್ವಜನಿಕ ಹಿತದೃಷ್ಟಿಯಿಂದ, ಪರಿಸರದ ಉಳಿವಿಗಾಗಿ ಮಠಾಧೀಶರುಗಳ ನೇತೃತ್ವದಲ್ಲಿ ನಡೆಯುತ್ತಿದೆ ಇದು ಯಾವುದೇ ಪಕ್ಷದ ಹೋರಾಟವಲ್ಲ ಎಂಬುದನ್ನು ಬಿಜೆಪಿ ನಾಯಕರು ಅರಿಯಬೇಕಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಪರಿಸರ ಮತ್ತು ಜನ ಜೀವನದ ಮೇಲೆ ಪರಿಣಾಮ ಬೀರುವ ಯಾವುದೇ ಯೋಜನೆಗಳಿಗೆ ಕಾಂಗ್ರೆಸ್ ಪಕ್ಷ ಬೆಂಬಲ ನೀಡುವುದಿಲ್ಲ ಈ ಎಲ್ಲಾ ಯೋಜನೆಗಳು ಬಿಜೆಪಿ ಅಧಿಕಾರಾವಧಿಯ ಕೊಡುಗೆಗಳಾಗಿವೆ ಎಂದು ಹೇಳಿರುವ ಅವರು ಬಿಜೆಪಿಯವರು ಜಿಲ್ಲೆಯಲ್ಲಿ ರಾಜಕೀಯ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಹತಾಶೆಯಿಂದ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರ ಮೇಲೆ ಷಡ್ಯಂತ್ರ ರೂಪಿಸಿ ಅಪಪ್ರಚಾರ ಮಾಡುತ್ತಿದ್ದಾರೆ ಮಾಸ್ತಪ್ಪ ನಾಯ್ಕ ಅವರು ಸಚಿವರ ಕುರಿತಂತೆ ನೀಡಿರುವ ಹೇಳಿಕೆ ಅಪಪ್ರಚಾರದ ಭಾಗವಾಗಿದೆ ಎಂದು ಸಾಯಿ ಗಾಂವಕರ ತಿಳಿಸಿದ್ದಾರೆ.ಉಪ ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಶರಾವತಿ ಪಂಪ್ ಸ್ಟೋರೆಜ್ ಜಾರಿ ಮಾಡುವುದಾಗಿ ಎಲ್ಲಿಯೂ ಹೇಳಿಲ್ಲ ಈ ಯೋಜನೆ ಬಿಜೆಪಿ ಅವಧಿಯಲ್ಲಿ ಕ್ಯಾಬಿನೇಟನಲ್ಲಿ ಚರ್ಚೆಯಾಗಿ ಅನುಮೋದನೆ ಆಗಿರುವುದಾಗಿ ಬಿಜೆಪಿಯ ಮಾಜಿ ಶಾಸಕ ಸುನೀಲ ನಾಯ್ಕ ಅವರೇ ಒಪ್ಪಿಕೊಂಡಿದ್ದಾರೆ ಹೀಗಿರುವಾಗ ವಿನಾಕಾರಣ ಉಸ್ತುವಾರಿ ಸಚಿವ ಮಂಕಾಳ ವೈದ್ಯರ ಮೇಲೆ ಆರೋಪ ಸಲ್ಲ ಎಂದು ಸಾಯಿ ಗಾಂವಕರ ತಿಳಿಸಿದ್ದಾರೆ.ಪಂಪ್ ಸ್ಟೋರೆಜ್ ಕುರಿತಂತೆ ಉಪ ಮುಖ್ಯಮಂತ್ರಿಯಾಗಳು ಸಕಾರಾತ್ಮಕ ಅಭಿಪ್ರಾಯ ಹೊಂದಿದ್ದರೂ ಜಿಲ್ಲೆಯ ಮಂತ್ರಿಗಳು ಮತ್ತು ಶಾಸಕರ ನಿಯೋಗ ತೆರಳಿ ಅವರಿಗೆ ಸಾಧಕ ಭಾದಕಗಳ ಮನವರಿಕೆ ಮಾಡಲಾಗಿದ್ದು, ದೆಹಲಿಯ ವರೆಗೆ ತೆರಳಿ ಯೋಜನೆಗೆ ವಿರೋಧ ವ್ಯಕ್ತಪಡಿಸಲಾಗಿದೆ. ಹೀಗಿರುವಾಗ ಸಚಿವ ಮಂಕಾಳ ವೈದ್ಯರ ಮೇಲೆ ಬಿಜೆಪಿಯುವರ ಆರೋಪ ಖಂಡನೀಯ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ ತಿಳಿಸಿದ್ದಾರೆ.



ಇತಿಹಾಸ ವಿಜ್ಞಾನ, ತಂತ್ರಜ್ಞಾನದ ಮೂಲಬೇರು: ಹೆಗಡೆ

ಯಲ್ಲಾಪುರ : ಇತಿಹಾಸ ಎಂಬುದು ಕೇವಲ ಗತಕಾಲದ ಘಟನೆಗಳ ಸಂಕಲನವಲ್ಲ, ಅದು ಇಂದಿನ ಎಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಬೇರು ಎಂದು ದೆಹಲಿಯ ನ್ಯಾಷನಲ್ ಫೆಲೋಶಿಪ್ ಸಮಿತಿ ಸದಸ್ಯ ಇತಿಹಾಸ ತಜ್ಞ ಡಾ. ಲಕ್ಷ್ಮೀಶ ಹೆಗಡೆ ಸೋಂದಾ ಹೇಳಿದರು.

ಅವರು ಶನಿವಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪರಂಪರಾ ಕೂಟ ಹಾಗೂ ಮಾತೃಭೂಮಿ ಸೇವಾ ಪ್ರತಿಷ್ಠಾನ ,ಯಲ್ಲಾಪುರ ಇವುಗಳ ಸಂಯುಕ್ತ ಆಶ್ರಯದಲ್ಲಿ ಸೋಂದಾ ಇತಿಹಾಸ ,ಸಂಸ್ಕೃತಿ ಮತ್ತು ಪರಂಪರೆಯ ಹೆಜ್ಜೆ ಗುರುತುಗಳು ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿ, ಮಾನವನ ದೈನಂದಿನ ಜೀವನದಲ್ಲಿ ಇತಿಹಾಸದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಸೋಂದಾ (ಸ್ವಾದಿ) ಅರಸರ ಇತಿಹಾಸವು ಕೇವಲ ರಾಜಕೀಯ ಜಯಗಳಷ್ಟೇ ಅಲ್ಲದೆ, ಧರ್ಮ ಮತ್ತು ಸಂಸ್ಕೃತಿಯ ಕೇಂದ್ರವಾಗಿದೆ. ಸೋಂದಾ ಇಂದು ಧಾರ್ಮಿಕ ಪವಿತ್ರತೆಯ ತಾಣವಾಗಿರಲು ಅಂದಿನ ಅರಸರ ದೂರದೃಷ್ಟಿಯೇ ಕಾರಣ. ಸೋಂದಾ ಕೇವಲ ಒಂದು ರಾಜಧಾನಿಯಾಗಿರದೆ, ನಾಲ್ಕು ಪ್ರಮುಖ ಮಠಗಳ ಅಸ್ತಿತ್ವದ ಮೂಲಕ ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಗುರುತಿಸಿಕೊಂಡಿದೆ. ಸೋದೆಯ ಚಾರಿತ್ರಿಕ ವ್ಯಕ್ತಿತ್ವಗಳಾದ ಬೆಳವಡಿ ಮಲ್ಲಮ್ಮ, ಹೆಂಜೆ ನಾಯಕರ ಕುರಿತು ತಿಳಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಕಾಲೇಜಿನ ಪ್ರಾಂಶುಪಾಲ ಡಾ.ಆರ್.ಡಿ. ಜನಾರ್ಧನ್ ಮಾತನಾಡಿ, ಪ್ರತಿಯೊಬ್ಬರಿಗೂ ಇತಿಹಾಸ ಅಧ್ಯಯನ ಅತ್ಯಗತ್ಯ. ಅಂದು ರಾಜರುಗಳು ನಿರ್ಮಿಸಿದ ಸ್ಮಾರಕಗಳು ಇಂದು ಅವರ ಕೊಡುಗೆಗಳನ್ನು ನಮಗೆ ತಿಳಿಸುತ್ತವೆ ಎಂದರು. ಮಾತೃಭೂಮಿ ಸೇವಾ ಪ್ರತಿಷ್ಠಾನ ಅಧ್ಯಕ್ಷ ಶ್ರೀರಂಗ ಕಟ್ಟಿ ಮಾತನಾಡಿ, ವಿದ್ಯಾರ್ಥಿಗಳಿಗೆ ನಮ್ಮ ಸುತ್ತಮುತ್ತಲಿನ ಸ್ಥಳದ ಚಾರಿತ್ರಿಕ ಹಿನ್ನೆಲೆಯನ್ನು ಅರಿಯುವ ಕುತೂಹಲ ಇರಬೇಕು ಎಂದರು. ಐಕ್ಯೂಎಸಿ ಸಂಚಾಲಕ ಡಾ.ಓಂಪ್ರಕಾಶ್ ನಾಯ್ಕ, ಪ್ರತಿಷ್ಠಾನದ ಕಾರ್ಯದರ್ಶಿ ಕೃಷ್ಣಮೂರ್ತಿ ಭಟ್ ಹಾಗೂ ಸಂಚಾಲಕ ಸತೀಶ್ ಹೆಬ್ಬಾರ ಉಪಸ್ಥಿತರಿದ್ದರು. ಕಾಲೇಜಿನ ಪರವಾಗಿ ಡಾ.ಲಕ್ಷ್ಮೀಶ ಹೆಗಡೆ ಸೋಂದಾ ಅವರನ್ನು ಗೌರವಿಸಲಾಯಿತು. ಇತಿಹಾಸ ವಿಭಾಗದ ಮುಖ್ಯಸ್ಥ ಶಾಂತೇರಿ ದಾಮೋದರ ಪೈ ಪ್ರಸ್ತಾವಿಕ ಮಾತನಾಡಿದರು.

ಲಕ್ಷ್ಮಿ ಪಾಂಡ್ರಮೀಸೆ ಪ್ರಾರ್ಥಿಸಿದರು. ದಿವ್ಯ ಗೌಡ ಸ್ವಾಗತಿಸಿದರು. ಕಾವ್ಯ ಕೈಟ್ಕರ ವಂದಿಸಿದರು. ಆಶಾ ನಾಯ್ಕ ನಿರೂಪಿಸಿದರು.



ಕಿರುಸುದ್ದಿ

ಪೂರ್ವಭಾವಿ ಸಭೆ

ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ದೇವರ ದಾಸೀಮಯ್ಯ ಜಯಂತಿ ಕುರಿತು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಅಧ್ಯಕ್ಷತೆಯಲ್ಲಿ ಪೂರ್ವಸಿದ್ಧತಾ ಸಭೆ ಜರುಗಿತು.

ದೇವರ ದಾಸಿಮಯ್ಯ ಜಯಂತಿಯನ್ನು ಮಾ.23 ರಂದು ಬೆಟಗೇರಿಯ ದೇವರ ದಾಸೀಮಯ್ಯ ವೃತ್ತದಲ್ಲಿ ವ್ಯವಸ್ಥಿತವಾಗಿ ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಮಾತನಾಡಿ, ದೇವರ ದಾಸೀಮಯ್ಯ ಜಯಂತಿಯನ್ನು ತಾಲೂಕು ಮಟ್ಟದಲ್ಲಿ ಆಚರಿಸಲು ಕ್ರಮ ವಹಿಸಬೇಕು. ಜಯಂತಿ ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪದವಿಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ, ಕ್ರೀಡೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ, ಸಮಾಜದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ನಡೆಸುವ ಕಾರ್ಯಕ್ರಮ ಜರುಗಲಿದೆ. ದೇವರ ದಾಸಿಮಯ್ಯ ಜಯಂತಿ ಕುರಿತು ಅಧ್ಯಯನ ಮಾಡಿದವರಿಂದ ಉಪನ್ಯಾಸ ಕಾರ್ಯಕ್ರಮ ಜರುಗಲಿದೆ ಎಂದರು. ಸಮಾಜದ ಹಿರಿಯರು, ಗಣ್ಯರು, ಮುಖಂಡರು, ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ.ತುಂಬರಮಟ್ಟಿ ಇತರರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಸ್ವಾಗತಿಸಿದರು.

ದತ್ತಿ ಉಪನ್ಯಾಸ ಇಂದು

ಗದಗ: ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಮಾ.15 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1689ನೇ ಶರಣ ಸಂಗಮದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು, ತಾಲೂಕು ಕದಳಿ ಮಹಿಳಾ ವೇದಿಕೆ, ಬಸವದಳದ ಸಂಯುಕ್ತಾಶ್ರಯದಲ್ಲಿ ''ನಿರ್ಭಿತರಾಣಿ ಅಬ್ಬಕ್ಕ'' ಹಾಗೂ ''ಲಿಂ.ಡಾ.ಮಾತೆ ಮಹಾದೇವಿ'' ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಎಂ.ಬಿ.ಲಿಂಗದಾಳ ವಹಿಸುವರು. ಉಪನ್ಯಾಸಕಿ ಗಿರಿಜಕ್ಕ ಧರ್ಮರಡ್ಡಿ, ಲಿಂ.ಡಾ. ಮಾತೆ ಮಹಾದೇವಿ ಕುರಿತು ಹಾಗೂ ಸುಧಾ ಹುಚ್ಚಣ್ಣವರ ಉಪನ್ಯಾಸ ನೀಡುವರು. ಕೆ.ಎ.ಬಳಿಗೇರ, ಎಂ.ಬಸವರಾಜ, ಅರವಿಂದ ಕೂರಾ ಆಗಮಿಸುವರು ಎಂದು ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಸ್ಮಾರ್ಟ್ ಕ್ಲಾಸ್‌ಗಳಿಂದ ಕಲಿಕೆಗೆ ಉತ್ತಮ ವಾತಾವರಣ



ಲಕ್ಷ್ಮೇಶ್ವರ: ಸಮೀಪದ ಬಟ್ಟೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಉದ್ಘಾಟನೆ ಹಾಗೂ ಏಳನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭ ಮತ್ತು ಮಹಾ ಸರಸ್ವತಿ ಪೂಜಾ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಎಸ್.ಡಿ.ಎಂ. ಸಿ. ಅಧ್ಯಕ್ಷ ರಾಜೇಶಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು.

ಶಿರಹಟ್ಟಿ ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿಯ ಬಿ.ಆರ್.ಪಿ. ಬಸವರಾಜ ಯರಗುಪ್ಪಿ ಸ್ಮಾರ್ಟ್ ಕ್ಲಾಸ್ ಉದ್ಘಾಟಿಸಿ ಮಾತನಾಡಿ, ಸರ್ಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಎನ್ನದಂತೆ ಇಂದು ಸ್ಮಾರ್ಟ್ ಕ್ಲಾಸ್ ಗಳ ಮೂಲಕ ಕಲಿಕೆಗೆ ಉತ್ತಮ ವಾತಾವರಣ ರೂಪಿಸುತ್ತಿವೆ ಎಂದರು.

ಬಟ್ಟೂರ ಸಿ.ಆರ್.ಪಿ. ನವೀನ ಅಂಗಡಿ ಮಾತನಾಡಿ, ಶಾಲಾ ವಾತಾವರಣ, ಮಕ್ಕಳ ಕಲಿಕೆ, ಈಗಿನ ಪ್ರಧಾನ ಗುರುಗಳ ಎಂ. ಎಸ್. ಕಾಳೆ ಅವರ ಕಾರ್ಯಕ್ಷಮತೆ ಮತ್ತು ಸತತ 12 ವರ್ಷಗಳು ವಿಭಾಗ ಮಟ್ಟಕ್ಕೆ ಥ್ರೋ ಬಾಲ್ ನಲ್ಲಿ ಆಯ್ಕೆ ಗೊಳ್ಳುವಲ್ಲಿನ ಶ್ರಮ ವಹಿಸಿದ್ದಾರೆ ಎಂದರು .

ಸಿ ಆರ್‌ಪಿ ಎಸ್.ಎನ್. ಸಾವಿರಕುರಿ ಮಾತನಾಡಿ, ನಾನು ಇದೇ ಶಾಲೆಯಲ್ಲಿ ಕಲಿತಿದ್ದು ಮುಂದಿನ ಶೈಕ್ಷಣಿಕ ವರ್ಷದಿಂದ ಏಳನೇ ತರಗತಿಯಲ್ಲಿ ಪ್ರಥಮ ,ದ್ವಿತೀಯ, ತೃತೀಯ ಬಂದ ಮಕ್ಕಳಿಗೆ ಬಹುಮಾನ ನೀಡುವುದಾಗಿ ತಿಳಿಸಿದರು. ಪ್ರಧಾನ ಗುರು ಎಂ. ಎಸ್.ಕಾಳೆ ದೈಹಿಕ ಶಿಕ್ಷಕರು ಥ್ರೋ ಬಾಲ್‌ನಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆಯಾದ ಮತ್ತು ಶಾಲಾ ಹಂತದಲ್ಲಿ ಬಹುಮಾನ ಗಳಿಸಿದ ಮಕ್ಕಳಿಗೆ ಬಹುಮಾನ ನೀಡುವ ಕಾರ್ಯಕ್ರಮ ನೆರವೇರಿಸಿದರು ಮತ್ತು ವಾರ್ಷಿಕ ವರದಿ ಮಂಡಿಸಿದರು. ರೇಖಾ ದಂಡಣ್ಣವರ, ಮಾರುತಿ ದೊಡಮನಿ, ಆರ್.ಪಿ.ದಂಡಣ್ಣವರ, ಎ.ಎ.ಕಪಟಕರ, ಪಿ.ಎನ್. ಹೊಳಲಾಪುರ, ವಿ.ಎನ್.ಪಿರಂಗಿ , ಎ.ಸಿ.ಹೂಗಾರ ಇದ್ದರು. ಆರ್.ಎಸ್.ಪಾಟೀಲ ನಿರೂಪಿಸಿದರು. ಕೆ.ಎನ್. ಗಾರ್ಗಿ. ಸ್ವಾಗತಿಸಿದರು. ವಿ.ಎನ್. ಪಿರಂಗಿ ವಂದಿಸಿದರು.



ಬ್ಯಾಡಗಿ: ತಾಲೂಕು ಕಾನೂನು ಸೇವೆಗಳ ಸಮಿತಿ ಬ್ಯಾಡಗಿ ಇವರ ವತಿಯಿಂದ ಬ್ಯಾಡಗಿ ತಾಲೂಕಿನ ಎರಡೂ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಲ್ಲಿ ನ್ಯಾಯಾಲಯದಲ್ಲಿ ಗುಡಪ್ಪ ಮುದಿಮಲ್ಲನವರ ಹಾಗೂ ದೀಪ ಮುದಿಮಲ್ಲನವರ, ಹನುಮಂತ ತಳವಾರ್ ಹಾಗೂ ಅಶ್ವಿನಿ ತಳವಾರ್ ಈ ಎರಡು ಜೋಡಿಗಳು ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿದ ಜೋಡಿಗಳನ್ನು ರಾಜಿ ಮಾಡಿಸಿ ಒಂದು ಮಾಡಿಸಿದರು.

ವಿವಿಧ ಕಾಮಗಾರಿ ಉದ್ಘಾಟಿಸಿದ ಶಾಸಕ

ತಡಸ: ಶಿಗ್ಗಾಂವಿ ಗ್ರಾಮಿದ ಭಾಗದ ಜನರಿಗೆ ಮೂಲಭೂತ ಸೌಕರ್ಯ ಒದಗಿಸುವುದು ಮತ್ತು ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ತಲುಪಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಶಿಗ್ಗಾಂವಿ-ಸವಣೂರ ಕ್ಷೇತ್ರದ ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಹೇಳಿದರು. ತಾಲೂಕಿನ ತಡಸ ಗ್ರಾಮದಲ್ಲಿ ಆಯೋಜಿಸಲಾಗಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಹಕ್ಕುಪತ್ರ ವಿತರಣಾ ಸಮಾರಂಭವನ್ನು ನೆರವೇರಿಸಿ ಅವರು ಮಾತನಾಡಿದರು. ಗ್ರಾಮದ ಪ್ರಗತಿಗಾಗಿ ವಿವಿಧ ಯೋಜನೆಗಳಡಿ ನಿರ್ಮಾಣಗೊಂಡಿದ್ದ ಕಟ್ಟಡಗಳನ್ನು ಶಾಸಕರು ಸಾರ್ವಜನಿಕ ಸೇವೆಗೆ ಸಮರ್ಪಿಸಿದರು. 2021-22ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಹಾಗೂ 2025-26ನೇ ಸಾಲಿನ ಎಂಜಿಎನ್ ಆರ್‌ಜಿಎ ಯೋಜನೆಯಡಿ ಸುಸಜ್ಜಿತವಾಗಿ ನಿರ್ಮಾಣಗೊಂಡ ಅಂಗನವಾಡಿ, ಕಾಲೇಜು ಶೌಚಾಲಯ: 2023-24ನೇ ಸಾಲಿನ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮತ್ತು 2025-26ನೇ ಸಾಲಿನ ನರೇಗಾ ಯೋಜನೆಯಡಿ ನಿರ್ಮಿಸಲಾದ ಕಾಲೇಜು ಶೌಚಾಲಯ, ಸಂಜೀವಿನಿ ಕಟ್ಟಡ ವಿವಿಧ ಕಟ್ಟಡಗಳ ಉದ್ಘಾಡಿಸಿದರು. ನಂತರ ಭೂ ಒಡೆತನ ಯೋಜನೆಯಡಿ ತಡಸ ಗ್ರಾಮದ ಒಟ್ಟು 240 ಅರ್ಹ ಫಲಾನುಭವಿಗಳಿಗೆ ಶಾಸಕರು ಸಾಂಕೇತಿಕವಾಗಿ ಹಕ್ಕುಪತ್ರಗಳನ್ನು ವಿತರಿಸಿದರು. ದಶಕಗಳ ಕಾಲದ ಕನಸು ನನಸಾದ ಹಿನ್ನೆಲೆಯಲ್ಲಿ ಫಲಾನುಭವಿಗಳು ಸಂತಸ ವ್ಯಕ್ತಪಡಿಸಿದರು. ಸ್ಥಳೀಯ ಡಿಕ್ಕಪ್ಪಾ ಗೊಬ್ಬುರ್, ಇಕ್ಬಾಲ್ ಬುರಾವುದೀನ, ಫರೀದ್ ಖಾನ್ ಐರಣಿ, ಈರಣ್ಣ ಗಾಣಿಗಿ ಪಿಡಿಒ ಪ್ರಕಾಶ ನಿಕ್ಕಂ ಮತ್ತು ಗ್ರಾಪಂ ಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



ತಡಸ: ತಾಲೂಕಿನ ತಡಸ ಗ್ರಾಮದಲ್ಲಿ ಆಯೋಜಿಸಲಾಗಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಹಕ್ಕುಪತ್ರ ವಿತರಣಾ ಸಮಾರಂಭವನ್ನು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಉದ್ಘಾಟಿಸಿದರು.

ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾನಗಲ್ಲ: ಇಲ್ಲಿನ ಬೈಚವಳ್ಳಿ ರಸ್ತೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ 5.15 ಕೋಟಿರೂ. ವೆಚ್ಚದಲ್ಲಿ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶನಿವಾರ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ 5.60 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಲೋನಿಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. 1.65 ಕೋಟಿ ರೂ. ವೆಚ್ಚದಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹಾನಗಲ್ಲ ನಗರದಲ್ಲಿ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸುಸಜ್ಜಿತ ಕಟ್ಟಡ ನಿರ್ಮಿಸಬೇಕು ಎನ್ನುವ ಬೇಡಿಕೆ ಈಡೇರಿಸಿ 5.15 ಕೋಟಿ ರೂ. ಅನುದಾನ ದೊರಕಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ತಾಲೂಕಿನಲ್ಲಿರುವ ವಸತಿ ನಿಲಯ ಮತ್ತು ವಸತಿ ಶಾಲೆಗಳಿಗೆ ಸೌಲಭ್ಯ ದೊರಕಿಸಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ ಎಂದು ತಿಳಿಸಿದ ಶಾಸಕ ಶ್ರೀನಿವಾಸ ಮಾನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಂಧುಗಳ ಕಲ್ಯಾಣಕ್ಕೆ ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಸಾಕಷ್ಟು ಯೋಜನೆ, ಕಾರ್ಯಕ್ರಮ ರೂಪಿಸಿ ಹೆಚ್ಚು ಹಣಕಾಸಿನ ನೆರವು ನೀಡಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಪ್ರವೇಶಿಸುವಂತೆ ಕರೆ ನೀಡಿದರು.



> **ಶಿಕ್ಷಣ ಸಮಾಜದ ಅಭಿವೃದ್ಧಿಯ ಮೂಲ ಅಸ್ತ್ರ. ವಿದ್ಯಾರ್ಥಿಗಳು ಯಾವುದೇ ಅಡಚಣೆ ಇಲ್ಲದೆ ವಿದ್ಯಾಭ್ಯಾಸ ಪೂರ್ಣಗೊಳಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಹೆಚ್ಚು ಹಣ ವ್ಯಯಿಸಿ ಮಹತ್ವದ ಯೋಜನೆ ಜಾರಿಗೆ ತಂದಿದೆ. ವಿದ್ಯಾರ್ಥಿ ವಸತಿ ನಿಲಯ ನಿರ್ಮಾಣದಿಂದ ಗ್ರಾಮೀಣ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.**
> ■ ಶ್ರೀನಿವಾಸ ಮಾನೆ, ಶಾಸಕ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಪುರಸಭೆ ಮಾಜಿ ಅಧ್ಯಕ್ಷರಾದ ಖುರ್ಷಿದ್ ಹುಲ್ಲತ್ತಿ, ಮಮತಾ ಆರೆಗೊಪ್ಪ, ಮುಖಂಡರಾದ ರವಿ ದೇಶಪಾಂಡೆ, ಬಸವರಾಜ ಡುಮ್ಮನವರ, ಉಮೇಶ ದೊಡ್ಡಮನಿ, ಮೌನೇಶ ಕಲಾಲ, ಮಾಲತೇಶ ಬ್ಯಾಗವಾದಿ, ವಿನಾಯಕ ಬಂಕನಾಳ, ಬಾಬಾಜಾನ ಕೊಂಡೆವಾಡೆ, ಸಿಕಂದರ್ ವಾಲಿಕಾರ, ಉಮೇಶ ಮಾಳಗಿ, ಡಾ.ಚನ್ನಪ್ಪ ದೊಡ್ಡಚಿಕ್ಕಣ್ಣನವರ, ಎಂ.ಎಂ.ಬಡಗಿ, ಬಸವಣ್ಣೆಪ್ಪ ವಾಲಿಕಾರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಗಂಗಮ್ಮ ಹಿರೇಮಠ ಮತ್ತಿತರರಿದ್ದರು.

ಮಹಿಳೆಯರು ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸಲಿ

ಹಾವೇರಿ: ಮಹಿಳೆಯರು ವಿವಿಧ ರಂಗದಲ್ಲಿ ಯಶಸ್ಸನ್ನುಗಳಿಸುತ್ತಿರುವುದು ನಮಗೆ ಹೆಮ್ಮೆಯಾಗಿದೆ. ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯ ಮಹಿಳೆಯರು ಸಾಮಾಜಿಕ, ರಾಜಕೀಯ ಹಾಗೂ ಯುವತಿಯರು ಕ್ರೀಡೆಗಳಲ್ಲಿ ಅತೀ ಹೆಚ್ಚು ಭಾಗವಹಿಸಿ ಜಿಲ್ಲೆಗೆ ಕೀರ್ತಿ ತರಬೇಕೆಂದು ಬಿಜೆಪಿ ಮಹಿಳಾ ಜಿಲ್ಲಾಧ್ಯಕ್ಷರಾದ ಬಸಮ್ಮ ಅಬಲೂರ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಿಳೆಯರು ಮುಂದಿನ ದಿನಮಾನಗಳಲ್ಲಿ ಯಾವುದೇ ಸರ್ಕಾರದ ಗ್ಯಾರಂಟಿಗಳಿಗೆ ಮೋಸ ಹೋಗದೆ ತಮ್ಮ ಹಕ್ಕನ್ನು ಚಲಾಯಿಸಿ ರಾಜ್ಯವನ್ನು ಮುನ್ನಡೆಸುವ ಸರ್ಕಾರವನ್ನು ಆಡಳಿತಕ್ಕೆ ತರಬೇಕೆಂದು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ರಾಜ್ಯ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ. ಶೋಭಾ ನಿಸ್ಸೀಮಗೌಡ್ರ, ಮಹಿಳೆಯರ ಸ್ಥಾನಮಾನ ಭದ್ರತೆ ಬಗ್ಗೆ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಮಹಿಳಾ ಸಬಲೀಕರಣ ಬಗ್ಗೆ ಬ್ಯಾಡಗಿಯ ನ್ಯಾಯವಾದಿ ಭಾರತಿ ಕುಲಕರ್ಣಿ ಇವರು ಮಹಿಳೆಯ ಹಕ್ಕು ಮತ್ತು ಕಾನೂನಿನ ಬಗ್ಗೆ ಮಹಿಳೆಯರಿಗೆ ಅರಿವನ್ನು ಮೂಡಿಸಿದರು ಮತ್ತು ಬದಲಾದ ಕಾನೂನಿನ ಬಗ್ಗೆಯು ಕೂಲಂಕುಷವಾಗಿ ಮಹಿಳೆಯರಿಗೆ ಎಲ್ಲ ನ್ಯಾಯಬದ್ಧ ಬೇಡಿಕೆಗಳನ್ನು ಪಡೆಯುವ ಹಕ್ಕುಗಳ ಕುರಿತು ತಿಳಿಸಿದರು.

ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಮಾಜಿ ಶಾಸಕ ಅರುಣಕುಮಾರ ಪೂಜಾರ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡೇಶ ಕಳ್ಳೇರ, ನೀಲಪ್ಪ ಚಾವಡಿ, ಜಿಲ್ಲಾ ಮಾಧ್ಯಮ ಪ್ರಮುಖ ವಿಜಯಕುಮಾರ ಚಿನ್ನಿಕಟ್ಟಿ, ಹಾವೇರಿ ಗ್ರಾಮೀಣ ಮಂಡಲ ಅಧ್ಯಕ್ಷರಾದ ಮಾರುತಿ ಗೊರವರ, ಹಿರೇಕೆರೂರ ಮಂಡಲ ಅಧ್ಯಕ್ಷರಾದ ಸಂಜೀವಯ್ಯ ಕಬ್ಬಿನ ಕಂತಿಮಠ ಉಪಸ್ಥಿತರಿದ್ದರು.

ಭಾರತಿ ಯಾವಗಲ್ ವಂದೇ ಮಾತರಂ ಗೀತೆಯನ್ನು ಹಾಡಿದರು. ಕಾರ್ಯಕ್ರಮದಲ್ಲಿ 500 ಹೆಚ್ಚು ಜನ ಮಹಿಳೆಯರು ಪಾಲ್ಗೊಂಡಿದಿದ್ದು ವಿಶೇಷವಾಗಿತ್ತು, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ವಿದ್ಯಾ ಶೆಟ್ಟಿ ನಿರೂಪಿಸಿದರು. ಲತಾ ಬಡ್ನಿಮಠ ಎಲ್ಲರನ್ನು ಸ್ವಾಗತಿಸಿದರು. ಹಾವೇರಿ ನಗರ ಮಂಡಲ ಅಧ್ಯಕ್ಷರಾದ ರೋಹಿಣಿ ಪಾಟೀಲ ವಂದಿಸಿದರು.



ಸಂಗೀತ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿ ವತಿಯಿಂದ ಮಾ.15 ರಂದು ಸಂಜೆ 6.30 ಕ್ಕೆ ಶ್ರೀಮಠದ ಕೈಲಾಸ ಮಂಟಪದಲ್ಲಿ ಸಂಗೀಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾಲಕಾಲೇಶ್ವರ ಕಲಾ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಭಾಗ್ಯಶ್ರೀ ಹೂಗಾರ, ಖುಷಿ ದೇವೇಂದ್ರ, ಕಿರಣಗೌಡ ತುಪ್ಪದಗೌಡರ ಅವರಿಂದ ಭಕ್ತಿಗೀತೆಗಳು, ಜಾನಪದ ಗೀತೆಗಳು, ದಾಸರ ಪದಗಳ ಸಂಗೀತ ಕಾರ್ಯಕ್ರಮ ಜರುಗಲಿದೆ ಎಂದು ಶ್ರೀಮಠ ಚೇರಮನ್ ಚನ್ನವೀರ ಮುಂಗುರವಾಡಿ ಪ್ರಕಟಣೆಗೆ ತಿಳಿಸಿದ್ದಾರೆ.

11,654 ಪ್ರಕರಣ ರಾಜಿ ಸಂಧಾನದ ಮೂಲಕ ಇತ್ಯರ್ಥ

ಬ್ಯಾಡಗಿ: ತಾಲೂಕು ಕಾನೂನು ಸೇವೆಗಳ ಸಮಿತಿ ಬ್ಯಾಡಗಿ ಇವರ ವತಿಯಿಂದ ಬ್ಯಾಡಗಿ ತಾಲೂಕಿನ ಎರಡೂ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಒಟ್ಟು 11,654 ಪ್ರಕರಣಗಳು ಇತ್ಯರ್ಥಗೊಂಡವು.

ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಇತ್ಯರ್ಥವಾಗುವಂತಹ ಪ್ರಕರಣಗಳು ಮತ್ತು ನ್ಯಾಯಾಲಯಗಳಲ್ಲಿ ಇನ್ನೂ ದಾಖಲಾಗದೇ ಇರುವ ವ್ಯಾಜ್ಯಪೂರ್ವ ಮತ್ತು ರಾಜೀಯಾಗಬಲ್ಲ ಅಪರಾಧಿ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು ಮತ್ತು ಇತರೆ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲು ಶನಿವಾರ ರಾಷ್ಟ್ರೀಯ ಲೋಕ ಅದಾಲತ್ ನಡೆಸಲಾಯಿತು.

ತಾಲೂಕಿನ ಎರಡೂ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ರಾಜೀಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್, ಮೋಟಾರುವಾಹನ ಅಪಘಾತ ಪ್ರಕರಣ, ಸಿವಿಲ್ ವ್ಯಾಜ್ಯಗಳು, ಅಮಲ್ದಾರಿ, ಜೀವನಾಂಶ, ಗೃಹಕೃತ್ಯ ದೌರ್ಜನ್ಯ ಮತ್ತು ಲಘು ಅಪರಾಧದ ಪ್ರಕರಣಗಳನ್ನು ಒಳಗೊಂಡಂತೆ ಹಾಗೂ ವ್ಯಾಜ್ಯ ಪೂರ್ವ ಸಾಲ ವಸೂಲಾತಿ, ನೀರಿನ ಕರಗಳು ಮತ್ತು ಟೆಲಿಫೋನ್ ಕರಗಳಂತಹ ಪ್ರಕರಣಗಳೂ ರಾಜೀ ಸಂಧಾನದ ಮೂಲಕ ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಲಾಗಿದೆ ಎಂದು ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರು ಮತ್ತು ಹಿರಿಯ ದಿವಾಣಿ ನ್ಯಾಯಾಧೀಶರಾದ ರಾಜೇಶ್ವರಿ.ಜೆ.ಪುರಾಣಿಕ ತಿಳಿಸಿದ್ದಾರೆ.

ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಪೈಕಿ ನಿಕಾಲಿಯಾದ ಪ್ರಕರಣಗಳ ಸಂಖ್ಯೆ 153 .ಒಟ್ಟು ಮೊತ್ತ ರೂ. 19858004

ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ನಿಕಾಲಿಯಾದ ಪೂರ್ವವ್ಯಾಜ್ಯ ಪ್ರಕರಣಗಳ ಸಂಖ್ಯೆ 55612 . ಒಟ್ಟು ಮೊತ್ತ 10106040 ದಿವಾಣಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಪೈಕಿ ನಿಕಾಲಿಯಾದ ಪ್ರಕರಣಗಳ ಸಂಖ್ಯೆ-290 ಒಟು ಮೊತ್ತ ರೂ. 13554131, ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ನಿಕಾಲಿಯಾದ ಪೂರ್ವವ್ಯಾಜ್ಯ ಪ್ರಕರಣಗಳ ಸಂಖ್ಯೆ 5650. ಒಟ್ಟು ಮೊತ್ತ 10127520 ರೂಗಳು. ನ್ಯಾಯಾಲಯದಲ್ಲಿ ಗುಡಪ್ಪ ಮುದಿಮಲ್ಲನವರ ಹಾಗೂ ದೀಪ ಮುದಿಮಲ್ಲನವರ, ಹನುಮಂತ ತಳವಾರ್ ಹಾಗೂ ಅಶ್ವಿನಿ ತಳವಾರ್ ಈ ಎರಡು ಜೋಡಿಗಳು ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿದ ಜೋಡಿಗಳನ್ನು ಬುದ್ಧಿ ಹೇಳಿ ರಾಜಿ ಮಾಡಿಸಿ ಒಂದು ಮಾಡಿಸಿದರು. ಕದರಮಂಡಲಗಿ ಗುಡ್ಡಪ್ಪ ಮುದಿಮಲ್ಲನವರ ದೀಪಾ ಮುದಿಮಲ್ಲನವರ ಬ್ಯಾಡಗಿ ಹನುಮಂತ ತಳವಾರ ಅಶ್ವಿನಿ ತಳವಾರ ಒಂದಾದ ಜೋಡಿ.



ಬುದ್ಧಿಜೀವಿ ಮಹಿಳೆಯರಲ್ಲಿ ಮಾನಸಿಕ ಕ್ರಾಂತಿಯ ಅಗತ್ಯವಿದೆ

ಹಾವೇರಿ: ಅನ್ಯಾಯಕ್ಕೆ ವಿರುದ್ಧವಾಗಿ ಹೋರಾಡುವ ಶಕ್ತಿಯನ್ನು ಬೆಳೆಸಿಕೊಂಡಾಗ ಮಾತ್ರ ಹೆಣ್ಣು ಅನವಶ್ಯಕವಾಗಿ ಕೊರಗುವ ಮಾನಸಿಕತೆಯಿಂದ ಹೊರಬರಲು ಸಾಧ್ಯ. ಬುದ್ಧಿಜೀವಿ ಮಹಿಳೆಯರಲ್ಲಿ ಈ ಮಾನಸಿಕ ಕ್ರಾಂತಿಯ ಅಗತ್ಯವಿದೆ ಎಂದು ಸಾಹಿತಿ ಹನುಮಂತಗೌಡ ಗೊಲ್ಲರ ಹೇಳಿದರು.

ತಾಲೂಕಿನ ಬೂದಗಟ್ಟಿ ಸುರಸರಸ್ವತಿ ಗುರುಕುಲ ಆವರಣದಲ್ಲಿ ಹಾವೇರಿಯ ಶಿವಲಿಂಗೇಶ್ವರ ಮಹಿಳಾ ಮಹಾವಿದ್ಯಾಲಯ ಹುಕ್ಕೇರಿಮಠ, ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ 'ಮಹಿಳೆ ಮತ್ತು ಸಮಾಜ' ಗೋಷ್ಠಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಹೆಚ್ಚುತ್ತಿರುವ ಮಧ್ಯೆ ಅವರನ್ನು ಮಾರಾಟದ ಸರಕಿನಂತೆ ನೋಡುವ ಪ್ರವೃತ್ತಿ ಹೆಚ್ಚುತ್ತಿರುವುದು ಆತಂಕಕಾರಿ. ಲಿಂಗ ಸಮಾನತೆಯ ಜಾಗೃತಿ ಪ್ರಯತ್ನಗಳ ನಡುವೆಯೂ ಹೆಣ್ಣಿನ ಶೋಷಣೆ ಮುಂದುವರೆದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ದೇಶದ ಸಂಸ್ಕೃತಿ ನಾಗರಿಕತೆಗಳ ಮಟ್ಟ ಆ ದೇಶದಲ್ಲಿ ಸ್ತ್ರೀಯರಿಗೆ ಇರುವ ಸ್ಥಾನಮಾನ, ಸ್ವಾತಂತ್ರ್ಯ ಶಿಕ್ಷಣಗಳ ಮೇಲೆ ಅವಲಂಬಿತವಾಗಿದೆ. ತಮ್ಮ ಸಹಜ ಸಾಮರ್ಥ್ಯಗಳಿಗೆ ಅನುಗುಣವಾಗಿ ಬೆಳೆಯುವ ಸುರಕ್ಷಿತ ಪ್ರೋತ್ಸಾಹದಾಯಕ ವಾತಾವರಣ ನಿರ್ಮಾಣವಾಗಬೇಕು ಎಂದರು.



ಹಾವೇರಿ ಆಕ್ಸಫರ್ಡ್ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ.ಪ್ರಶಾಂತಕುಮಾರ ಬೆನ್ನೂರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಚೋಟೇಶ್ವರ ಕಾಲೇಜಿನ ಪ್ರಾಚಾರ್ಯ ರವಿ ಸಿ.ವಿ, ಫಕ್ಕೀರೇಶ ಹೊಸಮನಿ, ಶಿವಶಂಕರ ಹೊಸಮನಿ ಮಾತನಾಡಿದರು. ತೇಜಪ್ಪ ಮಡಿವಾಳರ, ಶ್ರೀನಿವಾಸ ಶಿವಪೂಜೆ, ಜಗದೀಶ ಜಳಕಿ, ಬಸಪ್ಪ ಹರಿಜನ ಇದ್ದರು. ಗಂಗಾ ತಂಡದ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಅಮೃತ ಸ್ವಾಗತಿಸಿದರು. ಶಿಬಿರಾಧಿಕಾರಿ ಮಾಲತೇಶ ಮಡಿವಾಳರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಜ್ಯೋತ ಹಿರೇಮಠ ವಂದಿಸಿದರು. ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಬಿಸಿಯೂಟ ತಯಾರಕರು ಸ್ವಚ್ಛತೆಗೆ ಆದ್ಯತೆ ನೀಡಲಿ: ಪಾಣಿಗಟ್ಟಿ

ಹಾನಗಲ್ಲ: ಶಾಲೆಗಳಲ್ಲಿ ಬಿಸಿಯೂಟ ಸಿದ್ಧತೆಯ ಸಂದರ್ಭದಲ್ಲಿ ಬಿಸಿ ಊಟ ತಯಾರಕರು ಸ್ವಚ್ಛತೆಗೆ ಆದ್ಯತೆ ನೀಡಿ ಮಕ್ಕಳ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಪದಾರ್ಥಗಳನ್ನು ಸಿದ್ಧಗೊಳಿಸುವ ಸಮತೋಲನ ಮನಸ್ಸು ಬೇಕು ಎಂದು ಆರಳೇಶ್ವರ ಆರೋಗ್ಯ ಕೇಂದ್ರದ ಡಾ. ದಿವ್ಯಾ ಪಾಣೀಗಟ್ಟಿ ತಿಳಿಸಿದರು.

ಶನಿವಾರ ಇಲ್ಲಿನ ಗುರುಭವನದಲ್ಲಿ ಅಕ್ಷರ ದಾಸೋಹ ಇಲಾಖೆಯಿಂದ ತಾಲೂಕಿನ 700ಕ್ಕೂ ಅಧಿಕ ಬಿಸಿಯೂಟ ತಯಾರಕರಿಗೆ ತರಬೇತಿ ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಶುದ್ಧ ಆಹಾರ ಮತ್ತು ನೀರು ನಮ್ಮ ಆರೋಗ್ಯದ ಮೊದಲ ಸೂತ್ರಗಳು. ಎಲ್ಲರೂ ವೈಯಕ್ತಿಕ ನೈರ್ಮಲ್ಯಕ್ಕೆ ಮೊದಲು ಆದ್ಯತೆ ನೀಡಬೇಕು. ಎಂದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಸ್. ಎಸ್.ಹಿರೇಮಠ ಮಾತನಾಡಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಸಾಹಿತಿ ಪ್ರೊ.ಮಾರುತಿ ಶಿಡ್ಲಾಪೂರ, ಮನೆಯಲ್ಲಿ ತಾಯಿಯು ಮಕ್ಕಳ ಲಾಲನೆ ಪಾಲನೆ ಮಾಡುವಂತೆಯೇ ಶಾಲೆಯಲ್ಲಿ ಬಿಸಿಯೂಟದ ವಿಷಯದಲ್ಲಿ ನಮ್ಮ ಮನೆಯ ಮಕ್ಕಳಂತೆ ಊಟ ಸಿದ್ಧಪಡಿಸಿ ಬಡಿಸುವ ಅಗತ್ಯವಿದೆ. ಸರ್ಕಾರ ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು. ಪಾಲಕರು ಬಡತನಕ್ಕಾಗಿ ಮಕ್ಕಳನ್ನೂ ಬಾಲ ಕಾರ್ಮಿಕರನ್ನಾಗಿ ಮಾಡಬಾರದು. ಆಹಾರ ಕೊರತೆ ಕಾರಣವಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು ಎಂದರು. ಸಿಆರ್‌ಪಿ ಸಂಪನ್ಮೂಲ ವ್ಯಕ್ತಿಗಳಾದ ಸಿದ್ದು ಗೌರಣ್ಣನವರ, ಸಂತೋಷ ಜಂಪಣ್ಣನವರ, ಗಂಗಾಧರ ವಡ್ಡರ, ಮುರುಗೇಶ ಬಾಳೂರ, ಮೃತ್ಯುಂಜಯ ಹಾವನೂರ, ಸಿದ್ದಲಿಂಗೇಶ ಕಾಯಕದ, ಮಲ್ಲೇಶ ಹೊಲಬಿಕೊಂಡ, ಪರಮೇಶ ಕಾಲಕೊಪ್ಪ, ಮೂಯಿದ್ದೀನ ಮುಂಡರಗಿ ಇದ್ದರು.



ಸರ್ಕಾರಿ ಶಾಲೆಗಳ ಅನುದಾನಕ್ಕೆ ಒತ್ತಾಯ

ಹಾವೇರಿ: ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ 1995ರಿಂದ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡುತ್ತಿರುವ ಕನ್ನಡ ಶಾಲೆಗಳನ್ನು ಗುರುತಿಸಿ, ರಾಜ್ಯ ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಜಿಲ್ಲಾ ಘಟಕದಿಂದ ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಒಕ್ಕೂಟದ ಜಿಲ್ಲಾಧ್ಯಕ್ಷ ನೀಲಪ್ಪ ಚಾವಡಿ ಮಾತನಾಡಿ, ಕಳೆದ 30 ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಶಿಕ್ಷಣ ನೀಡುವ ಉದ್ದೇಶದಿಂದ ಕನ್ನಡ ಶಾಲೆಗಳು ಸ್ಥಾಪಿತಗೊಂಡಿವೆ. 1995ರಿಂದ ಇಲ್ಲಿಯವರೆಗೂ ಮಕ್ಕಳಿಗೆ ಶಿಕ್ಷಣ ಕೊಡುತ್ತಿರುವ ಖಾಸಗಿ ಶಾಲೆಗಳು ಸರ್ಕಾರದಿಂದ ಯಾವುದೇ ಅನುದಾನವಿಲ್ಲದೇ ಸಂಕಷ್ಟದಲ್ಲಿವೆ. ಚುನಾವಣೆ ಪೂರ್ವದಲ್ಲಿ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಭರವಸೆ ನೀಡಿದ್ದ ಸರ್ಕಾರ ನಿಷ್ಕಾಳಜಿ ವಹಿಸುತ್ತಿದೆ. ಜಿಲ್ಲೆಯಲ್ಲಿ 352 ಅನುದಾನ ರಹಿತ ಖಾಸಗಿ ಕನ್ನಡ ಶಾಲೆಗಳು, 43 ಅನುದಾನ ರಹಿತ ಖಾಸಗಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಶಾಲೆಗಳನ್ನು ಸರ್ಕಾರ ಅನುದಾನಕ್ಕೆ ಒಳಪಡಿಸಬೇಕೆಂದು ಒತ್ತಾಯಿಸಿರ್ದರು. ಖಾಸಗಿ ಶಾಲೆಯ ಆಡಳಿತ ಮಂಡಳಿಯ ಮುಖ್ಯಸ್ಥ ಸಿದ್ದರಾಜ ಕಲಕೋಟಿ ಮಾತನಾಡಿ, ಈ ಹಿಂದೆ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡವರಿಗೆ ಆಸರೆಯಾಗಿದ್ದ ಆರ್‌ಟಿಇ (ಶಿಕ್ಷಣ ಹಕ್ಕು ಕಾಯಿದೆ)ಯನ್ನು ಪುನಃ ಜಾರಿಗೆ ತರಬೇಕು. ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ವಿಧಿಸಿರುವ ಮಾರ್ಗಸೂಚಿ ಸರಳೀಕರಣ ಮಾಡಬೇಕು. ಆರ್‌ಟಿಇ ಕಾಯಿದೆ ಅಡಿಯಲ್ಲಿ ಆಯ್ಕೆಯಾದ ಶಾಲೆಗಳಿಗೆ ಬರಬೇಕಾದ ಶುಲ್ಕ ಮರುಪಾವತಿ ಹಣವನ್ನು ಈ ಕೂಡಲೇ ಎಲ್ಲ ಶಾಲೆಗಳಿಗೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.



ಡಾ.ಬಿ.ಆರ್ ಅಂಬೇಡ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಿ.ಎಸ್ ಮಾಳಗಿ ಮಾತನಾಡಿದರು , ಸರ್ಕಾರ ಪ್ರಸ್ತುತ ಶಾಲೆಗಳನ್ನು ಕೆಪಿಎಸ್ ಶಾಲೆಗಳಿಗೆ ವಿಲೀನ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಆಗ್ರಹಿಸಿದರು. ಮುರಿಗೆಪ್ಪ ಶೆಟ್ಟರ, ಸುರೇಶ ಬಿಷ್ಟನಗೌಡ್ರ, ತಿಪ್ಪೇಸ್ವಾಮಿ ಹೊಸಮನಿ, ಮುತ್ತಯ್ಯ ಕಿತ್ತೂರಮಠ, ಮಂಜುನಾಥ ಮಡಿವಾಳರ ಸೇರಿದಂತೆ ಜಿಲ್ಲೆಯ ವಿವಿಧ ಖಾಸಗಿ ಶಾಲೆಗಳ ಆಡಳಿತ ಮಂಡಳಿ, ಸಿಬ್ಬಂದಿ ಇದ್ದರು.

ಮಹಿಳಾ ಕೈಗಾರಿಕೆಗಳಿಂದ ವಸ್ತು ಪ್ರದರ್ಶನ

ಗದಗ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಕೈಗಾರಿಕೆಗಳಿಂದ ವಸ್ತು ಪ್ರದರ್ಶನ ಹಾಗೂ ಮಾರಾಟ -2026 ರ ಕಾರ್ಯಕ್ರಮ ನಗರದ ಕೆ.ಎಚ್. ಪಾಟೀಲ ಸಭಾಭವನದಲ್ಲಿ ಮಾ.16 ರಂದು ನಡೆಯಲಿದೆ ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಸಾನ್ನಿಧ್ಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ವಹಿಸುವರು. ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಅಧ್ಯಕ್ಷ ಉಮಾ ರೆಡ್ಡಿ ಕಾರ್ಯಕ್ರಮ ಉದ್ಘಾಟನೆ ಮಾಡುವರು. ಮಹಿಳಾ ಮತ್ತು ಮಕ್ಕಳ ಇಲಾಖೆ ಉಪ ನಿರ್ದೇಶಕ ಪದ್ಮಾವತಿ ಜಿ., ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಭಾಗವಹಿಸಲಿದ್ದಾರೆ. ಅಧ್ಯಕ್ಷತೆ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ ವಹಿಸುವರು. ಈ ವೇಳೆ ಸುವರ್ಣ ಎಸ್. ಮದರಿಮಠ, ಸುನೀತಾ ಕೆ. ಪಾಟೀಲ ಹಾಗೂ ಪೌರ ಕಾರ್ಮಿಕರಿಗೆ, ಕ್ರೀಡಾ ಪಟುಗಳಿಗೆ ಮತ್ತು ಮಹಿಳಾ ಕಾರ್ಮಿಕರಿಗೆ ಸನ್ಮಾನಿಸಲಾಗುವುದು ಎಂದರು.

ಪೂರ್ಣಿಮಾ ಆಟದ, ಪಾರ್ವತಿ ಶಾಬಾದಿಮಠ, ನಾಗರತ್ನಮ್ಮ ಮುಳಗುಂದ, ಸುವರ್ಣ ಮದರಿಮಠ, ರೇಣುಕಾ ಅಮಾಥೆ, ಶಿಲ್ಪಾ ವೀರಲಿಂಗಯ್ಯಮಠ, ಸುಧಾ ಆಸೂಟಿ, ಸುಜಾತಾ ಗುಡಿಮನಿ ಇದ್ದರು.



ಹಜ್ ಭವನ ನಿರ್ಮಾಣ ಕಾರ್ಯ ಸ್ವಾಗತಾರ್ಹ: ಪಠಾಣ

ಹಾವೇರಿ: ಕಿತ್ತೂರು ಕರ್ನಾಟಕ ಭಾಗದ ಹಜ್ ಯಾತ್ರಿಗಳ ಬಹುದಿನದ ಬೇಡಿಕೆಯಾದ ಹಜ್ ಭವನವನ್ನು ಸಿಎಂ ಸಿದ್ದರಾಮಯ್ಯ ಅವರು 2026-27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಹುಬ್ಬಳ್ಳಿಗೆ ಮಂಜೂರು ಮಾಡಿರುವುದು ಸ್ವಾಗತಾರ್ಹ ಎಂದು ಹಾವೇರಿ ಅಂಜುಮನ್ ಇಸ್ಲಾಂ ಕಮೀಟಿ ಅಧ್ಯಕ್ಷ ಇರ್ಫಾನ್‌ಖಾನ್ ಪಠಾಣ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿತ್ತೂರು ಕರ್ನಾಟಕದ ಬಹುದಿನಗಳ ಕನಸಾಗಿದ್ದ ಹುಬ್ಬಳ್ಳಿಯ ಹಜ್ ಭವನ ನಿರ್ಮಾಣಕ್ಕೆ ಸರ್ಕಾರ ಅಸ್ತು ಎಂದಿರುವುದನ್ನು ಅಂಜುಮನ್ ಕಮೀಟಿ ಸ್ವಾಗತಿಸುತ್ತಿದೆ. ಹಾವೇರಿ, ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಕಾರವಾರ ಜಿಲ್ಲೆಗಳನ್ನೊಳಗೊಂಡ ಕಿತ್ತೂರು ಕರ್ನಾಟಕ ಭಾಗದ ಹಜ್ ಯಾತ್ರಿಗಳು ಯಾತ್ರೆಗೆ ತೆರಳುವ ಸಂದರ್ಭದಲ್ಲಿ ಅಗತ್ಯವಿರುವ ಮಾರ್ಗದರ್ಶನ, ತರಬೇತಿ, ವಸತಿ ಹಾಗೂ ಆಡಳಿತಾತ್ಮಕ ವ್ಯವಸ್ಥೆಗಳ ಕೊರತೆಯನ್ನು ಅನುಭವಿಸುತ್ತಿದ್ದರು. ಸರ್ಕಾರ ಈ ಸಲದ ಬಜೆಟ್‌ನಲ್ಲಿ ಹಜ್ ಭವನ ಘೋಷಣೆ ಮಾಡಿರುವುದು ಯಾತ್ರಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ ಎಂದರು.



ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ ಅವರು ಈ ಭಾಗದ ಜನರ ನಾಡಿಮಿಡಿತವನ್ನು ಅರಿತುಕೊಂಡು ಹಜ್ ಭವನದ ಸ್ಥಾಪನೆ ಅತ್ಯವಶ್ಯಕ ಎಂಬುದರ ಬಗ್ಗೆ ಸಿಎಂ ಗಮನಕ್ಕೆ ತಂದು ಬಜೆಟ್‌ನಲ್ಲಿ ಘೋಷಣೆ ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸತತ ಪ್ರಯತ್ನ ಹಾಗೂ ಬದ್ಧತೆಯ ಫಲವಾಗಿ ಹುಬ್ಬಳ್ಳಿ ನಗರದಲ್ಲಿ ಹಜ್ ಭವನ ನಿರ್ಮಾಣವಾಗುತ್ತಿರುವುದು ಮುಸ್ಲಿಂ ಸಮುದಾಯಕ್ಕೆ ಸಂತಸದ ವಿಷಯವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಇಮಾಮ್‌ಹುಸೇನ ಬಾಲೇಬಾಯಿ, ಕಾರ್ಯದರ್ಶಿ ಮುಜಫರ್ ಕೊಟ್ಟಿಗೇರಿ, ಖಜಾಂಚಿ ಚಮನ್‌ಶರೀಫ ಮುಲ್ಲಾ, ಸದಸ್ಯರಾದ ಜಮೀರ್ ಜಿಗರಿ, ಅನ್ವರ ಕಡೇಮನಿ, ವಸೀಮ್ ಸನ್ನುಖಾನವರ, ಸಾಬಿಕ ಸವಣೂರ, ಕಮುರ್ ಕಲ್ಯಾಣ, ಹಜರತ್‌ಅಲಿ ತಹಸೀಲ್ದಾರ, ಮುಕ್ತಿಯಾರ್ ತಟ್ಟಿಮನಿ ಉಪಸ್ಥಿತರಿದ್ದರು.



ಬೆಳಗಾವಿ : ಗ್ರಾಮೀಣ ಕ್ಷೇತ್ರದ ಕುವೆಂಪು ನಗರದ ಕೆ.ಎಲ್.ಇ ಇಂಟರ್ನ್ಯಾಷನಲ್ ಸ್ಕೂಲ್‌ನ ಮುಖ್ಯ ರಸ್ತೆ ಹಾಗೂ ಜಯನಗರದ ಪ್ರಮುಖ ರಸ್ತೆಗಳ ನಿರ್ಮಾಣಕ್ಕಾಗಿ ಸ್ಥಳೀಯ ಜನಪ್ರತಿನಿಧಿಗಳು, ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ್ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳು ಪಕ್ಷದ ಮುಖಂಡರು, ಹಿರಿಯರು, ಯುವಕರು ಇದ್ದರು.

5.3 ಲಕ್ಷ ರೈತರ ಖಾತೆಗೆ 100.65 ಕೋಟಿ ರೂ. ಜಮೆ: ಈರಣ್ಣ ಕಡಾಡಿ



ಮೂಡಲಗಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬೆಳಗಾವಿ ಜಿಲ್ಲೆಯ 5 ಲಕ್ಷ 3 ಸಾವಿರಕ್ಕೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ 100.65 ಕೋಟಿ ರೂ ಡಿಬಿಟಿ ಮೂಲಕ ರೈತರ ಖಾತೆಗೆ ವರ್ಗಾಯಿಸಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕೇಂದ್ರ ಸರ್ಕಾರದ ಕ್ರಮವನ್ನು ಶ್ಲಾಘಿಸಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 22ನೇ ಕಂತಿನ ಭಾಗವಾಗಿ ದೇಶದ 9.32 ಕೋಟಿ ಫಲಾನುಭವಿ ರೈತರ ಖಾತೆಗಳಿಗೆ ರೂ. 18.640 ಸಾವಿರ ಕೋಟಿ ರೂ.ಗಳು, ರಾಜ್ಯದ 41.40 ಲಕ್ಷಕ್ಕೂ ಹೆಚ್ಚು ರೈತರ ಖಾತೆಗೆ 828.02 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಆರ್ಥಿಕ ನೆರವು ರೈತರಿಗೆ ಕೃಷಿ ಚಟುವಟಿಕೆಗಳನ್ನು ನಡೆಸಲು ಮತ್ತು ಆರ್ಥಿಕ ಸಂಕಷ್ಟದಿಂದ ಹೊರಬರಲು ಹೆಚ್ಚಿನ ಬಲ ನೀಡಲಿದೆ ಎಂದು ತಿಳಿಸಿದ್ದಾರೆ.



ಯಮಕನಮರಡಿ: ಎಸ್ಸಿ ಕಾಲೋನಿಯಲ್ಲಿ 10 ಲಕ್ಷ ರೂ.ಗಳ ರಿವರ್ಸ್ ಅಳವಡಿಕೆ, ಸುಭಾಷ್ ಬರಗಲಿ ಮನೆಯವರಿಂದ ಮುಖ್ಯ ರಸ್ತೆಯವರಿಗೆ ಸಿಸಿ ಹಾಗೂ ಚರಂಡಿ 40 ಲಕ್ಷ ರೂ.ಗಳ ಕಾಮಗಾರಿ, ಹಳೆ ಹುಡುಗನಟ್ಟಿ ಗ್ರಾಮದಲ್ಲಿ 10 ಲಕ್ಷ ರೂ.ಗಳ ಸಿಸಿ ಕಾಮಗಾರಿಗೆ ಸಚಿವ ಸತೀಶ ಜಾರಕಿಹೊಳಿ ಅನುದಾನದಲ್ಲಿ ಶನಿವಾರ ಯಮಕನಮರಡಿ ಗ್ರಾಪಂ ವ್ಯಾಪ್ತಿಯಲ್ಲಿ ಭೂಮಿಪೂಜೆ ನಡೆಸಲಾಯಿತು. ಕಿರಣ್ ಸಿಂಗ್ ರಜಪೂತ್, ಈರಣ್ಣ ಬಿಸಿ ರೊಟ್ಟಿ, ಜೈ ಜಕಾತಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಭವನ ಉದ್ಘಾಟನೆ ಇಂದು

ಯರಗಟ್ಟಿ: ಪಟ್ಟಣದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನೂತನವಾಗಿ ನಿರ್ಮಾಣಗೊಂಡ ಡಾ. ಬಾಬು ಜಗಜೀವನರಾಮ ಭವನವನ್ನು ಭಾನುವಾರ ಸಂಜೆ 4 ಗಂಟೆಗೆ ಶಾಸಕ ವಿಶ್ವಾಸ ವೈದ್ಯ ಉದ್ಘಾಟಿಸಲಿದ್ದಾರೆ. ಈ ವೇಳೆ ತಹಶೀಲ್ದಾರ ಎಂ.ವ್ಹಿ ಗುಂಡಪ್ಪಗೋಳ, ಪಪಂ ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಪಪಂ ಸದಸ್ಯರು ಹಾಗೂ ಯರಗಟ್ಟಿ ತಾಲೂಕಿನ ದಲಿತ ಮುಖಂಡರು ಸೇರಿದಂತೆ ಅನೇಕರು ಆಗಮಿಸಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆರ್. ಆರ್. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ : ಮಾ.15ರಂದು ಬೆಳಿಗ್ಗೆ 10ಕ್ಕೆ ಗಂಟೆಯಿಂದ ಸಂಜೆ 5ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಮಚ್ಚೆ ಉಪಕೇಂದ್ರದಿಂದ ಸರಬರಾಜು ಆಗುವ ಬೆಳಗಾವಿ ತಾಲೂಕಿನ ದತ್ತ ನಗರ, ನಾವಗೇಕರ ನಗರ, ಹಾವಳ ನಗರ, ಗೋಡಸೆ ಕಾಲನಿ, ಓಂಕಾರ ನಗರ, ಮಚ್ಚೆ, ಝಾಡಶಾಪೂರ, ದೇಸೂರ, ಸುಸ್ಗ್ಯಾನಟ್ಟಿ, ಬಳಗಾಮಟ್ಟಿ, ಕುಟ್ಟಲವಾಡಿ, ಬಾಮನವಾಡಿ, ನಾವಗೆ, ಜಾನೇವಾಡಿ, ಬಾದರವಾಡಿ, ರಣಕುಂಡೆ, ಕರ್ಲೇ, ಕಿನಯೇ, ಸಂತಿ ಬಸ್ತವಾಡ, ಕಾಳೇನಟ್ಟಿ, ವಾಘವಾಡೆ, ರಂಗಧೋಳಿ, ಪೀರಣವಾಡಿ, ಕಾದರವಾಡಿ, ಮಾರ್ಕಂಡೇಯ ನಗರ, ವಾಲ್ಮೀಕಿ ನಗರ, ತೀರ್ಥಕುಂಡೆ, ಹುಂಚ್ಯಾನಟ್ಟಿ, ಅಶೋಕ ಐರನ್ ಕಾಲನಿ, ನಾವಗೆ, ವಾಘವಾಡೆ ಹಾಗೂ ಮಚ್ಚೆ ಔದ್ಯೋಗಿಕ ಕ್ಷೇತ್ರಗಳಿಗೆ ಹಾಗೂ ಖಾನಾಪೂರ ತಾಲೂಕಿನ ಉಚವಡಾ, ಕುಸಮಳಿ, ಬೈಲೂರ, ಮೊರಬ, ಜಾಂಬೋಟಿ, ಓಲಮನಿ, ವಡಗಾಂವ, ದಾರೋಳಿ, ಚಾಪೋಲಿ, ಕಾಪೋಲಿ, ಮುಡವಿ, ಹಬ್ಬಾನಟ್ಟಿ, ದೇವಾಚಿಹಟ್ಟಿ, ತೋರಾಳಿ, ಗೋಲ್ಯಾಳಿ, ಬೆಟಗೇರಿ, ತಳೇವಾಡಿ, ಅಮಟೆ, ಕಾಲಮನಿ, ಚಿಕಲೆ, ಕಣಕುಂಬಿ, ಗವಸೆ, ಆಮಗಾಂವ, ಬೇಟ್ನೆ, ಪಾರವಾಡ, ಚಿಗುಳೆ, ಮಾನ, ಸಡಾ, ಚೋರ್ಲಾ, ಹಳೆ ಹಾಗೂ ಹೊಸ ಹುಳಂದ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯ ನಿರ್ವಾಹಕ ಇಂಜಿನೀಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ: ಮಾ.15ರಂದು ಬೆಳಿಗ್ಗೆ 10ಗಂಟೆಯಿಂದ ಸಂಜೆ 5ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಉದ್ಯಮಬಾಗ ಉಪಕೇಂದ್ರದಿಂದ ಸರಬರಾಜು ಆಗುವ ಪೀರಣವಾಡಿ, ಖಾದರವಾಡಿ, ಮಚ್ಚೆ ಭಾಗಶಃ ಹಾಗೂ ಹುಂಚ್ಯಾನಟ್ಟಿ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು ತಿಳಿಸಿದ್ದಾರೆ.

ಹೆಣ್ಣು ಅಬಲೆಯಲ್ಲ ಸಬಲೆ



ಯಮಕನಮರಡಿ: ಸ್ಥಳೀಯ ಯಮಕನಮರಡಿ ವಿದ್ಯಾವರ್ಧಕ ಸಂಘದ ಪದವಿ ಕಲಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಮಹಿಳಾ ಸಬಲೀಕರಣ ಘಟಕ ಹಾಗೂ ವಿವಿಧ ಘಟಕಗಳ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅತ್ಯಂತ ಸಡಗರದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಬೆಳಗಾವಿಯ ಖ್ಯಾತ ಗೃಹ ಉದ್ಯಮಿ ಮೀನಾಕ್ಷಿ. ಮಿಶ್ರಿಕೋಟಿ ಮಾತನಾಡಿ, ಸಮಾಜದಲ್ಲಿ ಮಹಿಳೆಯರು ಎಲ್ಲರಂತೆ ತಲೆ ಎತ್ತಿ ಬದುಕಬೇಕು. ಮಹಿಳೆಯರು ಮನಸ್ಸು ಮಾಡಿದರೆ ಎಂತಹ ಕಷ್ಟಗಳು ಬಂದರೂ ಸಹ ಎದುರಿಸಿ ನಿಲ್ಲಬೇಕೆಂದು ತಿಳಿಸಿದರು. ಧೈರ್ಯವನ್ನು ಕಳೆದುಕೊಳ್ಳದೇ ಮನಸ್ಸು ಮಾಡಿ ಕುಗ್ಗದೇ ತಮಗಿರುವ ಆಸಕ್ತಿ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಉತ್ತಮ ಜೀವನ ಸಾಗಿಸಬೇಕೆಂದು ತಮ್ಮನ್ನು ಉದಾಹರಣೆಯನ್ನಾಗಿಸಿ ಪ್ರೇರೆಪಿಸಿದರು. ಹೆಣ್ಣು ಅಬಲೆಯಲ್ಲ ಆಕೆ ಸಬಲೆ ಪರಿಶ್ರಮದಿಂದಲೇ ಒಡತನಕ್ಕೆ ಮಹಿಳೆಯರು ಅಂತ್ಯ ಹಾಡಬೇಕೆಂದು ತಿಳಿಸಿದರು. ಪದವಿ ಕಾಲೇಜಿನ ಅನೇಕ ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕಿಯರು ಮಹಿಳಾ ದಿನಾಚರಣೆಯ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು. ಸಂಸ್ಥೆಯ ಕಾರ್ಯದರ್ಶಿ ಜೆ. ಎನ್. ಅವಾಡೆ ಮಾತನಾಡಿ, ಹೆಣ್ಣು ಸಮಾಜದ ಕಣ್ಣು, ಹೆಣ್ಣು ಮಕ್ಕಳು ಸಮಾಜದ ಅಮೂಲ್ಯ ಆಸ್ತಿ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯ. ವಿ. ಸಂಘದ ಸದಸ್ಯೆ ಪೂಜಾ. ರ. ಹಂಜಿಯವರು ವಹಿಸಿದ್ದರು. ಪ್ರಾಚಾರ್ಯ ಡಾ. ಎ. ಎಸ್. ಗುತ್ತಿ, ಸರ್ವ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ವಪ್ನಾ ತೇರಣಿ ನಿರೂಪಿಸಿ, ಲಕ್ಷ್ಮೀ. ಪಾಶ್ಚಾಪುರಿ ಸ್ವಾಗತಿಸಿ, ಸುಚಿತ್ರಾ ತೇಗೂರಿ ವಂದಿಸಿದರು.

ಜನರ ನಿರೀಕ್ಷೆಯಂತೆ ಕ್ಷೇತ್ರದ ಅಭಿವೃದ್ಧಿ: ಸಚಿವೆ ಹೆಬ್ಬಾಳ್ಕರ್

ಬೆಳಗಾವಿ: ಗ್ರಾಮೀಣ ಕ್ಷೇತ್ರದಲ್ಲಿ ಎಲ್ಲ ಜಾತಿ, ಜನಾಂಗಗಳನ್ನು ಒಟ್ಟುಗೂಡಿಸಿಕೊಂಡು ಕ್ಷೇತ್ರದಲ್ಲಿ ನೂರಾ ಐವತ್ತಕ್ಕೂ ಹೆಚ್ಚು ದೇವಸ್ಥಾನಗಳನ್ನು ನಿರ್ಮಾಣ ಮಾಡಿ ಸರ್ವ ರೀತಿಯಿಂದಲೂ ಕ್ಷೇತ್ರದ ಅಭಿವೃದ್ಧಿ ಮಾಡುತ್ತಿರುವುದು ನಿಜವಾದ ಹಿಂದುತ್ವದ ಕೆಲಸ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಉಚಗಾಂವ್ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕರು ಮಂತ್ರಿಯಾಗಬೇಕೆನ್ನುವ ಜನರ ಕನಸು ಈಗ ನನಸಾಗಿದೆ. ಜನರ ನಿರೀಕ್ಷೆಯಂತೆ ಕೆಲಸ ಮಾಡುತ್ತಿದ್ದೇನೆ. ಆದರೆ ಬಿಜೆಪಿಯವರು ಕೇವಲ ಟೀಕೆ ಮಾಡುತ್ತಾರೆ. ಟೀಕೆ ಮಾಡುವ ಮೊದಲು ತಮ್ಮ ಅವಧಿಯಲ್ಲಿ ಏನೇನು ಕೆಲಸ ಮಾಡಿದ್ದಾರೆ ಎನ್ನುವ ಲಿಸ್ಟ್ ಕೊಡಲಿ ಎಂದು ಸವಾಲೆಸೆದರು.

ಅವರು ಕೇವಲ ಹಿಂದುತ್ವದ ಭಾಷಣ ಮಾಡುತ್ತಾರೆ. ಹಿಂದುತ್ವಕ್ಕಾಗಿ ಅವರು ಏನು ಮಾಡಿದ್ದಾರೆ ಹೇಳಲಿ. ಅವರಿಗೆ ಅಧಿಕಾರ ಮಾತ್ರ ಬೇಕಾಗಿದೆ. ಹಿಂದು - ಮುಸ್ಲಿಂ, ಭಾರತ -ಪಾಕಿಸ್ತಾನ ಬಿಟ್ಟರೆ ಅವರದ್ದು ಏನೂ ಇಲ್ಲ, ನಾನು ನಿಜವಾದ ಹಿಂದುತ್ವದ ಕೆಲಸ ಮಾಡುತ್ತಿದ್ದೇನೆ ಎಂದರು.

ಛತ್ರಪತಿ ಶಿವಾಜಿ ಮಹಾರಾಜರಿಂದ ಹಿಡಿದು ಎಲ್ಲ ಮಹಾನ್ ವ್ಯಕ್ತಿಗಳ ಮೂರ್ತಿ ಸ್ಥಾಪನೆ ಮಾಡಿದ್ದೇನೆ. ಸರ್ವ ಜನಾಂಗದವರಿಗೂ ಗೌರವ ನೀಡುತ್ತಿದ್ದೇನೆ. ಸಣ್ಣಪುಟ್ಟ ಸಮಸ್ಯೆಗಳಿಗೂ ಜನರು ನನಗೆ ಫೋನ್ ಮಾಡುತ್ತಾರೆ. ಏನೇ ಸಮಸ್ಯೆ ಬಂದರೂ ನಾನಿದ್ದೇನೆ ಎನ್ನುವ ಧೈರ್ಯ ಜನರಲ್ಲಿದೆ. ರಸ್ತೆ, ಗಟಾರದ



» ಉಚಗಾಂವ್ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷರ ಪದಗ್ರಹಣ, ಕಾರ್ಯಕರ್ತರ ಸಭೆ

ಕೆಲಸದಿಂದ ಹಿಡಿದು ಗ್ಯಾಸ್ ಖಾಲಿಯಾದರೂ ನನಗೆ ಫೋನ್ ಮಾಡುತ್ತಾರೆ. ನಾನು ಅಧಿವೇಶನದಲ್ಲಿದ್ದರೂ ಹೊರಗೆ ಬಂದು ಮಾತನಾಡಿ ಕ್ಷೇತ್ರದ ಜನರ ಸಮಸ್ಯೆಗೆ ಸ್ಪಂದಿಸುತ್ತೇನೆ ಎಂದರು.

ಎಸ್.ಎಂ.ಕೃಷ್ಣ, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಆದರ್ಶವಾದ ಕೆಲಸ ಮಾಡಿದ್ದಾರೆ. ಶಾಲಾ ಮಕ್ಕಳಿಗೆ ಬಿಸಿಯೂಟ, ಸಮವಸ್ತ್ರ ಮೊಟ್ಟೆ ಹೀಗೆ ಹತ್ತು ಹಲವು ಯೋಜನೆ ಜಾರಿಗೆ ತಂದಿದ್ದಾರೆ.

ಕಳೆದ ಬಜೆಟ್ ನಲ್ಲಿ ಕ್ಷೇತ್ರಕ್ಕೆ ಪದವಿ ಕಾಲೇಜು, ಖುಸ್ತಿ ಆಖಾಡ, ಶ್ರಮಿಕ ಮಕ್ಕಳ ಶಾಲೆ, ವಸತಿ ನಿಲಯ ಮೊದಲಾದವು ಮಂಜೂರಾಗಿದೆ. ಕೇವಲ ರಸ್ತೆಗಾಗಿಯೇ 200 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗಿದೆ. ನನ್ನ ಹೃದಯದಲ್ಲಿ ಕ್ಷೇತ್ರ, ಕ್ಷೇತ್ರದ ಜನರೇ ಇದ್ದಾರೆ ಎಂದರು.

ಯುವ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಮಾತನಾಡಿ, ಪಕ್ಷ ಸಂಘಟನೆ ಬಲಪಡಿಸಲು ಪ್ರತಿ ಬ್ಲಾಕ್ ಸಭೆ ಮಾಡಲಾಗುತ್ತಿದೆ. ಕಳೆದ ಒಂದು ದಶಕದಲ್ಲಿ ಗ್ರಾಮೀಣ ಕ್ಷೇತ್ರದಲ್ಲಿ ಪಕ್ಷ ಸಾಕಷ್ಟು ಬಲಗೊಂಡಿದೆ ಎಂದರು.

ದೇಶದ ಇತಿಹಾಸವೇ ಕಾಂಗ್ರೆಸ್ ಇತಿಹಾಸ. ಕಾಂಗ್ರೆಸ್ ಎಂದೂ ಅಧಿಕಾರ ದುರುಪಯೋಗ ಪಡಿಸಿಕೊಂಡಿಲ್ಲ. ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಐಟಿ, ಇಡಿಗಳನ್ನು ದುರುಪಯೋಗ ಪಡಿಸಿಕೊಂಡು ವಿರೋಧಿಗಳಿಗೆ ಹಿಂಸೆ ನೀಡುತ್ತಿದೆ. ಬಿಜೆಪಿ ಸೇರಿದರೆ ಎಲ್ಲ ಅಕ್ರಮಗಳೂ ಸಕ್ರಮವಾಗುತ್ತವೆ. ಬಿಜೆಪಿ ದೇಶವನ್ನು ಅಧೋಗತಿಗೆ ತಳ್ಳುತ್ತಿದೆ. ಆದರೆ ಕಾಂಗ್ರೆಸ್ ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿದೆ ಎಂದರು. ವಿವಿಧ ಭಾಗಗಳ ಅನ್ಯ ಪಕ್ಷಗಳ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಬಾಳು ದೇಸೂರಕರ್ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಕಾಡಾ ಅಧ್ಯಕ್ಷ ಯುವರಾಜ ಕದಂ, ಶಂಕರಗೌಡ ಪಾಟೀಲ, ಮನೋಹರ ಬೆಳಗಾಂವ್ಕರ್, ಗಾಯತ್ರಿ ಪಾಟೀಲ, ರೇಖಾ ನಾಯಕ್ ಸೇರಿದಂತೆ ಹಲವರು ಇದ್ದರು.

ಶಾಲಾ ಕೊಠಡಿ ದುರಸ್ತಿಗಾಗಿ ಅನುದಾನ ಬಿಡುಗಡೆಗೆ ಮನವಿ

ಯರಗಟ್ಟಿ: ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಮಕ್ಕಳ ದಾಖಲಾತಿ ಹೊಂದಿರುವ ಹಾಗೂ ಒಂದೂವರೆ ಶತಮಾನದ ಇತಿಹಾಸವಿರುವ ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯ ಕೊಠಡಿಗಳಿಗೆ ದುರಸ್ತಿ ಅನುದಾನ ಬಿಡುಗಡೆ ಮಾಡುವಂತೆ ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ಹಾಗೂ ಸದಸ್ಯರು ಶನಿವಾರ ಶಾಸಕ ವಿಶ್ವಾಸ ವೈದ್ಯ ಅವರಿಗೆ ಮನವಿ ಸಲ್ಲಿಸಿದರು.

ಇಲ್ಲಿ 1ರಿಂದ 8ನೇ ತರಗತಿಯವರೆಗೆ ಒಟ್ಟು 550 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇಲ್ಲಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯ ಸಿಗದೆ ವಂಚಿತರಾಗಿದ್ದಾರೆ. ಕೊಠಡಿಗಳು ಸಂಪೂರ್ಣ ಶಿಥಿಲಗೊಂಡ ಬಗ್ಗೆ ಪಾಲಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಎ. ಎ. ಖಾಜಿ ಶಾಲೆಗೆ ಭೇಟಿ ನೀಡಿ ಶಾಲೆಯ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಈ ಶಾಲೆಯಲ್ಲಿ ಎಲ್.ಕೆ.ಜಿ ಮತ್ತು ಯುಕೆಜಿ ತರಗತಿಗಳು ಮಂಜುರಾಗಿದ್ದು ಸದ್ಯ ಎರಡು ಕೊಠಡಿಗಳ ಮತ್ತು ಮೇನ್ ಗೇಟ್ ದುರಸ್ತಿ ಕಾಮಗಾರಿ ಮಾಡಬೇಕಾಗಿದೆ ಎಂದು ಹೇಳಿದರು.

ಶಾಸಕ ವಿಶ್ವಾಸ ವೈದ್ಯ ಮನವಿ ಸ್ವೀಕರಿಸಿ ಮಾತನಾಡಿ, ಶತಮಾನಗಳ ಕಂಡ ಶಾಲೆಗಳ ಅಭಿವೃದ್ಧಿಗೆ ದೊರೆಯುತ್ತಿರುವ ವಿಶೇಷ ಅನುದಾನವೂ ದೊರೆಯಲಿದ್ದು, ಆ ಹಣವನ್ನೂ ಕೊಠಡಿಗಳ ದುರಸ್ತಿಗೆ ಬಳಸಲಾಗುವುದು ಎಂದು ಮಾಹಿತಿ ನೀಡಿದರು.

ಈ ವೇಳೆ ಪಪಂ ಸದಸ್ಯ ನಿಖಿಲ ಪಾಟೀಲ, ಎಸ್‌ಡಿಎಂಸಿ ಅಧ್ಯಕ್ಷ ಲಕ್ಕಪ್ಪ ಜಗದಾರ, ಉಪಾಧ್ಯಕ್ಷ ಸುನಿತಾ ಹಿರೇಮಠ, ಮುಖ್ಯೋಪಾಧ್ಯಾಯ ಎ. ಎ. ಮಕ್ತುಮನವರ, ಎಸ್‌ಡಿಎಂಸಿ ಸದಸ್ಯರಾದ ದುಂಡಯ್ಯ ಹಿರೇಮಠ, ವಿಜಯ ಬಡಿಗೇರ , ಫಿರೋಜ ಖಾದ್ರಿ, ಹುಸೇನ ದಿಲಾವರನಾಯ್ಕ, ಮುದುಕಪ್ಪ ತಡಸಲೂರು, ಲಕ್ಷ್ಮಣ ಹಣಬರ, ಲಕ್ಷ್ಮಿ ಸುರೇಬಾನ, ರತ್ನಾ ಹಡಪದ, ಪ್ರೇಮಾ ಹೂಲಿಕಟ್ಟಿ, ಮೀನಾಕ್ಷಿ ಮದ್ದಾನಿ, ಶಕುಂತಲಾ ಹಡಪದ ಇದ್ದರು.



ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ಗೋಕಾಕ: ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳವರ ಜಯಂತ್ಯುತ್ಸವದ ಅಂಗವಾಗಿ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಯವರ ಮಠದಲ್ಲಿ ಮಾ.29 ರಿಂದ ಏ.3 ರವರೆಗೆ ರಾಜ್ಯ ಮಟ್ಟದ ಹನ್ನೊಂದನೇವರ್ಷದ ಭಜನಾ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಭಜನಾ ತಂಡದವರು ಮಾ.28 ರೊಳಗಾಗಿ ಶ್ರೀಮಠದ ಟ್ರಸ್ಟ್ ಕಮೀಟಿಯ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಬೇಕೆಂದು ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಅಧ್ಯಕ್ಷ ಶಾಮಾನಂದ ಪೂಜೇರಿ ತಿಳಿಸಿದರು. ಭಾಗವಹಿಸುವ ಭಜನಾ ಮೇಳದವರಿಗೆ ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗುವುದು. ಮತ್ತು ಒಂದು ಬದಿಯ ಬಸ್ ಚಾರ್ಜನ್ನು ಪ್ರತಿ ತಂಡದ 6 ಜನರಿಗೆ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರತಿಯೊಂದು ಭಜನಾ ತಂಡಕ್ಕೆ ಸವಿನೆನಪಿನ ಕಾಣಿಕೆ ಹಾಗೂ ಪ್ರತಿಯೊಂದು ತಂಡದ ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿ ಪತ್ರ ನೀಡಲಾಗುವುದು. ಮಾ.29 ರಂದು ಬೆಳಗ್ಗೆ 10.30ಕ್ಕೆ ಉದ್ಘಾಟನಾ ಸಮಾರಂಭ ಜರುಗುವುದು.

ಬಹುಮಾನಗಳ ವಿವರ: ಪ್ರಥಮ: ರೂ. 1,11,000, ದ್ವಿತೀಯ: ರೂ.90,000, ತೃತೀಯ: ರೂ. 80,000, ಸಮಾಧಾನಕರ: ರೂ.10,000 (ಹತ್ತು ತಂಡಗಳನ್ನು ಆಯ್ಕೆ ಮಾಡಿ, ಪ್ರತಿ ತಂಡಕ್ಕೆ ರೂ.10,000 ನೀಡಲಾಗುವುದು.) 16 ವರ್ಷದ ಒಳಗಿನ ಬಾಲಕ ಹಾಗೂ ಬಾಲಕಿಯರಿಗೆ ಪ್ರತಿಭಾ ಪುರಸ್ಕಾರ ರೂ. 11,000.00 (ಒಂದು ಬಾಲಕರ ತಂಡ ಮತ್ತು ಒಂದು ಬಾಲಕಿಯರ ತಂಡಕ್ಕೆ ಮಾತ್ರ) ಮಹಿಳಾ ಭಜನಾ ತಂಡಕ್ಕೆ ಪುರಸ್ಕಾರ ರೂ.11,000.00 (ಒಂದು ತಂಡಕ್ಕೆ ಮಾತ್ರ)



ವೈಯಕ್ತಿಕ ಬಹುಮಾನಗಳ ವಿವರ: ಉತ್ತಮ ಹಾಡುಗಾರರಿಗೆ : ರೂ.3,500 (ಇಬ್ಬರಿಗೆ ಮಾತ್ರ) ಉತ್ತಮ ಹಾರ್ಮೋನಿಯಂ ವಾದಕರಿಗೆ : ರೂ.3,500 (ಇಬ್ಬರಿಗೆ ಮಾತ್ರ) ಉತ್ತಮ ತಬಲಾ ವಾದಕರಿಗೆ : ರೂ.3,500 (ಇಬ್ಬರಿಗೆ ಮಾತ್ರ) ಉತ್ತಮ ತಾಳ ವಾದಕರಿಗೆ : ರೂ.3,500 (ಇಬ್ಬರಿಗೆ ಮಾತ್ರ) ಉತ್ತಮ ಧಮಡಿ ವಾದಕರಿಗೆ ರೂ.3,500 (ಇಬ್ಬರಿಗೆ ಮಾತ್ರ) ನೀಡಲಾಗುವುದು.

ಹೆಚ್ಚಿನ ಮಾಹಿತಿಗೆ ಶಾಮಾನಂದ ಬಾ ಪೂಜೇರಿ ಅಧ್ಯಕ್ಷರು, ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಹಾಗೂ ಧರ್ಮದರ್ಶಿಗಳು, ಶ್ರೀ ಸಿದ್ಧಾರೂಢ ಸ್ವಾಮಿಯವರಮಠ ಟ್ರಸ್ಟ್ ಕಮೀಟಿ, ಹುಬ್ಬಳ್ಳಿ, ಮೊ. 9880169881, 80958 82033, 9738681660 ಸಂಪರ್ಕಿಸಲು ಕೋರಲಾಗಿದೆ.

ಮಾ.18ಕ್ಕೆ ಪೂರ್ವ ಭಾವಿ ಸಭೆ

ಖಾನಾಪುರ: ಏ.5ರಂದು ನಡೆಯಲಿರುವ ಡಾ.ಬಾಬು ಜಗಜೀವನರಾಂ ಮತ್ತು ಏ.14ರಂದು ನಡೆಯಲಿರುವ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತಿಯ ಪೂರ್ವಸಿದ್ಧತೆಗಳ ಬಗ್ಗೆ ಚರ್ಚಿಸಲು ಪಟ್ಟಣದ ತಾಲೂಕು ಪಂಚಾಯತ ಸಭಾ ಭವನದಲ್ಲಿ ಮಂಗಳವಾರ ಮಾ.18ರಂದು ಬೆಳಗ್ಗೆ 11ಕ್ಕೆ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಖಾನಾಪುರದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಬೀದಿ ದೀಪ, 'ಐ ಲವ್ ಸಾಂಬ್ರಾ' ನಾಮಫಲಕ ಉದ್ಘಾಟನೆ

ಬೆಳಗಾವಿ: ಗ್ರಾಮೀಣ ಅಭಿವೃದ್ಧಿಗೆ ಮತ್ತೊಂದು ಹೆಜ್ಜೆಯಾಗಿ ಸಾಂಬ್ರಾ ಗ್ರಾಮದಲ್ಲಿ ನೂತನವಾಗಿ ಅಳವಡಿಸ ಲಾಗಿರುವ ಬೀದಿ ದೀಪಗಳು ಹಾಗೂ "ಐ ಲವ್ ಸಾಂಬ್ರಾ" ಎನ್ನುವ ನಾಮ ಫಲಕವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಗ್ರಾಮಗಳ ಅಭಿವೃದ್ಧಿಯೇ ರಾಜ್ಯದ ಸಮಗ್ರ ಅಭಿವೃದ್ಧಿಗೆ ಬುನಾದಿಯಾಗಿದ್ದು, ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ ಎಂದರು.

ಸಾಂಬ್ರಾ ಗ್ರಾಮದಲ್ಲಿಯೂ ರಸ್ತೆ, ಕುಡಿಯುವ ನೀರು, ಬೀದಿ ದೀಪಗಳು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.



ಅದರ ಜೊತೆಗೆ ಗ್ರಾಮ ಪ್ರವೇಶ ಭಾಗದಲ್ಲಿ ಅಳವಡಿಸಲಾದ "ಐ ಲವ್ ಸಾಂಬ್ರಾ" ನಾಮಫಲಕವು ಗ್ರಾಮಕ್ಕೆ ವಿಶೇಷ ಗುರುತನ್ನು ನೀಡುವುದರ ಜೊತೆಗೆ ಯುವಕರಲ್ಲಿ ತಮ್ಮ ಊರಿನ ಬಗ್ಗೆ ಹೆಮ್ಮೆ ಹಾಗೂ ಆತ್ಮೀಯತೆಯನ್ನು ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಬಳಿಕ ಗ್ರಾಮದ ಶ್ರೀ ಶಂಭು ಮಹಾದೇವ ಮಂದಿರಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ವೇಳೆ ದೇವಸ್ಥಾನ ಸಮಿತಿಯವರು ಹಾಗೂ ಗ್ರಾಮಸ್ಥರು ಸಚಿವರನ್ನು ಗೌರವಪೂರ್ವಕವಾಗಿ ಸನ್ಮಾನಿಸಿದರು.

ನಂತರ ಗ್ರಾಮದ ಅಭಿವೃದ್ಧಿ ಕಾಮಗಾರಿಗಳು, ಮುಂದಿನ ಯೋಜ ನೆಗಳು ಮತ್ತು ಜನರ ಅಗತ್ಯಗಳ ಕುರಿತು ಸ್ಥಳೀಯರೊಂದಿಗೆ ಚರ್ಚೆ ನಡೆಸಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಗ್ರಾಮದ ಹಿರಿಯರು, ಮಹಿಳೆಯರು, ಪಕ್ಷದ ಮುಖಂಡರು, ಕಾರ್ಯಕರ್ತರು, ಸ್ಥಳೀಯ ಜನಪ್ರತಿನಿಧಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಯುವಜನತೆ ಉದ್ಯಮದಲ್ಲಿ ತೊಡಗಲಿ: ಸಿದ್ದೇಶ್ವರ ಹಿರೇಮಠ

ಕಕಮರಿ: ನಾವು ಗಳಿಸಿದ ಆಸ್ತಿ, ಅಂತಸ್ತು, ಸಂಪತ್ತು ಯಾವುದೂ ಕೊನೆವರೆಗೂ ಉಳಿಯುವುದಿಲ್ಲ, ಆದರೆ ಕಲಿತ ವಿದ್ಯೆ ಮಾತ್ರ ಕೊನೆವರೆಗೂ ಜೊತೆಗಿರುತ್ತದೆ ಎಂದು ಉದ್ಯಮಿ ಸಿದ್ದೇಶ್ವರ ಹಿರೇಮಠ ಹೇಳಿದರು.

ಗ್ರಾಮದ ಶ್ರೀ ಅಮ್ಮಾಜೇಶ್ವರಿ ಪ್ರೌಢ ಶಾಲೆಯ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳ ಬಿಳ್ಕೋಡುಗೆ ಸಮಾರಂಭದಲ್ಲಿ ಮಾತನಾಡಿ, ಶಿಕ್ಷಣ ಸಂಸ್ಥೆಯು ಪ್ರತಿಭಾವಂತರನ್ನು ರೂಪಿಸುವ ಕೇಂದ್ರಗಳಾಗಿವೆ. ಜಗತ್ತಿನಲ್ಲಿ ಗುರುವಿಗೆ ದೊಡ್ಡ ಸ್ಥಾನ ನೀಡಿದ ಏಕೈಕ ದೇಶ ಭಾರತ. ಗುರುವಿನ ಆಶೀರ್ವಾದ ಸದಾಕಾಲ ನಿಮ್ಮೆಲ್ಲರ ಮೇಲಿದೆ ನಿಮ್ಮ ಬದುಕಿನಲ್ಲಿ ಅವರು ತೋರಿದ ಮಾರ್ಗ ನೀವು ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಿ ಸಾಧನೆ ಮಾಡಬೇಕು. ಯುವಕರು ಉದ್ಯಮಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಹೇಳಿದರು.



ಗುರುದೇವಾಶ್ರಮ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಮಾತನಾಡಿ, ಸಾಧನೆ ಮಾಡುವವನಿಗೆ ಹಠ ಇರಬೇಕು. ಸಾಧಿಸುವ ಛಲ ಇರಬೇಕು ಕೇವಲ ಬೇರೆಯವರನ್ನು ನೋಡಿ ನನಗೆ ಅದು ಬರಲ್ಲ ನನಗೆ ಅದು ಸಿಗಲ್ಲ ಅಂದುಕೊಳ್ಳದೇ ಅದು ನನ್ನಿಂದ ಸಾಧ್ಯ ಎಂದರೆ ಇಡೀ ಪ್ರಪಂಚವನ್ನು ಗೆಲ್ಲಬಹುದು. ವಿದ್ಯಾರ್ಥಿಗಳಲ್ಲಿ ನಕಾರಾತ್ಮಕ ಶಕ್ತಿ ಕಡಿಮೆ ಮಾಡಿಕೊಂಡು ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರಯತ್ನಿಸಬೇಕೆಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಬ ಈರಗೌಡ, ಹಿರಿಯರಾದ ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಅಣ್ಣಾಸಾಬ ಬಿಜ್ಜರಗಿ, ಎಂ.ಎನ್.ವಾಲಿ, ಚಿಕ್ಕೋಡಿ ವಿಷಯ ಸಂಯೋಜಕರು ಸಂಗಮೇಶ ಹೂಗಾರ, ಶಾಲೆಯ ಮುಖ್ಯೋಪಾಧ್ಯಾಯ ವಿ.ಎಸ್.ಕುಲಕರ್ಣಿ, ಮುಖ್ಯೋಪಾಧ್ಯಾಯರಾದ ಭೀರಪ್ಪ ಅಸ್ಕಿ, ಎಸ್.ಜಿ.ರೆಹಮತಪೂರ, ಇಲಾಹಿ ಕೊಕಟನೂರ, ಸಂಗಮೇಶ ಬಿಳ್ಳೂರ, ಶಿಕ್ಷಕರಾದ ಎ.ಎಸ್. ಗಡಾಲೋಟಿ, ಎಸ್.ಆರ್.ಪೂಜಾರಿ, ಎಸ್. ಎಚ್.ಜಡಿನವರ, ಎಸ್.ಎಲ್.ಕಾತ್ರಾಳ, ಎಸ್ .ಎ.ಈರಗೌಡ, ಆರ್.ಪಿ.ಪೂಜಾರಿ, ಎಸ್. ಆರ್.ಬಿರಾದಾರ ಇದ್ದರು. ಆರ್.ಪಿ.ಪೂಜಾರಿ ಸ್ವಾಗತಿಸಿ ನಿರೂಪಿಸಿದರು.

ಬಸಿಡೋಣಿಯಲ್ಲಿ ನಮ್ಮೂರ ನಮ್ಮ ಕೆರೆ ಹಸ್ತಾಂತರ ಇಂದು

ಸವದತ್ತಿ: ಸವದತ್ತಿ ತಾಲೂಕಿನ ಗೋರಬಾಳ ಗ್ರಾಮ ಪಂಚಾಯತ ವ್ಯಾಪ್ತಿಯ ಬಸಿಡೋಣಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರ ನಮ್ಮ ಕೆರೆ ಯೋಜನೆಯಡಿ ಹೂಳೆತ್ತಿ ನಿರ್ಮಾಣಗೊಂಡ ಬಸಿಡೋಣಿ ಕೆರೆಯ ಲೋಕಾರ್ಪಣೆ ಕಾರ್ಯಕ್ರಮ ಮಾ.15ರಂದು ಬೆಳಗ್ಗೆ 11ಕ್ಕೆ ನೆರವೇರಲಿದೆ.

2 ಎಕರೆ 28 ಗುಂಟೆ ವಿಸ್ತೀರ್ಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ 3.30 ಲಕ್ಷ ರೂ. ಹಾಗೂ ಹೂಳು ಸಾಗಾಣೆ ಮಾಡಲು ಗ್ರಾಮಸ್ಥರಿಂದ 1.80 ಲಕ್ಷ ರೂ. ವೆಚ್ಚದಲ್ಲಿ ಒಂದು ತಿಂಗಳವರೆಗೆ ಕಾಮಗಾರಿಯಿಂದ ನಿರ್ಮಾಣಗೊಂಡು ಕೆರೆಯು ರಾಜ್ಯದ 913ನೇ ನಮ್ಮೂರ ನಮ್ಮ ಕೆರೆ ಯೋಜನೆಯ ಕೆರೆಯಾಗಿದೆ. ಕಾಮಗಾರಿಯಲ್ಲಿ ಸುಮಾರು 3948 ಟ್ರ್ಯಾಕ್ಟರ್ ಲೋಡ್ ಹೂಳೆತ್ತಲಾಗಿದೆ. ನೂತನವಾಗಿ ನಿರ್ಮಾಣಗೊಂಡ ಕೆರೆಯ ಸುತ್ತ-ಮುತ್ತಲಿರುವ ಮುಳ್ಳಿನ ಪೊದೆ ಜೊತೆಗೆ ಪಕ್ಕದಲ್ಲಿರುವ ಸ್ಮಶಾನವನ್ನು ಕೂಡಾ ಸ್ವಚ್ಛಗೊಳಿಸಲಾಯಿತು.

ಈ ಹೂಳೆತ್ತಿದ ಕೆರೆಯು ಬೃಹತ್ ಕೆರೆಯಾಗಿ ಮಾರ್ಪಾಡಾಗಿರುವುದರಿಂದ ನೀರಿನ ಸಂಗ್ರಹಣದ ಸಾಮರ್ಥ್ಯ ಹೆಚ್ಚಾಗಿದ್ದು ಕುಡಿಯಲು ಹಾಗೂ ಸುತ್ತ-ಮುತ್ತಲಿನ ಸುಮಾರು 150 ಎಕರೆ ಕೃಷಿ ಜಮೀನು, 2000ಕ್ಕೂ ಮಿಕ್ಕಿದ ಜಾನುವಾರುಗಳಿಗೆ ಜೀವಜಲವಾಗಲಿದೆ.

ರೈತರ ಹಾಗೂ ಗ್ರಾಮದ ಆದಾಯ ಮತ್ತು ಅಭಿವೃದ್ಧಿಗೆ ರೂಪಗೊಂಡ ಯೋಜನೆಯನ್ನು ಬಸಿಡೋಣಿ ಗ್ರಾಮದ ಜನರು ಕೆರೆ ಅಭಿವೃದ್ಧಿ ಸಮಿತಿ ರಚಿಸಿಕೊಂಡು ಗ್ರಾಪಂ



ಸಹಕಾರದೊಂದಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜೊತೆ ಕೈಜೋಡಿಸಿ ಒಂದು ಸುಂದರ ಕೆರೆ ನಿರ್ಮಾಣ ಮಾಡಿರುವುದು ಶ್ಲಾಘನೀಯ.

ಕೆರೆಯ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಶಾಸಕ ವಿಶ್ವಾಸ ವಸಂತವೈದ್ಯ ಕೆರೆಯ ನಾಮಫಲಕ ಅನಾವರಣಗೊಳಿಸಲಿದ್ದಾರೆ. ಅಧ್ಯಕ್ಷತೆಯನ್ನು ಗೋರಾಬಾಳ ಗ್ರಾಪಂ ಅಧ್ಯಕ್ಷೆ ಮನಿಗೆರವ್ವ ಪುಂಡಲಿಕ ಮಾದರ ವಹಿಸುವರು.

ಸಂಸ್ಥೆಯ ಜಿಲ್ಲಾ ನಿರ್ದೇಶಕ ಹೆಚ್. ಆರ್. ಲವಕುಮಾರ ಕೆರೆಯ ಹಸ್ತಾಂತರ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆನಂದ ಶಂ ಬಡಕುಂದ್ರಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಗೊರಾಬಾಳ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಮುತ್ತಪ್ಪ ಬಾರಿಗಿಡದ, ಸುಭಾಷ ಹನಸಿ, ಪತ್ರೇಪ್ಪ ಚಿಕ್ಕುಂಬಿ, ನಿಂಗರಾಜ ಮಾಲವಾಡ, ಎಂ.ಎಸ್ ಚಾವುರ, ಉಪಸ್ಥಿತರಿರುವರು ಎಂದು ಯೋಜನಾಧಿಕಾರಿ ಸುಬ್ರಾಯ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ

ರಾಯಬಾಗ: ಪರಮ ಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆಯವರ ಶುಭಾಶೀರ್ವಾದಗಳೊಂದಿಗೆ ಸರಕಾರಿ ಪಬ್ಲಿಕ್ ಪ್ರೌಢಶಾಲೆ ರಾಯಬಾಗ ಸಹಯೋಗದೊಂದಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಸಂಪನ್ಮೂಲ ವ್ಯಕ್ತಿ ಬಿ.ಎಂ.ಮಾಳಿ, ರಾಯಬಾಗ ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಸುರೇಖಾ ಅಶೋಕ ಹೆಬ್ಬಳ್ಳಿ, ಶಾಲೆಯ ಶಿಕ್ಷಕರಾದ ಎಂ. ಬಿ ಕುಂಬಾರ, ಜಿ.ಡಿ. ನಾಯಿಕ್, ಯು.ಬಿ. ಸಿರಗಾಂವಿ, ಬಿ.ಪಿ. ಕಳ್ಳಿಗುದ್ದಿ ಸಮ್ಮುಖದಲ್ಲಿ ದೀಪ ಬೆಳಗಿಸಿ ಉದ್ಘಾಟನೆ ಮಾಡಲಾಯಿತು.

ಈ ವೇಳೆ ಸಂಪನ್ಮೂಲ ವ್ಯಕ್ತಿ ಬಿ.ಎಂ. ಮಾಳಿ ಮಾತನಾಡಿ, ಮಕ್ಕಳಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಆಹಾರ ಪದ್ಧತಿ ಮತ್ತು ನಡೆ ನುಡಿ ಹಾಗೂ ಒಳ್ಳೆಯ ಸಂಸ್ಕಾರ ಕೊಡುವುದು ಅವಶ್ಯಕತೆ ಇದ್ದು, ಅದರಲ್ಲಿ ಮಕ್ಕಳು ಪ್ರತಿದಿನ ಹಲ್ಲುಜ್ಜುವದಿಂದ



ಹಿಡಿದು ಸ್ವಚ್ಛತೆ ಕಾಪಾಡಿಕೊಳ್ಳುವ ಬಗ್ಗೆ ಆರೋಗ್ಯದಲ್ಲಿ ಮಾಡಿಸಿಕೊಳ್ಳಬಹುದು ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ನಮ್ಮ ಶಿಕ್ಷಕರ ಪಾತ್ರ ಕೂಡ ಅಷ್ಟೇ ಮುಖ್ಯ. ಇಂದಿನ ಯುವ ಪೀಳಿಗೆ ಇಲ್ಲ ಸಲ್ಲದ ಚಟಗಳಿಗೆ ದಾಸರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದು ಈ ಕಾರ್ಯಕ್ರಮದಿಂದ ತಮ್ಮ ಮುಂದಿನ ಭವಿಷ್ಯ ಉತ್ತಮವಾಗಿರಲು ಒಳ್ಳೆಯ ಹವ್ಯಾಸಗಳನ್ನು ಮೈಗುಡಿಸಿಕೊಂಡು ಮಾದಕ ಚಟಗಳಿಂದ ದೂರವಿರಿ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪ್ರೌಢಶಾಲೆಯ ಎಲ್ಲಾ ಶಿಕ್ಷಕ ವೃಂದದವರು, ಮಕ್ಕಳು ಉಪಸ್ಥಿತರಿದ್ದರು.

ಕೃತಕ ಬುದ್ಧಿಮತ್ತೆ ಭವಿಷ್ಯದ ಶಕ್ತಿ: ಶಿವಕುಮಾರ

ತೆಲಸಂಗ: ಇಂದಿನ ವೇಗದ ಜಗತ್ತಿನಲ್ಲಿ ಕೃತಕ ಬುದ್ಧಿಮತ್ತೆ ಎಂಬುದು ಕೇವಲ ಒಂದು ತಾಂತ್ರಿಕ ಆವಿಷ್ಕಾರವಲ್ಲ, ಅದು ಮಾನವೀಯತೆಯ ಭವಿಷ್ಯವನ್ನು ರೂಪಿಸುವ ಪ್ರಬಲ ಶಕ್ತಿಯಾಗಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಇಂತಹ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಮಾತ್ರ ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಪ್ರಾಚಾರ್ಯ ಶಿವಕುಮಾರ ಕೆ. ಹೇಳಿದರು.

ಗ್ರಾಮದ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಎಸ್‌ಎಂವೈಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕೃತಕ ಬುದ್ಧಿಮತ್ತೆ ಮತ್ತು ಮಾನವೀಯತೆಯ ಭವಿಷ್ಯ ಎಂಬ ವಿಷಯದ ಕುರಿತಾದ ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಎಐ ಪ್ರವೇಶ ಮಾಡಿರುವುದು ಹೊಸ ಸಾಧ್ಯತೆಗಳನ್ನು ತೆರೆದಿದೆ. ತರಗತಿಯ ಕಲಿಕೆಯು ಕೇವಲ ಅಂಕಗಳಿಗೆ ಸೀಮಿತವಾಗದೆ, ವೃತ್ತಿಜೀವನಕ್ಕೆ ಬೇಕಾದ ಕೌಶಲ್ಯಗಳನ್ನು ರೂಢಿಸಿಕೊಳ್ಳಲು ಇದು ಪೂರಕವಾಗಿದೆ ಎಂದರು.

ಸಂಘಟನಾ ಕಾರ್ಯದರ್ಶಿ ಶ್ವೇತಾ



ಜುಗಳೆ ಮಾತನಾಡಿ, ಹೊಸ ತಲೆಮಾರಿನ ಯುವಕರು ಎಐ ತಂತ್ರಜ್ಞಾನವನ್ನು ಕೇವಲ ಮನರಂಜನೆಗೆ ಬಳಸದೆ, ಸಂಶೋಧನೆ ಮತ್ತು ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಬಳಸಬೇಕು. ತಾಂತ್ರಿಕ ಬದಲಾವಣೆಗಳಿಗೆ ಹೊಂದಿಕೊಳ್ಳುವುದು ಇಂದಿನ ಅನಿವಾರ್ಯತೆ. ಎಐ ಮೂಲಕ ಉದ್ಯೋಗ ಮಾರುಕಟ್ಟೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳು ಮತ್ತು ವಿದ್ಯಾರ್ಥಿಗಳು ಸಿದ್ಧರಾಗಬೇಕಾದ ಕ್ರಮಗಳ ಬಗ್ಗೆ ಜಾಗೃತಿ ಹೊಂದಬೇಕು ಎಂದರು.

ಗ್ರಾಪಂ ಅಧ್ಯಕ್ಷೆ ಭಾರತಾ ಲೋಖಂಡೆ, ಉಪಾಧ್ಯಕ್ಷೆ ಅನೀತಾ ಕೆಂಧಾರೆ, ಪ್ರಾಧ್ಯಾಪಕಿ ಡಾ. ದಾನೇಶ್ವರಿ ಮೂಲಿಮನಿ, ಐಕ್ಯೂಎಸಿ ಸಂಯೋಜಕ ಡಾ. ಬಿ.ಐ. ಮಠಪತಿ, ಹನುಮಂತಯ್ಯ ಎ.ಕೆ, ಉಪನ್ಯಾಸಕ ವೃಂದ ಸೇರಿದಂತೆ ಸಿಬ್ಬಂದಿ ಇದ್ದರು.

ಕಿರುಸುದ್ದಿ

ಕಿರಣ್ ಜಾಧವ್ ನೇಮಕ



◆**ಬೆಳಗಾವಿ:** ಸಾಯಿ ಸ್ಪೋರ್ಟ್ಸ್ ಅಕಾಡೆಮಿ ಖಾನಾಪುರ ಆಯೋಜಿಸುತ್ತಿರುವ ಅಂಡರ್-14 ಹರಾಜು ಆಧಾರಿತ ಕ್ರಿಕೆಟ್ ಟೂರ್ನಮೆಂಟ್‌ಗೆ ಕಿರಣ್ ಜಾಧವ್ ವಿಮಲ್ ಫೌಂಡೇಶನ್ ಸೆಂಟರ್ ಆಫ್ ಎಕ್ಸಲೆನ್ಸ್ ಅವರು ಮೊದಲ ಫ್ರಾಂಚೈಸಿಯಾಗಿ ನೇಮಕವಾಗಿದ್ದಾರೆ.

ವಾತ್ಸಲ್ಯ ಮನೆ ಹಸ್ತಾಂತರ



◆**ಅಥಣಿ:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ರಡ್ಡರಹಟ್ಟಿ ಗ್ರಾಮದ ಗಿರಿಮಲ್ಲಪ್ಪ ಚಿಗರಿ ಇವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಥಣಿ ಜಿಲ್ಲೆಯ ನಿರ್ದೇಶಕಿ ನಾಗರತ್ನ ಹೆಗಡೆ ಇವರು ಉಪಸ್ಥಿತರಿದ್ದು ನಿರ್ಗತಿಕ ಕುಟುಂಬದವರಿಗಾಗಿ ಪೂಜ್ಯ ಧರ್ಮಾಧಿಕಾರಿಗಳು ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರು ಮಾಡುತ್ತಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ರಜಬ್ ಅಲಿ ಮೇಲಿನಮನಿ ನವಜೀವನ ಸಮಿತಿಯ ಸದಸ್ಯರಾದ ಮಂಜುನಾಥ, ಲಕ್ಷ್ಮಣ ಭಜಂತ್ರಿ, ಚಿಕ್ಕಯ್ಯ ಹಿರೇಮಠ, ಗುರು ಭೀಮಣ್ಣ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರು ಮತ್ತು ಸದಸ್ಯರು, ಜ್ಞಾನವಿಕಾಸ ಸಮನ್ವಯಾಧಿಕಾರಿ ಆಶಾ ಬೋಗುರ್, ವಲಯ ಮೇಲ್ವಿಚಾರಕಿ ಸುಮಾ ಕಪೋಲಿ, ಸೇವಾ ಪ್ರತಿನಿಧಿ ರಾಜಶ್ರೀ ಕೊತ್ ಸಂಘದ ಸದಸ್ಯರು ಊರಿನ ಗಣ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಹಿಳಾ ದಿನ ಆಚರಣೆ



◆**ಚನ್ನಮ್ಮನ ಕಿತ್ತೂರು:** ಯುವ ಪೀಳಿಗೆಯವರು ತಮ್ಮ ಜೀವನದಲ್ಲಿ ಸರಿಯಾದ ದಾರಿಯನ್ನು ಆಯ್ಕೆ ಮಾಡಿ ಒಳ್ಳೆಯ ನಡೆ ನುಡಿಗಳನ್ನು ಪಾಲಿಸಿಕೊಂಡು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬಾಳಬೇಕೆಂದು ಬೆಳಗಾವಿ ಜಿಲ್ಲೆಯ ಮಹಿಳಾ ಪೊಲೀಸ್ ಠಾಣೆಯ ಪಿಎಸ್ಐ ನೇತ್ರಾವತಿ ಪಾಟೀಲ ಹೇಳಿದರು. ಸ್ಥಳೀಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಮಹಿಳಾ ವೇದಿಕೆಯಿಂದ ಬುಧವಾರ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೆಲವು ಯುವಕರು ತಪ್ಪು ಚಟುವಟಿಕೆಗಳಲ್ಲಿ ತೊಡಗಿ ಜೈಲು ಸೇರುವ ಘಟನೆಗಳು ಹೆಚ್ಚುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿ ಮಹಿಳೆಯರು ಆತ್ಮವಿಶ್ವಾಸದಿಂದ ಮುಂದೆ ಸಾಗಬೇಕು ಹಾಗೂ ಶಿಕ್ಷಣದ ಮೂಲಕ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು. ಪ್ರಾಚಾರ್ಯ ನಾಗರಾಜ ಎಚ್.ಕೆ. ಮಾತನಾಡಿ, ಮಹಿಳೆಯರು ಸಮಾಜದ ಅಭಿವೃದ್ಧಿಗೆ ಪ್ರಮುಖ ಶಕ್ತಿಯಾಗಿದ್ದು, ಅವರ ಸಬಲೀಕರಣ ಸಮಾಜದ ಪ್ರಗತಿಗೆ ಅತ್ಯಗತ್ಯ ಎಂದು ಹೇಳಿದರು. ವಾಣಿಜ್ಯ ವಿಭಾಗದ ಡಾ. ಸಂಗೀತಾ ಬಿ. ತೋಲಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿ ರಮ್ಯಾ ಬಳಗದವರಿಂದ ಪ್ರಾರ್ಥನೆ, ಪ್ರೊ. ಎಲ್.ಕೆ. ದಾಮೋಣೆ ಸ್ವಾಗತ, ವಿದ್ಯಾರ್ಥಿನಿ ರಾಜೇಶ್ವರಿ ಅತಿಥಿ ಪರಿಚಯ ಮಾಡಿದರು.

ನಿಧನ ಸುದ್ದಿ

ವಿಠಲ ಈರಪ್ಪ ಹೆಬ್ಬಳ್ಳಿ

◆**ನೇಸರಗಿ:** ಗ್ರಾಮದ ನಿವಾಸಿ (ದೊಡ್ಡವಾಡ ಗ್ರಾಮದ)ವಿಠ್ಠಲ ಈರಪ್ಪ ಹೆಬ್ಬಳ್ಳಿ (53) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಪ್ರಭಾಕರ ಬಂಗೆನ್ನವರ

◆**ಮೂಡಲಗಿ:** ಪಟ್ಟಣದ ರಾಜೀವ ಗಾಂಧಿ ನಗರದ ಪ್ರಭಾಕರ್ ರ ಬಂಗೆನ್ನವರ (70) ನಿಧನರಾದರು. ಮೃತರು ಪತ್ನಿ ಹಾಗೂ ನಾಲ್ಕು ಜನ ಗಂಡು ಮಕ್ಕಳು ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ.





ಹಾರೂಗೇರಿ : ಸ್ಥಳೀಯ ಶ್ರೀ ವಿಠ್ಠಲ ರುಕ್ಮಾಯಿ ಮಂದಿರದಲ್ಲಿ 56 ವರ್ಷಗಳ ನಿಸ್ವಾರ್ಥ ಸೇವೆ ಸಲ್ಲಿಸಿದ ಮಾರುತಿ ಧರ್ಮಟ್ಟಿಯವರನ್ನು ಶ್ರೀ ಲಕ್ಷ್ಮೀನಾರಾಯಣ ಜ್ಯುವೆಲರಿ ಮಾಲೀಕ ಮಹಾದೇವ ಪತ್ತಾರ ಹಾಗೂ ಪರಿವಾರದವರು ಬಂಗಾರ ಲೇಪನ ಬಳಸಿದ ಶ್ರೀ ವಿಠ್ಠಲ ರುಕ್ಮಾಯಿ ಮೂರ್ತಿಯನ್ನು ನೀಡಿ ಸತ್ಕರಿಸಿದರು. ಈ ಸಂದರ್ಭದಲ್ಲಿ ಅನಿಲ ಪತ್ತಾರ, ಪಾಂಡುರಂಗ ಧರ್ಮಟ್ಟಿ, ವಿಠ್ಠಲ ಬಂತಿ, ಶ್ರೀಕಾಂತ ಧರ್ಮಟ್ಟಿ, ಗೋಪಾಲ ಧರ್ಮಟ್ಟಿ, ಸಂತಮಂಡಳಿ, ಮುಂತಾದವರು ಇದ್ದರು.

ಗ್ಯಾರಂಟಿ ಯೋಜನೆ ಫಲಾನುಭವಿಗಳಿಗೆ ಸನ್ಮಾನ

◆**ಖಾನಾಪುರ:** ಪಟ್ಟಣದ ಶಿವಸ್ಮಾರಕ ಸಭಾಭವನದಲ್ಲಿ ಶನಿವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಂದ ಬದುಕು ಕಟ್ಟಿಕೊಂಡ ವಿವಿಧ ಫಲಾನುಭವಿಗಳನ್ನು ಸನ್ಮಾನಿಸಲಾಯಿತು. ವಿಶ್ವ ಮಹಿಳಾ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಮಿತಿಯ ತಾಲೂಕು ಘಟಕದ ಅಧ್ಯಕ್ಷ ಸೂರ್ಯಕಾಂತ ಕುಲಕರ್ಣಿ, ತಾಲೂಕಿನ ಗ್ರಾಮೀಣ ಭಾಗದ ಅನೇಕ ಮಹಿಳೆಯರು ಗೃಹಲಕ್ಷ್ಮೀ ಹಣದಲ್ಲಿ ಹೈನುಗಾರಿಕೆ, ಕುರಿ-ಕೋಳಿ ಸಾಕಾಣಿಕೆ, ಕಿರಾಣಿ ಅಂಗಡಿ, ಕರಕುಶಲ ಕೆಲಸ ಸೇರಿದಂತೆ ವಿವಿಧ ಉದ್ದಿಮೆಗಳನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ. ಶಕ್ತಿ ಯೋಜನೆಯ ಸದ್ಬಳಕೆ ಮಾಡಿಕೊಂಡು ಗ್ರಾಮೀಣ ಭಾಗದಿಂದ ಹಣ್ಣು-ತರಕಾರಿಗಳನ್ನು ಶಹರಕ್ಕೆ ತಂದು ಮಾರಾಟ ಮಾಡಿ ಹೆಚ್ಚಿನ ಲಾಭ ಗಳಿಸುತ್ತಿದ್ದಾರೆ. ಇಂತಹ ಗ್ಯಾರಂಟಿ ಯೋಜನೆಯ ಅರ್ಹ ಫಲಾನುಭವಿಗಳನ್ನು ಗುರಿತಿಸಿ ಗೌರವಿಸುವ ಕೆಲಸವನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಕೈಗೊಳ್ಳಲಾಗಿದೆ ಎಂದು ವಿವರಿಸಿದರು. ಪ್ರತಿ ಗ್ಯಾರಂಟಿ ಯೋಜನೆಯಿಂದ ಆಯ್ದ 10 ಫಲಾನುಭವಿಗಳನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಸತ್ಕರಿಸಲಾಯಿತು. ವೇದಿಕೆಯಲ್ಲಿ ಸಿಡಿಪಿಓ ವಿಕ್ರಮ, ತಾಪಂ ಇಓ ರಮೇಶ ಮೇತ್ರಿ ಸೇರಿದಂತೆ ಗ್ಯಾರಂಟಿ ಸಮಿತಿಯ ಸದಸ್ಯರು, ಅಂಗನವಾಡಿ ಮತ್ತು ಆಶಾ ಸಂಘಟನೆಗಳ ಮುಖಂಡರು, ವಿವಿಧ ಇಲಾಖೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಇದ್ದರು. ಸಂದೀಪ ದೇಶಮುಖ ಕಾರ್ಯಕ್ರಮ ನಿರ್ವಹಿಸಿದರು. ಪ್ರಕಾಶ ಮಾದಾರ ಸ್ವಾಗತಿಸಿ, ದೀಪಾ ಪಾಟೀಲ ವಂದಿಸಿದರು.



ಖಾನಾಪುರ: ಪಟ್ಟಣದ ಶಿವಸ್ಮಾರಕ ಸಭಾಭವನದಲ್ಲಿ ಶನಿವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಂದ ಬದುಕು ಕಟ್ಟಿಕೊಂಡ ವಿವಿಧ ಫಲಾನುಭವಿಗಳನ್ನು ಸನ್ಮಾನಿಸಲಾಯಿತು. ಸಮಿತಿಯ ತಾಲೂಕು ಘಟಕದ ಅಧ್ಯಕ್ಷ ಸೂರ್ಯಕಾಂತ ಕುಲಕರ್ಣಿ , ಸಿಡಿಪಿಓ ವಿಕ್ರಮ, ತಾಪಂ ಇಓ ರಮೇಶ ಮೇತ್ರಿ, ಗ್ಯಾರಂಟಿ ಸಮಿತಿಯ ಸದಸ್ಯರು, ಅಂಗನವಾಡಿ ಮತ್ತು ಆಶಾ ಸಂಘಟನೆಗಳ ಮುಖಂಡರ ಇದ್ದರು.

ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಮಾಹಿತಿ

ನಾಗರಮುನ್ನೋಳಿಗೆ ಉನ್ನತೀಕರಿಸಿದ ಸರ್ಕಾರಿ ಪಿಯು ಕಾಲೇಜು ಮಂಜೂರು

◆**ಚಿಕ್ಕೋಡಿ:** 10ನೇತರಗತಿಗೆನಾಗರಮುನ್ನೋಳಿಯ ಬಹುತೇಕ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ತಮ್ಮ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದರು. ಹೀಗಾಗಿ ಗ್ರಾಮದಲ್ಲಿಯ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಣಗೊಳಿಸಲಾಗಿದೆ ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹೇಳಿದರು.

ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಶನಿವಾರದಂದು ನಾಗರಮುನ್ನೋಳಿ ಗ್ರಾಮದ ಪ್ರಮುಖರಿಗೆ ಮಂಜೂರಾತಿ ಪತ್ರ ವಿತರಿಸಿ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಸರ್ಕಾರಿ ಪಿಯು ಕಾಲೇಜು ಸ್ಥಾಪನೆ ಮಾಡುವಂತೆ ಸ್ಥಳೀಯರು ಬೇಡಿಕೆ ಇಟ್ಟಿದ್ದರು. ಸ್ಥಳೀಯರ ಮನವಿ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಮನವಿಗೆ ಸ್ಪಂದಿಸಿ ಉನ್ನತೀಕರಣ ಮಾಡಿದ್ದರಿಂದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ ಎಂದರು.

ನಾಗರಮುನ್ನೋಳಿ ಗ್ರಾಮದ ಮುಖಂಡ ಶಿವಪ್ಪ ಮರ್ಯಾಯಿ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಗ್ರಾಮದಲ್ಲಿ ಪಿಯು ಕಾಲೇಜು ಇಲ್ಲದ್ದರಿಂದ ಸಾಕಷ್ಟು ವಿದ್ಯಾರ್ಥಿಗಳು 10ನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದುಕೊಳ್ಳುತ್ತಿದ್ದರು. ಅದರಲ್ಲೂ ಬಾಲಕಿಯರು ಬೇರೆ ಬೇರೆ ಊರುಗಳಿಗೆ ಹೋಗಿ ಶಿಕ್ಷಣ ಪಡೆಯುವದಕ್ಕೆ ತೊಂದರೆಯಾಗುತ್ತಿತ್ತು. ಇದೀಗ ಪಿಯು ಕಾಲೇಜು ಸ್ಥಾಪನೆ ಮಾಡುತ್ತಿರುವುದು ಸಂತಸ ತಂದಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಡಿಡಿಪಿಯು ಪಾಂಡುರಂಗ ಭಂಡಾರೆ, ಮುಖಂಡ ಸಿದ್ದಪ್ಪ ಮರ್ಯಾಯಿ, ಲಕ್ಷ್ಮಣ ಈಟಿ, ಅಜೀತ ಮರ್ಯಾಯಿ, ಬಸಲಿಂಗ ಅರಬಾವಿ, ಲಾಲಸಾಬ ಮುಲ್ತಾನಿ, ಕಾಸಪ್ಪ ಗಿಜ್ಜನ್ನವರ, ಸಿದ್ದಪ್ಪ ಬಂಬಲವಾಡೆ, ಸುಲ್ತಾನ ಮುಲ್ತಾನಿ ಇತರರು ಇದ್ದರು.



ಚಿಕ್ಕೋಡಿ ಪಟ್ಟಣದ ದುರ್ಗಾಭವನದಿಂದ ಅಂಕಲಿಕೂಟದವರೆಗೆ ರಸ್ತೆಯ ಎರಡೂ ಬದಿಯಲ್ಲಿ ಅಗಲೀಕರಣ ಮಾಡಲು ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ 1.09 ಕೋಟಿ ರೂ. ಅನುದಾನ ಮಂಜೂರಾಗಿದೆ. ಅತೀ ಶೀಘ್ರದಲ್ಲಿಯೇ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸಾರ್ವಜನಿಕರ ಸುಗಮ ಸಂಚಾರಕ್ಕೆ, ವ್ಯಾಪಾರಸ್ಥರಿಗೆ ವ್ಯಾಪಾರ ವಹಿವಾಟಿಗೆ ಅನುಕೂಲವಾಗಲಿದೆ.

■ ಪ್ರಕಾಶ ಹುಕೇರಿ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ

» ನಾಗರಮುನ್ನೋಳಿ ಗ್ರಾಮದ ಪ್ರಮುಖರಿಗೆ ಉನ್ನತೀಕರಿಸಿದ ಸರ್ಕಾರಿ ಪಿಯು ಕಾಲೇಜು ಮಂಜೂರಾತಿ ಪತ್ರ ವಿತರಣೆ

ಮಾನವೀಯತೆಗೆ ಬದ್ಧರಾಗಿ: ನ್ಯಾ. ಶಾಂತಮ್ಮ

◆**ಮೂಡಲಗಿ:** ಮಹಿಳೆಯರು ತಮಗೆ ಸಂವಿಧಾನದತ್ತವಾದ ಹಕ್ಕು ಮತ್ತು ಅಧಿಕಾರವನ್ನು ಬಳಸಿಕೊಂಡು ಜೀವನವನ್ನು ರೂಪಿಸಿಕೊಳ್ಳಿ. ಜೊತೆಗೆ ಕರ್ತವ್ಯ ಮತ್ತು ಮಾನವೀಯತೆಗೆ ಬದ್ಧರಾಗಿರಿ ಎಂದು ಮೂಡಲಗಿಯ ಹಿರಿಯ ದಿವಾನಿ ನ್ಯಾಯಾಧೀಶೆ ಶಾಂತಮ್ಮ ಮಲ್ಲಿಕಾರ್ಜುನ ಗೌಡ ಪಿ. ಮಹಿಳೆಯರಿಗೆ ಕಿವಿಮಾತು ಹೇಳಿದರು.

ಶುಕ್ರವಾರ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ವಾಣಿಜ್ಯ ಮತ್ತು ಬಿಸಿಎ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಮಹಿಳಾ ಸಂಘ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ತಾಲೂಕಾ ನ್ಯಾಯವಾದಿಗಳ ಸಂಘ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿ, ಇಂದು ಎಲ್ಲ ಹಂತದಲ್ಲೂ ಮಹಿಳೆ ತನ್ನ ಛಾಪು ಮೂಡಿಸುತ್ತಿದ್ದು ಇತ್ತೀಚೆಗೆ ನಡೆದ ಕನ್ಯಾಯವಾದಿಗಳ ಹಾಗೂ ನ್ಯಾಯಾಧೀಶರ ನೇಮಕಾತಿಯಲ್ಲಿ ಶೇ 75 ರಷ್ಟು ಮಹಿಳೆಯರೇ ನೇಮಕಗೊಂಡಿದ್ದು ಹೆಮ್ಮೆಯ ಸಂಗತಿ ಎಂದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಚೇರಮನ್ ವೆಂಕಟೇಶ ಸೋನವಾಲ್ಕರ ಮಾತನಾಡಿ, ನ್ಯಾಯಾಧೀಶರೇ ನಮ್ಮ ಕಾಲೇಜಿಗೆ ಬಂದು ಮಹಿಳಾ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಮಾತನಾಡಿದ್ದು ವಿದ್ಯಾರ್ಥಿಗಳು ಅದರ ಸದುಪಯೋಗ ಪಡೆದುಕೊಂಡು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ನಮ್ಮ ಪದವಿ ಕಾಲೇಜಿನ ಮುಂಬರುವ ಪ್ರವೇಶಾತಿಯಲ್ಲಿ ಪಿ. ಯು. ಸಿ.ಯಲ್ಲಿ ಶೇ 90.ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತಪ್ರವೇಶನೀಡಲಾಗುವುದು ಎಂದು ಘೋಷಿಸಿದರು.

ನ್ಯಾಯವಾದಿ ಜಿ.ಪಿ. ಕುಡತೆ, ಸುಶ್ಮಿತಾ ಪಾಟೀಲ ದುಂಡವ್ವ ನೇಮಗೌಡರ ಮಾತನಾಡಿದರು

ಆಡಳಿತಾಧಿಕಾರಿ ಡಾ ಎಸ್. ಎಲ್ ಚಿತ್ರಗಾರ, ಮಹಿಳಾ ಸಬಲೀಕರಣ ಘಟಕದ ಅಧ್ಯಕ್ಷ ಭಾರತಿ ತಳವಾರ, ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಎ.ಎಸ್ ಮಿಸಿ ನಾಯಿಕ, ಐಕ್ಯೂಎಸಿ ಸಂಯೋಜನಾಧಿಕಾರಿ ಪಿ.ಬಿ ಚೌಡಕಿ, ಐಟಿ ಸಂಯೋಜನಾಧಿಕಾರಿ ಎಂ.ಎಸ್.ಕುಂದರಗಿ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಪವನಕುಮಾರ, ಕೆಎಲ್‌ಪಿ ಹಿಡಕಲ್ ಗ್ರಂಥಪಾಲಕ ಡಾ ಬಸವಂತ ಬರಗಾಲಿ ಉಪಸ್ಥಿತರಿದ್ದರು.

ಮಹಿಳಾ ಸಂಘದ ಅಧ್ಯಕ್ಷೆ ವೇದಾ ದೇಶಪಾಂಡೆ ಸ್ವಾಗತಿಸಿ, ಎಸ್ ಕೆ ಅಂಗಡಿ ಶಿಲ್ಪಾ ಕಾಂಬಳೆ ಕಾರ್ಯಕ್ರಮ ನಿರ್ವಹಿಸಿದರು. ಮಹಿಳಾ ಸಂಘದ ಉಪಾಧ್ಯಕ್ಷೆ ಪ್ರೀತಿ ಬೆಳಗಲಿ ವಂದಿಸಿದರು.



ಎಐ ಸ್ಮಾರ್ಟ್ ಬೋರ್ಡ್ ವಿತರಣೆ

◆**ಹುಕ್ಕೇರಿ:** ಸರಕಾರಿ ಶಾಲೆಯಲ್ಲಿ ಕಲಿತ ಉದ್ಯಮಿಗಳಾದ ಮಹೇಶ ಬೆಲ್ಲದ ಮತ್ತು ಶಿವಾನಂದ ಮಹಾಶೆಟ್ಟಿ ಅವರು ಅದರ ಸ್ಮರಣೆಗಾಗಿ ಕೋಟ್ಯಾಂತರ ರೂ. ವೆಚ್ಚದ ಇಂಟರ್ಯಾಕ್ಟಿವ್ ಎ.ಐ ಸ್ಮಾರ್ಟ್ ಬೋಡ್ ರ್ಗಳನ್ನು ಹುಕ್ಕೇರಿ ಮತಕ್ಷೇತ್ರದ 50 ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಉಚಿತವಾಗಿ ವಿತರಿಸಿದ್ದು ನಿಜಕ್ಕೂ ಪ್ರಶಂಸನೀಯ ಕಾರ್ಯವೆಂದು ಮಾಜಿ ಸಂಸದ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ ಕತ್ತಿ ಹೇಳಿದರು.

ಅವರು ಪಟ್ಟಣದ ವಿಶ್ವರಾಜ ಭವನದಲ್ಲಿ ಆನಲೈನ್ ಇನ್‌ಸ್ಟ್ರುಮೆಂಟ್ಸ್ (ಇಂಡಿಯಾ) ಲಿಮಿಟೆಡ್ ಮತ್ತು ಶ್ರೀ ಬಿ.ಜೆ ಬೆಲ್ಲದ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಹುಕ್ಕೇರಿ ತಾಲೂಕಿನ 50 ಎ.ಐ ತಂತ್ರಜ್ಞಾನ ಸ್ಮಾರ್ಟ ಬೋರ್ಡ ವಿತರಣಾ ಸಮಾರಂಭದಲ್ಲಿ ಮಾತನಾಡಿ, ಇದರ ಜತೆಗೆ ಶಾಲೆಗಳಿಗೆ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳು, ಶಾಲಾ ಕೊಠಡಿಗಳ ನವೀಕರಣ, ಪೀಠೋಪಕರಣ ಮತ್ತು ಆಟೋಪಕರಣಗಳ ದೇಣಿಗೆಯಾಗಿ ನೀಡುತ್ತಿದ್ದಾರೆ ಎಂದರು.

ಉದ್ಯಮಿ ಮಹೇಶ ಬೆಲ್ಲದ ಮಾತನಾಡಿ, 35 ವರ್ಷದಿಂದ ನಡೆಸುತ್ತಿರುವ ಆನಲೈನ್ ಇನ್‌ಸ್ಟ್ರುಮೆಂಟ್ಸ್ (ಇಂಡಿಯಾ) ಲಿಮಿಟೆಡ್ ಸಂಸ್ಥೆ, ಎ.ಐ ತಂತ್ರಜ್ಞಾನದ ಇಂಟರ್ಯಾಕ್ಟಿವ್ ಬೋರ್ಡಗಳನ್ನು ದೇಶದಲ್ಲಿಯೇ ನಾವು ಪ್ರಪ್ರಥಮವಾಗಿತಯಾರಿಸಿದ್ದೇವೆ. ಅವುಗಳಲ್ಲಿ ಸ್ವಲ್ಪ ಬೋರ್ಡಗಳನ್ನು ನಮ್ಮ ಭಾಗದ ಮಕ್ಕಳಿಗೆ ನೀಡುತ್ತಿದ್ದೇವೆ ಎಂದರು.

ಸಂಸ್ಥೆಯ ಮತ್ತೋರ್ವ ಸಹ ಸಂಸ್ಥಾಪಕ ಶಿವಾನಂದ ಮಹಾಶೆಟ್ಟಿ, ಬಿಇಓ ಪ್ರಭಾವತಿ ಪಾಟೀಲ ಮಾತನಾಡಿದರು.

ಯುಪಿಎಸ್‌ಸಿ ಟಾಪರ್ ಕಿರಣಕಮತೆ, ನಿಡಸೋಶಿಯ ಜಗದ್ಗುರು ಡಾ.ಪಂಚಮ ಶಿವಲಿಂಗೇಶ್ವರ ಶ್ರೀಗಳು ಮಾತನಾಡಿದರು.

ಯುಪಿಎಸ್‌ಸಿ ಪರೀಕ್ಷೆ ಸಾಧಕರಾದ ಕಿರಣಕಮತೆ, ಬಸವರಾಜ ಪಾಟೀಲ ಮತ್ತಿತರರನ್ನು ಸನ್ಮಾನಿಸಿದರು.

ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಹಿರಾ ಶುಗರ್ಸ್ ನಿರ್ದೇಶಕ ಸುರೇಶ ಬೆಲ್ಲದ, ಪ್ರಕಾಶ ಬೆಲ್ಲದ, ರಾಜೇಶ್ವರಿ ಮಹಾಶೆಟ್ಟಿ, ರಮೇಶ ಬೆಲ್ಲದ ಇತರರಿದ್ದರು. ಬಿಇಓ ಪ್ರಭಾವತಿ ಪಾಟೀಲ ಸ್ವಾಗತಿಸಿ, ಸಿದ್ದಪ್ಪ ಮುರಚಿಟ್ಟಿ ನಿರೂಪಿಸಿ, ಎ. ಎಸ್. ಪದ್ಮನ್ನವರ ವಂದಿಸಿದರು.



ಕೃಷಿ ಅಭಿವೃದ್ಧಿಗೆ ವಿವಿಧ ಸಾಲ ಸೌಲಭ್ಯ: ಪನಿಶಯನ್

◆**ಚಿಕ್ಕೋಡಿ:** ಕೆನರಾ ಬ್ಯಾಂಕ್ ರೈತರಿಗೆ ಬೆಳೆ ಸಾಲ, ಕೃಷಿ ಯಾಂತ್ರೀಕರಣ, ಟ್ರ್ಯಾಕ್ಟರ್, ನೀರಾವರಿ ಪಂಪ್‌ಸೆಟ್, ಮತ್ತು ಹೈಟೆಕ್ ಕೃಷಿ ಉಪಕರಣಗಳ ಖರೀದಿಗಾಗಿ, ಪಶುಸಂಗೋಪನೆ (ಕುರಿ, ಮೇಕೆ, ಕೋಳಿ), ರೇಷ್ಮೆ ಕೃಷಿ ಮತ್ತು ಭೂಮಿ ಅಭಿವೃದ್ಧಿಗೆ ವಿವಿಧ ಸಾಲ ಸೌಲಭ್ಯಗಳನ್ನು ನೀಡುತ್ತದೆ. ಜತೆಗೆ ಸರ್ಕಾರದ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಕೂಡ ನೀಡುತ್ತದೆ ಎಂದು ಕೆನರಾ ಬ್ಯಾಂಕಿನ ಆರ್. ಜಿ. ಎಂ. ಪನಿಶಯನ್ ಎಂ. ಮಾತನಾಡಿದರು.

ನಿಪ್ಪಾಣಿ ನಗರದಲ್ಲಿ ಜೊಲ್ಲೆ ಗ್ರುಪ್ ವತಿಯಿಂದ ಮತ್ತು ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಸಹಯೋಗದಲ್ಲಿ ಕಾರ್ಖಾನೆಯ ಆವರಣದಲ್ಲಿ ಆಯೋಜಿಸಿದ ಕೃಷಿ ಮೇಳದ ನಾಲ್ಕನೆಯ ದಿನದ ಸೇಮಿನಾರ್‌ನಲ್ಲಿ ಅಗ್ರಿ ಫಾಯನಾನ್ಸ್ ವಿಷಯದ ಕುರಿತು ಮಾತನಾಡಿ, ಇನ್ನಿತರ ಸಾಲಗಳ ಜತೆಗೆ ಡಿಜಿಟಲ್ ಯುಗದಲ್ಲಿ ಸಾರ್ವಜನಿಕರು ತೆಗೆದುಕೊಳ್ಳಬೇಕಾದ ಜಾಗೃತಿಗಳು, ಡಿಜಿಟಲ್ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

ಈ ವೇಳೆ ಕೆನರಾ ಬ್ಯಾಂಕಿನ ಕೃಷಿ ಸಾಲಗಳ ವ್ಯವಸ್ಥಾಪಕ ಅನೀಲ ಮೈತ್ರ, ನಿಪ್ಪಾಣಿ ಶಾಖೆಯ ವ್ಯವಸ್ಥಾಪಕ ಶ್ರೀಕಾಂತ ಕಾಣಕಿರದ, ಕಾರ್ಖಾನೆಯ ಅಧ್ಯಕ್ಷ ಮಲಗೊಂಡಾ ಪಾಟೀಲ, ನಿರ್ದೇಶಕ ಅಪ್ಪಾಸಾಹೇಬ ಜೊಲ್ಲೆ, ಜಯವಂತ ಭಾಟಲೆ, ಪ್ರಕಾಶ ಶಿಂಧೆ, ಸಮಿತ ಸಾಸನೆ, ಶರದ ಜಂಗಟೆ, ಸುಹಾಸ ಗೂಗೆ, ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ ಶಿರಗಾವೆ, ಕಾರ್ಯಾಲಯದ ಅಧೀಕ್ಷಕ ಗಜಾನನ ರಾಮನಕಟ್ಟಿ ಉಪಸ್ಥಿತರಿದ್ದರು. ಜೊಲ್ಲೆ ಗ್ರುಪ್‌ನ ಇವೆಂಟ್ ಡೈರೆಕ್ಟರ್ ವಿಜಯ ರಾವುತ ಸ್ವಾಗತಿಸಿದರು. ಅನಿಲ ಶಿಂಧೆ ನಿರೂಪಿಸಿದರು. ಕಾರ್ಖಾನೆಯ ಅಧೀಕ್ಷಕ ಗಜಾನನ ರಾಮನಕಟ್ಟಿ ವಂದಿಸಿದರು.



ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಇಂದು

◆**ಮೂಡಲಗಿ:** ತಾಲೂಕಿನ ಕಲ್ಲೋಳಿ ಸಿದ್ಧಾರೂಢ ಮಠದಲ್ಲಿ ಇಂಚಲದ ಸಾಧು ಸಂಸ್ಥಾನದ ಶಿವಾನಂದ ಭಾರತಿ ಸ್ವಾಮೀಜಿಗಳ ಅಮೋಘ 55ನೇ ವರ್ಷದ ಆಗಮನ ಮಹೋತ್ಸವ ಅಂಗವಾಗಿ ಮಾ. 15ರಂದು 7ನೇ ವರ್ಷದ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ಭಗವಂತ ಪತ್ತಾರ ತಿಳಿಸಿದರು.

ಶುಕ್ರವಾರ ಸಿದ್ಧಾರೂಢ ಮಠದಲ್ಲಿ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಹಾಗೂ ಕಾರ್ಯಕ್ರಮದ ಪ್ರಚಾರ ಪತ್ರಿಕೆಯ ಬಿಡಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಪ್ರಥಮ ಬಹುಮಾನ ರೂ.31,000, ದ್ವಿತೀಯ ರೂ. 26,000, ತೃತೀಯ ರೂ.21,000, ಚತುರ್ಥ ರೂ.16,000, ಸಮಾಧಾನಕರ ಎರಡು ಬಹುಮಾನ ತಲಾ ರೂ.4,000 ನಗದು ಬಹುಮಾನ, ಪ್ರಮಾಣ ಪತ್ರನೀಡಲಾಗುವುದು ಎಂದರು.

ಮಾ.15ರಂದು ಬೆಳಿಗ್ಗೆ 9ಕ್ಕೆ ಭಜನಾ ಸ್ಪರ್ಧೆಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ಇಂಚಲದ ಸಾಧುಸಂಸ್ಥಾನಮಠದ ಡಾ. ಶಿವಾನಂದ ಭಾರತಿ ಸ್ವಾಮೀಜಿ, ಇಂಚಲದ ಪೂರ್ಣಾನಂದ ಭಾರತಿ ಸ್ವಾಮೀಜಿ, ಹಡಗಿನಾಳದ ಮಲ್ಲೇಶ್ವರ ಶರಣರು, ಹುಬ್ಬಳ್ಳಿಯ ಸಿದ್ಧಾರೂಢ ಟ್ರಸ್ಟ್ ಕಮಿಟಿ ಧರ್ಮದರ್ಶಿ ಶ್ಯಾಮಾನಂದ ಪೂಜಾರಿ ಇವರು ಭಾಗವಹಿಸುವರು ಎಂದರು. ಭಜನಾ ಸ್ಪರ್ಧೆಯ ಸಂಘಟಕರಾದ ಮಲ್ಲಪ್ಪಾ ಖಾನಾಪೂರ, ಅಡಿವೆಪ್ಪ ಸೌಸುದ್ದಿ, ಶಿವಪ್ಪ ಸೌಸುದ್ದಿ, ಭೀಮಶೆಪ್ಪಾ ಖಾನಾಪೂರ, ಭಗವಂತ ಪತ್ತಾರ, ಬಸವರಾಜ ಸಂಪಗಾಂವ, ಸಾತಪ್ಪ ಖಾನಾಪೂರ, ಸತ್ತೆಪ್ಪ ಖಾನಾಪೂರ, ಅರ್ಜುನ ಚಿಕ್ಕೋಡಿ, ಮಹಾಂತೇಶ ಹಮ್ಮಿನವರ, ಶ್ರೀಶೈಲ್ ಪಾಟೀಲ, ಶಿವಾನಂದ ಮಳವಾಡ, ಬಸವರಾಜ ಮರಗನ್ನವರ, ಭೀಮಪ್ಪ ಖಾನಾಪೂರ, ವಿವೇಕ ಹಾಳಕಿ, ಶಶಿಕಾಂತ ಕಡಲಗಿ ಇದ್ದರು. ಸ್ಪರ್ಧೆಯಲ್ಲಿ ಭಾಗವಹಿಸುವವರು, ಮಾಹಿತಿಗಾಗಿ ಮೊ. 9342153155, 9731698680 ಸಂಪರ್ಕಿಸಲು ತಿಳಿಸಿದ್ದಾರೆ.



ಬೆಳಗಾವಿ-ವಿಜಯಪುರ ಬಸ್‌ಗೆ ಪೂಜೆ

◆**ಕಾಗವಾಡ:** ಕಲ್ಯಾಣ ಕರ್ನಾಟಕ ಘಟಕದಿಂದ ಬೆಳಗಾವಿಯಿಂದ ವಿಜಾಪುರಕ್ಕೆ ಬಸ್ ಬಿಟ್ಟ ಹಿನ್ನಲೆ ಬಸ್‌ಗೆ ಪೂಜೆ ಮಾಡಿದ ಐನಾಪುರ ಗ್ರಾಮಸ್ಥರು ನೂತನ ಬಸ್ಸನು ಪ್ರಾರಂಭಿಸಲು ಸೂಚಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಪಾಟೀಲ ಅಪ್ಜಲಪುರ ಅವರಿಗೆ ಐನಾಪುರ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಧನ್ಯವಾದ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಐನಾಪುರ ಗ್ರಾಮದಲ್ಲಿ ಬೆಳಗಾವಿಗೆ ಬಸ್ ಬಿಟ್ಟ ಹಿನ್ನಲೆ ಹಲವಾರು ಸಾರ್ವಜನಿಕರಿಗೆ ಅನುಕೂಲವಾಗಿದೆ. ವಿಜಯಪುರದಿಂದ ತಿಕೋಟಾ, ತೆಲಸಂಗ, ಅಥಣಿ, ಐನಾಪುರ, ಉಗಾರ, ಶಿರಗುಪ್ಪಿ, ಚಿಕ್ಕೋಡಿ ಮೂಲಕ ಬೆಳಗಾವಿಗೆ ಬಸ್ ಪ್ರಯಾಣಿಸಲಿದೆ.

ವಿಜಾಪುರದಿಂದ ಬೆಳಗಾವಿಗೆ ಬಸ್ ಬಿಟ್ಟ ಖುಷಿಗೆ ಬಸ್ ಪೂಜೆ ಮಾಡಿದ ಐನಾಪುರ ಗ್ರಾಮಸ್ಥರು ಬಸ್‌ಗೆ ಪೂಜೆ ಮಾಡಿ ಚಾಲಕ, ನಿರ್ವಾಹಕ ಕೆ.ಎ.ಹುಂಡಿ, ಎಂ.ಎಸ್ ವಾಲಿಕಾರ ಅವರಿಗೆ ಸತ್ಕಾರ ಮಾಡಿದರು.

ಈ ವೇಳೆ ಮುಖಂಡ ಉಮೇಶ ಕಾಚಿ, ರಾಮು ಹವಳಪಗೋಳ, ಚಮನರಾವ ಪಾಟೀಲ, ಮಹೇಶ ಸೊಲ್ಲಾಪುರ, ಸುಮೀತ ಕಾರ್ಚಿ, ಮಹಾಂತೇಶ ಹಿರೇಮಠ, ವಿನಾಯಕ ಕಮತೆ, ಕುಮಾರ ಗಾಣಿಗೇರ, ಸಂಜು ಕಟ್ಟಿ, ಶಿವಪ್ರಸಾದ ಕಾರ್ಚಿ, ಅಶೋಕ ಪೋತದಾರ, ವಿಶ್ವನಾಥ ನಾಮದಾರ, ಮಲಿಕಾರ್ಜುನ ಕೊಲ್ಲಾರ, ಭರತೇಶ ಪಾಟೀಲ ಸೇರಿದಂತೆ ಇತರರು ಇದ್ದರು.



ರೇಣುಕಾಚಾರ್ಯರ ಜ್ಯೋತಿಗೆ ಪೂಜೆ



◆**ಚನ್ನಮ್ಮನ ಕಿತ್ತೂರು:** ಜಗದ್ಗುರು ರೇಣುಕಾಚಾರ್ಯರ ಜಯಂತಿ ನಿಮಿತ್ಯ ರೇಣುಕಾಚಾರ್ಯರ ಜ್ಯೋತಿಗೆ ಪೂಜೆ ಸಲ್ಲಿಸಿ ಹಲವಾರು ಭಕ್ತರ ಉಪಸ್ಥಿತಿಯಲ್ಲಿ ಬೇಡಜಂಗಮ ಸಮಾಜದ ಅಧ್ಯಕ್ಷ ಡಾ.ಎಂ. ಎಸ್. ಕಲ್ಮಠ ರೇಣುಕಾಚಾರ್ಯರ ಜ್ಯೋತಿಯ ಮೆರವಣಿಗೆಗೆ ಚಾಲನೆ ನೀಡಿದರು.

ತಾಲೂಕಿನ ಹೊನ್ನಿದಿಬ್ಬ ಗ್ರಾಮದ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನದಲ್ಲಿ ರೇಣುಕಾಚಾರ್ಯ ಮೂರ್ತಿಗೆ ಭಕ್ತರಿಂದ ಅಭಿಷೇಕ, ಮಂಗಳಾರತಿ ನೆರವೇರಿಸಿ ಅಲ್ಲಿಂದ ರೇಣುಕಾಚಾರ್ಯರ ಭಾವ ಚಿತ್ರದ ಜೊತೆಗೆ ಜ್ಯೋತಿಯನ್ನು ಬಿಳ್ಕೋಟ್ಟರು ನಂತರ ಪಟ್ಟಣಕ್ಕೆ ಹೊರಟ ಜ್ಯೋತಿಗೆ ಮಾರ್ಗ ಮದ್ಯ ಉಗರಖೋಡ, ಬಸಾಪುರ, ಶೀಗಿಹಳ್ಳಿ ಕೆ.ಎ. ಗ್ರಾಮಗಳು ಸೇರಿದಂತೆ ಕಿತ್ತೂರು ಪಟ್ಟಣದ ಪ್ರಮುಖ ಬಿದಿಗಳಲ್ಲಿ ಸಂಚರಿಸಿ ಕೊನೆಗೆ ವೀರಭದ್ರೇಶ್ವರ ದೇವಸ್ಥಾನ ತಲುಪಿತು. ಮಾರ್ಗದುದ್ದಕ್ಕೂ ಭಕ್ತರು ಪೂಜೆ ಸಲ್ಲಿಸಿ ಜೈಕಾರಗಳನ್ನು ಕೂಗುತ್ತ ತಮ್ಮ ಭಕ್ತಿ ಭಾವ ಮೆರೆಯುತ್ತಿದ್ದರು.

ಮುಖಂಡರಾದ ವಿ.ಆರ್. ಪಾಟೀಲ, ಬಿ.ಆರ್. ಪಾಟೀಲ, ಸಾಹಿತಿ ಉಮಾದೇವಿ ಪಾಟೀಲ, ಮಹಾಂತೇಶ ಪಾಟೀಲ, ಪ್ರಭು ಪಾಟೀಲ, ಸುರೇಶ ಮುರಡಿಮಠ, ವಿರೇಶ ಹಿರೇಮಠ, ಶಿವು ಹಿರೇಮಠ, ಕಲ್ಲಯ್ಯ ಪತ್ರಿಮಠ, ಮಂಜನಾಥ ಶಿವಳ್ಳಿಮಠ, ಆನಂದ ನರೇಂದ್ರಮಠ, ಆನಂದ ವಸ್ತದ, ವಿಶ್ವನಾಥ ಹಾಲ್ಮಠ, ಅಜ್ಜಯ್ಯ ಹಿರೇಮಠ, ಗುರುಪ್ರಸಾದ ಹಿರೇಮಠ, ಸೇರಿದಂತೆ ನೂರಾರು ಭಕ್ತರು ಉಪಸ್ಥಿತರಿದ್ದರು.


1 ಲಕ್ಷ ರೂ. ಮೊತ್ತದ ಚೆಕ್ ವಿತರಣೆ

◆**ಅಡಹಳ್ಳಿ:** ಪ್ರತಿಯೊಂದು ಗ್ರಾಮದಲ್ಲಿ ಬರುವ ಸಮುದಾಯದ ಅಭಿವೃದ್ಧಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಗ್ರಾಮ ವಿಕಾಸ ಯೋಜನೆಯಡಿ ನೀಡುವ ಪ್ರೋತ್ಸಾಹದ ಕಾರ್ಯಕ್ರಮಗಳು ತಾಲೂಕಿನಲ್ಲಿ ಮಾದರಿಯಾಗಿವೆ ಎಂದು ತಾಲೂಕಾ ಯೋಜನಾಧಿಕಾರಿ ರಜಬಲಿ ಮೇಲಿನಮನಿ ಹೇಳಿದರು.

ಸಮೀಪದ ನಂದಗಾಂವ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿ.ಸಿ.ಟ್ರಸ್ಟ್ ಅಥಣಿಯವರ ವತಿಯಿಂದ ಶ್ರೀ ಸನ್ಮತಿ ಶಿಕ್ಷಣ ಸಂಸ್ಥೆಯ ಅನುದಾನಿತ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಕಾಮಗಾರಿಗೆ ಧರ್ಮಸ್ಥಳದ ಪರಮಪೂಜ್ಯ ಡಾ. ವಿರೇಂದ್ರ ಹೆಗಡೆಯವರು ಮಂಜೂರಾತಿ ಮಾಡಿದ 1 ಲಕ್ಷ ರೂ. ಮೊತ್ತದ ಚೆಕ್ ವಿತರಿಸಿ ಮಾತನಾಡಿ, ಧರ್ಮಸ್ಥಳದ ಪೂಜ್ಯರು ಮಾಡುತ್ತಿರುವ ಜನೋಪಯೋಗಿ ಕಾರ್ಯಕ್ರಮಗಳಲ್ಲಿ ಶಾಲೆಯ ಅಭಿವೃದ್ಧಿಯೂ ಸೇರಿ ಇನ್ನಿತರ ಕಾರ್ಯಕ್ರಗಳಿಗೆ ಸಹಾಯಧನ ನೀಡುತ್ತಿದ್ದಾರೆ. ಇನ್ನು ತಾಲೂಕಿನಲ್ಲಿ ಮುಂದಿನ ದಿನಗಳಲ್ಲಿ ಇನ್ನಿತರ ಶಾಲೆಗಳಿಗೂ ಸಹಾಯಧನ ಒದಗಿಸಲಾಗುವುದು ಎಂದರು. ಈ ವೇಳೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಾಬಾಗೌಡ ಪಾಟೀಲ, ಒಕ್ಕೂಟ ಅಧ್ಯಕ್ಷ ಸುಶೀಲ ಮಾದಗೌಡರ, ಲಕ್ಕವ್ವ ನಾಯಕ, ವಲಯ ಮೇಲ್ವಿಚಾರಕಿ ಶಾಂತಾ ಪೂಜಾರಿ, ಸೇವಾ ಪ್ರತಿನಿಧಿ ಸುನೀತಾ ರಾಜಮನಿ ಸೇರಿದಂತೆ ಶಾಲೆ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.



ಕಳಪೆ ರಸ್ತೆ ಕಾಮಗಾರಿ: ಕರವೇ ಆಕ್ರೋಶ



◆**ಖಾನಾಪುರ:** ಪಟ್ಟಣದ ಶಿವಸ್ಮಾರಕ ವೃತ್ತದಿಂದ ರೈಲ್ವೆ ಸ್ಟೇಶನ್ ವರೆಗೆ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಕರವೇ ಸ್ವಾಭಿಮಾನಿ ಬಣದ ತಾಲೂಕು ಘಟಕದ ಅಧ್ಯಕ್ಷ ಶ್ರವಣ ಲಮಾಣಿ ದೂರಿದ್ದಾರೆ.

ಶನಿವಾರ ಸಂಘಟನೆಯ ಕಾರ್ಯಕರ್ತರೊಂದಿಗೆ ಕಾಮಗಾರಿ ಸ್ಥಳಕ್ಕೆ ತೆರಳಿ ಕಾಮಗಾರಿಯ ಗುಣಮಟ್ಟ ಪರಿಶೀಲಿಸಿದ ಅವರು, ಹಳೆಯ ರಸ್ತೆಯ ಮೇಲೆ ಕೇವಲ 2 ಇಂಚು ದಪ್ಪ ಡಾಂಬರ್ ಹಾಕಲಾಗಿದೆ. ಹಳೆಯ ರಸ್ತೆಗೆ ತೇಪೆ ಹಚ್ಚುವ ಕೆಲಸ ಕೈಗೊಳ್ಳಲಾಗಿದೆ. ಕಾಮಗಾರಿ ಸ್ಥಳದಲ್ಲಿ ಯಾವುದೇ ಅಧಿಕಾರಿ ಅಥವಾ ಇಂಜಿನಿಯರ್ ಇಲ್ಲ. ಕಳಪೆ ಕಾಮಗಾರಿ ಕುರಿತು ಕೆಲಸಗಾರರನ್ನು ಪ್ರಶ್ನಿಸಿದಾಗ ಕೆಲಸವನ್ನು ನಿಲ್ಲಿಸಿ ಮೌನಕ್ಕೆ ಜಾರಿದ್ದಾರೆ. ಪಟ್ಟಣದಿಂದ ರೈಲು ನಿಲ್ದಾಣ, ಅಸೋಗಾ, ಮನಸಾಪುರ, ಕುಟಿನೋನಗರ ಗ್ರಾಮಗಳಿಗೆ ತೆರಳುವ ಮುಖ್ಯ ರಸ್ತೆ ಇದಾಗಿದ್ದು, ಇದೇ ರೀತಿ ಕಳಪೆ ಗುಣಮಟ್ಟದ ರಸ್ತೆ ನಿರ್ಮಿಸಿದರೆ ಮುಂದಿನ ಮಳೆಗಾಲದಲ್ಲಿ ಮತ್ತೆ ಯತಾಸ್ಥಿತಿಗೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೂಡಲೇ ಈ ರಸ್ತೆಯನ್ನು ಸರಿಯಾದ ಕ್ರಮದಲ್ಲಿ ನಿರ್ಮಿಸಬೇಕು. ಗುಣಮಟ್ಟದ ಡಾಂಬರ್ ಬಳಸಬೇಕು ಮತ್ತು ಸರ್ಕಾರದ ನಿಯಮಯಾವಳಿ ಪ್ರಕಾರ ರಸ್ತೆ ಕಾಮಗಾರಿ ನಡೆಯಬೇಕು. ತಪ್ಪಿದಲ್ಲಿ ಸಂಘಟನೆಯ ಕಾರ್ಯಕರ್ತರು ಲೋಕೋಪಯೋಗಿ ಇಲಾಖೆಯ ವಿರುದ್ಧ ಬೀದಿಗಳಿದು ಹೋರಾಟ ನಡೆಸುವ ಅನಿವಾರ್ಯತೆ ಎದುರಾಗಲಿದೆ ಎಂದು ಸಂಘಟನೆಯ ಕಾರ್ಯಕರ್ತರು ಎಚ್ಚರಿಸಿದರು.

ಕಿರುಸುದ್ದಿ

ಇಂದು ಭಾವೈಕ್ಯತೆಯ ಸಮಾಗಮ

ಮುಧೋಳ: ನಗರದ ಅಂಜುಮನ್-ಏ-ಇಸ್ಲಾಂ ಸಂಸ್ಥೆ ಹಾಗೂ ವಿವಿಧ ಮುಸ್ಲಿಂ ಸಂಘಟನೆಗಳ ಒಕ್ಕೂಟದ ವತಿಯಿಂದ ಮಾ.15 ಭಾನುವಾರ ಸಂಜೆ 5 ಗಂಟೆಗೆ ನಗರದ ಅಂಜುಮನ್ ಶಾದಿ ಮಹಲ್‌ನಲ್ಲಿ 'ಸೌಹಾರ್ದತೆ ಇಫ್ತಾರ್ ಕೂಟ ಮತ್ತು ಭಾವೈಕ್ಯತೆಯ ಸಮಾಗಮ' ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ ಅಧ್ಯಕ್ಷತೆ ವಹಿಸಲಿದ್ದಾರೆ. ಗುಲ್ಬರ್ಗಾ ಶರೀಫ್‌ನ ಡಾ.ಸೈಯದ್ ಮುಹಮ್ಮದ್ ಅಲಿ ಅಲ್-ಹುಸೇನಿ ಸಾಹೆಬ್, ನಿಲಂಗಾ ಶರೀಫ್‌ನ ಹಜರತ್ ಸೈಯದ್ ಷಾ ಹೈದರ್ ಅಲಿವುಲ್ಲಾ ಖಾದ್ರಿ ಸಾಹೆಬ್, ಮುಧೋಳದ ಮೃತ್ಯುಂಜಯ ಮಹಾಸ್ವಾಮಿಗಳು ಹಾಗೂ ಯಡಹಳ್ಳಿಯ ಚಂದ್ರಶೇಖರ ಸ್ವಾಮೀಜಿ ಸೇರಿದಂತೆ ಹಲವು ಧರ್ಮಗುರುಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಜಾತಿ-ಧರ್ಮದ ಭೇದ ಮರೆತು ಶಾಂತಿ ಸಾರುವ ಈ ಸಮಾರಂಭಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಸಂಘಟಕರು ಮನವಿ ಮಾಡಿದ್ದಾರೆ.

ವೆಂಕಟೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಇಂದು

ಕೆರೂರ: ಸಮೀಪದ ಇನಾಂ ಯರಗೊಪ್ಪ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ವೆಂಕಟೇಶ್ವರ ದೇವಸ್ಥಾನದ ಮೂರ್ತಿ ಪ್ರಾಣ ಪ್ರತಿಷ್ಠಾನೆ ಮಾ.15 ಹಾಗೂ 16ರಂದು ಎರಡು ದಿನಗಳವರೆಗೆ ಜರುಗಲಿದೆ. ಮಾ.15ರಂದು ಬೆಳಿಗ್ಗೆ ದೇವಸ್ಥಾನದಲ್ಲಿ ವಾಸ್ತು ಶಾಂತಿ ಕಾರ್ಯಕ್ರಮ ನಡೆಯಲಿದೆ. ನಂತರ ನಾರಾಯಣ ಮೂರ್ತಿ, ಕಳಸ, ಪಲ್ಲಕ್ಕಿಗಳನ್ನು ಕುಂಭ, ಕಳಸಾರತಿ, ಸಕಲ ಮಂಗಲವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ. ರಾತ್ರಿ 9 ಗಂಟೆಗೆ ಪ್ರವಚನ ಕಾರ್ಯಕ್ರಮ ಜರಗುಲಿದೆ. ಮಾ.16ರಂದು ಬೆಳಗ್ಗೆ ಹೋಮ ಹವನದೊಂದಿಗೆ ವೆಂಕಟೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ನಡೆಯಲಿದೆ ಸಂಜೆ 6 ಗಂಟೆಗೆ ದೇವಸ್ಥಾನದಲ್ಲಿ ಧಾರ್ಮಿಕ ಸಮಾರಂಭನಡೆಯುತ್ತದೆ. ಮಾ.20ರಿಂದ 27ರ ವರೆಗೆ 7 ದಿನ ದೇವಸ್ಥಾನದಲ್ಲಿ ವೆಂಕಟೇಶ್ವರ ಜಾತ್ರಾ ಮಹೋತ್ಸವದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಸ್ಥಾನದ ಸಮಿತಿಯವರು ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಬಾಗಲಕೋಟೆ: ಬಾಗಲಕೋಟೆ ವಿಭಾಗ ವ್ಯಾಪ್ತಿಯ 110 ಕೆವಿ ಅಚನೂರ ಮತ್ತು 110 ಕೆವಿ ಇಲಕಲ್ಲ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಕೈಗೊಂಡ ನಿಮಿತ್ಯ ಮಾರ್ಚ 15 ರಂದು ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ಅಚನೂರ ವಿದ್ಯುತ್ ಕೇಂದ್ರ ವ್ಯಾಪ್ತಿಯ ಬೆಣ್ಣೂರ ಐಪಿ, ಮುಗಳೊಳ್ಳಿ ಎನ್‌ಜೆವಾಯ್, ಮುಗುಳೊಳ್ಳಿ ಐಪಿ, ಹಳ್ಳೂರ ಐಪಿ, ಹಳ್ಳೂರ ಎನ್‌ಜೆವಾಯ್, ಅಚನೂರ ಎನ್‌ಜೆವಾಯ್, ಸಂಗಾಪೂರ ಐಪಿ, ಕಡ್ಲಿಮಟ್ಟಿ ಐಪಿ, ಇಲಕಲ್ಲ ವಿದ್ಯುತ್ ಕೇಂದ್ರ ವ್ಯಾಪ್ತಿಯ ಅವಡಾ ಸೋಲಾರ ಪ್ರೈವೆಟ್ ಲಿಮಿಟೆಡ್, ಪೇಸ್ ಪಾವರ ಲಿಮಿಟೆಡ್, ಗುಡೂರ, ಬಂಡರಗಲ್ಲ, ಇಲಕಲ್ಲ, ವಜ್ಜಲ, ಗುಗ್ಗಲಮರಿ ಎನ್ ಜೆವಾಯ್, ಫಾಯರ್ ಸ್ಟೇಶನ್, ಹೊಸೂರ, ಹನುಮನಾಳ, ದುರ್ಗಾ, ಉಪನಾಳ, ಬಲಕುಂದಿ, ಕಂದಗಲ್ಲ ವಿದ್ಯುತ್ ಕೇಂದ್ರ ವ್ಯಾಪ್ತಿಯ ಮಾರಟಗೇರಿ, ಸೋಮಲಾಪೂರ ಎನ್ ಜೆವಾಯ್, ಕಂದಗಲ್ಲ, ಹಿರೇಓತಗೇರಿ ಎನ್‌ಜೆವಾಯ್, ಗೋನಾಳ ಹಾಗೂ ಕೃಷ್ಣಾಪುರ ಎನ್‌ಜೆವಾಯ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಕೋರಿದ್ದಾರೆ.

ಮಾತಿನ ಮೇಲೆ ಹಿಡಿತವಿರಲಿ



ಕೆರೂರ: ಇಫ್ತಾರ್ ಎಂದರೆ ಉಪವಾಸದ ಜೊತೆಗೆ ಪಾಪದ ಕಾರ್ಯ ಬಿಡುವುದು. ನಮ್ಮ ನಾಲಿಗೆಯ ಮೇಲೆ ಮಾತಿನ ಹಿಡಿತವಿರಬೇಕು ಅಂದಾಗ ಮಾತ್ರ ಅಲ್ಲಾಹು ನಮಗೆ ಸ್ವರ್ಗ ತೋರುತ್ತಾನೆ ಎಂದು ಪ್ರವಚನಕಾರ ಲಾಲಹುಸೇನ ಕಂದಗಲ್ ಹೇಳಿದರು. ಪಟ್ಟಣದಲ್ಲಿ ರಂಜಾನ್ ಅಂಗವಾಗಿ ಶುಕ್ರವಾರ ಪಟ್ಟಣದ ತರಕಾರಿ ಮಾರುಕಟ್ಟೆ ಹತ್ತಿರವಿರುವ ಮಸಿದಿ ಆವರಣದಲ್ಲಿ ಆಯೋಜಿಸಿದ್ದ ಇಫ್ತಾರ್ ಸೌಹಾರ್ದ ಕೂಟ ಉದ್ಘಾಟಿಸಿ ಮಾತನಾಡಿದರು. ನಿವೃತ್ತ ಉಪನ್ಯಾಪಕ ಆರ್.ಎಸ್.ನಿಡೋಣಿ ಮಾತನಾಡಿ, ಇಸ್ಲಾಂ ಧರ್ಮದ ಪವಿತ್ರ ಗ್ರಂಥ ಕುರಾನ್ ಆರಂಭಗೊಂಡ ತಿಂಗಳನ್ನು ಉಪವಾಸದ ರಂಜಾನ್ ಹಬ್ಬವನ್ನಾಗಿ ಆಚರಿಸಲಾಗುತ್ತಿದ್ದು, ಉಪವಾಸದ ಮೂಲಕ ಮುಸ್ಲಿಂ ಭಾಂದವರು ಪಾಪಕಾರ್ಯಗಳಿಂದ ದೂರವಾಗಿ ಅಲ್ಲಾಹುವಿನ ಸ್ಮರಣೆಯಿಂದ ಪರಿಶುದ್ಧರಾಗುತ್ತಾರೆ ಎಂದು ಹೇಳಿದರು. ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ನೌಜವಾನ ಸೀರತ್ ಕಮೀಟಿ ಅಧ್ಯಕ್ಷ ಮೋದಿನಸಾಬ ದೊಡಕಟ್ಟಿ, ಕಾರ್ಯದರ್ಶಿ ಉಮರಫಾರೂಕ್ ಪೆಂಡಾರಿ, ಉಸ್ಮಾನ ಮುಲ್ಲಾ, ಅಬುಬಕರ್ ಯಡಹಳ್ಳಿ ಇತರರು ಇದ್ದರು.



ಬೀಳಗಿ: ಬೀಳಗಿ ಮತಕ್ಷೇತ್ರದ ಶಾಸಕರು, ಹಟ್ಟಿ ಚಿನ್ನದ ಗಣಿ ಕಂಪನಿಯ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಸಂಸ್ಥೆಯು 2024-25ನೇ ಸಾಲಿನಲ್ಲಿ 1342 ಕೋಟಿ ರೂ. ವಹಿವಾಟು ನಡೆಸಿ, 436 ಕೋಟಿ ರೂ. ಲಾಭ ಗಳಿಸಿದ್ದು, ಕಂಪನಿಯು ರಾಜ್ಯ ಸರ್ಕಾರಕ್ಕೆ 97.25 ಕೋಟಿ ರೂ. ಲಾಭಂಶವನ್ನು ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಕೋಟಿ ರೂ. ಚೆಕ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು. ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಶಿಲ್ಪಾ ಉಪಸ್ಥಿತರಿದ್ದರು.

ನಮ್ಮ ಕ್ಲಿನಿಕ್ ಸದುಪಯೋಗ ಪಡೆದುಕೊಳ್ಳಿ

ಜಮಖಂಡಿ: ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ನಮ್ಮ ಕ್ಲಿನಿಕ್ ನೆರವಾಗಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು. ನಗರದ ಸದಾನಂದ ಕಾಲೋನಿಯಲ್ಲಿ ಶನಿವಾರ ನಮ್ಮ ಕ್ಲಿನಿಕ್ ಉದ್ಘಾಟಿಸಿ ಮಾತನಾಡಿದ ಅವರು, ಇಲ್ಲಿ ಚಿಕಿತ್ಸೆ ಜೊತೆಗೆ ವಿವಿಧ ರೀತಿಯ ಓಷಧಿಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಜನರು ದೂರ ಹೋಗುವ ಅಗತ್ಯವಿಲ್ಲದೆ ಇಲ್ಲಿಯೇ ಚಿಕಿತ್ಸೆ ಪಡೆಯಬಹುದು. ಇದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದೆ ಎಂದು ಹೇಳಿದರು. ಸಾರ್ವಜನಿಕರು ತಮ್ಮ ಆರೋಗ್ಯದ ಕಡೆ ಗಮನ ಹರಿಸಬೇಕು. ತುರ್ತು ಸಂದರ್ಭಗಳಲ್ಲಿ ನಮ್ಮ ಕ್ಲಿನಿಕ್‌ಗಳು ಹೆಚ್ಚು ಸಹಕಾರಿಯಾಗಲಿವೆ. ನಗರದಲ್ಲಿ ಸದ್ಯ ನಾಲ್ಕು ಕಡೆ ನಮ್ಮ ಕ್ಲಿನಿಕ್‌ಗಳನ್ನು ಆರಂಭಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು ಎಂದು ಹೇಳಿದರು. ತಾಲೂಕು ವೈದ್ಯಾಧಿಕಾರಿ ಗೈಬುಸಾಬ್ ಗಲಗಲಿ ಮಾತನಾಡಿ, ಜಮಖಂಡಿ ನಗರದಲ್ಲಿ ಇದು ನಾಲ್ಕನೇ ನಮ್ಮ ಕ್ಲಿನಿಕ್ ಉದ್ಘಾಟನೆಯಾಗಿದೆ. ಜ್ವರ, ನೆಗಡಿ, ಕೆಮ್ಮು ಸೇರಿದಂತೆ ದೀರ್ಘಕಾಲದ ಕಾಯಿಲೆಗಳ ಪ್ರಾಥಮಿಕ ಚಿಕಿತ್ಸೆಗೆ ನಮ್ಮ ಕ್ಲಿನಿಕ್ ನೆರವಾಗಲಿದೆ. ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಇಲ್ಲಿ ಪ್ರಾಥಮಿಕ ಚಿಕಿತ್ಸೆ ಲಭ್ಯವಿರುತ್ತದೆ. ಒಬ್ಬ ವೈದ್ಯರು ಹಾಗೂ ಮೂವರು ನರ್ಸ್‌ಗಳು ಸೇವೆಯಲ್ಲಿ ನಿರತರಾಗಿರುತ್ತಾರೆ ಎಂದು ಮಾಹಿತಿ ನೀಡಿದರು. ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸಚಿನ್ ಮಾಚಕನೂರ, ಜಿಲ್ಲಾ ಸಂಯೋಜಕಿ ಬಸಮ್ಮ, ಡಾ.ಮಯೂರ, ಡಾ.ವಿದ್ಯಾ, ರವಿ ಕಾಂಬಳೆ, ಸಂತೋಷ ನಾಯಕ, ರವಿ ಪಾಟೀಲ, ಶಂಕರ ಚಲವಾದಿ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಕ ಉಮೇಶ ಜೋಶಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಜಮಖಂಡಿ: ನಗರದ ಸದಾನಂದ ಕಾಲೋನಿಯಲ್ಲಿ ಶನಿವಾರ ನಮ್ಮ ಕ್ಲಿನಿಕ್ ಅನ್ನು ಶಾಸಕ ಜಗದೀಶ ಗುಡಗುಂಟಿ ಉದ್ಘಾಟಿಸಿದರು. ತಾಲೂಕು ವೈದ್ಯಾಧಿಕಾರಿ ಗೈಬುಸಾಬ್ ಗಲಗಲಿ, ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸಚಿನ್ ಮಾಚಕನೂರ, ಜಿಲ್ಲಾ ಸಂಯೋಜಕಿ ಬಸಮ್ಮ, ಡಾ.ಮಯೂರ, ಡಾ.ವಿದ್ಯಾ, ರವಿ ಕಾಂಬಳೆ, ಸಂತೋಷ ನಾಯಕ, ರವಿ ಪಾಟೀಲ, ಶಂಕರ ಚಲವಾದಿ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಕ ಉಮೇಶ ಜೋಶಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಪರಿಹಾರ ಶೀಘ್ರ ವಿತರಿಸಲು ಮನವಿ

ಸಂತ್ರಸ್ತರ ಪರ ಕಾಳಜಿ ವಹಿಸಿ

ಜಮಖಂಡಿ: ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಪ್ರದೇಶದ ಪರಿಹಾರ ವಿತರಣಾ ಕಾರ್ಯ ತ್ವರಿತವಾಗಿ ಪ್ರಾರಂಭಿಸಬೇಕು. ಬಜೆಟ್ ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಹಾಗೆಯೇ ಪರಿಹಾರ ವಿತರಣಾ ಕಾರ್ಯಕ್ಕೆ ಚಾಲನೆ ನೀಡಬೇಕು. ಈ ನಿಟ್ಟಿನಲ್ಲಿ ಹಿರಿಯ ಅಧಿಕಾರಿಗಳು ಹಾಗೂ ನೀರಾವರಿ ಇಲಾಖೆಯ ಸಚಿವರೊಂದಿಗೆ ಮಾತುಕತೆ ನಡೆಸಿ ಕೃಷ್ಣಾ ಸಂತ್ರಸ್ತರ ಪರ ಕಾಳಜಿ ವಹಿಸಬೇಕು ಎಂದು ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಅವರು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಮನವಿ ಮಾಡಿದರು.



ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಅವರು, ಮುಳುಗಡೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗುತ್ತಿರುವದೆ. ಪ್ರತಿವರ್ಷ ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗುತ್ತಿದೆ. ಸಂತ್ರಸ್ಥರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲು ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ತಿಮ್ಮಾಪುರ ಮಾತನಾಡಿ, ಸರ್ಕಾರ ಘೋಷಣೆ ಮಾಡಿದ ರೀತಿ ಹಂತ-ಹಂತವಾಗಿ ಪರಿಹಾರ ವಿತರಣೆ ಕಾರ್ಯವನ್ನು ಪ್ರಾರಂಭಿಸುವದಾಗಿ ಭರವಸೆ ನೀಡಿದರು. ಜೊತೆಗೆ ಪರಿಹಾರ ವಿತರಣೆ ಕಾರ್ಯದ ಪ್ರಗತಿಯ ಕುರಿತು ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಧಿಕಾರಿ ಸಂಗಪ್ಪ, ಮುಖಂಡರಾದ ಸದಾಗೌಡ ಪಾಟಿಲ, ಸಿದ್ದನಗೌಡ ಪಾಟೀಲ, ಗುಂಡು ಕುಲಕರ್ಣಿ, ಸುಧೀಂದ್ರ ಕುಲಕರ್ಣಿ, ಸೇರಿದಂತೆ ಯುಕೆಪಿ ಅಧಿಕಾರಿಗಳು ಇದ್ದರು.

ಬಫರ್ ಝೋನ್ ತೆರವುಗೊಳಿಸಲು ಒತ್ತಾಯ

ಬಾಗಲಕೋಟೆ: ಬಾಗಲಕೋಟೆ ನಗರದ ವ್ಯಾಪ್ತಿಯ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ 524.256 ಮೀ.ದಿಂದ 525 ಮೀ ವರೆಗೆ ಮಾತ್ರ ಬಫರ್ ಝೋನ್ ಅಳವಡಿಸಬೇಕು. 525 ಮೀ.ಮೇಲ್ಪಟ್ಟು 45 ಮೀ ಬಫರ್ ಝೋನ್ ತೆರವುಗೊಳಿಸಬೇಕು ಎಂದು ಸಮಾಜ ಸೇವಕ ವೆಂಕಟಾಚಲಪತಿ ಟಿ.ಬಳ್ಳಾರಿ ಒತ್ತಾಯಿಸಿದರು.



ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್ಚುವರಿಯಾಗಿ 45 ಮೀ. ವರೆಗೆ ಬಫರ್ ಝೋನ್ ಮಾಡಿದ್ದರಿಂದ ಕೃಷಿಯೇತರ ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ಅಡ್ಡಿಯಾಗುತ್ತಿದೆ. ಇದರಿಂದ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುವಂತಾಗಿದೆ. ಜಿಲ್ಲೆಗೆ ಮುಖ್ಯಮಂತ್ರಿಗಳು ಆಗಮಿಸುತ್ತಿದ್ದು ಈ ಬಗ್ಗೆ ಗಮನ ಹರಿಸಿ ಹಿಂದೆ ಮಾಡಿದ ಆದೇಶದಂತೆ 525 ಮೀ.ವರೆಗೆ ಮಾತ್ರ ಬಫರ್ ಝೋನ್ ಅಳವಡಿಸಬೇಕು ಎಂದು ಆಗ್ರಹಿಸಿದರು.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ನಿಯಮ ಉಲ್ಲಂಘಿಸಿ ಹಾಗೂ ಸರ್ಕಾರದ ಅನುಮೋದನೆ ಆದೇಶ ಪಡೆಯದೇ ಸಂತ್ರಸ್ತರಲ್ಲದವರಿಗೆ ಹಂಚಿಕೆಯಾಗಿರುವ 1286 ನಿವೇಶನಗಳನ್ನು ರದ್ದುಪಡಿಸಿ ಆಸ್ತಿಗಳನ್ನು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಬ್ಜೆಗೆ ತೆಗೆದುಕೊಳ್ಳಬೇಕು ಎಂದು ಕೃಷ್ಣಾ ಭಾಗ್ಯ ಜಲ ನಿಗಮದ ಗಮನಕ್ಕೆ ತರಲಾಗಿದೆ. ಈಗ ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಿರುವ ನಿವೇಶನಗಳ ಮಾಲಿಕರಿಗೆ ನಂತರ ಮುಂದೊಂದು ದಿನ ಮೈಸೂರಿನಲ್ಲಿ ಮುಡಾ ನಿವೇಶನ ಹಂಚಿಕೆಯಾದಾಗ ಸಂಭವಿಸಿದ ತೊಂದರೆ ಇಲ್ಲಿಯೂ ಆಗಲಿದೆ ಎಂದು ಹೇಳಿದರು.

ಬಿಟಿಡಿಎದಿಂದ 200 ಎಕರೆ ಜಾಗವನ್ನು ವ್ಯಾಪಾರ ಕೇಂದ್ರವನ್ನು ಮಾಡಲು ನೀಡುತ್ತೇವೆ ಎಂದು ಹೇಳಲಾಗಿತ್ತು ಆದರೆ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. 2026ಕ್ಕೆ ಬಾಗಲಕೋಟೆ ಕಾಟನ್ ಮಾರ್ಕೆಟ್ ಲೀಜ್ ಅವಧಿ ಮುಗಿಯುತ್ತಿದ್ದು, ಅಲ್ಲಿ ಬೃಹತ್ ಕಟ್ಟಡವನ್ನು ನಿರ್ಮಾಣ ಮಾಡಿ ಬಾಗಲಕೋಟೆ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕು. ಬಹಿರಂಗ ಹರಾಜು ಮಾಡಿ ಎಲ್ಲರಿಗೂ ಅವಕಾಶ ಮಾಡಿಕೊಡಬೇಕು ಎಂದು ಹೇಳಿದರು.

ವಿಚಾರ ಸಂಕಿರಣ ನಾಳೆ

ಗುಳೇದಗುಡ್ಡ: ಕಾಲೇಜು ಶಿಕ್ಷಣ ಇಲಾಖೆ, ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಂತರಿಕ ಭರವಸೆ ಕೋಶ ಮತ್ತು ಕನ್ನಡ ವಿಭಾಗ ರಾಷ್ಟ್ರೀಯ ಸಂಶೋಧನಾ ವೇದಿಕೆವತಿಯಿಂದ ವಚನ ಸಾಹಿತ್ಯದಲ್ಲಿ ಕಾಯಕ ತತ್ವ ವಿಷಯದ ಕುರಿತು ಒಂದುದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ಮಾ.16ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕ ಭೀಮಸೇನ ಚಿಮ್ಮನಕಟ್ಟಿ ವಿಚಾರ ಸಂಕಿರಣ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಚಾರ್ಯ ಪ್ರೊ.ರೇವಣಸಿದ್ದಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಬಾಗಲಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ, ರಾಷ್ಟ್ರೀಯ ಸಂಶೋಧನಾ ವೇದಿಕೆಯ ಗೌರವಾಧ್ಯಕ್ಷ ಡಾ. ಸಂಗಮೇಶ ಕಲ್ಯಾಣಿ ಉಪಸ್ಥಿತರಿರುವರು. ಪ್ರೊ.ಫಕ್ಕೀರಪ್ಪ ಚನ್ನಪ್ಪಗೌಡ್ರ ಆಶಯನುಡಿ ಹೇಳುವರು, ಕಾಲೇಜು ಅಭಿವೃದ್ಧಿ ಸಮಿತಿಯ ಎಂ.ಎಂ. ಜಮಖಾನಿ, ಪ್ರೊ.ಸಂಪತ್ತ ಲಮಾಣಿ, ಪ್ರೊ.ಸಂತೋಷ ಎಸ್.ಎಚ್, ಪ್ರೊ.ಈಶ್ವರಪ್ಪ, ಡಾ. ಬಸವರಾಜ ನಾಯಕ, ಡಾ.ಸಂತೋಷ ಕಾಳನ್ನವರ ಉಪಸ್ಥಿತರಿರಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಪ್ರಥಮ ಗೋಷ್ಠಿ ನಡೆಯಲಿದ್ದು, ಮುದ್ದೇಬಿಹಾಳ ಎಂ.ಜಿ.ವಿ.ಸಿ ಕಾಲೇಜಿನ ಕನ್ನಡವಿಭಾಗದ ಮುಖ್ಯಸ್ಥ ಡಾ.ಪ್ರಕಾಶ ನರಗುಂದ ಗೋಷ್ಠಿಯ ಅಧ್ಯಕ್ಷತೆ ವಹಿಸುವರು. ಉರಿಲಿಂಗ ಪೆದ್ದಿ ವಚನಗಳಲ್ಲಿ ಕಾಯಕ ತತ್ವ, ಡೋಹರ ಕಕ್ಕಯ್ಯನವರ ವಚನಗಳಲ್ಲಿ ಕಾಯಕ ತತ್ವ, ಮಾದರ ಚೆನ್ನಯ್ಯನವರ ವಚನಗಳಲ್ಲಿ ಕಾಯಕ ತತ್ವ ಕುರಿತು ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮೋಡಿಲಿಪಿ ತಜ್ಞ ಡಾ.ಸಂಗಮೇಶ ಕಲ್ಯಾಣಿ ಅವರ ಅಧ್ಯಕ್ಷತೆಯಲ್ಲಿ ಎರಡನೇ ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಕಾಲೇಜಿನ ಪ್ರಾಚಾರ್ಯ ಪ್ರೊ.ರೇವಣಸಿದ್ದಪ್ಪ ತಿಳಿಸಿದ್ದಾರೆ.

ಇಂದು 'ಮೇಘಮೈತ್ರಿ' ದ್ವಿತೀಯ ಯುವ ಸಾಹಿತ್ಯ ಸಮ್ಮೇಳನ

ಸರ್ವಾಧ್ಯಕ್ಷರಾಗಿ ಡಾ.ವೆಂಕಟೇಶ ಆಯ್ಕೆ

ಮುಧೋಳ: ಕಮತಗಿಯ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ (ರಿ) ಆಶ್ರಯದಲ್ಲಿ 'ಮೇಘಮೈತ್ರಿ ದ್ವಿತೀಯ ಯುವ ಸಾಹಿತ್ಯ ಸಮ್ಮೇಳನ-2026' ಮಾ.15ರಂದು ಭಾನುವಾರ ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಭವನದಲ್ಲಿ ನಡೆಯಲಿದೆ.

25ಕ್ಕೂ ಹೆಚ್ಚು ಶಿಕ್ಷಕರಿಗೆ 'ಶಿಕ್ಷಣರತ್ನ', 14 ಸಾಧಕರಿಗೆ 'ಕನ್ನಡ ಸೇವಾರತ್ನ' ಹಾಗೂ 15ಕ್ಕೂ ಹೆಚ್ಚು ದಂಪತಿಗಳಿಗೆ 'ಆದರ್ಶ ದಂಪತಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಮುಧೋಳದ ಯುವ ಸಾಹಿತಿ ಡಾ. ವೆಂಕಟೇಶ ಗುಡೆಪ್ಪನವರ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಬೆಳಗ್ಗೆ 9:30ಕ್ಕೆ ರನ್ನ ಪ್ರತಿಷ್ಠಾನದ ಸದಸ್ಯ ಡಾ.ಕೆ.ಎಲ್.ಉದಪುಡಿ ಅವರ ಧ್ವಜಾರೋಹಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪ್ರಕಾಶ ಹೊಸಮನಿ ಪುಸ್ತಕ ಮಳಿಗೆಗಳನ್ನು ಉದ್ಘಾಟಿಸಲಿದ್ದಾರೆ.



ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತ ಕವಿ ಆರಿಫ್ ರಾಜಾ ಸಮ್ಮೇಳನ ಉದ್ಘಾಟಿಸಲಿದ್ದು, ಬೆಂಗಳೂರಿನ ಪತ್ರಕರ್ತೆ ರಶ್ಮಿ ಎಸ್. ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ಡಾ.ಪ್ರಕಾಶ ಖಾಡೆ ಡಾ.ವೆಂಕಟೇಶ ಗುಡೆಪ್ಪನವರ ಅವರ 'ಶೋಧ' ಮಕ್ಕಳ ಸಾಹಸ ಕಾದಂಬರಿ ಸೇರಿದಂತೆ ಡಾ. ಶ್ರೀದೇವಿ ಸುವರ್ಣಖಂಡಿ ಹಾಗೂ ಹುಸೇನ್ ಪತ್ತೆಖಾನ ಅವರ ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಸಂಘದ ಅಧ್ಯಕ್ಷ ಎಂ. ರಮೇಶ ಕಮತಗಿ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಸಮ್ಮೇಳನದಲ್ಲಿ ಎರಡು ಗೋಷ್ಠಿಗಳು ನಡೆಯಲಿವೆ. ಹಿರಿಯ ಪತ್ರಕರ್ತ ಅಶೋಕ ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ 'ಪುಸ್ತಕ ಓದು ಸಂಸ್ಕೃತಿ ಮತ್ತು ಯುವಜನತೆ' ಕುರಿತು ಚರ್ಚೆ ನಡೆಯಲಿದೆ. ನಂತರ ಭೀಮಣ್ಣ ಹುಣಸಿಕಟ್ಟಿ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಏರ್ಪಡಿಸಲಾಗಿದ್ದು, ಜಿಲ್ಲೆಯ ವಿವಿಧ ಭಾಗಗಳ ಸುಮಾರು 16ಕ್ಕೂ ಹೆಚ್ಚು ಯುವ ಕವಿಗಳು ತಮ್ಮ ಸ್ವರಚಿತ ಕವನಗಳನ್ನು ವಾಚಿಸಲಿದ್ದಾರೆ.

ಸಮಾರೋಪ ಸಮಾರಂಭ ದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. 25ಕ್ಕೂ ಹೆಚ್ಚು ಶಿಕ್ಷಕರಿಗೆ 'ಶಿಕ್ಷಣರತ್ನ', 14 ಸಾಧಕರಿಗೆ 'ಕನ್ನಡ ಸೇವಾರತ್ನ' ಹಾಗೂ 15ಕ್ಕೂ ಹೆಚ್ಚು ದಂಪತಿಗಳಿಗೆ 'ಆದರ್ಶ ದಂಪತಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ.ಮುಲ್ಲಾ ಹಾಗೂ ಡಾ.ತಿಮ್ಮಣ್ಣ ಅರಳಿಕಟ್ಟಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ.

ಅಕ್ಷರ ಹಬ್ಬಕ್ಕೆ ಸಾಂಸ್ಕೃತಿಕ ಕಳೆ ನೀಡಲು ಹಂತಿ ಹಾಡುಗಳು, ಜಾನಪದ ಗಾಯನ ಹಾಗೂ ಭಜನಾ ಪದಗಳ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ನೇಕಾರರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

ತೇರದಾಳ: ತೇರದಾಳ ಮತಕ್ಷೇತ್ರ ನೇಕಾರರ ತವರೂರಾಗಿದೆ. ಸರ್ಕಾರವು ಕೈಮಗ್ಗ ಮತ್ತು ಜವಳಿ ಅಭಿವೃದ್ಧಿ ಇಲಾಖೆಗೆ ಕನಿಷ್ಠ 1500 ಕೋಟಿ ರೂ.ಅನುದಾನ ಮೀಸಲಿಡಬೇಕು ಎಂದು ವಿನಂತಿಸಿ ಮುಖ್ಯಮಂತ್ರಿ ಅವರಿಗೆ ಕರ್ನಾಟಕ ರಾಜ್ಯ ನೇಕಾರ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟರ್ಕಿ ತೇರದಾಳ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಅವರು, ಸರ್ಕಾರ ವಿಧಾನಸೌಧದಲ್ಲಿಯೇ ಕುಳಿತು ನೇಕಾರರ ಸಮಸ್ಯೆ ಬಗೆಹರಿಸುತ್ತೇನೆಂದರೆ ಅದು ಸಾಧ್ಯವಾಗದು. ಸಂಬಂಧಿಸಿದ ಸಚಿವರಾಗಲಿ ಅಥವಾ ಅಧಿಕಾರಿಗಳಾಗಲಿ ನೇಕಾರ ಮುಖಂಡರೊಂದಿಗೆ ಸಭೆ ನಡೆಸಬೇಕು ಅವರ ಸಮಸ್ಯೆ ಆಲಿಸಬೇಕು ನಂತರ ನಿರ್ಧಾರ ಕೈಕೊಳ್ಳಬೇಕು. ಈ ಕುರಿತು ಸಾಕಷ್ಟು ರೀತಿಯಲ್ಲಿ ಗ್ರಾಮೀಣ ಮಟ್ಟದಿಂದ ಹೋಬಳಿ, ತಾಲೂಕು, ಜಿಲ್ಲೆ ಸೇರಿದಂತೆ ಬೆಳಗಾವಿ, ಬೆಂಗಳೂರಿನವರೆಗೆ ಹೋರಾಟ ಮಾಡಿದ್ದೇವೆ. ಆದರೂ ಸಹ ಸರಕಾರ ನಮ್ಮನ್ನು ನಿರ್ಲಕ್ಷಿಸುತ್ತಲಿದೆ ಎಂದರು.

ರಾಜ್ಯದಲ್ಲಿ ವೃತ್ತಿ ಪರ ನೇಕಾರರ ಖಚಿತ ಅಂಕಿ ಅಂಶ ಪಡೆಯಬೇಕು. ರಾಜ್ಯದಲ್ಲಿರುವ ನೇಕಾರ ಸಹಕಾರಿ ಸಂಘಗಳಲ್ಲಿಯ ಹಾಗೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿರುವ ನೇಕಾರರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ನೇಕಾರರಿಗೂ ಸಹ ಕಟ್ಟಡ ಕಾರ್ಮಿಕ ಮಾದರಿಯಲ್ಲಿ ಸೌಲಭ್ಯ ಹಾಗೂ ಗುರುತಿನ ಚೀಟಿ ನೀಡಬೇಕು. 55 ವರ್ಷ ಮೇಲ್ಪಟ್ಟ ನೇಕಾರರಿಗೆ ಮಾಸಿಕ 5000 ಮಾಶಾಸನ ನೀಡಬೇಕು ಹೀಗೆ ಹಲವು ಬೇಡಿಕೆಗೆ ಸ್ಪಂದಿಸಬೇಕು ಸರ್ಕಾರ ಕೂಡಲೇ ಸ್ಪಂದಿಸಬೇಕು ಎಂದು ಆಗ್ರಹಿಸಿದರು. ಅಲ್ಲಪ್ಪ ಇಂಗಳಗಿ, ಶಂಕರ ಬೆಳಕೂಡ, ಈರಪ್ಪ ಆಲಗುಂಡಿ, ರಾಚಪ್ಪ ನಿಂಗನೂರ, ಸತೀಶ ಮನ್ನಿ, ಪರಪ್ಪ ಖವಾಸಿ, ಸೋಮು ಖವಾಸಿ, ಅಣ್ಣಪ್ಪ ವಾಜಂತ್ರಿ, ಮೃತ್ಯುಂಜಯ ವಂಟಗೂಡಿ ಸೇರಿದಂತೆ ಹಲವಾರು ನೇಕಾರರು ಇದ್ದರು.



ವಿದ್ಯುತ್ ಬಾಕಿ ಮನ್ನಾ: ಸಿಎಂಗೆ ಮನವಿ

ರಬಕವಿ-ಬನಹಟ್ಟಿ: 2023ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗಿನ ವಿದ್ಯುತ್ ಬಾಕಿ ಮೊತ್ತ ರೂ. 20 ಕೋಟಿ ರೂ.ಗಳಷ್ಟು ಹಣ ಮನ್ನಾ ಮಾಡಬೇಕೆಂದು ಒತ್ತಾಯಿಸಿ ಶನಿವಾರ ಬಾಗಲಕೋಟೆಗೆ ಆಗಮಿಸಿದ್ದ ಸಿಎಂ ಸಿದ್ರಾಮಯ್ಯನವರಿಗೆ ರಾಷ್ಟ್ರೀಯ ನೇಕಾರ ಸೇವಾ ಸಂಘ ಮನವಿ ಸಲ್ಲಿಸಿತು. ನೇಕಾರರಿಗೆ ಅನುದಾನ ಜೊತೆಗೆ ಹೊಸ ಯೋಜನೆಗಳನ್ನು ರೂಪಿಸುವದು, ನೇಕಾರ ಸಮ್ಮಾನ ಯೋಜನೆಯಲ್ಲಿನ ಗೊಂದಲ ಸರಿಪಡಿಸುವದು, ಆತ್ಮಹತ್ಯೆ ಮಾಡಿಕೊಂಡ ನೇಕಾರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ, ಕೆಎಚ್‌ಡಿಸಿ ಕೈಮಗ್ಗ ನೇಕಾರರ ಪುನಶ್ಚೇತನಕ್ಕೆ ಅನುಕೂಲ, 2 ಲಕ್ಷ ರೂ.ವರೆಗಿನ ನೇಕಾರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು, ಪ್ರತಿ ವರ್ಷ 5 ಸಾವಿರ ಕೋಟಿ ರೂ. ಅನುದಾನವನ್ನು ಬಜೆಟ್‌ನಲ್ಲಿ ಮೀಸಲು ಜೊತೆಗೆ ರಬಕವಿ-ಬನಹಟ್ಟಿಯಲ್ಲಿ ಜವಳಿ ಪಾರ್ಕ್ ಸೇರಿದಂತೆ ಅನೇಕ ಬೇಡಿಕೆಗಳನ್ನು ಸಿಎಂ ಸಿದ್ರಾಮಯ್ಯನವರಿಗೆ ಮನವಿ ಮೂಲಕ ಅರ್ಪಿಸಿದರು. ಸಂಘದ ಉಪಾಧ್ಯಕ್ಷ ಆನಂದ ಜಗದಾಳ, ಆಡಿವೆಪ್ಪ ಯಾದವಾಡ, ಶಿವಾನಂದ ಗೋಡ್ಯಾಳ, ಸುರೇಶ ಮುಗತಿ, ಶಿವಾನಂದ ತೆಗ್ಗಿ, ಶ್ರೀಧರ ದಭಾಡಿ ಸೇರಿದಂತೆ ಅನೇಕ ನೇಕಾರ ಮುಖಂಡರಿದ್ದರು.





ಗುಳೇದಗುಡ್ಡ: ಸಮೀಪದ ಕೆಲೂಡಿ ಗ್ರಾಮದ ಶ್ರೀಲಕ್ಷ್ಮೀ ರಂಗನಾಥ ದೇವರ ರಥೋತ್ಸವ ಸಾವಿರಾರು ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನಡೆಯಿತು. ವಿವಿಧ ಊರುಗಳಿಂದ ಆಗಮಿಸಿದ ಭಕ್ತರು ರಥಕ್ಕೆ ಬಾಳೆಹಣ್ಣು, ಉತ್ತತ್ತಿ ಎಸೆದು ಭಕ್ತಿ ಮೆರೆದರು.

ಪಿಡಿಒ ಅವ್ಯವಹಾರ ಸಾಬೀತು: ಅಮಾನತು



ಜಮಖಂಡಿ: ತಾಲೂಕಿನ ಕೊಣ್ಣೂರು ಗ್ರಾಮದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಕೊನೆಗೂ ಗ್ರಾಮಸ್ಥರಿಗೆ ವಿಜಯ ಸಂದಾಯವಾಗಿದೆ.

ಕಳೆದ ಬಹುದಿನಗಳಿಂದ ಗ್ರಾಮಸ್ಥರು ಪಿಡಿಒ ಸಿದ್ದು ಗ್ರಾಮದಲ್ಲಿನ ಹಲವು ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿದ್ದಾರೆ ಎಂದು ಇಒ ಹಾಗೂ ಸಿಎಸ್ ಅವರಿಗೆ ದೂರು ಸಲ್ಲಿಸಲಾಗಿತ್ತು. ಬಳಿಕ ಸಿಎಸ್ ಅವರು ತನಿಖಾ ತಂಡ ರಚಿಸಿ ಪರಿಶೀಲನೆ ನಡೆಸಿದ್ದು, ತನಿಖೆಯಲ್ಲಿ ಕೆಲವು ತಪ್ಪುಗಳು ಕಂಡು ಬಂದಿವೆ ಎಂದು ಗ್ರಾಮಸ್ಥರು ಆರೋಪಿಸಿದ್ದರು. ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಪ್ಪ ಮಲಘಾನ ಹಾಗೂ ಮಾಜಿ ಸದಸ್ಯ ರುದ್ರಪ್ಪ ಜಾನಮಟ್ಟಿ ಮಾತನಾಡಿ, ತಪ್ಪುಗಳು ದೃಢಪಟ್ಟಿದ್ದರೂ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ಅವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು. ಇಲ್ಲವಾದಲ್ಲಿ ಗ್ರಾಮ ಪಂಚಾಯತಿಗೆ ಬೀಗ ಜಡಿದು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದರು. ಇದೀಗ ಸರ್ಕಾರ ಕೊಣ್ಣೂರ ಗ್ರಾಪಂ ಪಿಡಿಒ ಸಿದ್ದು ಬಿರಾದಾರ ಅವರನ್ನು ಶರತ್ತು ಬದ್ಧವಾಗಿ ಅಮಾನತು ಮಾಡಿ ಆದೇಶ ಹೊರಡಿಸಿದೆ. ಅಮಾನತು ಆದೇಶ ಹೊರಬಂದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಸಂತೋಷ ವ್ಯಕ್ತಪಡಿಸಿದರು. ಇದೇ ವೇಳೆ ಸತ್ಯಾಗ್ರಹದಲ್ಲಿ ಭಾಗಿಯಾಗಿ ಪ್ರತಿಭಟನಾಕಾರರಿಗೆ ಭರವಸೆ ನೀಡಿದ ಮಾಜಿ ಶಾಸಕ ಆನಂದ ನ್ಯಾಮಗೌಡ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು.

ಶಿಕ್ಷಣ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆಳಕು

ಗುಳೇದಗುಡ್ಡ: ಪಟ್ಟಣದ ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಟ್ರಸ್ಟ್ 1969ರಲ್ಲಿ ಪ್ರಾರಂಭಗೊಂಡು 56 ವರ್ಷ ಪೂರ್ಣಗೊಳಿಸಿದ್ದು, ವಿದ್ಯಾರ್ಥಿಗಳ ಭವಿಷ್ಯದ ಬೆಳಕಾಗಿರುವ ಶಿಕ್ಷಣ ಇಂದು ಶಿಸ್ತಿನ ರೂಪದಲ್ಲಿ ಕಾರ್ಯಗತಗೊಳ್ಳುವುದು ಅಗತ್ಯವಿದೆ. ವಿದ್ಯಾರ್ಥಿಗಳ ಜ್ಞಾನದ ಕುತೂಹಲ ತಣಿಸುವ ಜವಾಬ್ದಾರಿಯು ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಕಮಲಕಿಶೋರಜಿ ಭಂಡಾರಿ ಹೇಳಿದರು.

ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾಗಿ ಪುನರಾಯ್ಕೆಯಾದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಹೆಮ್ಮೆಯ ಸಂಸ್ಥೆಯು ವಿದ್ಯಾರ್ಥಿಗಳ ಭೌತಿಕ, ಬೌದ್ಧಿಕ, ಭಾವನಾತ್ಮಕ ಮತ್ತು ನೈತಿಕ ಮೌಲ್ಯಗಳನ್ನು ಸಮೃದ್ಧಗೊಳಿಸುವ ನಿಟ್ಟಿನಲ್ಲಿ ಸಮಾಜದಲ್ಲಿ ಮಾದರಿ ವ್ಯಕ್ತಿತ್ವ ರೂಪಿಸಿಕೊಳ್ಳುವ ವಾತಾವರಣ ಕಲ್ಪಿಸಿದೆ ಎಂದರು. ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಟ್ರಸ್‌ನ ಆಡಳಿತ ಮಂಡಳಿ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಕಮಲಕಿಶೋರಜಿ ಭಂಡಾರಿ, ಗೌರವ ಕಾರ್ಯದರ್ಶಿಯಾಗಿ ರವೀಂದ್ರ ಪಟ್ಟಣಶೆಟ್ಟಿ, ನಿರ್ದೇಶಕರುಗಳಾಗಿ ರಾಮೇಶ್ವರ ರಾಠಿ, ಭದ್ರಿನಾರಾಯಣ ಭಂಡಾರಿ, ರಾಜಶೇಖರ ಶೀಲವಂತ, ಪುರುಷೋತ್ತಮ ಝುಂವಾರ, ಬಾಲಮುಕುಂದ ತಾಪಡಿಯಾ, ಅಶೋಕ ಹೆಗಡಿ, ಅಮಾತೆಪ್ಪಾ ಕೊಪ್ಪಳ, ವಿಠ್ಠಲಸಾ ಕಾವಡೆ, ಜಗದೀಶ ಸೋನಿ, ಮುರಿಗೆಪ್ಪ ಬನ್ನಿ, ಸಿದ್ದಲಿಂಗಪ್ಪ ಬರಗುಂಡಿ, ಶ್ಯಾಮಸುಂದರ ಮಾಲಪಾಣಿ, ರವೀಂದ್ರ ಅಂಗಡಿ ಹಾಗೂ ಗೌರವ ಸದಸ್ಯರಾಗಿ ಶಿವಾನಂದ ನಾಯನೇಗಲಿ, ಶ್ರೀನಿವಾಸ ಇನಾನಿ, ಸಿದ್ರಾಮಯ್ಯ ಪುರಾಣಿಮಠ, ಶ್ರೀಕಾಂತ ಜಾಜು ಅವರು ಆಯ್ಕೆಯಾಗಿದ್ದಾರೆ.



ಭಕ್ತರಿಂದ ಶ್ರೀಶೈಲಕ್ಕೆ ಪ್ರಯಾಣ



ಮಹಾಲಿಂಗಪುರ: ಮಹಾಲಿಂಗಪುರದ ಶ್ರೀಶೈಲ ಮಲ್ಲಿಕಾರ್ಜುನ ಅನ್ನದಾಸೋಹ ಸಮಿತಿ ವತಿಯಿಂದ ಶ್ರೀಶೈಲದಲ್ಲಿ 7 ದಿನಗಳ ನಿರಂತರ ಅನ್ನದಾಸೋಹ ನೆರವೇರಿಸಲು 21ನೇ ವರ್ಷವೂ 16 ಟನ್ ಹಿಟ್ಟಕ್ಕಿಯೊಂದಿಗೆ ಭಕ್ತರು ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದರು. ಮಾ.19ರಂದು ಗುರುವಾರ ಯುಗಾದಿ ಪಾಡ್ಯದವರೆಗೆ ಶ್ರೀಶೈಲದಲ್ಲಿ ನಾಡಿನ ಮೂಲೆ ಮೂಲೆಯಿಂದ ಆಗಮಿಸಿದ ಭಕ್ತರಿಗೆ ನಿರಂತರ ಅನ್ನದಾಸೋಹ ನೆರವೇರಿಸಲಾಗುತ್ತದೆ. ಶ್ರೀಶೈಲದಲ್ಲಿ ಬೀಡುಬಿಡುವ ಮಹಾಲಿಂಗಪುರದ ಶ್ರೀಶೈಲ ಮಲ್ಲಿಕಾರ್ಜುನ ಅನ್ನದಾಸೋಹ ಸೇವಾ ಸಮಿತಿಗೆ ರಾಜ್ಯ ಮತ್ತು ಪರರಾಜ್ಯದ ಯಥೇಚ್ಚ ಹಿಟ್ಟಕ್ಕಿ ನೀಡುವುದರಿಂದ ಮಹಾಲಿಂಗಪುರದಿಂದ ಒಯ್ಯುವ ಹಿಟ್ಟಕ್ಕಿಯ ಎರಡು ಪಟ್ಟು ಹಿಟ್ಟಕ್ಕಿ ಪ್ರತಿ ವರ್ಷ ಸಂಗ್ರಹವಾಗುತ್ತಿರುವುದು ಮಹಾಲಿಂಗಪುರ ಸೇವಾ ಸಮಿತಿಯ ಹೆಗ್ಗಳಿಕೆ. ಸ್ಥಳೀಯ ಮಹಾಲಿಂಗೇಶ್ವರ ಮಠದ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮಠದ ಆಡಳಿತಾಧಿಕಾರಿ ಈಶ್ವರ ಮಠದ ಹಿಟ್ಟಕ್ಕಿ ವಾಹನಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಸೇವಾ ಸಮಿತಿ ಅಧ್ಯಕ್ಷ ವಿಜುಗೌಡ ಪಾಟೀಲ, ಉಪಾಧ್ಯಕ್ಷ ವಿಷ್ಣುಗೌಡ ಪಾಟೀಲ ಕಾರ್ಯದರ್ಶಿ ಶಂಕರ ಮರಗೋಡ, ಖಜಾಂಚಿ ಸಿದ್ರಾಮ ದಲಾಲ, ಸದಸ್ಯರಾದ ವಿಜಯ ಕಂಬಾರ, ಶಿವಾನಂದ ಮಠಪತಿ, ಮಹಾಲಿಂಗಪ್ಪ ಗುರವ, ವೀರಭದ್ರಯ್ಯ ಮಠಪತಿ, ಮಹಾಲಿಂಗಪ್ಪ ಪರೀಟ, ಯಲ್ಲಪ್ಪ ಹಟ್ಟಿ, ಶೇಖರ ವಗ್ಗರ ಇತರರಿದ್ದರು.

ಇಂದು ಆರೋಗ್ಯ ತಪಾಸಣಾ ಶಿಬಿರ

ಕಮತಗಿ: ಪಟ್ಟಣದ ಬನಶಂಕರಿ ಪ್ರಾಥಮಿಕ ಶಾಲೆಯಲ್ಲಿ ತಪಶೆಟ್ಟಿ ಆಸ್ಪತ್ರೆ, ಬಾಗಲಕೋಟೆ ಮತ್ತು ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಕಮತಗಿ ಸಹಯೋಗದಲ್ಲಿ ಉಚಿತ ಯಲುವು ಕೀಲು ನರ ರೋಗದ ಚಿಕಿತ್ಸಾ ಶಿಬಿರ ಮತ್ತು ಉಚಿತ ಔಷದ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ ಬೆಣ್ಣುಹುರಿ ಶಸ್ತ್ರಚಿಕಿತ್ಸೆ, ಅಪಘಾತಗಳಿಂದಾದ ಬೆನ್ನು ಮೂಳೆ ಶಸ್ತ್ರಚಿಕಿತ್ಸೆ, ಸಂದಿವಾತ ಚಿಕಿತ್ಸೆಗಳು, ಕಿ-ಹೋಲ್ ಎಂಡೊಸ್ಕೋಪಿಕ್ ಲೇಸರ್ ಸರ್ಜರಿ ಕುತ್ತಿಗೆ ನೋವಿನ ಶಸ್ತ್ರಚಿಕಿತ್ಸೆ ಕೀಲು ಮುರುಜೋಡನೆ, ಹೇಡ್ ಇಂಜುರಿ,ಮೂತ್ರ ಪಿಂಡ, ಮೂತ್ರ ಕೋಶ, ಫಿಜಿಯೋಥೆರಪಿ, ಮಧುಮೇಹ, ಹೃದಯ ರೋಗ ತಪಾಸನೆ ನಡೆಯುವುದು ಎಂದು ತಪಶೆಟ್ಟಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯ ಡಾ.ಸಂದೀಪ ತಪಶೆಟ್ಟಿ ಮಾ.15ರಂದು ಭಾನುವಾರ ಬೆಳಗ್ಗೆ 9ರಿಂದ ಮದ್ಯಾಹ್ನ 3ರ ವರೆಗೆ ತಪಾಸನೆ ಮತ್ತು ಔಷಧ ವಿತರಣೆ ಇರುವುದು ಎಂದು ತಿಳಿಸಿದ್ದಾರೆ.

ಹೆಜ್ಜೆ ಫೌಂಡೇಶನ್ ಅಧ್ಯಕ್ಷ ಡಾ.ವೀರಭದ್ರಪ್ಪ ಮುರಾಳ, ಉಪಾಧ್ಯಕ್ಷ ಜಂಪಣ್ಣ ಶಿರಗುಂಪಿ, ಕಾರ್ಯದರ್ಶಿ ಶಂಕರ್ ವನಕಿ, ಖಜಾಂಚಿ ರಮೇಶ ಕುಮುಚಗಿ, ಸಂಚಾಲಕ ನಾಗಪ್ಪ, ಅಚನೂರ ಸೇರಿದಂತೆ ಸಂಸ್ಥೆಯ ಸದಸ್ಯರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಕಾಂಗ್ರೆಸ್ ಕಾರ್ಯಾಗಾರ: ಲೋಣಿ



◆**ವಿಜಯಪುರ:** ಕಾಂಗ್ರೆಸ್ ಪಕ್ಷದ ಸಿದ್ಧಾಂತ, ಪಕ್ಷ ನಡೆದು ಬಂದ ದಾರಿ ಹಾಗೂ ಸರ್ಕಾರದ ಸಾಧನೆ ಕುರಿತಾಗಿ ಮಾ.15ರಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ವಿಜಯಾ ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ಪ್ರಚಾರ ಸಮಿತಿ ಅಧ್ಯಕ್ಷ ವಿನಾಯಕುಮಾರ ಸೊರಕೆ ನೇತೃತ್ವದಲ್ಲಿ ಕಾರ್ಯಾಗಾರ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟಕರಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಭಾಗವಹಿಸಲಿದ್ದಾರೆ. ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ, ಸಿಂದಗಿ ಶಾಸಕ ಅಶೋಕ ಮನಗೂಳಿ, ಮುದ್ದೇಬಿಹಾಳ ಶಾಸಕ ಅಪ್ಪಾಜಿ ನಾಡಗೌಡ, ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಸೇರಿದಂತೆ ಪಕ್ಷದ ಪರಾಜಿತ ಅಭ್ಯರ್ಥಿಗಳು ಹಾಗೂ ಹಿರಿಯ ಮುಖಂಡರು ಭಾಗವಹಿಸಲಿದ್ದಾರೆ ಎಂದರು. ಕಾಂಗ್ರೆಸ್ ಮುಖಂಡ ಎ.ಮುನೀರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ರಫೀಕ್ ಟಪಾಲ ಮಾತನಾಡಿದರು. ಕೆಪಿಸಿಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಹೊನಮೋಡೆ, ಪ್ರಚಾರ ಸಮಿತಿ ನಗರ ಬ್ಲಾಕ್ ಅಧ್ಯಕ್ಷ ಮೈಬುಬ್ ಕಲಾದಗಿ, ಜಿಲ್ಲಾ ಪ್ರಚಾರ ಸಮಿತಿ ಸರ್ಫರಾಜ್ ಮಿರ್ಧೆ, ಎಂ.ಎಂ. ಮುಲ್ಲಾ ಇದ್ದರು.

ಮಾ.18ರಿಂದ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ

◆**ಝಳಕಿ:** ಬೀರಲಿಂಗೇಶ್ವರ ದೇವರ ಜಾತ್ರಾ ಮಹೋತ್ಸವ ಮೂರು ದಿನಗಳವರಿಗೆ ನಡೆಯುವುದು. ಸ್ಥಳೀಯ ಬೀರಲಿಂಗೇಶ್ವರ ದೇವರ ಜಾತ್ರಾ ಮಹೋತ್ಸವ ಅಂಗವಾಗಿ ಮಾ.18ರಂದು ಯುಗಾದಿ ಅಮವಾಸ್ಯೆ ಗುಡಿಗೆ ಸುಣ್ಣ ಬಣ್ಣ ಅಂಕಾರ, ದೇವರ ಗದ್ದುಗೆಗೆ ಪುಷ್ಪಾಲಂಕಾರ ರುದ್ರಾಭಿಷೇಕ ನೇರವೇರುವುದು ನಂತರ ಬ್ರಹ್ಮದೇವರ ಡೊಳ್ಳಿನ ಗಾಯನ ಸಂಘ ಉಟಗಿ ಹಾಗೂ ಅಮೋಘಸಿದ್ದ ಡೊಳ್ಳಿನ ಗಾಯನ ಸಂಘ ತೋರವಿ ಸುಪ್ರಸಿದ್ಧ ಡೊಳ್ಳಿನ ಪದಗಳು ಜರಗಿದವು. ಅದೇ ದಿವಸ ರಾತ್ರಿ 10ಗಂಟೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂಬ ಸಾಮಾಜಿಕ ನಾಟಕ ಜರಗಿದವು. ಮಾ.19ರಂದು ಬೆಳಗ್ಗೆ ದೇವರಿಗೆ ಪುಷ್ಪಗಳಿಂದ ಅಂಲಕಾರ ಹಾಗೂ ಮಹಾಪೂಜೆ ನೇರವೇರುವುದು. ಮಾ.20ರಂದು ಶುಕ್ರವಾರ ಬೆಳಗ್ಗೆ ಜಾವ ಭಕ್ತರಿಂದ ಭಕ್ತಿ ಪೂರ್ವಕವಾಗಿ ದೇವರಿಗೆ ದೀರ್ಘ ದಂಡ ನಮಸ್ಕಾರ ಹಾಗೂ ಜವಳ ತೆಗೆಯುವ ಕಾರ್ಯಕ್ರಮ ಜರಗುವುದು. ಬಾಗೋಡಿ ಸಿದ್ದೇಶ್ವರ ಡೊಳ್ಳಿನ ಗಾಯನ ಸಂಘ ಅಫಜಲಪುರ ಹಾಗೂ ಮಲಕಾರಿಸಿದ್ದ ಡೊಳ್ಳಿನ ಗಾಯನ ಸಂಘ ಉಮದಿ ಸಂಗಡಿರಿಂದ ಸುಪ್ರಸಿದ್ಧ ಡೊಳ್ಳಿನ ಪದಗಳು ಜರಗುವುದು ಎಂದು ಜಾತ್ರಾ ಕಮಿಟಿ ಅಧ್ಯಕ್ಷ ಭೀರಣ್ಣಗೌಡ ಬಗಲಿ ಹಾಗೂ ಕಾರ್ಯದರ್ಶಿ ಶಿವಾನಂದ ರೇ. ಪೂಜಾರಿ ತಿಳಿಸಿದ್ದಾರೆ.

ರಾಜ್ಯ ಪ್ರಶಸ್ತಿಗೆ ಆಹ್ವಾನ

◆**ಚಡಚಣ:** ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಮತ್ತು ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ 2025-26ರಲ್ಲಿ ವಿವಿಧ ಕ್ಷೇತ್ರಗಳ್ಲಿ ಸಾಧನೆ ಮಾಡುತ್ತಿರುವ ಹಿರಿಯರಿಗೆ, ಕಿರಿಯರಿಗೆ ಸರಸ್ವತಿ ಕನ್ನಡ ರತ್ನ ರಾಜ್ಯ ಪ್ರಶಸ್ತಿ ಪ್ರದಾನಕ್ಕೆ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶಣೈ ತಿಳಿಸಿದ್ದಾರೆ. ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ, ರಂಗಭೂಮಿ, ಜಾನಪದಕಲೆ, ಸಮಾಜಸೇವೆ, ಸಾಂಸ್ಕೃತಿಕ ಚಟುವಟಿಕೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಮಾ.31ರೊಳಗೆ 9538732777 ಮೊಬೈಲ್ ನಂಬರ್‌ಗೆ ಸಂಪರ್ಕಿಸಬಹುದು ಎಂದು ಕಲಾಕುಂಚದ ಪ್ರಧಾನ ಕಾರ್ಯದರ್ಶಿ ಕೆ.ಸಿ.ಉಮೇಶ ತಿಳಿಸಿದ್ದಾರೆ. ಸನ್ಮಾನಕ್ಕೆ ಆಯ್ಕೆ ಆದವರ ಸಾಧಕರನ್ನು ಸಮಾರಂಭದ ಪ್ರತ್ಯೇಕ ವೇದಿಕೆಯಲ್ಲಿ ಕಲಾಕುಂಚದ ಮುತ್ತೈದೆಯರು ಕನ್ನಡ ತಿಲಕವಿಟ್ಟು, ಕನ್ನಡ ಕಂಕಣ ಕಟ್ಟಿ, ಕನ್ನಡಾರತಿ ಬೆಳಗಿ, ಪುಷ್ಪ ವೃಷ್ಟಿಯೊಂದಿಗೆ ಗೌರವಿಸುತ್ತಾರೆ. ನಂತರ ಅವರದೇ ಭಾವಚಿತ್ರವಿರುವ ಸನ್ಮಾನ ಪತ್ರ ಮುದ್ರಿಸಿ, ಫ್ರೇಮ್ ಮಾಡಿ, ಕನ್ನಡ ಪೇಟಾದೊಂದಿಗೆ ಹಾರ, ಶಾಲು ಕನ್ನಡ ತಾಯಿ ಭುವನೇಶ್ವರಿಯ ಸ್ಮರಣಿಕೆ ಚಿನ್ನದ ಲೇಪನದ ಪದಕ ಕೊರಳಿಗೆ ಹಾಕಿ ಗೌರವಿಸುತ್ತಾರೆ ಎಂದು ತಿಳಿಸಿದ್ದಾರೆ.

ಅಕ್ರಮವಾಗಿ ಸಾಗುತ್ತಿದ್ದ ಅಡಿಕೆ ವಾಹನ ಜಪ್ತಿ

◆**ಝಳಕಿ:** ವಿಜಯಪುರದಿಂದ ಸೊಲ್ಲಾಪುರ ರಾಷ್ಟ್ರೀಯ 52ರ ಹೆದ್ದಾರಿ ಮೆಲಿನ ಬಳ್ಳೊಳ್ಳಿ ಗ್ರಾಮದ ಹತ್ತಿರ ಸಾಗುತ್ತಿವ ಆರ್‌ಜೆ -14 ಜಿಕ್ಯೂ-2648 ಅಕ್ರಮ ಅಡಿಕೆ ವಾಹನ ಜಪ್ತ ಮಾಡಿ ದಂಡ ವಿಧಿಸಿದ ಇಂಡಿ ಎಪಿಎಂಸಿ ಅಧಿಕಾರಿಗಳು ಪತ್ತೆ ಹಚ್ಚಿ 260 ಕ್ವಿಂಟಲ್ ಸರಕಿಗೆ 1'31'620ರೂ.ಗಳನ್ನು ದಂಡ ವಿಧಿಸಿದರು. ಐ.ಎಸ್. ಔರಂಗಬಾದ ಸೆಕ್ರೆಟರಿ ಎಪಿಎಂಸಿ ಇಂಡಿ, ಎಸ್.ಬಿ.ಗುನ್ನಪುರ ಅಸಿಸ್ಟೆಂಟ್ ಸೆಕ್ರೆಟರಿ, ಜ್ಯೋತಿ ಬಿರಾದಾರ ಸುಪ್ರಿಡೆಂಟ್ ಹಾಗೂ ಸಿಬ್ಬಂದಿ ಸಿದ್ದು ಮಣ್ಣೂರ ಉಪಸ್ಥಿತರಿದ್ದರು.



ನಾಲತವಾಡ: ಪಟ್ಟಣ ಪಂಚಾಯತಿ ವ್ಯಾಪ್ತಿಯ ವಾರ್ಡ್ ನಂ-1 ಮತ್ತು 2 ಜಗದೇವನಗರದ ಪ್ರದೇಶದಲ್ಲಿ ವಾಸಿಸುವ ಜನತೆಗೆ ಸರ್ಕಾರ ನೀಡಿರುವ ಹಕ್ಕುಪತ್ರದ ಪ್ರಕಾರ ಉತಾರಿ ನೀಡಲು ಮನವಿ ನೀಡದರು. ಕರ್ನಾಟಕ ಯುವಜನ ಸೇನೆಯ ರಾಜ್ಯ ಅಧ್ಯಕ್ಷ ಶಿವಾನಂದ ವಾಲಿ, ಪಪಂ ಮುಖ್ಯಾಧಿಕಾರಿ ಈರಣ್ಣ ಕೊಣ್ಣೂರ, ಉಪಾಧ್ಯಕ್ಷ ಬಸವರಾಜ ಗಡ್ಡಿ ರಮೇಶ ಆಲ್ಕೊಪ್ಪರ್, ಅಮೀನ್ ಸಾ ನಾಡದಾಳ, ಮಲ್ಲು ಮಣಿಕಂಟ, ರಫೀಕ್ ಇತರರು ಇದ್ದರು.

ಗೌರವದ ಬದುಕಿಗೆ ಸಂಸ್ಕಾರ, ಸಂಸ್ಕೃತಿ ಮುಖ್ಯ

◆**ಬಸವನಬಾಗೇವಾಡಿ:** ಪ್ರತಿಯೊಬ್ಬರ ಗೌರವದ ಬದುಕಿಗೆ ಸಂಸ್ಕಾರ ಸಂಸ್ಕೃತಿ ನಡೆನುಡಿ ಆಚಾರ ವಿಚಾರಗಳು ಮುಖ್ಯ ಕಾರಣವಾಗುತ್ತವೆ ಎಂದು ಹಳಿಯಾಳ ಮಠದ ಅಭಿನವ ಸಿದ್ಧನಾಥ ಸ್ವಾಮೀಜಿ ಹೇಳಿದರು. ತಾಲೂಕಿನ ಸಂಕನಾಳ ಗ್ರಾಮದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿದ ಅವರು, ತಂದೆ-ತಾಯಿ ಗುರು-ಹಿರಿಯರು ತೋರಿದ ಮಾರ್ಗದಲ್ಲಿ ಗೌರವಯುತವಾಗಿ ಮುನ್ನಡೆದರೆ ಮೌಲಿಕ ವ್ಯಕ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಬಹುದು. ಆದ್ದರಿಂದ ಪ್ರತಿಯೊಬ್ಬರೂ ಉತ್ತಮ ಗುಣಗಳಿಂದ ಕೂಡಿದ ಜೀವನವನ್ನು ಅನುಕರಿಸಿಕೊಂಡು ಬರಬೇಕೆಂದು ಹೇಳಿದರು. ಕನ್ನಡ ಹಾಗೂ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಸಾಲವಾಡಗಿ ಅವರು ಅಧ್ಯಕ್ಷತೆ ವಹಿಸಿ ನಗರ ಸಂಸ್ಕೃತಿಗೆ ಗ್ರಾಮೀಣ ಸಂಸ್ಕೃತಿಯೇ ಮೂಲ ಬೇರಾಗಿದೆ. ನಮ್ಮ ಗ್ರಾಮೀಣ ಜಾನಪದ ಸಂಸ್ಕೃತಿಯು ತುಂಬಾ ಶ್ರೀಮಂತವಾದದ್ದು. ನಮ್ಮ ಪೂರ್ವಜರು ಪ್ರತಿಯೊಂದು ಘಟನೆಯ ಕುರಿತು ತಮ್ಮ ಸಾಹಿತ್ತಿಕ ವಿಚಾರಗಳನ್ನು ತ್ರಿಪದಿಯ ರೂಪದಲ್ಲಿ ಹಂಚಿಕೊಂಡಿದ್ದು ಇಂದು ಶಿಷ್ಟ ಸಾಹಿತ್ಯಕ್ಕೆ ತಳಹದಿಯಾಗಿದೆ. ಜಾನಪದ ಸಾಹಿತ್ಯ ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ಇಂದಿನ ಯುವಕರ ಮೇಲಿದೆ ಆದ್ದರಿಂದ ನಾವೆಲ್ಲರೂ ನಮ್ಮ ಸಂಸ್ಕೃತಿಯ ವಾರಸುದಾರರಾಗಿ ಅದನ್ನು ಮುನ್ನಡೆಸಿಕೊಂಡು ಹೋಗಬೇಕೆಂದು ಹೇಳಿದರು.



ಬಸವನಬಾಗೇವಾಡಿ: ತಾಲೂಕಿನ ಸಂಕನಾಳ ಗ್ರಾಮದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ನಡೆಯಿತು. ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ವೈ.ಬಿ.ನಾಯಕ, ವಿ.ಎನ್.ರಜಪೂತ, ದೈಹಿಕ ನಿರ್ದೇಶಕರಾದ ಎಸ್.ಕೆ.ಚಿಕ್ಕನರ್ತಿ, ಎಂ.ಕೆ.ಯಾದವ, ಡಾ.ಕಿರಣ ಸೂಡಿ, ಅಶ್ವಿನಿ ಕೌಲಗಿ, ನಿಖಿತಾ ಲಮಾಣಿ ಉಪಸ್ಥಿತರಿದ್ದರು.

ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮವಹಿಸಿ: ಜಿಲ್ಲಾಧಿಕಾರಿ ಡಾ.ಆನಂದ ಕೆ.

◆**ವಿಜಯಪುರ:** ಜಿಲ್ಲೆಯಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ತೊಂದರೆಯಾಗಂತೆ ಈಗಿನಿಂದಲೇ ಮುಂಜಾಗ್ರತ ಕ್ರಮಕ್ಕಾಗಿ ಯೋಜನೆ ರೂಪಿಸಿ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಕುಡಿಯುವ ನೀರಿನ ನಿರ್ವಹಣೆ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ದುರಸ್ತಿ ಇರುವ ಬೋರವೆಲ್‌ಗಳನ್ನು ಪುನಶ್ಚೇತನಗೊಳಿಸಿ ನೀರಿನ ತೊಂದರೆಯಾಗದಂತೆ ಕ್ರಮ ವಹಿಸಬೇಕು. ಜಿಲ್ಲೆಯಲ್ಲಿರುವ ದುರಸ್ತಿಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದುರಸ್ತಿಗೊಳಿಸಿ ಕುಡಿಯುವ ನೀರು ಸಮರ್ಪಕವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಕುಡಿಯುವ ನೀರಿನ ಶುದ್ಧತೆ ಕುರಿತು ಮೇಲಿಂದ ಮೇಲೆ ಪರೀಕ್ಷಿಸಿ ಶುದ್ಧ ನೀರು ದೊರಕುವಂತ ಕ್ರಮ ವಹಿಸಬೇಕು. ಪ್ರಸಕ್ತ ವರ್ಷ ಏಪ್ರೀಲ್ 3ರ ನಂತರ ಜಿಲ್ಲೆಯಲ್ಲಿರುವ ಕುಡಿಯುವ ನೀರಿಗಾಗಿ ಕಾಲುವೆಗಳ ಮೂಲಕ ಕೆರೆಗಳಿಗೆ ನೀರನ್ನು ಹರಿ ಬಿಡಲಾಗುತ್ತಿದ್ದು, ಕುಡಿಯುವ ನೀರಿಗಾಗಿ ಬಳಸಲು ಮಾತ್ರ ಉಪಯೊಗಿಸುವಂತೆಯೂ ಹಾಗೂ ಯಾವುದೇ ಕಾರಣಕ್ಕೂ ಇತರ ಕಾರಣಕ್ಕೆ ಬಳಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿಗಾಗಿ ಸಮಸ್ಯೆಯಾಗದಂತೆ ಕಾಲುವೆಗಳ ಮೇಲೆ ಪಂಪ್ ಸೆಟ್ ಇರದಂತೆ ನೋಡಿಕೊಳ್ಳಬೇಕು. ಹಗಲು ಮತ್ತು ರಾತ್ರಿ ವೇಳೆಯಲ್ಲಿ ನಿಗಾ ವಹಿಸುವಂತೆ ಅಗತ್ಯ ಸಿಬ್ಬಂದಿ ನೇಮಿಸಬೇಕು.ಅದರೊಂದಿಗೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಸಹಕರಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.



» ಜಿಲ್ಲೆಯಲ್ಲಿ ದುರಸ್ತಿವಿರುವ ಬೋರವೆಲ್‌ಗಳನ್ನು ಪುನಶ್ಚೇತನಗೊಳಿಸಿ ನೀರಿನ ತೊಂದರೆಯಾಗದಂತೆ ಕ್ರಮ ವಹಿಸಿ

ಜಿಲ್ಲೆಯಲ್ಲಿರುವ ವಸತಿ ನಿಲಯ, ಅಂಗನವಾಡಿ, ಶಾಲಾ ಕಾಲೇಜುಗಳಲ್ಲಿ ನೀರಿನ ಅಭಾವವಾಗದಂತೆ ಈಗಿಂದಲೇ ಯೋಜನೆ ರೂಪಿಸಿ ಸಮರ್ಪಕವಾಗಿ ಶುದ್ಧ ಕುಡಿಯುವ ನೀರು ಸರಬರಾಜುವಿಗೆ ಕ್ರಮ ವಹಿಸಬೇಕು. ಕುಡಿಯುವ ನೀರಿನ ತೊಂದರೆಯಾಗದಂತೆ ಜಿಲ್ಲೆಯ ಎಲ್ಲ ತಾಲೂಕು ತಹಶೀಲ್ದಾರರು ಸಭೆ ಕರೆದು ಕ್ರಮ ವಹಿಸಬೇಕು. ಕುಡಿಯುವ ನೀರು ಸಂಗ್ರಹ ಘಟಕಗಳನ್ನು ಪ್ರತಿ 15 ದಿನಗಳಿಗೊಮ್ಮೆ ಸ್ವಚ್ಚಗೊಳಿಸಿ, ಶುದ್ಧ ಕುಡಿಯುವ ನೀರು ಸರಬರಾಜಾಗುವಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಏಪ್ರೀಲ್‌ನಿಂದ ಬಿಸಿಲಿನ ಪ್ರಖರತೆ ಹೆಚ್ಚಾಗುವ ಹಿನ್ನಲೆಯಲ್ಲಿ ಬೆಳಿಗ್ಗೆ 11 ರಿಂದ ಮದ್ಯಾಹ್ನ 4 ಗಂಟೆಯವರೆಗೆ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಟಿಯಿಂದ ಸಾರ್ವಜನಿಕರಿಗೆ ಅಗತ್ಯ ತಿಳಿವಳಿಕೆ ಮೂಡಿಸಬೇಕು. ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಜನನಿಬಿಡ ಪ್ರದೇಶಗಳಲ್ಲಿ ಕರ ಪತ್ರ ವಿತರಣೆ, ಪ್ರಚಾರ ಫಲಕ, ಧ್ವನಿವರ್ಧಕಗಳನ್ನು ಬಳಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.ಈ ಕುರಿತು ಈಗಾಗಲೇ ಯೋಜನೆ ರೂಪಿಸಿ ಕಾರ್ಯರೂಪಕ್ಕೆ ತರಬೇಕು. ಮಳೆಗಾಲದ ಸಮಯದಲ್ಲಿ ಸಾರ್ವಜನಿಕರು ಗುಡುಗು ಮತ್ತು ಸಿಡಿಲುಗಳಿಂದ ಸುರಕ್ಷಿತವಾಗಿ ರಕ್ಷಿಸಿಕೊಳ್ಳಲು ಹಾಗೂ ಪ್ರಾಣಾಪಾಯದಿಂದ ಪಾರಾಗಲು ಮಾರ್ಗ ಸೂಚಿಗಳ ಜಾಗೃತಿ ಮೂಡಿಸುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಪಂಚಾಯತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ ಮಾತನಾಡಿ, ಜಿಲ್ಲೆಯ ಎಲ್ಲ ಪಟ್ಟಣ ಪಂಚಾಯತಿ ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರು ಹಾಗೂ ಬಿಸಿಲಿನ ಪ್ರಖರತೆಯಿಂದ ಸಾರ್ವಜನಿಕರ ಸುರಕ್ಷತೆಗಾಗಿ ಜಾಗೃತಿ ಕಾರ್ಯಕ್ರಮಗಳು ಮತ್ತು ಸಭೆಗಳನ್ನು ನಡೆಸಲಾಗಿದ್ದು,ಬೇಸಿಗೆ ಸಮಯದಲ್ಲಿ ನೀರಿನ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ ಎಂದು ಅವರು ಹೇಳಿದರು.

ಅಪರ ಜಿಲಾಧಿಕಾರಿ ಡಾ.ಔದ್ರಾಮ, ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳಾದ ಪ್ರಕಾಶ ವಡ್ಡರ, ತಾಲೂಕಿನ ಎಲ್ಲ ತಹಶೀಲ್ದಾರರು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರದಿಂದ ನಿರಾಶ್ರಿತರ ಕಣ್ಣೀರು ಒರೆಸುವ ಕೆಲಸ: ಸಚಿವ ಎಂಬಿಪಾ

◆**ವಿಜಯಪುರ:** ನೀರಾವರಿಗಾಗಿ ಭೂಮಿ ಕಳೆದುಕೊಂಡ ನಿರಾಶ್ರಿತರ ಕಣ್ಣೀರು ಒರೆಸುವ ಕೆಲಸವನ್ನು ಸರಕಾರ ಮಾಡುತ್ತಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಬಬಲೇಶ್ವರ ತಾಲೂಕಿನ ಹೊಳೆಜೈನಾಪುರ ಗ್ರಾಮದಲ್ಲಿ ಲಕ್ಷ್ಮಿದೇವಿ, ಈಶ್ವರ, ಶ್ರೀನಂದಿ ಮತ್ತು ಮಾರುತೇಶ್ವ ದೇವರ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಹಾಗೂ ಧರ್ಮಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯುಕೆಪಿ 3ನೇ ಹಂತದ ಭೈಸ್ವಾಧೀನವಾಗಲಿರುಬ ಜಮೀನುಗಳ ರೈತರಿಗೆ ಒಪ್ಪಂದದಂತೆ ಪರಿಹಾರ ಚೆಕ್ ವಿತರಣೆ ಕಾರ್ಯಕ್ಕೆ ಬಾಗಲಕೋಟೆಯಲ್ಲಿ ಚಾಲನೆ ನೀಡಲಾಗಿದೆ. ಈ ಮೂಲಕ ನಿರಾಶ್ರಿತರ ಕಣ್ಣೀರು ಒರೆಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗೆ ಒತ್ತು ನೀಡುತ್ತಿದ್ದೇವೆ. ಜೈನಾಪುರ ಗ್ರಾಮಸ್ಥರ ಬೇಡಿಕೆಗಳಿಗೆ ಸ್ಪಂದಿಸಲಾಗುವುದು. ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದ ಜೊತೆಯಲ್ಲಿಯೇ ಸರಕಾರ ಬಡವರು, ರೈತರು, ಮಹಿಳೆಯರು, ಯುವಕರು ಸೇರಿದಂತೆ ಎಲ್ಲರ ಕಲ್ಯಾಣಕ್ಕಾಗಿ ಯೋಜನೆಗಳನ್ನು ಜಾರಿ ಮಾಡಲಾಗಿದೆ. ಮಮದಾಪುರ ಹೋಬಳಿಗೆ ಅಭಿವೃದ್ಧಿಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತದಲ್ಲಿ ಸಂಸ್ಕೃತಿ, ಪ್ರಕೃತಿ, ದೈವಾರಾಧನೆಗಳೂ ಸಮಾಜದ ಅವಿಭಾಜ್ಯ ಅಂಗಗಳಾಗಿವೆ. ಹೊಳೆಜೈನಾಪುರದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆ ಗ್ರಾಮಸ್ಥರ ದೈವಭಕ್ತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಬಸವರಾಜ ದೇಸಾಯಿ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಕುಮಾರ ದೇಸಾಯಿ, ಪ್ರಶಾಂತ ಹಿರೇದೇಸಾಯಿ, ಜಗನ್ನಾಥ ಹಿರೇದೇಸಾಯಿ, ಭೀಮಶಿ ನಾಗರಾಳ, ಬಸಪ್ಪ ಕೊಡೆಕಲ್, ಶ್ರೀನಿವಾಸ ನಿಡೋಣಿ, ಅಮೀನ ಬದರಿ, ಲಕ್ಕಪ್ಪ ಅಂಬಿಗೇರ, ಮುತ್ತಪ್ಪ ಮಂಟೂರ, ದೇವಸ್ಥಾನದ ಪ್ರಮುಖರು, ಗ್ರಾಮಸ್ಥರು ಇದ್ದರು.




ಕ್ರೀಡೆಗಳಿಂದ ಸದೃಢ ದೇಹ, ಮನಸ್ಸಿಗೆ ಸಹಕಾರಿ

◆**ಸಿಂದಗಿ:** ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಸದೃಢ ದೇಹ ಹಾಗೂ ಸದೃಢ ಮನಸ್ಸು ಹೊಂದಲು ಸಾಧ್ಯ ಎಂದು ಸಿ.ಎಂ.ಮನಗೂಳಿ ಪದವಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ ಹೇಳಿದರು.

ನಗರದ ಆರ್.ಬಿ.ಬೂದಿಹಾಳ ಕ್ರೀಡಾಂಗಣದಲ್ಲಿ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಪದ್ಮರಾಜ ಮಹಿಳಾ ಪದವಿ ಕಾಲೇಜು ಹಾಗೂ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸಹಯೋಗದಲ್ಲಿ ಹಮ್ಮಿಕೊಂಡ ಅಂತರಮಹಾವಿದ್ಯಾಲಯಗಳ ಖೋ-ಖೋ ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ತಂಡದ ಆಯ್ಕೆ 2025-26 ಸಮಾರಂಭದ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಚಟುವಟಿಕೆ, ಮಾನಸಿಕ ಕಸರತ್ತು ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವ ಭಾರತೀಯ ಪಾರಂಪರಿಕ ಆಟಗಳಲ್ಲಿ ಖೋ-ಖೋ ಆಟ ಅತ್ಯಂತ ಸೂಕ್ಷ್ಮತೆಯಿಂದ ಕೂಡಿದೆ. ಖೋ-ಖೋ ಕೇವಲ ಮನರಂಜನೆಯಲ್ಲ, ಬದಲಾಗಿ ಶಿಸ್ತು ಮತ್ತು ದೈಹಿಕ ಸದೃಢತೆ ಉತ್ತೇಜಿಸುವ ಸಾಂಪ್ರದಾಯಿಕ ಕ್ರೀಡೆಯಾಗಿದೆ ಎಂದರು.

ಸಹಾಯಕ ನಿರ್ದೇಶಕ ಡಾ.ವಿಶ್ವನಾಥ ನಡಕಟ್ಟಿ, ಸಂಸ್ಥೆಯ ಸಹ ಕಾರ್ಯದರ್ಶಿ ಅಶೋಕ ವಾರದ, ನಿರ್ದೇಶಕ ಡಾ.ವಿವೇಕಾನಂದ ಸಾಲಿಮಠ ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಕ್ರೀಡೆಯೂ ಸಹ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಕ್ರೀಡೆಗಳು ನಮ್ಮ ಮಾನಸಿಕ ಶಕ್ತಿಯನ್ನು ಹೆಚ್ಚಿಸುತ್ತವೆ ಎಂದರು.

ಆಯ್ಕೆ ಸಮಿತಿ ಸದಸ್ಯ ಮಹಾಂತೇಶ ಲಾಯದಗುಂದಿ, ಶಿವಪ್ರಸಾದ ಎಲಿ ಹಾಗೂ ಶ್ರೀನಿವಾಸ ಕ್ರೀಡಾಪಟುಳಿಗೆ ಶುಭಕೋರಿದರು. ಸಾನ್ನಿಧ್ಯ ವಹಿಸಿದ ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹಾಗೂ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಆಶೀರ್ವಚನ ನೀಡಿದರು. ರಾಜಶೇಖರ ಕೂಚಬಾಳ, ಡಾ.ರವಿ ಗೋಲಾ, ಡಾ.ಶರಣಬಸವ ಜೋಗುರ, ಭೀಮನಗೌಡ ಸಿಂಗನಳ್ಳಿ, ವಿ.ಡಿ.ಪಾಟೀಲ, ಕೆ.ಹೆಚ್.ಸೋಮಾಪುರ, ಎಸ್.ಎಸ್. ಮಲ್ಲೇದ, ಎಸ್.ಎಸ್.ಸಂಗಮ, ಗವಿಸಿದ್ದಪ್ಪ ಆನೆಗುಂದಿ, ಬಿ.ಜಿ.ಅವಟಿ, ಎಸ್.ಎಸ್. ಕಲಶೆಟ್ಟಿ, ಮಹಾಂತೇಶ ನೂಲಾನವರ, ಜಿ.ಎಸ್.ಕುಲಕರ್ಣಿ, ಯು.ಸಿ.ಪೂಜೇರಿ, ಎಸ್.ಸಿ.ದುದ್ಗಗಿ, ಎ.ಆರ್.ರಜಪೂತ, ಎಸ್. ಎನ್.ಕುಂದಗೋಳ, ಎಂ.ಕೆ.ಬಿರಾದಾರ, ಭಾಗ್ಯ ಬಬಲೇಶ್ವರ, ಭಾಗ್ಯಶ್ರೀ ನಂದಿಮಠ, ನೀಲಮ್ಮ ಬಿರಾದಾರ, ಡಿ.ಎಂ.ಪಾಟೀಲ, ಮಂಗಳಾ ಈಳಗೇರ, ಮಮತಾ ಹರನಾಳ, ಶಿವಶಂಕರ ಕುಂಬಾರ, ಜಿ.ಎ.ನಂದಿಮಠ ಹೇಮಾ ಹಿರೇಮಠ ಇದ್ದರು.



ಪ್ರಜಾಸೌಧಕ್ಕೆ ಗುರುತಿಸಿದ ಸ್ಥಳ ವಿರೋಧಿಸಿ 19ನೇ ದಿನಕ್ಕೆ ಮುಂದುವರಿದ ಧರಣಿ

◆**ತಾಳಿಕೋಟೆ:** ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟೆ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸಬೇಕೆಂದು ಒತ್ತಾಯಿಸಿ ತಾಳಿಕೋಟೆ ತಾಲ್ಲೂಕು ಹೋರಾಟ ಸಮಿತಿಯವರು ನಡೆಸುತ್ತಿರುವ ಅನಿರ್ದಿಷ್ಟಾವಧಿಯ ಧರಣಿ ಸತ್ಯಾಗ್ರಹವು 19ನೇ ದಿನಕ್ಕೆ ಮುಂದುವರಿಯಿತು. ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಈ ಹೋರಾಟಕ್ಕೆ ತಾಳಿಕೋಟೆ ಪಟ್ಟಣದ ವಿವಿಧ ಸಮಾಜಗಳ ಸಂಘ ಸಂಸ್ಥೆಗಳು ಬೆಂಬಲ ವ್ಯಕ್ತಪಡಿಸಿವೆ.

ಪಟ್ಟಣದ ಹಿರಿಯರಾದ ಸಿರಸಕುಮಾರ ಹಜೇರಿ ಮಾತನಾಡಿ, ಈಗಾಗಲೇ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ನಿಗದಿಪಡಿಸಿರುವ ಸ್ಥಳವು ತಾಳಿಕೋಟೆ ಪಟ್ಟಣದಿಂದ ಸುಮಾರು ಐದರಿಂದ ಆರು ಕಿಲೋಮೀಟರ್ ದೂರದಲ್ಲಿದ್ದು, ಇದರಿಂದ ವೃದ್ಧರು, ಮಹಿಳೆಯರು, ವಿದ್ಯಾರ್ಥಿಗಳು, ಅಂಗವಿಕಲರು ಹಾಗೂ ರೈತಾಪಿ ಜನರಿಗೆ ಸರ್ಕಾರಿ ಕಚೇರಿಗಳಿಗೆ ತೆರಳಲು ತುಂಬಾ ತೊಂದರೆಯಾಗುತ್ತದೆ ಎಂದು ತಿಳಿಸಿದರು.

ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಮೆಹಬೂಬ ಚೋರಗಸ್ತಿ, ಕಾಶಿನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಕಳಕೂಸಾ ರಂಗರೇಜ್, ಬಸವರಾಜ ಕಶೆಟ್ಟಿ, ಸಿದ್ದನಗೌಡ ಪಾಟೀಲ, ಮಯೂರ ಪಾಟೀಲ, ನಾಗೇಶ ಕಟ್ಟಿಮನಿ, ರಮೇಶ್ ಹಜೇರಿ, ರಾಘು ಮಾನೆ, ನೀಲಕಂಠ ಕೊಣ್ಣೂರ, ಸುಭಾಷ್ ಕಟ್ಟಿಮನಿ, ದಸ್ತಗೀರಸಾಬ್ ಕೆಂಭಾವಿ, ಮುದಕಪ್ಪ ಬಡಿಗೇರ, ಅಮಿತ್ ಮನಗೂಳಿ, ಅಶೋಕ ಚಿನಗುಡಿ, ನಿಂಗನಗೌಡ ದೇಸಾಯಿ, ಸಿದ್ದು ಕಟ್ಟಿಮನಿ, ಶಂಕರ ಪಡಸಾಲಿ, ಮಹೇಶ್ ಚಲವಾದಿ, ರವಿ ಕಟ್ಟಿಮನಿ, ಮಂಜುನಾಥ್ ಶೆಟ್ಟಿ, ಸುರೇಶ್ ಹಜೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ಸದ್ದಾಮ್ ಹುಸೇನ್ ಬೀಳಗಿ, ರಾಜು ಹಜೇರಿ, ನಿತಿನ್ ವಿಜಾಪುರ ಸೇರಿದಂತೆ ಪಟ್ಟಣದ ನಾಗರಿಕರು ಉಪಸ್ಥಿತರಿದ್ದರು.



ಡಿಡಿಪಿಐ ಕಚೇರಿಯಲ್ಲಿ ಅಕ್ರಮ: ತನಿಖೆಗೆ ಒತ್ತಾಯಿಸಿ ಮನವಿ

◆**ವಿಜಯಪುರ:** ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಕನ್ನಡಿಗರ ವೇದಿಕೆಯ ಪದಾಧಿಕಾರಿಗಳು ನಗರದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ಕನ್ನಡಿಗರ ವೇದಿಕೆ ರಾಜ್ಯಾಧ್ಯಕ್ಷ ಲಕ್ಷ್ಮಣ ಕಂಬಾಗಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಕಾರ್ಯವೈಖರಿಯಲ್ಲಿ ಕೆಲವು ಗಂಭೀರ ಅಕ್ರಮಗಳು ಮತ್ತು ನಿಯಮ ಉಲ್ಲಂಘನೆಗಳು ನಡೆದಿರುವ ಕುರಿತು ತಿಳಿದು ಬಂದಿದ್ದು, ಕೂಡಲೇ ಈ ಬಗ್ಗೆ ತನಿಖೆ ನಡೆಸಬೇಕು ಎಂದರು.

ಆಮ್ ಆದ್ಮಿಭೋಗೇಶಸೊಲ್ಲಾಪುರಮಾತನಾಡಿ,ವಿಜಯಪುರಜಿಲ್ಲೆಯಶಿಕ್ಷಣ ಇಲಾಖೆಯಲ್ಲಿ ಡಿಡಿಪಿಐ ಲಾಗಿನ್ ಐಡಿ ಕದ್ದು ಮಾನ್ಯತೆ ನವೀಕರಣಗೊಳಿಸಿದ್ದಾರೆ ಎಂದು ಡಿಡಿಪಿಐ ಅವರು ಹೇಳಿದ್ದಾರೆ. ಈ ಸಂಬಂಧ ಡಿಪಿಐ ಅವರು ಎಫ್ ಐಆರ್ ದಾಖಲು ಮಾಡಿದ್ದಾರೆ. ಕೂಡಲೇ ಡಿಡಿಪಿಐ ಅವರು ನವೀಕರಿಸಿದ ಎಲ್ಲ ಶಾಲೆಗಳನ್ನು ರದ್ದುಪಡಿಸಬೇಕು. ಹೋದ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಡಿಮೆಮಟ್ಟದಲ್ಲಿ ಬಂದ ಕಾರಣ ವಿಜಯಪುರ ಮಾನ ಮರ್ಯಾದೆ ರಾಜ್ಯ ಮಟ್ಟದಲ್ಲಿ ಹರಾಜುವಾಗಿದೆ. ಫಲಿತಾಂಶ ಸುಧಾರಣೆ ಮಾಡುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಶ್ರಮಿಸದೆ ಇಂತಹ ಭ್ರಷ್ಟಾಚಾರದಲ್ಲಿ ಮೂಗು ತೋರಿಸಿ ವಯಕ್ತಿಕ ಸ್ವಾರ್ಥ ಮೆರೆಯುತ್ತಿರುವುದು ದುರದುಷ್ಟಕರ ಸಂಗತಿ ಎಂದರು. ವಾಲ್ಮೀಕಿ ಸಮಾಜದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ ಮಾತನಾಡಿ,ಸಾರವಾಡ ಗ್ರಾಮದ ಜಗದಂಬಾ ಪ್ರಾಥಮಿಕ ಖಾಸಗಿ ಶಾಲೆ ಸರ್ಕಾರಿ ಕೆರೆ ಅಂಗಳದಲ್ಲಿ ನಡೆಸುತ್ತಿದ್ದು, ಸರ್ಕಾರಿ ಶಾಲೆಯ ಎದುರುಗಡೆ ಶಾಲಾ ನೋಂದಣಿಯನ್ನು ಕೊಟ್ಟಿರುವುದು ಇದು ಕಾನೂನು ಬಾಹೀರವಾಗಿದೆ. ಕೆರೆ ಒಡೆದರೆ ವಿದ್ಯಾರ್ಥಿಗಳ ಜೀವಕ್ಕೆ ಪ್ರಾಣಾಪಾಯವಿದ್ದು ಅನುಮತಿ ನೀಡಿದ್ದನ್ನು ಕೂಡಲೇ ಜಿಲ್ಲಾಡಳಿತ ರದ್ದು ಪಡಿಸಬೇಕು ಎಂದರು. ಕರ್ನಾಟಕ ರಾಜ್ಯ ಕನ್ನಡಿಗರ ವೇದಿಕೆಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪೂಜಾ ಬುಮ್ಮೆವಾಲೆ, ಇಂದುಮತಿ ಚಾಲವಾದಿ, ಪ್ರೇಮಾ ಲೋನಾರಮಠ ಇದ್ದರು.



ಗ್ಯಾಸ್ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

◆**ಮುದ್ದೇಬಿಹಾಳ:** ಪಟ್ಟಣದ ಬಸವೇಶ್ವರ ಸರ್ಕಲ್‌ನಲ್ಲಿ ಯುವ ಕಾಂಗ್ರೆಸ್ ಹಾಗೂ ಮಹಿಳಾ ಕಾಂಗ್ರೆಸ್ ಸಂಘಟನೆ ವತಿಯಿಂದ ಗ್ಯಾಸ್ ಬೆಲೆ ಏರಿಕೆ ಹಾಗೂ ಅಮೆರಿಕಾದ ಬಂಡವಾಳ ಶಾಹಿ ವಿರುದ್ಧ ಶರಣಾಗಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿಫಲತೆ ವಿರುದ್ಧ ಗುರುವಾರ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ಖಾಲಿ ಸಿಲೆಂಡರ ಇಟ್ಟುಕೊಂಡು, ಕಟ್ಟಿಗೆ ಒಲೆಯನ್ನು ಹೊತ್ತಿಸಿ ಪ್ರತಿಭಟಿಸಿ, ಪ್ರತಿಭಟನಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಸದ್ದಾಂ ಕುಂಟೋಜಿ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹಿಳಾ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರು ಅಕ್ಷತಾ ಚಲವಾದಿ, ಬಸವರಾಜ ಬಂಚೆತ್ರಿ ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸುಜಾತಾ ಶಿಂದೆ ಸಚಿನ್ ಪಾಟೀಲ್, ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಮಹಾಬುಬಿ ಬಾಗವಾನ ರಫೀಕ್ ಶಿರೋಳ. ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಸರ್ಕಾರಿ ಆಸ್ಪತ್ರೆಯ ನಾಮ ನಿರ್ದೇಶಕ ಸದಸ್ಯರು ಮುದ್ದೇಬಿಹಾಳ ಸಮೀರ್ ದ್ರಾಕ್ಷಿ ಮಾತನಾಡಿದರು.

ಮುಖಂಡರಾದ ರಾಮಣ್ಣ ನಾಯಕಮಕ್ಕಳ. ಅಬೂಬಕರ್ ಹಡಗಲಿ ಕಾಯುಮ್ ಮೋಮಿನ್, ಬಸವರಾಜ ಚಲವಾದಿ, ಚಂದ್ರು ಚಲವಾದಿ, ಯಮುನಪ್ಪ, ಅಭಿ ಕಲಾಲ, ಅಬ್ದುಲ್ ಸಲಾಂ ಮುಲ್ಲಾ, ಬಂಧು ಮ್ಯಾಗೇರಿ, ಮಂಜುನಾಥ ಮುರಾಳ, ಪ್ರದೀಪ್ ರಾಥೋಡ್, ಇನಾಯತ್ ಮೊಮಿನ್,ರಾಜು ಪಾಟೀಲ್, ಶೇಖರ್ ಬಿರಾದಾರ, ಮಹಿಳಾ ಕಾಂಗ್ರೆಸ್ ನಾಯಕಿರಾದ ಶೋಭಾ ಶೇಳ್ಳಗಿ, ಕಮಲಾ ಬಂಚೆತ್ರಿ, ನಿಲಮ್ಮಾ ಚಲವಾದಿ, ಮಮ್ತಾಜ್ ಮುಲ್ಲಾ, ಶಿವಲೀಲಾ ಬಸರಕೋಡ, ಹೀನಾ ಮೂಲಿಮನಿ,ಹಸೀನಾ ನಿಡಗುಂದಿ, ಹಫೀಜಾ ಜಮಾದಾರ, ನಿಲ್ಲಮ್ಮಾ ಮಹಾಲಿಂಗಪುರ, ದೇವಮ್ಮಾ ಹುಣಕುಂಟಿ, ಮಾಹಬೂಬಿ ನಾಯ್ಕೋಡಿ, ಬಸಮ್ಮಾ ಯರಗಲ್ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.



ಮಕ್ಕಳಿಗೆ ಸಂಸ್ಕಾರ ನೀಡಿ: ದಾಯಗೋಡೆ

◆**ಇಂಡಿ:** ಇಂತಹ ಗ್ರಾಮಿಣ ಭಾಗದಲ್ಲಿ ಕೂಡಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುತ್ತಿರುವ ಕಾರ್ಯ ಶ್ಲಾಘನಿಯವಾಗಿದೆ ಎಂದು ಮಾಜಿ ಗ್ರಾಪಂ ಅಧ್ಯಕ್ಷ ರಮೇಶ ದಾಯಗೋಡೆ ಹೇಳಿದರು.

ತಾಲೂಕಿನ ಲಚ್ಯಾಣ ಗ್ರಾಮದ ಸದ್ಗುರು ವಿದ್ಯಾವರ್ಧಕ ಸಂಘದ ಸಿದ್ದಲಿಂಗ ಮಹಾರಾಜ ಪ್ರಾಥಮಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ತಾಂತ್ರಿಕ ಯುಗವಾದ ಇಂದು ಎಲ್ಲ ರಂಗಳಲ್ಲಿ ಪೈಪೋಟಿ ಹೆಚ್ಚಿದ್ದು ಆ ನಿಟ್ಟಿನಲ್ಲಿ ಮಕ್ಕಳಿಗೆ ತಯಾರು ಮಾಡುವ ನಹತ್ತರ ಜವಾಬ್ದಾರಿ ಪ್ರತಿಯೊಬ್ಬ ಶಿಕ್ಷಕರ ಮೇಲಿದೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಅಶೋಕಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಿಕ್ಷಕ ಮಲ್ಲಿಕಾರ್ಜುನ ಕಂಬಾರ ನಿರೂಪಿಸಿ ಸ್ವಾಗತಿಸಿದರು. ಸಂಸ್ಥೆಯ ಉಪಾಧ್ಯಕ್ಷ ವಿಠ್ಠಲ ಉಕ್ಕಲಿ ವಂದಿಸಿದರು. ಲಚ್ಯಾಣ ಮಠದ ಬಸಯ್ಯ ಹರೇಮಠ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಜಸಾಬ ನದಾಫ, ಬಿ.ಆರ್. ಕೊರೆ, ಶ್ರೀಶೈಲ ದೊಡಮನಿ, ಎಸ್.ಪಿ.ಮುಜಗೊಂಡ, ಎಸ್.ಆರ್.ವಾಲಿ, ವಿರಭದ್ರ ವಾಗಮೋರೆ ಹಾಗೂ ಶಾಲೆ ಅಧ್ಯಕ್ಷೆ ಭಾಗ್ಯಶ್ರೀ ಹೊಸಮನಿ, ಮುಖ್ಯ ಗುರುಮಾತೆ ಸಂಗಿತಾ ಬಗಲಿ, ಪ್ರಕಾಶ ಯಳಮೇಲಿ, ಕಲಾವತಿ, ವಿದ್ಯಾ, ಸಿದ್ದು ದೊಡಮನಿ, ವಿನೋದ ಧನಪಾಲ ಇದ್ದರು.



ತರಕಾರಿ ಮಾರುಕಟ್ಟೆ ನಿರ್ಮಾಣಕ್ಕೆ ಆಗ್ರಹಿಸಿ ಮನವಿ

◆**ದೇವರಹಿಪ್ಪರಗಿ:** ರೈತ ದೇಶದ ಬೆನ್ನೆಲುಬು ಅನ್ನ ನೀಡುವ ಅನ್ನದಾತರು ಮಳೆ, ಗಾಳಿ, ಬಿಸಿಲು ಎನ್ನದೆ ರೈತರು ಪಟ್ಟಣದ ರಸ್ತೆಯಲ್ಲಿ ಕುಳಿತು ತರಕಾರಿ ಮಾರುತಿದ್ದಾರೆ. ಕಾರಣ ರೈತರಿಗೆ ಹಾಗೂ ಬಡ ಕಾಯಿ ಪಲ್ಲೆ ಮಾರಾಟಗಾರರಿಗೆ ಅನುಕೂಲ ಕಲ್ಪಿಸಿ ಕೊಡಲು ದೇವರ ಹಿಪ್ಪರಗಿ ಪಟ್ಟಣದಲ್ಲಿ ತರಕಾರಿ ಮಾರುಕಟ್ಟೆ ನಿರ್ಮಿಸುವ ಕುರಿತು ನಮ್ಮ ಕರ್ನಾಟಕ ಸೇನೆಯ ವತಿಯಿಂದ ತಹಶೀಲ್ದಾರ್ ನಿಂಗಣ್ಣ ಬಿರಾದಾರ ಅವರ ಮುಖಾಂತರ ಜಿಲ್ಲಾಧಿಕಾರಿಗೆ ಮನವಿ ನೀಡಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ಯುವ ಸಂಚಾಲಕ ಸಿದ್ದನಗೌಡ ಪಾಟೀಲ ಮಾತನಾಡಿ, ವಿಜಯಪುರದಿಂದ ಕಲಬುರಗಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಇಂತಹ ಸುಡು ಬಿಸಿಲಿನಲ್ಲಿ ರೈತರು ತರಕಾರಿ ಮಾರುತ್ತಿದ್ದಾರೆ, ತರಕಾರಿ ಮಾರುವ ಮಾರುಕಟ್ಟೆ ಅವಶ್ಯಕವಾಗಿದೆ ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ತರಕಾರಿ ಮಾರುಕಟ್ಟೆ ನಿರ್ಮಿಸಿಕೊಡಬೇಕೆಂದು ಮನವಿ ಮಾಡಿದರು.

ನಮ್ಮ ಕರ್ನಾಟಕ ಸೇನೆಯ ತಾಲೂಕು ಅಧ್ಯಕ್ಷ ಹಸನ್ ನದಾಫ ಮಾತನಾಡಿ, ರೈತರ ಬಗ್ಗೆ ಕಾಳಜಿ ವಹಿಸಿ ಅವರ ಅನುಕೂಲಕ್ಕಾಗಿ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲು ಸರ್ಕಾರದ ಮೇಲೆ ಒತ್ತಡ ತಂದು ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲರು ಕೂಡಲೆ ಇತ್ತ ಕಡೆ ಗಮನ ಹರಿಸಿ ರೈತರಿಗೆ ಅತಿ ಶೀಘ್ರದಲ್ಲಿ ತರಕಾರಿ ಮಾರುಕಟ್ಟೆ ನಿರ್ಮಿಸಿ ಕೊಡಬೇಕು ಎಂಬುದು ರೈತರ ಆಗ್ರಹವಾಗಿದ್ದು ಇದನ್ನು ಈಡೇರಿಸಿ ಕೊಡಬೇಕೆಂದು ಹೇಳಿದರು.

ರಾಷ್ಟ್ರೀಯ ರೈತ ಸಂಘ ಕಾರ್ಯದರ್ಶಿ ರೇಣುಕಾ ಪಾಟೀಲ. ನಮ್ಮ ಕರ್ನಾಟಕ ಸೇನೆಯ ಪದಾಧಿಕಾರಿಗಳಾದ, ದಾವಲಸಾಬ ಹೆಬ್ಬಾಳ, ಚಿದಾನಂದ ಭಜಂತ್ರಿ, ಸಂಗನಗೌಡ ಬಿರಾದಾರ,ನಬಿಲಾಲ ಚಿಕ್ಕ ಸಿಂದಗಿ, ಹಮೀದ ಮುಲ್ಲಾ, ಇಮಾಮ ಮುಲ್ಲಾ, ದೇವಾನಂದ ಹಡಪದ, ದಾದಾ ಬೇಪಾರಿ, ಕುಮಾರ ಚೌಹಾಣ, ಮಲ್ಲಿಕಾರ್ಜುನ ಭಜಂತ್ರಿ, ರಿಯಾಜ ಜಾತಗಾರ ಶಿವು ರೊಳ್ಳಿ, ಪ್ರಕಾಶ ಸಿಂದಗೇರಿ, ಬಂದೇನವಾಜ ನಾಯ್ಕೋಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಿರುಸುದ್ದಿ

ಲಿಂ. ಶ್ರೀ ವಿರೂಪಾಕ್ಷ ಮಹಾಸ್ವಾಮಿಗಳ 12ನೇ ಪುಣ್ಯಸ್ಮರಣೋತ್ಸವ



ಮಾನ್ವಿ: ತಾಲೂಕಿನ ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದಲ್ಲಿ ಲಿಂ. ಶ್ರೀ ವಿರೂಪಾಕ್ಷ ಮಹಾಸ್ವಾಮಿಗಳವರ 12ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ಕತೃಗದ್ದುಗೆಗೆ ಬೆಳಗ್ಗೆ ರುದ್ರಾಭಿಷೇಕ, ಹಾಗೂ ವಿಶೇಷ ಹೂವಿನ ಅಲಂಕಾರ ಮಾಡಲಾಯಿತು.

ಶ್ರೀಮಠದ ಆವರಣದಲ್ಲಿ ನೂತನ ಪೂಜ್ಯರ ಕಟ್ಟಡವನ್ನು ಹಾಲ್ವಿ ಶ್ರೀ ಚರಣಗೀರಿ ಸಂಸ್ಥಾನ ಮಠದ ಶ್ರೀ ಅಭಿನವ ಮಹಾಂತಸ್ವಾಮಿಗಳು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಆಶೀವರ್ಚನ ನೀಡಿ ಗುರುವಿನ ಸೇವೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಮಾತ್ರ ಜೀವನದಲ್ಲಿ ಉತ್ತಮ ಫಲಗಳನ್ನು ಪಡೆಯುವುದಕ್ಕೆ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಪುಣ್ಯಸ್ಮಾರಣೆ ಅಂಗವಾಗಿ ಭಕ್ತರಿಗೆ ಪ್ರಸಾದ ಸೇವೆ ನಡೆಯಿತು. ಯದ್ದಲದೊಡ್ಡಿ ಸುವರ್ಣಗಿರಿ ಸಂಸ್ಥಾನ ಮಠದ ಶ್ರೀ ಮಹಾಲಿಂಗ ಮಹಾಸ್ವಾಮಿಗಳು, ಮುನವಳ್ಳಿ ಮಠದ ಶ್ರೀ ಮುರುಗೇಂದ್ರ ಮಹಾಸ್ವಾಮಿಗಳು, ಬಳಗನೂರು ಶ್ರೀ ಮರಿಶಿವಯೋಗಿಗಳ ಮಠದ ಶ್ರೀ ಸಿದ್ಧಬಸವ ಮಹಾಸ್ವಾಮಿಗಳು, ಮೈಸೂರಿನ ನಿರಂಜನದೇವರು, ಅರಳಹಳ್ಳಿ ಮಠದ ಶ್ರೀ ಶರಣಬಸವ ದೇವರು ಸೇರಿದಂತೆ ಶ್ರೀಮಠದ ಭಕ್ತರು ಭಾಗವಹಿಸಿದರು.

ಸ್ವಾಗತ ನಾಮಫಲಕ ಉದ್ಘಾಟನೆ



ಕುಷ್ಟಗಿ: ಇನ್ನರ್ ವ್ಹೀಲ್ ಕ್ಲಬ್ ಸದಾ ಒಂದಿಲ್ಲೊಂದು ಸಮಾಜ ಮುಖಿ ಕಾರ್ಯ ಚಟುವಟಿಕೆಗಳನ್ನು ಮಾಡುವಲ್ಲಿ ಮುಂದಾಗಿದ್ದು, ಈ ದಿನ ಇಲ್ಲಿನ ರಾಷ್ಟ್ರೀಯ ಹೆದ್ದಾರಿ-50 ಇಲ್ಲಿನ ರಸ್ತೆಯ ಮುಖಾಂತರ ಕುಷ್ಟಗಿ ಪ್ರವೇಶ ಮಾಡುವ ಕೂಡು ರಸ್ತೆಯ ಬದಿಯಲ್ಲಿ ಸ್ವಾಗತ ಕೋರುವ ನಾಮಫಲಕವನ್ನು ಅಳವಡಿಸಿ ಅದರ ಉದ್ಘಾಟನೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಇನ್ನರ್ ವ್ಹೀಲ್ ಕ್ಲಬ್ ಪದಾಧಿಕಾರಿಗಳಾದ ಜಯಶ್ರೀ ಸಾಗರ, ಅಧ್ಯಕ್ಷ ಗಿರಿಜಾ ಮಾಲಿ ಪಾಟೀಲ್, ಡಾ. ಪಾರ್ವತಿ ಪಲೊಟಿ, ಕಾರ್ಯದರ್ಶಿಗಳಾದ ಶಾರದಾ ಚೆಟ್ಟೆರ, ಉಪಾಧ್ಯಕ್ಷೆ ಶಾರದಾ ಶೆಟ್ಟರ್, ಖಜಾಂಚಿ ಪ್ರಭಾ ವಿ.ಬಂಗಾರಶೆಟ್ಟರ್, ಎಡಿಟರ್ ಕಾವೇರಿ ಕುಂದರಗಿ , ಸದಸ್ಯರಾದ ಅನಿತಾ ಗೋಗಿ , ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಚಿವ ಖಂಡ್ರೆ, ರಾಜೀನಾಮೆ ನೀಡಲಿ: ನಾಗೇಂದ್ರ



ಬೀದರ: ಡಾ. ಬಾಬಾ ಸಾಹೇಬ್ ಅಂಬೇಡ್ಕರವರ ಕುರಿತ ಚಿಂತನೆಗಳು ಮತ್ತು ಸಮಕಾಲೀನ ಪರಿಹಾರಗಳು'' ವಿಷಯದ ಕುರಿತು ಮಾರ್ಚ್ 14 ಮತ್ತು 15ರಂದು ಬೀದರದಲ್ಲಿ ನಡೆಯಬೇಕಿದ್ದ ಅಂತರಾಷ್ಟ್ರೀಯ ಸಮ್ಮೇಳನ ಅವ್ಯವಸ್ಥೆ ಹಾಗೂ ಮೇಲ್ವಿಚಾರಣೆಯ ಕೊರತೆಯಿಂದ ರದ್ದಾಗಿರುವುದು ದುರದೃಷ್ಟಕರ ಎಂದು ಆಲ್ ಇಂಡಿಯಾ ಸಮತಾ ಸೈನಿಕ ದಳ ಗುಲಬರ್ಗಾ ವಿಭಾಗೀಯ ಅಧ್ಯಕ್ಷ ನಾಗೇಂದ್ರ ಎಸ್. ದಂಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.ಸಮ್ಮೇಳನ ರದ್ದತಿಗೆ ಕೇವಲ ಕೆಳ ಹಂತದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ, ಇದು ಸರ್ಕಾರದ ಕಾರ್ಯಕ್ರಮವಾಗಿದ್ದರೆ ಅದರ ಸಂಪೂರ್ಣ ಜವಾಬ್ದಾರಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಮೇಲಿದೆ ಎಂದು ಸಂಘಟನೆ ಆರೋಪಿಸಿದೆ.

ಈ ಹಿನ್ನೆಲೆಯಲ್ಲಿ ಸಚಿವ ಈಶ್ವರ ಖಂಡ್ರೆ ಅವರು ದಲಿತ ಸಮುದಾಯದ ಮುಂದೆ ಕ್ಷಮೆ ಕೋರಬೇಕು ಹಾಗೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಲ್ ಇಂಡಿಯಾ ಸಮತಾ ಸೈನಿಕ ದಳ ಗುಲಬರ್ಗಾ ವಿಭಾಗೀಯ ಅಧ್ಯಕ್ಷರಾದ ನಾಗೇಂದ್ರ ಎಸ್. ದಂಡೆ ಅವರು ಒತ್ತಾಯಿಸಿದ್ದಾರೆ.



ಕಲಬುರಗಿ: ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಕಲಬುರಗಿ ಮಹಾನಗರ ಜಿಲ್ಲಾ ವತಿಯಿಂದ ಕಾರ್ಯಕಾರಣಿ ಸಭೆ ನಡೆಸಲಾಯಿತು.ಈ ಸಂದರ್ಭದಲ್ಲಿ ನಗರಾಧ್ಯಕ್ಷ ಚಂದು ಪಾಟೀಲ್, ಮಾಜಿ ಸಂಸದ ಡಾ.ಉಮೇಶ್ ಜಾಧವ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ್ ಪಟ್ಟಣ, ಪ್ರಧಾನ ಕಾರ್ಯದರ್ಶಿ ಮಹಾದೇವ ಬೆಳಮಗಿ, ಉಮೇಶ್ ಪಾಟೀಲ್, ಶಿವಯೋಗಿ ನಾಗೇನಹಳ್ಳಿ, ಶರಣಪ್ಪ ತಳವಾರ್, ದಯಾಘನ ದಾರವಾಡಕರ, ಅವಿನಾಶ್ ಕುಲಕರ್ಣಿ, ವಿಜಯಲಕ್ಷ್ಮೀ ಗೊಬ್ಬುರಕರ್, ಸವಿತಾ ಪಾಟೀಲ್ ಸೇರಿದಂತೆ ಇತರರು ಇದ್ದರು.

ಶಾಂತಿ ಕಾಪಾಡುವುದು ಎಲ್ಲರ ಕರ್ತವ್ಯ

ಹನುಮಸಾಗರ: ಸಮಾಜದಲ್ಲಿ ಬಾಂಧವ್ಯ ಮತ್ತು ಶಾಂತಿ ಕಾಪಾಡುವುದು ಎಲ್ಲರ ಕರ್ತವ್ಯ. ಇಂತಹ ಸೌಹಾರ್ದ ಕೂಟಗಳು ಸಹನಶೀಲತೆ ಮತ್ತು ಪರಸ್ಪರ ಗೌರವವನ್ನು ಉಂಟುಮಾಡಲು ಮಹತ್ವದ್ದಾಗಿದೆ ಎಂದು ಲಾಲ್ ಹುಸೇನ್ ಕಂದಗಲ ಹೇಳಿದರು.

ಪಟ್ಟಣದಲ್ಲಿನ ಜಮಾಅತೆ ಇಸ್ಲಾಮಿ ಹಿಂದ ಹನುಮಸಾಗರ ವತಿಯಿಂದ ಮದೀನಾ ಜಾಮಿಯಾ ಮಜೀದ್‌ನಲ್ಲಿ ಇಫ್ತಾರ್ ಸೌಹಾರ್ದ ಕೂಟ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ರಂಜಾನ್ ಉಪವಾಸವು ಶಿಷ್ಟಾಚಾರ ಮತ್ತು ಸಹಾನುಭೂತಿಯ ಸಂಕೇತವಾಗಿದೆ. ಹಸಿವಿನ ಅನುಭವದ ಮೂಲಕ ಬಡವರ ಸಂಕಟವನ್ನು ಅರಿಯಲು ಇದು ಒಂದು ಅಮೂಲ್ಯ ಅವಕಾಶ ಎಂದು ವಿವರಿಸಿದರು.

ನಾಗನಗೌಡ ಪೊಲೀಸ್ ಪಾಟೀಲ್ ಮಾತನಾಡಿ, ಧರ್ಮಗಳ ಮೂಲ ಉದ್ದೇಶ ಮಾನವ ಸೇವೆ. ಈ ರೀತಿಯ ಸಮಾವೇಶಗಳು ವಿವಿಧ ಧರ್ಮೀಯರ ನಡುವಿನ ಅಂತರವನ್ನು ಕಡಿಮೆಗೊಳಿಸಿ, ಸಹಭಾವನೆ ಮೂಡಿಸುತ್ತದೆ ಎಂದರು.ಕಾರ್ಯಕ್ರಮದಲ್ಲಿ ನಜೀರ್ ಸಾಬ್ ಮೇನೆದಾಳ, ನಾರಾಯಣಪ್ಪ ನಾಗೋರ್, ಚಂದ್ರು ಹಿರೇಮನಿ, ಪ್ರಶಾಂತ ಗಡಾದ, ವಿಶ್ವನಾಥ ನಾಗೋರ್,ರಾಜೆಸಾಬ್ ಕುಷ್ಟಗಿ, ಸೂಚಪ್ಪ ದೇವರಮನಿ, ಮಂಜುನಾಥ ಹುಲ್ಲೂರು, ಗೇಸುದರಾಜ್ ಮೂಲಿಮನಿ, ಅಬ್ದುಲ್ ರಜಾಕ್, ಮೆಹಬೂಬ್ ಮೆನೆದಾಳ, ಖಾಜಾ ಹುಸೇನ್ ಹುಲಿಹೈದರ, ರಜಾಕ್ ಚಳಗೇರಿ, ಖಲೀಲ್ ಅಹ್ಮದ್ ಚೌಧರಿ, ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.



ಹನುಮಸಾಗರ: ಪಟ್ಟಣದಲ್ಲಿನ ಜಮಾಅತೆ ಇಸ್ಲಾಮಿ ಹಿಂದ ಹನುಮಸಾಗರ ವತಿಯಿಂದ ಮದೀನಾ ಜಾಮಿಯಾ ಮಜೀದ್ ನಲ್ಲಿ ಇಫ್ತಾರ್ ಸೌಹಾರ್ದ ಕೂಟ ಕಾರ್ಯಕ್ರಮದಲ್ಲಿ ಲಾಲ್ ಹುಸೇನ್ ಕಂದಗಲ ಮಾತನಾಡಿದರು.ನಾಗನಗೌಡ ಪೊಲೀಸ್ ಪಾಟೀಲ್,ನಜೀರ್ ಸಾಬ್ ಮೇನೆದಾಳ, ನಾರಾಯಣಪ್ಪ ನಾಗೋರ್, ಚಂದ್ರು ಹಿರೇಮನಿ, ಪ್ರಶಾಂತ ಗಡಾದ, ವಿಶ್ವನಾಥ ನಾಗೋರ್,ರಾಜೆಸಾಬ್ ಕುಷ್ಟಗಿ, ಸೂಚಪ್ಪ ದೇವರಮನಿ, ಮಂಜುನಾಥ ಹುಲ್ಲೂರು, ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

ಜನರಿಗೆ ಉತ್ತಮ ಸೇವೆ ಲಭ್ಯ

ಕೊಪ್ಪಳ: ಜೆಸ್ಕಾಂ ಇಲಾಖೆಯ ಸೇವೆಗಳು ಜನರ ದೈನಂದಿನ ಜೀವನದಲ್ಲಿ ಅತ್ಯಂತ ಪ್ರಮುಖವಾಗಿದ್ದು, ಹೊಸ ಕಚೇರಿ ಸಂಕೀರ್ಣ ನಿರ್ಮಾಣದಿಂದ ಸಾರ್ವಜನಿಕರಿಗೆ ವೇಗವಾದ ಮತ್ತು ಪರಿಣಾಮಕಾರಿ ವಿದ್ಯುತ್ ಸೇವೆ ದೊರೆಯಲಿದೆ ಎಂದು ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಶನಿವಾರದಂದುನಗರದ110/33/11ಕೆ.ವಿ.ವಿದ್ಯುತ್ ಉಪಕೇಂದ್ರದ ಆವರಣದಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಪ್ಪಳ ನಗರದಲ್ಲಿ ಅಂದಾಜು ರೂ.1950 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿ ಸಂಕೀರ್ಣ ಕಟ್ಟಡದ ಶಂಕುಸ್ಥಾಪನೆ ಸಮಾರಂಭದಲ್ಲಿ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಬಹಳ ವರ್ಷಗಳಿಂದ ಕೊಪ್ಪಳದಲ್ಲಿ ಜೆಸ್ಕಾಂ ಸರ್ಕಲ್ ಕಚೇರಿ ಸ್ಥಾಪನೆಯಾಗಬೇಕು ಎಂಬುದು ಇಲಾಖೆಯ ಸಿಬ್ಬಂದಿ ಹಾಗೂ ಜಿಲ್ಲೆಯ ಜನರ ಬಹುದಿನಗಳ ಆಶಯವಾಗಿತ್ತು. ಇದೀಗ ಸುಮಾರು ರೂ.19 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣವಾಗುತ್ತಿರುವುದು ಸಂತಸದ ವಿಷಯವಾಗಿದೆ. ನೂತನ ವೃತ್ತ ಕಚೇರಿ ಸಂಕೀರ್ಣದಿಂದ ಜಿಲ್ಲೆಯ ಜನರಿಗೆ ಬಹಳಷ್ಟು ಅನುಕೂಲವಾಗಲಿದೆ. ಈ ಮೊದಲು ಜೆಸ್ಕಾಂ ಕಾರ್ಯಚಟುವಟಿಕೆಗಳು ಮುನಿರಾಬಾದ್ ಹಾಗೂ ರಾಯಚೂರಿನಲ್ಲಿ ಪ್ರಮುಖವಾಗಿ ನಡೆಯುತ್ತಿದ್ದವು. ಈಗ ಕೊಪ್ಪಳದಲ್ಲೇ ವೃತ್ತ ಕಚೇರಿ ಸ್ಥಾಪನೆಯಾಗುತ್ತಿರುವುದು ಜಿಲ್ಲೆಯ ಅಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದರು.

ತುಂಗಭದ್ರಾ ನದಿಯ ಎಡದಂಡೆಯಲ್ಲಿ ನಮ್ಮ ಜಿಲ್ಲೆ ಇದೆ. ಜಿಲ್ಲೆಯಲ್ಲಿ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಸಿಂಗಟಾಲೂರು ಏತ ನೀರಾವರಿ ಹಾಗೂ ವಿವಿಧ ನೀರಾವರಿ ಯೋಜನೆಗಳ ಮೂಲಕ ಈ ವರ್ಷದಲ್ಲಿ ಸುಮಾರು ರೂ.1052 ಕೋಟಿ ವೆಚ್ಚದಲ್ಲಿ



> ಈ ಹೊಸ ಜೆಸ್ಕಾಂ ಕಚೇರಿ ಸಂಕೀರ್ಣವು ಕೊಪ್ಪಳ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಸಹಕಾರಿಯಾಗಲಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಅನುಕೂಲವಾಗಲಿದೆ.
> ■ ರಾಘವೇಂದ್ರ ಹಿಟ್ನಾಳ್, ಶಾಸಕ.

» ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿ ಸಂಕೀರ್ಣ ಕಟ್ಟಡದ ಶಂಕುಸ್ಥಾಪನೆ ಸಮಾರಂಭ

78 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯ ನಡೆಯುತ್ತಿದೆ. ಒಟ್ಟು ಸುಮಾರು 1 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ನೀರಾವರಿ ವಿಸ್ತರಣೆಗೆ ಪೂರಕವಾಗಿ ರೈತರಿಗೆ ವಿದ್ಯುತ್ ಪೂರೈಕೆ ಅಗತ್ಯವಾಗಿದ್ದು, ಈಗಾಗಲೇ ಮೂರು ಹೊಸ ಸಬ್‌ಸ್ಟೇಷನ್‌ಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಗೊಂಡಬಾಳ, ನೆಲೋಗಿಪುರ ಹಾಗೂ ಚಿಲವಾಡಗಿ ಸೇರಿದಂತೆ ಇನ್ನೂ ಮೂರು ಸಬ್‌ಸ್ಟೇಷನ್‌ಗಳನ್ನು ನಗರ ಪ್ರದೇಶದಲ್ಲಿ ನಿರ್ಮಿಸಲು ಸಚಿವ ಕೆ.ಜೆ. ಜಾರ್ಜ್ ಅವರಿಗೆ ಮನವಿ ಮಾಡಲಾಗಿದೆ. ಕೊಪ್ಪಳ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು 24★7 ರೀತಿಯಲ್ಲಿ ಒದಗಿಸಲು ಪ್ರತ್ಯೇಕ ಫೀಡರ್ ವ್ಯವಸ್ಥೆ ಕಲ್ಪಿಸುವ ಕುರಿತು ಚರ್ಚೆ ನಡೆಸಲಾಗಿದೆ. ಮನೆ ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲು ಸುಮಾರು ರೂ.125 ಕೋಟಿ ಅನುದಾನ ಮಂಜೂರಾಗಿದೆ. ತಾಲೂಕು ಮಿನಿ ಸೌಧ ನಿರ್ಮಾಣಕ್ಕೂ ಸುಮಾರು ರೂ.18 ಕೋಟಿ ವೆಚ್ಚದ ಅನುಮೋದನೆ ದೊರೆತಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಜೆಸ್ಕಾಂ ಬಳ್ಳಾರಿಯ ಕಾರ್ಯ ಮತ್ತು ಪಾಲನಾ ವಲಯದ ಮುಖ್ಯ ಇಂಜಿನಿಯರ್ ಮೌನೇಶ್ ಎಸ್.ಪತ್ತಾರ್ ಇದ್ದರು.

ಗೃಹ ಬಳಕೆ ಸಿಲಿಂಡರ್ ಅನಧಿಕೃತ ಬಳಕೆ ತಡೆಗೆ ಕ್ರಮ ವಹಿಸಿ

ರಾಯಚೂರು: ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗೃಹ ಬಳಕೆ ಅನಿಲ ಸಿಲಿಂಡರಗಳನ್ನು ನಗರದಲ್ಲಿನ ಗೂಡಂಗಡಿ, ಚಿಕ್ಕ ಹಾಗೂ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ರಾಜಾರೋಷವಾಗಿ ಬಳಸಲಾಗುತ್ತಿದ್ದರೂ ಇದನ್ನು ತಡೆಯುವ ಕೆಲಸಕ್ಕೆ ಮುಂದಾಗದೇ ಇರುವುದರಿಂದ ಜನತೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ದೇಶದಲ್ಲಿ ತೈಲ ಮತ್ತು ಅನಿಲದ ಕೊರತೆ ಆಗಬಹುದು ಎಂಬ ವದಂತಿಗಳ ಕಾರಣಕ್ಕೆ ಜನತೆ ಅಡುಗೆ ಅನಿಲ ಸಿಲಿಂಡರ್ ಕೊಳ್ಳುವುದಕ್ಕೆ ಮುಗಿಬಿದ್ದಿರುವ ಸಂದರ್ಭದಲ್ಲಿ ಹೀಗೆ ಗೃಹಬಳಕೆ ಅನಿಲ ಸಿಲಿಂಡರಗಳನ್ನು ಅನಧಿಕೃತವಾಗಿ ಬಳಕೆ ಮಾಡುತ್ತಿದ್ದರೂ ಆಹಾರ ಇಲಾಖೆಯ ಅಧಿಕಾರಿಗಳು ನಮಗೂ ಇದಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ಎನ್ನುವಂತೆ ವರ್ತಿಸುತ್ತಿರುವುದಕ್ಕೆ ಅಧಿಕಾರಿಗಳ ಮೇಲೆ ಅನೇಕ ಸಂಶಯಗಳನ್ನು ಪಡುವಂತಾಗಿದೆ.

ಗೃಹ ಬಳಕೆ ಅನಿಲ ಸಿಲಿಂಡರಗಳನ್ನು ರಾಜಾರೋಷವಾಗಿ ಜಿಲ್ಲೆಯಾದ್ಯಂತ ಬಳಕೆ ಮಾಡಲಾಗುತ್ತಿದ್ದರೂ ಯಾವುದೇ ತಾಲೂಕು ಅಧಿಕಾರಿಗಳು ಇದನ್ನು ತಡೆಯುವ ಕೆಲಸಕ್ಕೆ ಮುಂದಾ ದಂತೆ ಕಂಡುಬರುತ್ತಿಲ್ಲ. ಇಂತಹ ಸಂದರ್ಭದಲ್ಲಿಯಾದರೂ ಅಕ್ರಮ ಬಳಕೆಯನ್ನು ತಡೆಗಟ್ಟುವುದಕ್ಕೆ ಮುಂದಾಗಬೇಕು ಎಂದು ಜನತೆಯ ಆಗ್ರಹವಾಗಿದೆ.

ಅಡುಗೆ ಅನಿಲದ ಕೊರತೆ ಇಲ್ಲ ಎಂದು ಜಿಲ್ಲಾಡಳಿತ ಎಷ್ಟೇ ಹೇಳಿದರೂ ಜನತೆಯಲ್ಲಿನ ಆತಂಕ ಮಾತ್ರ, ಜನತೆ ಸಿಲಿಂಡರ್ ಬುಕ್ಕಿಂಗ್ ಮಾಡುವುದಕ್ಕೆ ಮುಂದಾಗುತ್ತಿರುವುದು ಮಾತ್ರ ಹೆಚ್ಚುತ್ತಲೇ ಇದೆ. ಗಲ್ಫನಲ್ಲಿನ ಯುದ್ಧ ಆರಂಭವಾಗುವುದಕ್ಕೂ ಪೂರ್ವದಲ್ಲಿನ ದಿನಗಳಿಗಿಂತ ಈಗ ಹೆಚ್ಚಾಗುತ್ತಿದೆ ಎನ್ನುವುದನ್ನು ವಿತರಕರು ಒಪ್ಪಿಕೊಳ್ಳುತ್ತಿದ್ದಾರೆ.

> ಪಶ್ಚಿಮ ಏಷ್ಯಾ ರಾಷ್ಟಗಳಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ದೇಶದಲ್ಲಿ ಅಡುಗೆ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಬಹುದು ಎಂಬ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವಂದತಿಗಳಿಗೆ ಜಿಲ್ಲೆಯ ಸಾರ್ವಜನಿಕರು ಕಿವಿಗೊಡಬಾರದು. ಜಿಲ್ಲೆಯಲ್ಲಿ ಅಡುಗೆ ಅನಿಲದ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದ್ದು, ಗ್ರಾಹಕರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ದೇಶಾದ್ಯಂತ ಎಲ್‌ಪಿಜಿ ಉತ್ಪಾದನೆ ಮತ್ತು ಬಾಟಲಿಂಗ್ ಎರಡೂ ಹೆಚ್ಚಿರುವುದರಿಂದ ದೇಶಿಯ ಎಲ್‌ಪಿಜಿಯ ಕೊರತೆ ಇರುವುದಿಲ್ಲ
> ■ ನಿತೀಶ.ಕೆ . ಜಿಲ್ಲಾಧಿಕಾರಿ

ಡಾ. ಎ. ಶಿವಶಂಕರ್ 5ನೇ ಉಪನ್ಯಾಸ

ಕಲಬುರಗಿ: ಸ್ಪಾಂಡಿಲೋಆರ್ಥ್ರೋಪತಿ ರೋಗವನ್ನು ಆರಂಭದಲ್ಲೇ ಪತ್ತೆ ಮಾಡಿ, ಅದಕ್ಕೆ ಸೂಕ್ತವಾದ ಸಕಾಲಿಕ ಚಿಕಿತ್ಸೆ ನೀಡಿದರೆ ಅಂಗವೈಕಲ್ಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಜೊತೆಗೆ ರೋಗಿಗಳ ಜೀವನದ ಗುಣಮಟ್ಟ ಸುಧಾರಿಸುತ್ತದೆ ಎಂದು ಹಿರಿಯ ವೈದ್ಯ ಮತ್ತು ಭಾರತೀಯ ವೈದ್ಯರ ಸಂಘದ ರಾಷ್ಟ್ರೀಯ ಅಧ್ಯಕ್ಷ ಡಾ. ಜಿ. ನರಸಿಂಹಲು ತಿಳಿಸಿದರು.

ಕಲಬುರಗಿ ನಗರದ ಕೆಬಿಎನ್ ಬೋಧನಾ ಮತ್ತು ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಶನಿವಾರ ಡಾ. ಪಿ. ಎಸ್. ಶಂಕರ್ ಪ್ರತಿಷ್ಠಾನ ಆಯೋಜಿಸಿದ್ದ 5ನೇ ಡಾ. ಎ. ಶಿವಶಂಕರ್ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಂಕೈಲೋಜಿಂಗ್ ಸ್ಪಾಂಡಿಲೈಟಿಸ್, ಸೋರಿಯಾಟಿಕ್ ಅರ್ಥ್ರೈಟಿಸ್, ರಿಯಾಕ್ಟಿವ್ ಅರ್ಥ್ರೈಟಿಸ್ ಮತ್ತು ಎಂಟರೊಪಥಿಕ್ ಅರ್ಥ್ರೈಟಿಸ್‌ದಂತಹ ಪರಿಸ್ಥಿತಿಗಳು ಸ್ಪಾಂಡಿಲೋಆರ್ಥ್ರೋಪಥಿಗಳ ಸ್ಪೆಕ್ಟ್ರಮ್ ಅಡಿಯಲ್ಲಿ ಬರುತ್ತವೆ ಎಂದು ಒತ್ತಿ ಹೇಳಿದರು.

ಸಾಂಪ್ರದಾಯಿಕ ಚಿಕಿತ್ಸೆಯ ಜೊತೆಗೆ, ರೋಗದ ಪ್ರಗತಿಯನ್ನು ನಿಯಂತ್ರಿಸುವಲ್ಲಿ ಮತ್ತು ರೋಗಿಗಳಿಗೆ ಅಗತ್ಯವಾದ ಚಿಕಿತ್ಸೆಯನ್ನು ಒದಗಿಸುವಲ್ಲಿ ಜೈವಿಕ ಚಿಕಿತ್ಸೆಗಳು, ಜೀವನಶೈಲಿ ಮಾರ್ಪಾಡು, ನಿಯಮಿತ ವ್ಯಾಯಾಮ ಮತ್ತು ಭೌತಚಿಕಿತ್ಸೆಯ ಪಾತ್ರದ ಬಗ್ಗೆ ವಿವರಿಸಿದರು.

ಕಲಬುರಗಿಯ ಮಹಾದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿ ಮತ್ತು ಡಾ. ಪಿ. ಎಸ್. ಶಂಕರ್ ಅವರ ವಿದ್ಯಾರ್ಥಿಯೂ ಆಗಿರುವ ಭಾರತೀಯ ವೈದ್ಯರ ಸಂಘ, ಕರ್ನಾಟಕದ ಅಧ್ಯಕ್ಷ ಡಾ. ಬಿ. ಮಹಾಲಿಂಗಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ. ಸಂಗ್ರಾಮ್ ಬಿರಾದಾರ್, ಡಾ. ಶಿವರಾಜ್ ಅಲಶೆಟ್ಟಿ ಮತ್ತು ಅಪಾರ ಸಂಖ್ಯೆಯ ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ಅನೇಕ ಹಿರಿಯ ವೈದ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಂಕರ್ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ನರೇಂದ್ರ ಬಡಶೇಷಿ ಅತಿಥಿಗಳನ್ನು ಸ್ವಾಗತಿಸಿದರು.



ವಿದ್ಯೆ, ಸಂಸ್ಕಾರ ಒಂದಾದರೆ ಆದರ್ಶ ಸಮಾಜ ನಿರ್ಮಾಣ

ಅಫಜಲಪುರ: ವಿದ್ಯೆ ಮತ್ತು ಸಂಸ್ಕಾರ ಒಂದಾದರೆ ಆದರ್ಶ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ತಿಳಿಸಿದರು.

ತಾಲೂಕಿನ ದೇಸಾಯಿ ಕಲ್ಲೂರ ಗ್ರಾಮದ ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಗ್ರಾಮೀಣ ಭಾಗದಲ್ಲಿ ಶಾಲೆಗಳಿರಲಿಲ್ಲ, ಹೀಗಾಗಿ ಅನಕ್ಷರತೆ ಹೆಚ್ಚಾಗಿತ್ತು. ಈಗ ಶಿಕ್ಷಣ ಪ್ರೇಮಿಗಳ ಸೇವಾ ಮನೋಭಾವ ಮತ್ತು ಸಾಹಸದಿಂದ ಹೆಚ್ಚಿನ ಶಾಲೆಗಳು ಹುಟ್ಟಿಕೊಳ್ಳುತ್ತಿವೆ. ಹೀಗಾಗಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ದೊರಕುವಂತಾಗಿದೆ ಎಂದರು.

ಕಲಬುರಗಿ ಉತ್ತರ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಆಶೋಕ್ ಸೊನ್ನ ಮಾತನಾಡಿ, ಕೇವಲ 40 ಮಕ್ಕಳಿಂದ ಪ್ರಾರಂಭವಾದ ಈ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿರುವುದು ಸಂತಸ ತಂದಿದೆ ಎಂದರು.

ಸಿ.ಆರ್.ಪಿ ಸಿದ್ದಪ್ಪ ಬಿರಾದಾರ ಮಾತನಾಡಿ, ಯಾವುದೇ ಕುಟುಂಬದ ಏಳಿಗೆಯು ಶಿಕ್ಷಣವನ್ನು ಅವಲಂಬಿಸಿದೆ. ಹೀಗಾಗಿ ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಬೇಕು ಎಂದರು.



ಕಾರ್ಯಕ್ರಮವನ್ನು ಪ್ರಥಮ ದರ್ಜೆ ಗುತ್ತಿಗೆದಾರ ಎಸ್.ವೈ.ಪಾಟೀಲ್ ಉದ್ಘಾಟಿಸಿದರು. ವೇ.ಗುರುಪಾದಯ್ಯ ಚರಂತಿಮಠ, ಸಿದ್ದಯ್ಯ ಆಕಾಶಮಠ, ಕಲ್ಯಾಣಿ ಸಿಂದಗೇರಿ, ಶಿವರುದ್ರ ಬಬಲಾದ, ಮಾಳಪ್ಪ ಬಿದನೂರ, ನವೀನಗೌಡ ಪಾಟೀಲ್, ಪೂಜಾ ಸಿ.ಐ, ಶರಣಬಸು ದೇಶಮುಖ, ಶಿವಪುತ್ರ ಜೇವರ್ಗಿ, ಸಿದ್ರಾಮಯ್ಯ ಹಿರೇಮಠ, ಭಾಗ್ಯವಂತಿ ಆಯೋರ, ಸಿದ್ದು ತೊನಶ್ಯಾಳ, ಸಂಸ್ಥೆಯ ಅಧ್ಯಕ್ಷೆ ಗಂಗಾಶ್ರೀ ದೇಶಮುಖ, ಕಾರ್ಯದರ್ಶಿ ಗುಂಡೇರಾವ್ ದೇಶಮುಖ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.ಇದೇ ಸಂದರ್ಭದಲ್ಲಿ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ: ಶ್ರೀಕಾಂತ್

ಕುಕನೂರು: ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ಇದು ಭೂಮಿ ಮೇಲೇರುವ ಪ್ರತಿ ಜೀವರಾಶಿಯ ಜವಾಬ್ದಾರಿಯಾಗಿದೆ ಎಂದು ಆಪ್ಪಾಜಿ ಫೌಂಡೇಶನ್ ಅಧ್ಯಕ್ಷ ಶ್ರೀಕಾಂತ್ ಹೇಳಿದರು.

ತಾಲೂಕಿನ ಆಡಿವಿಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಆಪ್ಪಾಜಿ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ಶ್ರೀನಿಧಿ ಎಂಬ ಪುಟ್ಟ ಬಾಲಕಿಯ ಜನ್ಮದಿನ ನಿಮಿತ್ಯ 30 ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯನ್ನು ಹೆಚ್ಚಿಸಿ ಎಂದರು.

ಇಂದಿನ ದಿನಮಾನಗಳಲ್ಲಿ ಪುಟ್ಟ ಪುಟ್ಟ ಮಕ್ಕಳ ಜನ್ಮದಿನವನ್ನು ಆಚರಣೆ ಮಾಡುವಲ್ಲಿ ಪಾಲಕರು ದುಂದು ವೆಚ್ಚವನ್ನು ಹುಟ್ಟು ಹಾಕುತ್ತಿದ್ದಾರೆ. ಆದರ ಬದಲಾವಣೆಗಾಗಿ ಆದೇ ದುಂದು ವೆಚ್ಚವನ್ನು ಮಾಡ ಬದಲಾಗಿ ಪರಿಸರ ರಕ್ಷಣೆಯನ್ನು ಮಾಡಿದರೆ ಮಕ್ಕಳ ಉಜ್ವಲವಾಗುವುದು ಮತ್ತು ಪರಿಸರ ಕಾಳಜಿ ಮಕ್ಕಳಲ್ಲಿ ಹೆಚ್ಚಿಸಿದಂತಾಗುತ್ತದೆ ಎಂದು ತಿಳಿದು ಶಾಲಾ ವಾತಾವರಣದಲ್ಲಿ 30 ಗಿಡಗಳನ್ನು ಪ್ರಾರಂಭಿಕವಾಗಿ ನೇಡಲಾಗಿದೆ. ಇದರ ರಕ್ಷಣೆ ಪ್ರತಿಯೊಬ್ಬ ಮಕ್ಕಳ



ಮೇಲೆ ಇದೆ. ಕೋರೊನಾ ಸಂದರ್ಭದಲ್ಲಿ ಹಲವಾರು ಯುವಶಕ್ತಿ ಆಕ್ಸಿಜನ್ ಕೊರತೆಯಿಂದ ಸಾವನ್ನಪ್ಪಿದ್ದು ಆದರ ಕೊರತೆ ಶಾಲಾ ಹಂತದಲ್ಲಿ ಆಗಬಾರದೆಂಬ ಉದ್ದೇಶದಿಂದ ಇಂದು ಮಕ್ಕಳ ಜನ್ಮದಿನದ ಜೊತೆಗೆ ಪರಿಸರ ಕಾಳಜಿಯನ್ನು ವಹಿಸಲು ಮುಂದಾಗುತ್ತಿದೆ ಆಪ್ಪಾಜಿ ಫೌಂಡೇಶನ್ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚಂದ್ರು ಹೇಳವರ್, ಮೋಹನ್, ಕನಕಪ್ಪ ಇಂಗಳದಾಳ, ಮಂಜುನಾಥ್, ಗ್ರಾಮ ಪಂಚಾಯತ್ ಸದಸ್ಯ ಕವಿತಾ ಹೈತಾಪುರ್, ಎಚ್ ಕೆ ಐತಾಪುರ್, ಶಶಿಧರ್ ಹಾಗೂ ಇತರರಿದ್ದರು.

ಮಹಿಳೆಯರನ್ನು ಪೂಜ್ಯನೀಯ ಭಾವನೆಯಿಂದ ಕಾಣಿ: ಪ್ರಕಾಶ

ಯಲಬುರ್ಗಾ: ಮಹಿಳೆಯರನ್ನು ಪ್ರತಿಯೊಬ್ಬರು ಪೂಜ್ಯನೀಯ ಭಾವನೆಯಿಂದ ಕಾಣುವ ಮನೋಭಾವನೆ ಮೂಡಿಬಂದಾಗ ಎಲ್ಲ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲು ಹೆಚ್ಚು ಸಹಕಾರಿಯಾಗುತ್ತದೆ ಎಂದು ತಹಶೀಲ್ದಾರ್ ಪ್ರಕಾಶ ನಾಶಿ ಹೇಳಿದರು.

ತಾಲೂಕಿನ ಹೊಸಳ್ಳಿ ಗ್ರಾಮದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಶನಿವಾರ ತಾಲೂಕು ಸರ್ಕಾರಿ ನೌಕರರ ಸಂಘದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರನ್ನು ನಮ್ಮ ಮನೆಯ ಸಹೋದರಿಯರಂತೆ ಕಾಣಬೇಕು ಅಂದಾಗ ಆಕೆಗೆ ಕೊಡುವ ಬಹುದೊಡ್ಡ ಗೌರವ ಇದಾಗಿದೆ ಎಂದರು.

ತಾಲೂಕಿನ ಹಿರೇವ್ಯಾಗೇರಿ ಗ್ರಾಮದ ಸ.ಪ.ಪೂ.ಕಾಲೇಜಿನ



ಉಪನ್ಯಾಸಕಿ ಶ್ರೀದೇವಿ ಮುಕಿಹಾಳ ಉಪನ್ಯಾಸ ನೀಡಿ ಮಾತನಾಡಿ, ದಿಟ್ಟ ಮಹಿಳೆ ಪ್ರಪ್ರಥಮ ಶಿಕ್ಷಕಿ ಸಾವಿತ್ರಿಬಾಯಿ ಪುಲೆಯವರು ಎಷ್ಟು ಕಷ್ಟ,ಕಾರ್ಪಣ್ಯವನ್ನು ಅನುಭವಿಸಿ ಈ ದೇಶಕ್ಕೆ ಒಬ್ಬ ಆದರ್ಶ ಶಿಕ್ಷಕಿಯಾಗಿ ಮಾದರಿಯಾಗಿದ್ದಾಳೆ. ಕಲ್ಪನಾ, ಮದರ್‌ತೆರಿಸಾ,ಸಾಲುಮರದತಿಮ್ಮಕ್ಕ, ಕಿತ್ತೂರ ರಾಣಿ ಚನ್ನಮ್ಮ, ವೀರವನಿತೆ ಒನಕೆ ಓಬ್ಬವ್ವ, ಇಂದಿರಾಗಾಂಧಿ, ರಾಷ್ಟ್ರಪತಿ ಮುರ್ಮು ಹೀಗೆ ಸಾಕಷ್ಟು ಮಹಿಳೆಯರ ಸಾಧನೆಯನ್ನು ನಾವೆಲ್ಲರೂ ಗಮನದಲ್ಲಿಟ್ಟಿಕೊಂಡು ಸಾಧನೆ ಮಾಡಬೇಕಿದೆ.ಮಹಿಳೆ ತಾಯಿಯಾಗಿ, ಅತ್ತೆಯಾಗಿ, ಮಗಳು, ಅಕ್ಕ, ತಂಗಿಯಾಗಿ ಮನೆಯನ್ನು ಬೆಳಗುವ ದೇವತೆಯಾಗಿದ್ದಾಳೆ ಎಂದು ಹೇಳಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂದೂರು ಅಂಗಡಿ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಹಾಗೂ ಜಿಲ್ಲಾಧ್ಯಕ್ಷ ನಾಗರಾಜ ಜುಮ್ಮಣ್ಣನವರ್ ಮಾತನಾಡಿ, ಮಹಿಳೆ ಎಂದೂ ಅಬಲೆಯಲ್ಲ,ಆಕೆ ಸಬಲೆಯಾಗಿದ್ದು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸ್ಥಾನಮಾನ ಪಡೆಯಲು ಅರ್ಹಳಾಗಿದ್ದಾಳೆ ಎಂದರು.

ಸರ್ಕಾರಿ ನೌಕರರ ಸಂಘದ ತಲೂಕಾಧ್ಯಕ್ಷ ಶಿದ್ಲಿಂಗಪ್ಪ ಶ್ಯಾಗೋಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳಾ ದಿನಾಚರಣೆಯ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದು ಎಲ್ಲ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಪಪಂ ಮುಖ್ಯಾಧಿಕಾರಿ ನಾಗೇಶ, ಶಿವಶಂಕರ ಕರಡಕಲ್, ಶರಣಬಸನಗೌಡ ಪಾಟೀಲ, ಬೀರಪ್ಪ ಅಂಡಗಿ,ಎಸ್.ವ್ಹಿ.ಧರಣಾ, ಬಸವರಾಜ ಮುಳಗುಂದ, ಜಗದೀಶ ಬಳಿಗಾರ, ಶರಣಯ್ಯ ಸರಗಣಾಚಾರ, ಹುಸೇನಸಾಬ ಭಗವಾನ, ವ್ಹಿ.ಬಿ.ಹನುಮಶೆಟ್ಟಿ, ಗುಂಡಪ್ಪ ಅಸೂಟಿ, ಬಾಲದಂಡಪ್ಪ ತಳವಾರ, ಫಕೀರಪ್ಪ ಕಟ್ಟಿಮನಿ, ಗಂಗಮ್ಮ ಸೊಬಗಿನ್, ಬಸಮ್ಮ ಛಲವಾದಿ, ಸುವರ್ಣ ಪಟೀಲ, ಶಕುಂತಲಾ ತೊಂಡಿಹಾಳ, ರೇಣುಕಾ ಟಂಕದ ಮತ್ತಿತರರು ಇದ್ದರು.ಬಳಿಕ ವಿವಿಧ ಸ್ಪರ್ಧೆಗಳು ನಡೆಯಿತು.

ಮಾಲಿನ್ಯ ಬಾಧಿತ ಪ್ರದೇಶಕ್ಕೆ ಬಿಜೆಪಿ ನಿಯೋಗ ಭೇಟಿ

ಕೊಪ್ಪಳ: ಕಾರ್ಖಾನೆಗಳ ಮಾಲಿನ್ಯದಿಂದ ತೀವ್ರ ಬಾಧಿತಕ್ಕೆ ಒಳಗಾಗಿರುವ ತಾಲೂಕಿನ ಅಲ್ಲಾನಗರ, ಹಿರೇಬಗನಾಳ, ಕುಣಿಕೇರಿ, ಕುಣಿಕೇರಾ ತಾಂಡಾ ಗ್ರಾಮಗಳಿಗೆ ಶನಿವಾರ ಬಿಜೆಪಿ ನಿಯೋಗ ಭೇಟಿ ನೀಡಿ, ಸ್ಥಳೀಯರ ಸಮಸ್ಯೆಗಳನ್ನು ಪರಿಶೀಲಿಸಿತು.

ಜಿಲ್ಲಾ ಬಿಜೆಪಿ ನಿಯೋಗದ ನಾಯಕರು ಬರುತ್ತಿದ್ದಂತೆಯೇ ಗ್ರಾಮಸ್ಥರು, ಅವರನ್ನು ತಮ್ಮ ಹೊಲ, ಮನೆಗಳಿಗೆ ಕರೆದೊಯ್ದು ಕಾರ್ಖಾನೆಗಳ ಮಾಲಿನ್ಯದಿಂದ ತಮಗಾಗುತ್ತಿರುವ ಸಂಕಟಗಳನ್ನು ತೆರೆದಿಟ್ಟರು.

ಈ ವೇಳೆ ಮಾತನಾಡಿದ ಪ್ರತಿಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಅವರು, ಇಲ್ಲಿಯ ಜನರ ಪರಿಸ್ಥಿತಿ ನೋಡಿದರೆ ತುಂಬಾ ಸಂಕಟವಾಗುತ್ತದೆ. ಧೂಳಿನ ಪರಿಣಾಮದಿಂದ ಈ ಭಾಗದಲ್ಲಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿದ್ದು, ಅಂಗವಿಕಲ ಮಕ್ಕಳು ಹುಟ್ಟುತ್ತಿರುವುದು ನಿಜಕ್ಕೂ ಕಳವಳಕಾರಿಯಾಗಿದೆ.



ಕಣ್ಣೀರು ಹಾಕಿದ ಎಮ್‌ಎಲ್‌ಸಿ

ಕಾರ್ಖಾನೆ ಮಾಲಿನ್ಯದಿಂದ ಜನರಿಗೆ ಎದುರಾಗಿರುವ ಆರೋಗ್ಯ ತೊಂದರೆ ನೋಡಿ, ವಿಪ ಸದಸ್ಯೆ ಹೇಮಲತಾ ನಾಯಕ್ ಕಣ್ಣೀರು ಹಾಕಿದರು. ಮಹಿಳೆಯರಿಗೆ ಗರ್ಭಕೋಶ ಕ್ಯಾನ್ಸರ್, ಅಸ್ತಮಾ, ಕಿಡ್ನಿ ಫೇಲ್ ವಿವಿಧ ಸಮಸ್ಯೆ ಹೇಳಿಕೊಳ್ಳುತ್ತಲೇ ವಿಪ ಸದಸ್ಯೆಯವರಿಗೆ ದುಃಖ ತಡೆಯಲು ಆಗಲಿಲ್ಲ, ತಾವು ಮಾತನಾಡುವಾಗ ದು:ಖಿತರಾದರು. ಬಳಿಕ ಸುಧಾರಿಸಿಕೊಂಡು ಮಾತನಾಡಿದ ಅವರು, ಈ ಭಾಗದ ಸಮಸ್ಯೆಗಳ ಬಗ್ಗೆ ಸಿದ್ದರಾಮಯ್ಯ ನೇತೃತ್ವದ ಸರಕಾರ ನಿಷ್ಕಾಳಜಿ ತೋರುತ್ತಿದೆ. ಕಾರ್ಖಾನೆಯಿಂದ ಉಂಟಾಗುತ್ತಿರುವ ಧೂಳಿನ ಸಮಸ್ಯೆ ಕುರಿತು ಸದನದಲ್ಲಿ ಪ್ರಶ್ನೆ ಕೇಳಿದರೂ ಸರಿಯಾದ ಉತ್ತರ ನೀಡುತ್ತಿಲ್ಲ ಎಂದು ಅವರು ಹೇಳಿದರು.

ಈ ವಿಷಯವನ್ನು ಪಕ್ಷದ ಹಿರಿಯ ನಾಯಕರ ಗಮನಕ್ಕೆ ತರುವುದರ ಜತೆಗೆ ವಿಧಾನಸಭೆಯಲ್ಲೂ ಚರ್ಚೆ ನಡೆಸುವೆ. ಇಂತಹ ಸಮಸ್ಯೆಗಳಿಗೆ ತಾರ್ಕಿಕ ಅಂತ್ಯ ಕಾಣಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣನವರ್, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಮುಖಂಡರಾದ ಮಹಾಂತೇಶ ಪಾಟೀಲ್, ಗಣೇಶ ಹೊರತಟ್ನಾಳ್, ವೀರೇಶ ಸಜ್ಜನ, ಪ್ರಭುಗೌಡ, ಪ್ರದೀಪ್ ಹಿಟ್ನಾಳ್ ಇದ್ದರು.

ಕಿರುಸುದ್ದಿ

ಗೃಹ ಬಳಕೆ ಗ್ಯಾಸ್ ದುರ್ಬಳಕೆಯಾದರೆ ಕ್ರಮ

ವಿಜಯನಗರ: ಗೃಹ ಬಳಕೆಗಾಗಿ ರಿಯಾಯಿತಿ ದರದಲ್ಲಿ ನೀಡಲಾಗುವ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಜಿಲ್ಲೆಯ ವಾಣಿಜ್ಯ ಸಂಸ್ಥೆಗಳಲ್ಲಿ ನಿಯಮಬಾಹಿರವಾಗಿ ಬಳಸುತ್ತಿರುವುದನ್ನು ಪತ್ತೆ ಹಚ್ಚಲು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಹಾರ ನಿರೀಕ್ಷಕರು ಶನಿವಾರ ಜಿಲ್ಲೆಯಾದ್ಯಂತ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳ ತಂಡ ಹೋಟೆಲ್, ಬೇಕರಿ, ಫಾಸ್ಟ್ ಫುಡ್ ಸೆಂಟರ್, ಜನನಿಬಿಡ ಆಟೋ ಹಾಗೂ ಬಸ್ ನಿಲ್ದಾಣಗಳ ಬಳಿಯಿರುವ ಉಪಾಹಾರ ಮಂದಿರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಈ ವೇಳೆ ಮಾಲೀಕರಿಗೆ ಗೃಹ ಬಳಕೆ ಸಿಲಿಂಡರ್‌ಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಸಬಾರದು. ಒಂದು ವೇಳೆ ನಿಯಮ ಉಲ್ಲಂಘಿಸಿ ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುವುದು ರುವುದು ಕಂಡುಬಂದಲ್ಲಿ, ಅಂತಹ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳುವುದರ ಜೊತೆಗೆ ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಕಾಮಗಾರಿ ವೀಕ್ಷಣೆ

ಬೀದರ: ನಗರದಲ್ಲಿ 48 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾಧಿಕಾರಿಗಳ ಕಚೇರಿ (ಜಿಲ್ಲಾ ಸಂಕೀರ್ಣ) ಕಟ್ಟಡದ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು.

ಕಾಮಗಾರಿಯ ಪ್ರಗತಿಯನ್ನು ಸಂಬಂಧಿತ ಅಧಿಕಾರಿಗಳೊಂದಿಗೆ ಪರಿಶೀಲಿಸಿದ ಸಚಿವರು, ಕಟ್ಟಡದ ನಿರ್ಮಾಣ ಕಾರ್ಯವನ್ನು ಉತ್ತಮ ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಗಳು ಒಂದೇ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುವುದರಿಂದ ಸಾರ್ವಜನಿಕರಿಗೆ ಅಗತ್ಯವಾದ ಸರ್ಕಾರಿ ಸೇವೆಗಳು ಒಂದೇ ಸ್ಥಳದಲ್ಲಿ ಸುಲಭವಾಗಿ ದೊರೆಯಲಿದ್ದು, ಇದರಿಂದ ಆಡಳಿತ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿ ಹಾಗೂ ಸುಗಮವಾಗಲಿದೆ ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಚಂದ್ರಶೇಖರ ನೇಮಕ

ಬೀದರ್: ಬಿಜೆಪಿ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ಚಂದ್ರಶೇಖರ ಪಾಟೀಲ ಶೇಕಾಪುರ ಅವರನ್ನು ನೇಮಕ ಮಾಡಲಾಗಿದೆ.



ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ. ತಾಲೂಕಿನ ಶೇಕಾಪುರ ಗ್ರಾಮದ ಚಂದ್ರಶೇಖರ ಪಾಟೀಲ ಎರಡು ದಶಕದಿಂದ ಬಿಜೆಪಿ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಪಕ್ಷದ ಯುವ ಮೋರ್ಚಾದ ಜಿಲ್ಲಾ ಘಟಕದ ಅಧ್ಯಕ್ಷ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ ಗಮನ ಸೆಳೆದಿದ್ದಾರೆ.

ಭತ್ತದ ಬಣವೆಗೆ ಬೆಂಕಿ: ಹಾನಿ

ಕುರುಗೋಡು: ಸಮೀಪದ ಮಣ್ಣೂರು ಸೂಗೂರು ವ್ಯಾಪ್ತಿಯ ದೊಡ್ಡರಾಜು ಕ್ಯಾಂಪ್‌ನಲ್ಲಿ ಶನಿವಾರ ಬೆಳಗ್ಗೆ ಆಕಸ್ಮಿಕವಾಗಿ ಭತ್ತದ ಬಣವೆಗೆ ಬೆಂಕಿ ಬಿದ್ದು ಅಪಾರ ಹಾನಿಯಾದ ಘಟನೆ ನಡೆದಿದೆ.



ಈ ಬಣವೆ ಸ್ಥಳೀಯ ಶ್ರೀನಿವಾಸ ರಾಜು ಸೇರಿದ್ದು, ಮುಂಗಾರು ಭತ್ತದ 14 ಟ್ರ್ಯಾಕ್ಟರ್ ಭತ್ತದ ಹುಲ್ಲು ಸುಟ್ಟು ಭಸ್ಮವಾಗಿದೆ. ಸ್ಥಳಕ್ಕೆ ಕುರುಗೋಡು ಅಗ್ನಿಶಾಮಕ ವಾಹನ ಆಗಮಿಸಿ ಬೆಂಕಿ ನಂದಿಸಲು ಪ್ರಯತ್ನ ಮಾಡಿದರು.

ನಿಧನ ಸುದ್ದಿ

ನಟರಾಜ ಸ್ವಾಮಿ ಎಂ.

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ನಟರಾಜ ಸ್ವಾಮಿ ಎಂ. (56) ಗುರುವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಹಾಗೂ ಪುತ್ರಿ ಇದ್ದಾರೆ.





ಸಿರುಗುಪ್ಪ: ನಗರಸಭೆ ವ್ಯಾಪ್ತಿಯ ಸಾರ್ವಜನಿಕರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಶುಕ್ರವಾರ ತಾಲೂಕು ಮೈದಾನದಲ್ಲಿ ಮಹಿಳೆಯರಿಗಾಗಿ ರಂಗೋಲಿ, ಸ್ಕಿಪ್ಪಿಂಗ್, ಫ್ಯಾಷನ್ ಷೋ, ಸೇರಿದಂತೆ ವಿವಿಧ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಸ್ಕಿಪ್ಪಿಂಗ್ ಆಟ ಮತ್ತು ಕೈಯಿಂದ ಬಾಟಲ್‌ನಲ್ಲಿ ನೀರು ತುಂಬುವ ಆಟದಲ್ಲಿ ಮೊದಲನೇ ಬಹುಮಾನ ಪಡೆದ ಕೆ.ಎಂ.ಭುವನೇಶ್ವರಿ ಅವರಿಗೆ ನಗರಸಭೆ ಅಧಿಕಾರಿಗಳಾದ ಅಮರೇಶ, ವೆಂಕೋಬ, ಜ್ಯೋತಿ ಮೇಗೂರ್ ಅವರು ಬಹುಮಾನ ವಿತರಿಸಿ ಸನ್ಮಾನಿಸಿ ಗೌರವಿಸಿದರು.

ಅವಹೇಳನಕಾರಿ ಪೋಸ್ಟ್ : ಕ್ರಮಕ್ಕೆ ಆಗ್ರಹ

ಬಳ್ಳಾರಿ: 12ನೇ ಶತಮಾನದ ಶ್ರೇಷ್ಠ ದಾರ್ಶನಿಕ, ವಿಶ್ವಗುರು ಬಸವಣ್ಣನವರ ಕುರಿತು ಹಾಗೂ ಅಕ್ಕಮಹಾದೇವಿ ಅವರ ಕುರಿತು ವ್ಯಕ್ತಿಯೊಬ್ಬರು ಫೇಸ್‌ಬುಕ್‌ನಲ್ಲಿ ಅಶ್ಲೀಲವಾಗಿ ಬರೆದುಕೊಂಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದ್ದು, ಕೂಡಲೇ ಅವರನ್ನು ಬಂಧಿಸಿ ಕಠಿಣ ಕಾನೂನು ಕ್ರಮಗಳನ್ನ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ಶ್ರೀ ಬಸವ ಭಕ್ತರ ತಂಡ ಸೈಬರ್ ಕ್ರೈಂ ಪೊಲೀಸ್ ಅಧಿಕಾರಿಗಳಿಗೆ ಶನಿವಾರ ದೂರು ನೀಡಿ, ಮನವಿ ಸಲ್ಲಿಸಿದರು.

ಭಕ್ತರಾದ, ಹಿರಿಯ ಲೆಕ್ಕ ಪರಿಶೋಧಕ ಸಿರಿಗೆರೆ ಪನ್ನರಾಜ ಅವರು ಮಾತನಾಡಿ, ಫೇಸ್‌ಬುಕ್ ಸಾಮಾಜಿಕ ಜಾಲತಾಣದಲ್ಲಿ ಎಂ.ರಮಾಕಾಂತ್ ಎನ್ನುವ ವ್ಯಕ್ತಿ, ಶ್ರೀ ಬಸವಣ್ಣನವರ ಹಾಗೂ ಅಕ್ಕಮಹಾ ದೇವಿ ಅವರ ಕುರಿತು ಅಶ್ಲೀಲವಾಗಿ ಬರೆದು, ಅವರನ್ನು ಹೀಯಾಳಿಸಿ, ಅವರ ಚಾರಿತ್ರೆಗೆ ದ್ರೋಹ ಮಾಡಿದ್ದಾರೆ. 12ನೇ ಶತಮಾನದ ಶ್ರೇಷ್ಠ ದಾರ್ಶನಿಕ, ವಿಶ್ವಗುರು, ಬಸವಣ್ಣನವರ ಬಗ್ಗೆ ಹಾಗೂ ಅಕ್ಕಮಹಾದೇವಿ ಅವರ ಬಗ್ಗೆ ಅತ್ಯಂತ ಕೆಟ್ಟ ಅಶ್ಲೀಲ ಪದಗಳಿಂದ ನಿಂದನೆ ಮಾಡಿದ್ದಾರೆ, ಇವರನ್ನು ಕೂಡಲೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಗನಕಲ್ ವಿಜಯಕುಮಾರ್, ರವಿ ಕುಮಾರ್, ಮಲ್ಲಿಕಾರ್ಜುನ್, ಕಲಾವತಿ ಮಿಲ್ಲರ್ ಪೇಟೆ, ಚಂದ್ರಶೇಖರ್, ಕಟ್ಟೆಬಸವ, ಪಾಲಾಕ್ಷಗೌಡ, ಚಂದ್ರಶೇಖರಯ್ಯ ಸೇರಿದಂತೆ ಇತರರಿದ್ದರು.



ಬಳ್ಳಾರಿ: 12ನೇ ಶತಮಾನದ ಶ್ರೇಷ್ಠ ದಾರ್ಶನಿಕ, ವಿಶ್ವಗುರು ಬಸವಣ್ಣನವರ ಕುರಿತು ಹಾಗೂ ಅಕ್ಕಮಹಾದೇವಿ ಅವರ ಕುರಿತು ವ್ಯಕ್ತಿಯೊಬ್ಬರು ಫೇಸ್‌ಬುಕ್‌ನಲ್ಲಿ ಅಶ್ಲೀಲವಾಗಿ ಬರೆದುಕೊಂಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದ್ದು, ಕೂಡಲೇ ಅವರನ್ನು ಬಂಧಿಸಿ ಕಠಿಣ ಕಾನೂನು ಕ್ರಮಗಳನ್ನ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ಶ್ರೀ ಬಸವ ಭಕ್ತರ ತಂಡ ಸೈಬರ್ ಕ್ರೈಂ ಪೊಲೀಸ್ ಅಧಿಕಾರಿಗಳಿಗೆ ಶನಿವಾರ ದೂರು ನೀಡಿ, ಮನವಿ ಸಲ್ಲಿಸಿದರು.

ತಂಪು ಪಾನೀಯಗಳಿಗೆ ಮೊರೆ | ಏಪ್ರಿಲ್, ಮೇನಲ್ಲಿ ಮತ್ತಷ್ಟು ಹೆಚ್ಚಳದ ಆತಂಕ

ಬಿಸಿಲಿನ ಝಳಕ್ಕೆ ಗಿರಿಜಿಲ್ಲೆ ಜನತೆ ಕಂಗಾಲು


ಲಕ್ಷ್ಮೀಕಾಂತ್ ಕುಲಕರ್ಣಿ

ಯಾದಗಿರಿ: ಪ್ರಸಕ್ತ ಸಾಲಿನ ಬೇಸಿಗೆ ಬಿಸಿಲಿನ ಪ್ರಖರತೆ ಗಿರಿಜಿಲ್ಲೆಯಲ್ಲಿ ಹೆಚ್ಚಾಗುತ್ತಿದ್ದು, ಜನತೆ ಪರೇಶಾನ್ ಆಗುವಂತೆ ಮಾಡಿದೆ.

ಕಳೆದ ಬಾರಿ ನವೆಂಬರ್ ತಿಂಗಳಿನವರೆಗೂ ಮಳೆ ಬಿದ್ದಿದ್ದು, ಚಳಿಗಾಲದ ಎರಡು ತಿಂಗಳು ಅಷ್ಟೇನು ಚಳಿ ಎನಿಸಿರಲಿಲ್ಲ, ಇನ್ನೂ ಫೆಬ್ರವರಿ ತಿಂಗಳಾಂತ್ಯಕ್ಕೆ ಆರಂಭವಾದ ಬಿಸಿಲಿನ ತಾಪಮಾನ ಮಾರ್ಚ್ ಎರಡನೇ ವಾರಕ್ಕೆ ಏಕದಮ್ ಹೆಚ್ಚಾಗಿದೆ. ಬೆಳಗ್ಗೆ 9 ಗಂಟೆಯಾಗುತ್ತಿದ್ದಂತೆ ಉರಿಬಿಸಿಲು ನೆತ್ತಿ ಸುಡುತ್ತಿದೆ.

ಜಿಲ್ಲೆಯಲ್ಲಿ ಪ್ರತಿನಿತ್ಯ 38 ರಿಂದ 40 ಡಿಗ್ರಿ ಸೆಲ್ಸಿಯಸ್ ಬಿಸಿಲಿನ ತಾಪಮಾನ ದಾಖಲಾಗುತ್ತಿದೆ. ಸಂಜೆ 5 ಗಂಟೆಯಾದರೂ ಝಳ ಕಡಿಮೆಯಾಗುತ್ತಿಲ್ಲ, ಹೀಗಾಗಿ ಕಚೇರಿ, ಕೆಲಸಗಳಿಗೆ ನಿತ್ಯ ಜಿಲ್ಲಾಕೇಂದ್ರಕ್ಕೆ ಬರುವ ಜನತೆ ನೆರಳು ಕಂಡಾಕ್ಷಣ ಉಸ್ಸಪ್ಪಾ ಎಂದು ವಿಶ್ರಾಂತಿ ಪಡೆಯುವ ದೃಶ್ಯ ಸಾಮಾನ್ಯವಾಗಿ ಕಾಣುತ್ತಿದೆ.

ಬಿಸಿಲಿನಿಂದ ಬಾಯಾರಿಕೆ ಹೆಚ್ಚಾಗುವ ಕಾರಣ ಜನತೆ ತಂಪು ಪಾನೀಯಗಳಿಗೆ ಮೊರೆ ಹೋಗುತ್ತಿದ್ದಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ಕಲ್ಲಂಗಡಿ, ಎಳನೀರು, ಕರಬೂಜ, ಕಬ್ಬಿನ ಹಾಲು ಹೀಗೆ ಹಣ್ಣಿನ ಅಂಗಡಿಗಳಲ್ಲಿ ವಿವಿಧ ಜ್ಯೂಸ್ ಗಳ ಮಾರಾಟದ ಭರಾಟೆ ಹೆಚ್ಚಾಗಿದೆ.



ಮಾರ್ಚ್ ಎರಡನೇ ವಾರವೇ ಇಷ್ಟೊಂದು ಪ್ರಮಾಣದಲ್ಲಿ ಬಿಸಿಲು ಬಾಧಿಸುತ್ತಿದ್ದು, ಏಪ್ರೀಲ್ ,ಮೇ ತಿಂಗಳು ನೆನಸಿಕೊಂಡರೆ ಕುಳಿತಲ್ಲೇ ಬೆವರು ಬಿಡುವಂತಾಗಿದೆ. ಕಳೆದ ಬಾರಿಗಿಂತ ಈ ವರ್ಷ ಬಿಸಿಲಿನ ತಾಪ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಬೇಸಿಗೆಯಲ್ಲಿ ಜನತೆ ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಛತ್ರಿ ಬಳಸಬೇಕು. ಮನೆಯಲ್ಲಿಆದಷ್ಟು ಫ್ಯಾನ್ ಬಳಕೆ, ಹಗುರುವಾದ ತಿಳಿ ಬಣ್ಣದ, ಸಡಿಲವಾದ ಮತ್ತು ಹತ್ತಿ ಬಟ್ಟೆಗಳನ್ನು ಧರಿಸಬೇಕು ಎಂದು ಜಿಲ್ಲಾ ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಸಾಕಷ್ಟುಪ್ರಮಾಣದಲ್ಲಿನೀರನ್ನುಕುಡಿಯಬೇಕು.

> ಕಳೆದ ವರ್ಷ ಗರಿಷ್ಠ ತಾಪಮಾನ 44.2ಡಿ.ಸೆ ನಷ್ಟು ದಾಖಲಾಗಿತ್ತು. ಈ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ತಾಪಮಾನ ಹೆಚ್ಚು ದಾಖಲಾಗುವ ಮುನ್ಸೂಚನೆ ಇದೆ. ಹೀಗಾಗಿ ಜಿಲ್ಲಾಡಳಿತ ಕುಡಿಯುವ ನೀರು ಇತರೇ ಅಗತ್ಯ ಕ್ರಮ ಕೈಗೊಂಡಿದೆ.
> ■ ಹರ್ಷಲ್ ಭೋಯರ್.ಜಿಲ್ಲಾಧಿಕಾರಿ

> ಬಿಸಿಲಿನ ತಾಪ ಮತ್ತಷ್ಟು ಹೆಚ್ಚಾಗಲಿದ್ದು, ಸಾಕಷ್ಟು ಪ್ರಮಾಣದಲ್ಲಿನೀರು ಕುಡಿಯಬೇಕು. ರಸ್ತೆ ಬದಿ ಹಣ್ಣಿನ ಪದಾರ್ಥಗಳನ್ನು ತಿನ್ನದೆ, ಮನೆಗೆ ತೆಗೆದುಕೊಂಡು ಹೋಗಿ ಸೇವಿಸಬೇಕು. ಮಕ್ಕಳು ಹಾಗೂ ವೃದ್ಧರು ಮಧ್ಯಾಹ್ನ ಹೊರಗೆ ಬಾರದೆ ಇರುವುದು ಉತ್ತಮ.
> ■ ಡಾ.ವೀರೇಶ ಜಾಕಾ.ಖ್ಯಾತ ವೈದ್ಯ

ಮನೆಯಲ್ಲಿಯೇ ತಯಾರಿಸಿದ ಲಸ್ಸಿ, ನಿಂಬೆ ಶರಬತ್, ಮಜ್ಜಿಗೆ ಬಳಸಬೇಕು. ಹೊರಗೆ ಹಣ್ಣಿನ ಪದಾರ್ಥಗಳನ್ನು ತಿನ್ನುವುದನ್ನು ಬಿಟ್ಟು ಮನೆಗೆ ತಂದು ಸೇವಿಸುವುದು ಉತ್ತಮ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಅಭಿರುಚಿ ಬೆಳೆಸಿ

ಕೂಡ್ಲಿಗಿ: ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಅಭಿರುಚಿಯನ್ನು ಪ್ರೋತ್ಸಾಹಿಸಿ, ವಿದ್ಯಾಭ್ಯಾಸದ ಜೊತೆಗೆ ಸಾಹಿತ್ಯ ಕಲೆ, ನಾಡು ನುಡಿ, ಸಂಸ್ಕೃತಿ ಹಾಗೂ ಸಾಹಿತ್ಯದ ಬಗ್ಗೆ ಅಭಿರುಚಿ ಮತ್ತು ಚಿಂತನಾಶೀಲ ಮನೋಭಾವ ಬೆಳೆಸಿದರೆ ಕನ್ನಡ ಭಾಷೆಯ ಅಭಿವೃದ್ಧಿಗೆ ಇನ್ನಷ್ಟು ಸಹಕಾರಿಯಾಗಲಿದೆ ಎಂದು ರಾಜ್ಯ ಉಪಾಧ್ಯಕ್ಷ ಶರಣ ಸಾಹಿತ್ಯ ಪರಿಷತ್ತು ಹಾಗೂ ಬಾಪೂಜಿ ಸಮೂಹ ಸಂಸ್ಥೆ ಕಾರ್ಯದರ್ಶಿ ಡಾ.ಕೆ.ಎಂ. ವೀರೇಶ್ ಹೇಳಿದರು.

ತಾಲೂಕಿನ ಕಾನ ಹೊಸಹಳ್ಳಿ ಪಟ್ಟಣದ ಸೋಫಿಯಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕ ಹೊಸಹಳ್ಳಿ ಇವರ ವತಿಯಿಂದ ದಿ ಅಕ್ಕ ಸಾಲಿ ಹೂಲೆಮ್ಮ ಮತ್ತು ನೀಲಕಂಠಚಾರ್ಯ ಸ್ಮರಣೆ ಹಾಗೂ ದತ್ತಿ ಉಪನ್ಯಾಸ ಮತ್ತು ಶ್ರೀ ಕಾಮ ಶೆಟ್ಟಿ ಕೆ. ಕಮಲಮ್ಮ ಮತ್ತು ಕೆ. ತಿಪ್ಪೇಸ್ವಾಮಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಎನ್.ಎಂ ರವಿಕುಮಾರ್ ಮಾತನಾಡಿ, ತಾಲೂಕಿನಲ್ಲಿ ವಿದ್ವಾಂಸರೆಂದರೆ ಬಿ.ಎಂ. ಗುರು ಸಿದ್ದಯ್ಯನವರು, ಕೋ ಚನ್ನಬಸಪ್ಪ, ಹಿಮ ನಾಗಯ್ಯ, ವೃಷಭೇಂದ್ರ ಸ್ವಾಮಿ, ಸೋ.ಮ. ಚಂದ್ರಶೇಖರಯ್ಯ ಸೇರಿದಂತೆ ಅನೇಕ ವಿದ್ವಾಂಸರು ಈ ನಾಡಿಗೆ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯ ಕುರಿತು ಕನ್ನಡ ಸಾಹಿತ್ಯಕ್ಕೆ ಮತ್ತು ಸಂಸ್ಕೃತಿಗೆ ವಿಶ್ವಕರ್ಮ ಸಮುದಾಯದ ಕೊಡುಗೆ ಕುರಿತು ಸ್ವವಿವರಗಳು ನೀಡಿದರು.

ಈ ವೇಳೆ ಸಿದ್ದರಾಮೇಶ್ವರ ಟಿ.ಕೆ ಅವರು ಶ್ರೀ ಸಿದ್ದರಾಮೇಶ್ವರ ಜೀವನ ಚರಿತ್ರೆ ಕುರಿತು ಮಾತನಾಡಿದರು.

ಸಾನಿಧ್ಯ ವಹಿಸಿದ್ದ ಐಮಡಿ ಶರಣಾರ್ಯರು ಧರ್ಮಾಧಿಕಾರಿಗಳು ದಾಸೋಹ ಮಠ ಕಾನಮಡುಗು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ವೃಷಭೇಂದ್ರ ಚಾರ್ ವಹಿಸಿದ್ದರು.ಈ ಜಗನ್ನಾಥ್, ವೆಂಕಟೇಶ್ವರ ರಾವ್, ಕೆ ಸುಭಾಷ್ ಚಂದ್ರ, ಕನ್ನಡ ಸಾಹಿತ್ಯ ಪರಿಷತ್ತಿನ ಹೋಬಳಿ ಘಟಕದ ಅಧ್ಯಕ್ಷ ಎಸ್. ತಿಪ್ಪೇಸ್ವಾಮಿ, ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಯುವ ಘಟಕ ಕೆ..ಎಸ್.ವೀರೇಶ್, ಸೀತಾರಾಮು ರೆಡ್ಡಿ, ಸಿದ್ದಪ್ಪ, ಜಲಜಾಕ್ಷಿ, ಚಂದ್ರಶೇಖರ, ಮಾಧವಿ, ಸಿರಿ, ಶರಣಗೌಡ, ಕರಿ ಬಸಣ್ಣ, ಸಫಾರಿ ಶಾಮ ಸುಂದರ, ರಾಮಕೃಷ್ಣ ಕರಿಬಸಣ್ಣ ಸೇರಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಸೋಫಿಯ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗ ಹಾಗೂ ಸೋಫಿಯಾ ಹಿ. ಪ್ರಾ. ಶಾಲೆ. ಸೇರಿದಂತೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರು ಸಾರ್ವಜನಿಕರು ಉಪಸ್ಥಿತರಿದ್ದರು.



ಐಟಿಐ: ಪ್ರವೇಶಾತಿಗೆ ಅರ್ಜಿ ಆಹ್ವಾನ

ವಿಜಯನಗರ: ಹೂವಿನಹಡಗಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅರ್ಹ ಖಾಸಗಿ ಅಭ್ಯರ್ಥಿಗಳಿಂದ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ.

ಸಂಸ್ಥೆಯ ಚಟುವಟಿಕೆಗಳ ವೇಳಾ ಪಟ್ಟಿಯಂತೆ ಇದೇ ಮಾ.20 ಅಥವಾ ಅದಕ್ಕಿಂತಮುಂಚಿತವಾಗಿಪ್ರವೇಶಕೈಗೊಳ್ಳಲಾಗುವುದು. ಆಸಕ್ತ ಅಭ್ಯರ್ಥಿಗಳು ಸಂಸ್ಥೆಯ ಪ್ರಾಚಾರ್ಯರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕನ್ನಡ ನೆಲದಲ್ಲಿ ಜನಿಸುವುದು ನಮ್ಮೆಲ್ಲರ ಪುಣ್ಯ



ಬಳ್ಳಾರಿ: ನಮ್ಮ ಕನ್ನಡ ನಾಡು ಸ್ವರ್ಗದ ಬೀಡು, ಕನ್ನಡ ನೆಲದಲ್ಲಿ ಹುಟ್ಟುವುದೇ ಪೂರ್ವ ಜನ್ಮದ ಪುಣ್ಯದ ಫಲ ಎಂದು ಮಾಜಿ ಶಾಸಕ, ಕೆಎಂಎಫ್ ಮಾಜಿ ಅಧ್ಯಕ್ಷ ಗಾಲಿ ಸೋಮಶೇಖರ್ ರೆಡ್ಡಿ ತಿಳಿಸಿದರು.

ನಗರದ ಬಳ್ಳಾರಿ ಬಿಜಿನೆಸ್ ಕಾಲೇಜಿನಲ್ಲಿ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಹಮ್ಮಿಕೊಂಡಿದ್ದ ದಿ.ಗಾಲಿ ರುಕ್ಮಿಣಮ್ಮ ಮತ್ತು ದಿ.ಗಾಲಿ ಚೆಂಗಾರೆಡ್ಡಿ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕನ್ನಡ ಸಂಸ್ಕೃತಿ ವಿಶ್ವಮಾನ್ಯ ಸಂಸ್ಕೃತಿಯಾಗಿದೆ, ಅದನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಕುರಿತು ಕಿರುತೆರೆ ಹಾಸ್ಯ ಕಲಾವಿದ ಎ. ಎರ್ರಿಸ್ವಾಮಿ ವಿಶೇಷ ಉಪನ್ಯಾಸ ನೀಡಿದರು. ಬಳ್ಳಾರಿ ಬಿಜಿನೆಸ್ ಕಾಲೇಜಿನ ನಿರ್ದೇಶಕ, ಕಿಷ್ಕಿಂಧ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಅಮರರಾಜ್ ಭೂಪಾಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳಿಗೆ ತಮ್ಮ ಸಂಸ್ಥೆ ನಿರಂತರವಾಗಿ ಪ್ರೋತ್ಸಾಹ ನೀಡುತ್ತದೆ. ದತ್ತಿ ದಾನಿಗಳಿಂದ ಉಪಯುಕ್ತ ಮಾಹಿತಿ ಲಭ್ಯವಾಗುತ್ತದೆ ಎಂದರು. ಕಾಲೇಜು ಪ್ರಾಚಾರ್ಯ ಡಾ. ಎಂ. ರಾಮಚಂದ್ರ, ಖ್ಯಾತ ವೈದ್ಯೆ ಡಾ. ರೇಣುಕಾ ಮಂಜುನಾಥ, ಮಹಾನಗರ ಪಾಲಿಕೆ ಸದಸ್ಯರಾದ ಗುಡಿಗಂಟೆ ಹನುಮಂತ, ಕೆ. ಹನುಮಂತಪ್ಪ, ಮಾನವ ಬಂಧುತ್ವ ವೇದಿಕೆಯ ಹೆಚ್. ರವಿಕುಮಾರ್, ಜ್ಯೋತಿ ಪ್ರಕಾಶ್ ಸೇರಿದಂತೆ ವಿವಿಧ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಳ್ಳಾರಿ ಜಿಲ್ಲೆಯ ಪ್ರಸಿದ್ಧ ರಂಗ ಕಲಾವಿದ ರಮೇಶ್ ಗೌಡ ಪಾಟೀಲ್ ಅವರ ನಿಧನಕ್ಕೆ ಸಂತಾಪ ಸೂಚಿಸಿ ಮೌನಾಚರಣೆ ಸಲ್ಲಿಸಲಾಯಿತು. ಉಪನ್ಯಾಸಕಿ ಕೆ. ಸರ್ವಮಂಗಳಾ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕ ಪ್ರಭಾಕರ್ ಜೋಶಿ ಸ್ವಾಗತಿಸಿದರು.

ಹೆಚ್ಚಿನ ಅಂಕ ಗಳಿಸಿ ಕೀರ್ತಿ ಹೆಚ್ಚಿಸಿ

ಹೂವಿನ ಹಡಗಲಿ: ತಾಲೂಕಿನ ಮಿರಾಕೋರನಹಳ್ಳಿ ಶ್ರೀಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ಸರಳ ಹಾಗೂ ಶಿಸ್ತಿನಿಂದ ಗುರುವಂದನಾ ಕಾರ್ಯಕ್ರಮ ನಡೆಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಹಾಗೂ ಮಾಜಿ ಸೈನಿಕ ಮಹಮ್ಮದ್ ರಫಿ ಕಾರ್ಯಕ್ರಮ ಉದ್ಘಾಟಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸುವುದರ ಜೊತೆಗೆ ಶಾಲೆಗೆ ತಾಲೂಕಿಗೆ ರಾಜ್ಯಕ್ಕೆ ರ್‍ಯಾಂಕ್ ಪಡೆದುಕೊಂಡು ತಂದೆ-ತಾಯಿಗಳಿಗೆ ಶಿಕ್ಷಕರುಗಳಿಗೆ ಕೀರ್ತಿ ತರುವಂತಹ ಪ್ರತಿಭೆಗಳಾಗಿ ಬೆಳೆಯಬೇಕು ಎಂದರು.

ಶ್ರೀಶರಣಬಸವೇಶ್ವರ ಸರ್ಕಾರಿ ಪ್ರೌಢಶಾಲೆ, ಮಿರಾಕೊರನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದ್ದ 2011-12ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮ ಕುರಿತು ಅವರು ಮಾತನಾಡಿದರು. ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ, ಹನುಮಂತಪ್ಪ, ಊರಿನಹಿರಿಯರಾದ ತಾಳೇದಳ್ಳಿ ಹನುಮಂತಪ್ಪ, ಊರಾಳ ಬಿದ್ದಪ್ಪನವರು, ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸೂರ್ಯಕಾಂತ ಬಿ, ಇವರು ವಹಿಸಿದ್ದರು.

ಇದೆ ಸಂದರ್ಭದಲ್ಲಿ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸುವ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ. ಪೂಜಾರ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಎ. ಕೋಟೆಪ್ಪ, ಅತಿಥಿಗಳು ಮತ್ತು ಮುಖ್ಯ ಶಿಕ್ಷಕರು ಸಹ ಶಿಕ್ಷಕ, ಶಿಕ್ಷಕಿಯರು, ಶಿಕ್ಷಣ ಪ್ರೇಮಿಗಳು, ಗ್ರಾಮದ ಮುಖಂಡರು ಇತರಿದ್ದರು.



ಎನ್‌ಎಸ್‌ಎಸ್‌ನಿಂದ ನಾಯಕತ್ವ ಗುಣ



ಕೊಟ್ಟೂರು: ವಿದ್ಯಾರ್ಥಿಗಳು ಸೇವಾ ಮನೋಭಾವನೆಯನ್ನು ಮೂಡಿಸಿಕೊಂಡಾಗ ಮಾತ್ರ ಉನ್ನತ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಕೊಟ್ಟೂರೇಶ್ವರ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಸಿ. ಮೋಹನ ರೆಡ್ಡಿ ತಿಳಿಸಿದರು.

ಕೊಟ್ಟೂರೇಶ್ವರ ಪದವಿ ಮಹಾವಿದ್ಯಾಲಯದಿಂದ' ಹಮ್ಮಿಕೊಂಡಿರುವ 2025 -26 ನೇ ಸಾಲಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಮೂಲಕ ವಿದ್ಯಾರ್ಥಿಗಳುಸಮಾಜದಸಮಸ್ಯೆಗಳ ಬಗ್ಗೆ ಅರಿವು ಪಡೆದು ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಗ್ರಾಮಾಭಿವೃದ್ಧಿ, ಪರಿಸರ ಸಂರಕ್ಷಣೆ, ಸ್ವಚ್ಛತಾ ಅಭಿಯಾನ, ರಕ್ತದಾನ ಶಿಬಿರ, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಮುಂತಾದ ಹಲವು ಚಟುವಟಿಕೆಗಳನ್ನು ಎನ್‌ಎಸ್‌ಎಸ್ ನಡೆಸುತ್ತದೆ. ಇವು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಶಿಸ್ತು ಮತ್ತು ಸಹಕಾರದ ಮನೋಭಾವವನ್ನು ಬೆಳೆಸುತ್ತವೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ರವಿಕುಮಾರ್ ಮಾತನಾಡಿ, ದೇಶದ ಅಭಿವೃದ್ಧಿ ಎಂದರೆ ಕೇವಲ ದೊಡ್ಡ ಕಟ್ಟಡಗಳನ್ನು ಕಟ್ಟುವುದು ಮಾತ್ರವಲ್ಲ, ಬದಲಾಗಿ ಹಸಿದವರಿಗೆ ಅನ್ನ ನೀಡುವುದು ಮತ್ತು ಅಶಕ್ತರಿಗೆ ನೆರವಾಗುವುದು. 'ಸೇವೆಯೇ ಪರಮ ಧರ್ಮ' ಎಂಬ ತತ್ವದಡಿ ನಾವೆಲ್ಲರೂ ಕೈಜೋಡಿಸೋಣ."ದೇಶ ಸೇವೆಯೇ ಈಶ ಸೇವೆ" ನಮ್ಮ ವಿದ್ಯಾರ್ಥಿಗಳು ಹಳ್ಳಿಯ ಜೀವನಕ್ಕೆ ಹೊಂದಿಕೊಂಡು ಅಲ್ಲಿನ ಸಂಸ್ಕೃತಿ ಅಲ್ಲಿನ ಪರಂಪರೆಗಳನ್ನು ಎತ್ತಿ ಹಿಡಿಯುವ ಮೂಲಕ ಎಷ್ಟು ಸಂಯಮ ತಾಳ್ಮೆಯನ್ನು ಕಾಪಾಡಿಕೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು

ಹಿರಿಯ ಪ್ರಾಧ್ಯಾಪಕರಾದ ಡಾ.ಜೆ.ಬಿ.ಸಿದ್ದನಗೌಡ, ಡಾ. ಪೃಥ್ವಿರಾಜ್ ಬೆಜ್ಜರಗಿ, ಉಮೇಶ್. ಕೆ. ರಶ್ಮೀ, ಶಿವಪ್ರಕಾಶ್,ಕೊಟ್ರೇಶ್, ಬಿ.ಸುರೇಶ್, ಶ್ರೀನಿವಾಸ್ ಇತರ ಎಲ್ಲ ಉಪನ್ಯಾಸಕರು ಉಪಸ್ಥಿತರಿದ್ದರು.

ಕುಮಾರಿ ಸಿಂಧು ಪ್ರಾರ್ಥಿಸಿದರು. ಶಿಬಿರಾಧಿಕಾರಿಯಾದ ಕೆ.ಪಿ. ರಾಧಾಸ್ವಾಮಿ ಸ್ವಾಗತಿಸಿದರು, ಕನ್ನಡ ಉಪನ್ಯಾಸಕರಾದ ಡಾ. ಕೆ.ಎಂ. ವೀರೇಶ್ ನಿರೂಪಿಸಿದರು.

ರಾಜಿ ಸಂಧಾನದೊಂದಿಗೆ ಪ್ರಕರಣಗಳ ಇತ್ಯರ್ಥ

ಹಗರಿಬೊಮ್ಮನಹಳ್ಳಿ: ಲೋಕ ಅದಾಲತ್‌ನಲ್ಲಿ ಕಕ್ಷಿದಾರರೊಂದಿಗೆ ಚರ್ಚಿಸಿ ರಾಜಿ ಸಂಧಾನದ ಮೂಲಕ ಹಲವು ಪ್ರಕರಣಗಳನ್ನು ಇತ್ಯಾರ್ಥಗೊಳಿಸಲಾಯಿತು. ಶನಿವಾರದಂದು ನ್ಯಾಯಾಲಯದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರರವರ ನಿರ್ದೇಶನದಂತೆ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ವರ್ಷದ ಪ್ರಥಮ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಿತು.

ಈ ವೇಳೆ ಚೆಕ್ ಬೌನ್ಸ್ (138 ಆ್ಯಕ್ಟ್ ಅನ್ವಯ)ಪ್ರಕರಣ ಪಾಲು ವಿಭಾಗ, ಇನ್ನಿತರ ದೀರ್ಘಾವಧಿ ಪ್ರಕರಣಗಳನ್ನು ಹಿರಿಯ ನ್ಯಾಯಾಧೀಶರಾದ ಮಧುಸೂಧನ್ ಡಿ.ಕೆ. ಹಾಗೂ ಸಿವಿಲ್ ನ್ಯಾಯಾಧೀಶರಾದ ಸೈಯದ್ ಮೊಹಿದ್ದೀನ್ ಅವರ ನೇತೃತ್ವದಲ್ಲಿ ಹಲವು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರು ಮಧುಸೂದನ್.ಡಿ.ಕೆ, ರವರ ನ್ಯಾಯಾಲಯದಲ್ಲಿ 821 ಪ್ರಕರಣಗಳ ಪೈಕಿ 106 ಪ್ರಕರಣಗಳನ್ನು ಇತ್ಯರ್ಥ ಮಾಡಿ ಒಟ್ಟು ರೂ.3,42,99,307ಗಳ ಪರಿಹಾರವನ್ನು ಪಡೆಯಲಾಯಿತು.



ಸಿವಿಲ್ ನ್ಯಾಯಾಧೀಶರಾದ ಸೈಯ್ಯದ್ ಮೋಹಿದ್ದಿನರವರ ಸಿವಿಲ್ ರವರ ನ್ಯಾಯಾಲಯದಲ್ಲಿ 779ಪ್ರಕರಣಗಳನ್ನು ಅದಾಲತ್‌ಗೆ ಗುರುತಿಸಿ ಅದರಲ್ಲಿ 83 ಪ್ರಕರಣಗಳನ್ನು ಇತ್ಯರ್ಥ ಮಾಡಿ ಒಟ್ಟು ರೂ.72,23,420 ಗಳಪರಿಹಾರ ಜೊತೆಗೆ 773 ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ 8 ಪ್ರಕರಣಗಳನ್ನು ಇತ್ಯರ್ಥ ಮಾಡಿ ಒಟ್ಟು 9,25,420 ರೂ.ಗಳ ಪರಿಹಾರ ಪಡೆಯಲಾಯಿತು.

ಈ ಸಂದರ್ಭದಲ್ಲಿ ವಕೀಲರ ಸಂಘದ ಸದಸ್ಯರು, ನ್ಯಾಯಾಲಯದ ಸಿಬ್ಬಂದಿಗಳು ಮತ್ತು ಪೊಲೀಸ್ ಸಿಬ್ಬಂದಿಗಳು ಹಾಗೂ ಕಕ್ಷಿದಾರರು ಪಾಲ್ಗೊಂಡಿದ್ದರು.

ವಿಚ್ಛೇದನ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಗಂಡ-ಹೆಂಡತಿ ಮನವೊಲಿಸಿ ಒಟ್ಟಾಗಿ ಬಾಳುವಂತೆ ಸಲಹೆ ನೀಡಿದ ನ್ಯಾಯಮೂರ್ತಿಗಳು ಸಲಹೆ ಸ್ವೀಕರಿಸಿ ಮತ್ತೆ ದಂಪತಿಗಳು ಒಂದಾಗಿದ್ದು ವಿಶೇಷವಾಗಿತ್ತು.



ಕರೂರು: ಸಮೀಪದ ದರೂರು ಗ್ರಾಮದಲ್ಲಿ ರಬ್ಬರ್ ಬಾಲ್ ಕ್ರಿಕೆಟ್ ಓಪನ್ ಟೂರ್ನಾಮೆಂಟ್‌ಗೆ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಯುವ ಮುಖಂಡ ಕರೂರು ಬಿ. ನವೀನ್ ರೆಡ್ಡಿ, ರುದ್ರಮುನಿ, ಕೃಷ್ಣಪ್ಪ, ಶ್ರೀಧರ, ರೆಹಮಾನ್ ಇದ್ದರು.

ಅನಾಮಧೇಯ ಶವ ಪತ್ತೆ

ವಿಜಯನಗರ: ಜಿಲ್ಲೆಯ ಕಾರಿಗನೂರು ಮತ್ತು ಪಾಪಿ ನಾಯಕನ ಹಳ್ಳಿ ರೈಲು ನಿಲ್ದಾಣಗಳ ಮಧ್ಯೆ ಸುಮಾರು 45 ವಯಸ್ಸಿನ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯು ಸುಮಾರು ಎತ್ತರ 5.5 ಕಪ್ಪು ಮೈಬಣ್ಣ, ಸದೃಢ ದೇಹ, ಅಗಲ ಅಣೆ, ದುಂಡು ಮುಖ, ಬೋಳು ತಲೆ, ಬಿಳಿ ಗಡ್ಡ ಮತ್ತು ಮೀಸೆ ಬಿಟ್ಟಿರುತ್ತಾನೆ. ಬಿಳಿ ಬಣ್ಣದ ಕಪ್ಪು ಗೆರೆಯುಳ್ಳ ತುಂಬ ತೋಳಿನ ಶರ್ಟ್, ಕೆಂಪು ಬಣ್ಣದ ಬಿಳಿ ಪಟ್ಟಿಯುಳ್ಳ ಸ್ವೀಟರ್, ತಿಳಿ ನೀಲಿ ಬಣ್ಣದ ಲುಂಗಿ, ಕೆಂಪು ಬಣ್ಣದ ಕಪ್ಪು ಗೆರೆಯುಳ್ಳ ಮತ್ತು ಹೂವಿನ ಡಿಸೈನ್ ಇರುವ ಲುಂಗಿ ಮತ್ತು ನೀಲಿ ಬಣ್ಣದ ಚೆಕ್ಸ್ ಲುಂಗಿ ಧರಿಸಿರುತ್ತಾನೆ. ಮಾಹಿತಿ ತಿಳಿದು ಬಂದಲ್ಲಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆ ಉಪ ನಿರೀಕ್ಷಕರು ದೂ.ಸಂ: 9480802131,ಗೆ ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ-ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳ ಉನ್ನತ ಬದುಕಿನಲ್ಲಿ ಸರ್ಕಾರಿ ಶಾಲೆಗಳೇ ಮೇಲುಗೈ

ಕುರುಗೋಡು: ಸರ್ಕಾರಿ ಶಾಲೆಗಳು ಖಾಸಗಿಗಿಂತ ಶೈಕ್ಷಣಿಕವಾಗಿ ಕಡಿಮೆ ಇಲ್ಲ ಎಂದು ಯುವ ಮುಖಂಡ ಎಳ್ಳಾರ್ತಿ ರಾಘವೇಂದ್ರ ರಡ್ಡಿ ತಿಳಿಸಿದರು.

ಸಮೀಪದ ಎಮ್ಮಿಗನೂರು ಗ್ರಾಮದ ಶತಮಾನ ಶಾಲೆಯಲ್ಲಿ ಶುಕ್ರವಾರ ವಾರ್ಷಿಕೋತ್ಸವ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ರಾಜ್ಯದಲ್ಲಿ ಅತ್ಯುತ್ತಮ ಸ್ಥಾನದಲ್ಲಿವೆ, ಮಕ್ಕಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಹಲವಾರು ಸೌಲಭ್ಯಗಳನ್ನು ನೀಡುತ್ತಿದ್ದು ಮಕ್ಕಳು ಸರಿಯಾಗಿ ಬಳಸಿಕೊಂಡು ಸರ್ವತೋಮುಖ ಪ್ರಗತಿಯನ್ನು ಹೊಂದಿ ಸನ್ಮಾರ್ಗದಲ್ಲಿ ಸಾಗಬೇಕು ಎಂದರು. ಮಕ್ಕಳ ನೈಜ ಶಿಕ್ಷಣ, ಉನ್ನತ ಬದುಕಿಗಾಗಿ ಹಗಲಿರಳು ಶ್ರಮಿಸುತ್ತಿರುವ ಸರ್ಕಾರಿ ಶಾಲೆಗಳೇ ಮೇಲುಗೈ ಇಂತಹ ಶಾಲೆಗಳಲ್ಲಿ ಶಿಕ್ಷಣ ಪಡೆದ ಮಕ್ಕಳೇ ಧನ್ಯರು ಎಂದರು.

ಯುವ ಮುಖಂಡ ರಾಮಕೃಷ್ಣರಾಜು ಮಾತನಾಡಿ, ಶಾಲಾ ದಿನಗಳೇ ಮಾನವನ ಜೀವನದ ಅಮೂಲ್ಯ ಕ್ಷಣಗಳು. ಇಂತಹ ದಿನಗಳನ್ನು ಮಕ್ಕಳು ಅನುಭವಿಸಿ ಉನ್ನತ ಶಿಕ್ಷಣದತ್ತ ಮುಖ ಮಾಡುತ್ತಿದ್ದೀರಿ. ಆದಕಾರಣ ಮುಂದಿನ ದಿನಗಳಲ್ಲಿಯೂ ಶ್ರದ್ಧೆಯಿಂದ ಶಿಕ್ಷಣ ಮುಂದುವರಿಸಿ ಶಾಲೆಗೂ ಹಾಗೂ ಪೋಷಕರಿಗೂ ಒಳ್ಳೆಯ ಹೆಸರು ತರಬೇಕು ಎಂದರು.

ಈ ವೇಳೆ ಸಿಆರ್‌ಪಿ ಸ್ವಯಂಪ್ರಭ, ನಮ್ಮ ಕ್ಲಸ್ಟರ್‌ನಲ್ಲಿ ಶತಮಾನ ಕಂಡಂತ ಶಾಲೆಯಾಗಿದ್ದು ಬಹಳಷ್ಟು ವಿದ್ಯಾರ್ಥಿಗಳು ತಮ್ಮದೇ ಆದ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳ ಉಳಿವಿನಲ್ಲಿ ಸಮುದಾಯದ ಪಾತ್ರ ಬಹಳಷ್ಟು ಮುಖ್ಯ ಎಂದರು. ಮುಖ್ಯ ಗುರು ಬಿ.ಎಸ್. ಸದ್ಯೋಜಾತಪ್ಪ, ಪ್ರಮುಖರಾದ ಗುಡಿಸಲಿ ಕಾಸಿಂಸಾಬ್, ರಾಮಕೃಷ್ಣರಾಜು, ಎಸ್ಡಿಎಂಸಿ ಸದಸ್ಯರು ಮಕ್ಕಳು. ಇತರರು ಇದ್ದರು.

